


# ಹಲವು ತೋಟದ
# ಹೂಗಳು


ಸಹಸ್ರಮಾನ ಜಾನಪದ : ೬

# ಹಲವು ತೋಟದ ಹೂಗಳು

## ಜನಪದ ತತ್ತ್ವಪದಗಳ ಪ್ರಾತಿನಿಧಿಕ ಸಂಕಲನ

ಸಂಪಾದಕರು
ಪ್ರೊ. ಕಾಳೇಗೌಡ ನಾಗವಾರ
ಜಿ ವಿ ಆನಂದಮೂರ್ತಿ

ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ
ಕನ್ನಡಭವನ, ಜೆ.ಸಿ. ರಸ್ತೆ, ಬೆಂಗಳೂರು-೫೬೦ ೦೦೨



**HALAVU THOTADA HOOGALU**

REPRESENTATIVE POEMS OF FOLK-SAINTS

EDITED BY
PROF. KALEGOWDA NAGAVARA
G V ANANDA MURTHY

PUBLISHED BY
KARNATAKA JANAPADA AND
YAKSHAGANA ACADEMY
KANNADA BHAVANA
J.C. ROAD, BANGALORE - 560 002
FIRST EDITION : 2000, PAGES :
XXXVIII+355

ಹಕ್ಕುಗಳು : **ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ**

ಬೆಲೆ : **ರೂ. 200** (ಎರಡುನೂರು ರೂಗಳು)

ಸಂಪಾದಕರು

**ಪ್ರೊ. ಕಾಳೇಗೌಡ ನಾಗವಾರ**

**ಜಿ ವಿ ಆನಂದಮೂರ್ತಿ**

ಪ್ರಕಾಶಕರು
**ರಿಜಿಸ್ಟ್ರಾರ್**
ಕರ್ನಾಟಕ ಜಾನಪದ ಮತ್ತು
ಯಕ್ಷಗಾನ ಅಕಾಡೆಮಿ
ಕನ್ನಡ ಭವನ, ಜೆ.ಸಿ. ರಸ್ತೆ
ಬೆಂಗಳೂರು - ೫೬೦ ೦೦೨

ಮುಖಪುಟ - ರೇಖಾಚಿತ್ರಗಳು
**ಎಂ ಎಸ್ ಮೂರ್ತಿ**

**ಅಕ್ಷರ ಜೋಡಣೆ ಮತ್ತು ಮುದ್ರಣ**
ಮಯೂರ ಪ್ರಿಂಟ್ ಆ್ಯಡ್ಸ್
ಬೆಂಗಳೂರು - 20 ✆ - 3342724

# ನಿತ್ಯಮಂಗಳಕರತತ್ತ್ವ

**ಪ್ರೊ. ಕಾಳೇಗೌಡ ನಾಗವಾರ**

ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿಯು ನಾಡಿನ ಎಲ್ಲಾ ಬಗೆಯ ಜನಪದ ಕಲೆ ಮತ್ತು ಸಂಸ್ಕೃತಿಯನ್ನು ಉಳಿಸಿ ಬೆಳೆಸುವ ತುಂಬು ಹಂಬಲವನ್ನುಳ್ಳ ಸಾಂಸ್ಕೃತಿಕ ಸಂಸ್ಥೆಯಾಗಿದೆ. ಪ್ರಕೃತಿಯ ಕಂದಮ್ಮಗಳಾದ ಹಳ್ಳಿಗಾಡಿನ ಜನತೆಯು ಹೃದಯವಂತಿಕೆಯಿಂದ ರೂಪಿಸಿರುವ ಈ ಜಗತ್ತು ಅತ್ಯಂತ ಮಹತ್ವಪೂರ್ಣವೂ, ವೈವಿಧ್ಯಮಯವೂ ಆಗಿರುವ ಸೂಕ್ಷ್ಮತಮ ಸಾಂಸ್ಕೃತಿಕ ಸಂಪತ್ತನ್ನು ಹೊಂದಿದೆ. ನೂರಾರು ಪ್ರದರ್ಶನ ಕಲೆಗಳು, ಚೇತೋಹಾರಿಯಾದ ದೃಶ್ಯಕಲೆಗಳು, ವಸ್ತ್ರವಿನ್ಯಾಸ, ಅಪೂರ್ವ ಗುಡಿಕೈಗಾರಿಕೆಗಳು, ದಟ್ಟಅರಣ್ಯದ ನಡುವೆ ಇರುವ ಗಿರಿಜನರ ಬದುಕು ಹಾಗೂ ಜೀವವೈವಿಧ್ಯತೆಯಿಂದ ನಿತ್ಯಸಮೃದ್ಧವಾಗಿರುವ ನಮ್ಮ ಜನಪದ ಸಂಸ್ಕೃತಿಯ ಸೃಜನಶೀಲತೆಗೆ ವಿಚಿತ್ರತರ ಆಧುನಿಕತೆಯಿಂದಾಗಿ ಧಕ್ಕೆಯುಂಟಾಗತೊಡಗಿದೆ.



ಈ ಸಂದಿಗ್ಧ ಕಾಲಘಟ್ಟದಲ್ಲಿ ದುಡಿಮೆಗಾರರ ಲೋಕದ ದಟ್ಟ ಜೀವನಪ್ರೀತಿಯ ತಿರುಳಾಗಿರುವ ಚೈತನ್ಯಪೂರ್ಣ ಅಂಶಗಳಿಗಾಗಿ ಹಾರೈಸಿ ಅರ್ಥವತ್ತಾದುದನ್ನು ಕಟ್ಟಕ್ಕರೆಯಿಂದ ನಾವೆಲ್ಲ ಉಳಿಸಿಕೊಂಡು ಜೀವಂತವಾಗಿ ಬೆಳೆಯಬೇಕಾಗಿದೆ. ಈ ಬಗೆಯ ಆರೋಗ್ಯಕರ ಸಾಂಸ್ಕೃತಿಕ ವಾತಾವರಣದ ಹೆಮ್ಮೆಯ ಸಂಗಾತಿಗಳಾಗಿ ಪರಸ್ಪರ ದುಡಿಯಬೇಕೆಂಬ ಸಾಮೂಹಿಕ ಹೊಣೆಗಾರಿಕೆಯು ನಮ್ಮೆಲ್ಲರ ಕಣ್ಣಮುಂದಿನ ಆದರ್ಶವಾಗಬೇಕಾಗಿದೆ.

ಕರ್ನಾಟಕ ಜಾನಪದ ಅಕಾಡೆಮಿಯು ಕೇವಲ ಕನ್ನಡ ಜಾನಪದಕ್ಕಷ್ಟೇ ಸೀಮಿತವಾದುದಲ್ಲ ; ಹಿಂದಿನಿಂದಲೂ ಕನ್ನಡ ನೆಲದ ಅವಿಭಾಜ್ಯ ಅಂಗವಾಗಿಯೇ ನೆಲೆಗೊಂಡಿರುವ ಇಲ್ಲಿನ ತುಳು, ಕೊಡವ, ಕೊಂಕಣಿ, ಉರ್ದು, ಲಂಬಾಣಿ ಮುಂತಾದ

ಬಹುಭಾಷಿಕ ಸಮುದಾಯದ ಸಾಂಸ್ಕೃತಿಕ ವಲಯಗಳಲ್ಲಿನ ಸೂಕ್ಷ್ಮಗಳು ಹಾಗೂ ಪರಸ್ಪರ ಕೊಳು–ಕೊಡುಗೆಗಳನ್ನು ಕುರಿತು ಅಧ್ಯಯನ ನಡೆಸುವುದು ನಮ್ಮ ಪ್ರಮುಖ ಕರ್ತವ್ಯವಾಗಿದೆ.

ಜನತೆಯ ಅನುಭವದ ಸಂಪತ್ತಿನ ಹಿನ್ನೆಲೆಯಲ್ಲಿ ರೂಪುಗೊಂಡಿರುವ ಈ ಜ್ಞಾನನಿಧಿಯಲ್ಲಿ ಒಂದು ನಾಡಿನ ಮೌಲ್ಯ, ವಿವೇಕ ಮತ್ತು ಆದರ್ಶಗಳು ಅಡಗಿರುತ್ತವೆ. ಆದರೆ, ಆಧುನಿಕತೆಯ ಅತಿಯಾದ ಧಾವಂತದಲ್ಲಿರುವ ನಮ್ಮಿಂದಾಗಿ, ಪಂಚಭೂತಗಳ ತಾಯ್ತನದ ಮಡಿಲಾಗಿರುವ ಜನಪದ ಸಂಸ್ಕೃತಿಯು ತತ್ತರಿಸತೊಡಗಿದೆ. ವಿಸ್ಮೃತಿಗೆ ಒಳಗಾಗುತ್ತಿರುವ ಸಮುದಾಯಕ್ಕೆ ಸ್ಥಳೀಯ ಜ್ಞಾನಸಂಪತ್ತಿನ ಮಹತ್ವವನ್ನು ಮನದಟ್ಟು ಮಾಡಬೇಕಾದ ಅವಶ್ಯಕತೆಯು ಇದೀಗ ಎಂದಿಗಿಂತ ಹೆಚ್ಚಾಗಿದೆ.



ಕನ್ನಡ ಸಾಹಿತ್ಯ ಪರಂಪರೆಯಲ್ಲಿ ಅತ್ಯಂತ ಮಹತ್ವದ ಪಾತ್ರವನ್ನು ವಹಿಸಿರುವ ತತ್ತ್ವಪದಗಳ ಸಂಗ್ರಹಕಾರ್ಯ ಮತ್ತು ಅವುಗಳನ್ನು ಕುರಿತ ಚಿಂತನೆಯು ಸಾಕಷ್ಟು ನಡೆದಿಲ್ಲವೆಂದು ನೋವಿನಿಂದಲೇ ಹೇಳಬೇಕಾಗಿದೆ. ನಮ್ಮ ಸಾಹಿತ್ಯ ಚರಿತ್ರೆಕಾರರೂ ಸಹ ವಿಶಾಲವಾದ ಜಾನಪದಲೋಕದ ಸಮಸ್ತ ಸೂಕ್ಷ್ಮಗಳು, ಅಪಾರ ಸಾಹಿತ್ಯ ಮತ್ತು ತತ್ತ್ವಪದಗಳ ಸಮೂಹವನ್ನು ಕಡೆಗಣಿಸುತ್ತಲೇ ಬಂದಿದ್ದಾರೆ. ನಿಜಗುಣ ಶಿವಯೋಗಿ, ಸಪ್ಪಣ್ಣಾರ್ಯ ಮುಂತಾದ ಬೆರಳೆಣಿಕೆಯ ಅನುಭಾವಿ ಕವಿಗಳನ್ನು ಅಲ್ಲಲ್ಲಿ ಮಾತ್ರ ಉಲ್ಲೇಖಿಸಲಾಗಿದೆ. ಈ ಬಗೆಯ ಅವಜ್ಞೆಗಿರುವ ಕಾರಣವೆಂದರೆ, ಬಹುಪಾಲು ನಮ್ಮ ತತ್ತ್ವಪದಗಳು ಅಸ್ತಿತ್ವದಲ್ಲಿರುವುದು ಮೌಖಿಕ ಪರಂಪರೆಯಲ್ಲಿಯೇ. ಕೇವಲ ಲಿಖಿತ ದಾಖಲೆಗಳನ್ನಷ್ಟೇ ಸ್ವೀಕರಿಸುವ ಹವ್ಯಾಸದ ಕಣ್‌ಪಟ್ಟಿ ಕಟ್ಟಿಕೊಂಡ ಓಟದ ಕುದುರೆಯಂತಹ ವ್ಯಾಖ್ಯಾನಕಾರರಿಗೆ ನೂರಾರು ವರ್ಷಗಳ ಕಾಲ ಮೌಖಿಕ ಪರಂಪರೆಯಲ್ಲೇ ಉಸಿರಾಡುವ ಜನಪದದ ಒಡಹುಟ್ಟಾದ ತತ್ತ್ವಪದಗಳ ಮೆಲುದನಿಯಾಗಲಿ, ಜನಪದ ಮಹಾಕಾವ್ಯಗಳ ಮಹತ್ವದ ಧಾರೆಗಳಾಗಲಿ ಅತಿಮುಖ್ಯವೆನಿಸಲಿಲ್ಲ.

ಬದುಕಿನ ಶ್ರೇಷ್ಠತೆಯನ್ನೇ ನಿರಂತರವಾಗಿ ಧ್ಯಾನಿಸುತ್ತಾ ಜಾತ್ಯತೀತವೂ, ಮಾನವೀಯವೂ ಆದ ಮೌಲ್ಯಗಳಿಗಾಗಿ ಎಲ್ಲ ಕಾಲದಲ್ಲೂ ಹಂಬಲಿಸುವ ನಮ್ಮ ಹೆಮ್ಮೆಯ ತತ್ತ್ವಪದಕಾರರು ಹಾಗು ಇತರ ಜನಪದದ ವಿಶಿಷ್ಟ ಅಭಿವ್ಯಕ್ತಿಗಳು ಕನ್ನಡ ಮಹಾಪರಂಪರೆಯ ಒಟ್ಟಂದದ ಚೆಲುವಿಗೆ ಮುಖ್ಯ ಕಾರಣವಾಗಿರುವುದನ್ನು ನಾವೆಲ್ಲ ಅಷ್ಟಾಗಿ ಮನಗಂಡಿಲ್ಲವೆಂದೇ ನಾನು ಭಾವಿಸುತ್ತೇನೆ.


ಹೊಸಗನ್ನಡ ಕಾವ್ಯದ ಅರುಣೋದಯಕ್ಕೆ ಈ ತತ್ತ್ವಪದಗಳು ಬೀಜರೂಪಿಯಾಗಿಯೇ ಹೊರಬಂದಿವೆ. ಸುಮಾರು ಹದಿನೇಳನೆಯ ಶತಮಾನದಿಂದ ಹತ್ತೊಂಬತ್ತನೇ ಶತಮಾನದವರೆಗೆ, ಸವೆದ ಜಾಡಿನಲ್ಲಿ ಜಡವಾಗಿಯೇ ಸಾಗಿದ್ದ ಕನ್ನಡ ಕಾವ್ಯಕ್ಕೆ ಹೊಸಹಾದಿ ತೋರಿಸಿ, ಸಾಂಪ್ರದಾಯಿಕ ಸ್ವರೂಪವನ್ನೇ ಬದಲಿಸಿದ ಅಚ್ಚ ದೇಶೀ ಸಂಸ್ಕೃತಿಯ ಅಭಿವ್ಯಕ್ತಿಗಳಾಗಿ ಈ ತತ್ತ್ವಪದಗಳು ಕಂಗೊಳಿಸಿವೆ. ಪಂಚಭೂತಗಳ ತಾಯ್ತನದ ಸಕಲ ಸಲ್ಲಕ್ಷಣಗಳನ್ನೂ ತಮ್ಮೊಳಗಿನ ಒಳಗಾಗಿ ಕಾಯ್ದಿಟ್ಟುಕೊಂಡಿರುವ ಅಕ್ಷರವಂಚಿತ ಜನತೆಯಾದ ನಮ್ಮ ಹಿರಿಯರು-ಹೆತ್ತವರ ಅನುಭಾವದ ಜಗತ್ತಿನ ಅಪರೂಪದ ಕಾಣ್ಕೆಯೇ ಸರಳ, ಸುಂದರ ಜನಪದ ತತ್ತ್ವಪದಗಳಾಗಿ ನಮ್ಮ ನಡುವೆ ರೂಪುಗೊಂಡಿವೆ.



ವೈದಿಕ ಪರಂಪರೆಯ ವ್ಯಕ್ತಿಕೇಂದ್ರಿತ ಅಧ್ಯಾತ್ಮಿಕ ಚಿಂತನೆಗಳಿಗಿಂತ ವಿಭಿನ್ನ ನೆಲೆಯಲ್ಲಿನ ಹೆಂಗರುಳಿನ ಈ ಸಾಹಿತ್ಯವು ಆಕಾಶದ ಕೆಳಗಿನ ಸರ್ವಸ್ವವನ್ನೂ ಸೂಕ್ಷ್ಮವಾಗಿ ಗಮನಿಸಬಲ್ಲ ಜಾನಪದದ ನೆಲೆಗಟ್ಟಿನ ಮೇಲೆ ನಿಂತಿದೆ. ಹಾಗೆಯೇ ಎಲ್ಲರ ಬದುಕಿಗೂ ಒಳ್ಳೆಯದನ್ನೇ ಹಾರೈಸುವ ಬೌದ್ಧದರ್ಶನದ ತೆರೆದ ಮನಸ್ಸಿನ ಆಶಯಗಳು, ಸೂಫಿ ಪರಂಪರೆಯಲ್ಲಿರುವ ತುಂಬು ಹೃದಯದ ಪ್ರೇಮತತ್ತ್ವ ಹಾಗೂ ವಚನಕಾರರಲ್ಲಿರುವ ಸಹಬಾಳ್ವೆಯ ಲೋಕಕಲ್ಯಾಣದ ತುಡಿತಗಳನ್ನು ಇನ್ನಿಲ್ಲದಂತೆ ಏಕಕಾಲಕ್ಕೆ ಒಳಗೊಂಡಿದೆ. ಧಾರ್ಮಿಕ, ಸಾಮಾಜಿಕ ಮತ್ತು ಪ್ರಭುತ್ವಗಳ ಸಂಬಂಧದ ಎಲ್ಲ ಬಗೆಯ ಕೇಂದ್ರೀಕೃತ ಸ್ಥಾವರ-ಮೌಢ್ಯಗಳಿಗೆ ಹರಿದಾರಿ ದೂರದಲ್ಲಿರುವ ಗುಣ ಈ

ತತ್ತ್ವಪದಕಾರರದು. ಲೋಕದ ಸಕಲ ಜೀವರಾಶಿಗಳನ್ನು ದುಃಖ–ಕ್ಲೇಶಗಳಿಂದ ಬಿಡುಗಡೆಗೊಳಿಸಿ, ಜಗತ್ತನ್ನೇ ಹಲವು ಹೂಗಳಿಂದ ತುಂಬಿರುವ ಸುಂದರ ಹೂದೋಟವನ್ನಾಗಿ ಮಾರ್ಪಡಿಸಲು ತದೇಕ ಚಿತ್ತದಿಂದ ಹಾರೈಸುವ ನಿತ್ಯಮಂಗಳಕರ ಸೂತ್ರದ ನಿಲುವುಗಳನ್ನು ತತ್ತ್ವಪದಗಳು ತಮ್ಮ ಉಸಿರಿನ ಉಸಿರಾಗಿರಿಸಿಕೊಂಡಿವೆ.

ಕನ್ನಡವನ್ನೂ ಒಳಗೊಂಡಂತೆ ಭಾರತದ ವಿವಿಧ ಭಾಷೆಗಳಲ್ಲಿ ನಾನಾ ರೂಪಗಳಲ್ಲಿ, ಬಗೆಬಗೆಯ ಆಚರಣೆಗಳಲ್ಲಿ ಮೈದೋರಿರುವ ತಿಳಿಯಾದ ಹೊಳೆಯಂತಹ ಅನುಭಾವಿ ಲೋಕದ ಈ ಅಸಲೀ ಕಾಣ್ಕೆಗಳು, ಸಾಮಾನ್ಯ ಜನತೆಯ ಸಮೃದ್ಧ ಅನುಭವರಾಶಿಯ ನಟ್ಟನಡುವೆ, ಪಾರದರ್ಶಕ ಭಾಷೆಯಲ್ಲಿ ಜೀವಂತ ಆಕಾರವನ್ನು ಪಡೆದಿವೆ. ಹದಿನೇಳನೆ ಶತಮಾನದಿಂದ ಹತ್ತೊಂಬತ್ತನೇ ಶತಮಾನದವರೆಗೂ ಅಗಾಧ ಪ್ರಮಾಣದಲ್ಲಿ ರೂಪುಗೊಂಡಿರುವ ಈ ತತ್ತ್ವಪದಗಳು ಜನಪದ ಸಂಸ್ಕೃತಿಯ ಎಲ್ಲ ಬಗೆಯ ಆಹ್ಲಾದಕರ ಸತ್ವರಾಶಿಯನ್ನು ಮೈಗೂಡಿಸಿಕೊಂಡು ಕನ್ನಡ ಸಾಹಿತ್ಯ ಪರಂಪರೆಯ ಮಹತ್ವದ ಭಾಗವಾಗಿವೆ.



ಮನುಕುಲದ ಏಕತೆಗಾಗಿ ಒಂದೇಸಮನೆ ಧ್ಯಾನಿಸುವ ಜಾನಪದದ ಒಡಲಿನಿಂದಲೇ ಹುಟ್ಟುಪಡೆದ ನಮ್ಮ ವಚನಗಳು ಮತ್ತು ತತ್ತ್ವಪದಗಳು, ಜಾತಿ–ಮತ, ಅಸ್ಪೃಶ್ಯತೆ, ಲಿಂಗಬೇಧ ನೀತಿ, ವರ್ಗಭೇದ ಹಾಗು ಧಾರ್ಮಿಕ ಮೌಢ್ಯಗಳ ಎಲ್ಲೆಮೀರಿ ಬದುಕನ್ನು ನಿಶ್ಚಿಂತಗೊಳಿಸುವ ಪರಿಶುದ್ಧ ಮನಸ್ಸಿನ ಪಾರದರ್ಶಕ ಅಭಿವ್ಯಕ್ತಿಗಳಾಗಿವೆ. ಈ ಬಗೆಯ ಆಶಯಗಳನ್ನೇ ತಮ್ಮ ಪ್ರಾಣಶಕ್ತಿಯನ್ನಾಗಿರಿಸಿಕೊಂಡಿರುವ ನಮ್ಮ ಹೆಮ್ಮೆಯ ಕವಿಗಳಾದ ವಚನಕಾರರು, ಕುಮಾರವ್ಯಾಸ, ಹರಿಹರ, ದಾಸರು, ಸರ್ವಜ್ಞ ಮುಂತಾದವರು ಜಾನಪದದ ಮೊಲೆಹಾಲಿನಿಂದ ದಷ್ಟಪುಷ್ಟವಾಗಿರುವ ಮನೆಮಕ್ಕಳಾಗಿದ್ದಾರೆ. ಇವರ ಅಭಿವ್ಯಕ್ತಿಗಳಲ್ಲಿ ಉಕ್ಕಿ ಹರಿಯುವ ಜನಪದ ಸಂಸ್ಕೃತಿಯ ವಿವರಗಳಿಂದಾಗಿ ಈ ಕಾವ್ಯಗಳು ಲಿಖಿತ ಸಂಸ್ಕೃತಿಯ ಒಣಚೌಕಟ್ಟನ್ನು ದಾಟಿ ಸಹಜವಾಗಿ ಕಾಣಿಸಿಕೊಂಡಿವೆ.



ಮಾನವ ಬದುಕಿನ ವಿವಿಧ ಕಾಲಘಟ್ಟಗಳಲ್ಲಿ ರೂಪುಗೊಂಡ ಈ ಜನಪದ ತತ್ತ್ವಪದಗಳು ಪರಂಪರಾನುಗತವಾದ ಜ್ಞಾನ ಹಾಗೂ ವಿಸ್ತಾರವಾದ ಲೋಕಾನುಭವದ ಒಡಲಿನಿಂದ ಮೂಡಿಬಂದಿವೆ. ಸೂಕ್ಷ್ಮಾತಿಸೂಕ್ಷ್ಮ ಚಿಂತನೆ, ಬದುಕನ್ನು ಹಸನುಗೊಳಿಸುವ ಚಿರಂತನ ಮೌಲ್ಯಗಳ ತಡಕಾಟ, ಹಾಗೂ ದೈನಂದಿನ ಬದುಕಿನ ಸಣ್ಣಪುಟ್ಟ ವಿವರಗಳ ಮೂಲಕವೇ ಅನುಭಾವದ ಒಳಬೆಳಕನ್ನು ಮೂಡಿಸುವ ಹಂಬಲ, ಸತ್ಯ ಮತ್ತು ಸೌಂದರ್ಯಕ್ಕಾಗಿ ನಿರಂತರವಾಗಿ ಹಾರೈಸಿದ ಅಪೂರ್ವ ಕಾವ್ಯರೂಪಗಳ ಗಣಿಯಾದ ಅರಿವಿನ ಪ್ರಶಾಂತ ಲೋಕದ ಈ ಜನಪದ ತತ್ತ್ವಪದಗಳ ಪ್ರಾತಿನಿಧಿಕ ಸಂಕಲನ **ಹಲವು ತೋಟದ ಹೂಗಳು** ಸಂಪುಟವು ಮಹತ್ವಪೂರ್ಣವಾದುದಾಗಿದೆ.

ಎಲ್ಲ ಬಗೆಯ ವಿಸ್ಮಯಪೂರ್ಣ ಅಪರೂಪದ ಸಂಗತಿಗಳಿಗೂ ಮನದೆರೆದು ಕಾಲಕಾಲಕ್ಕೆ ಅಭಿವ್ಯಕ್ತಿ ನೀಡುತ್ತಾ ಬಂದಿರುವ, ನಾಡಿನ ಉದ್ದಗಲಪೂರ್ತಿ ನಾನಾ ರೂಪಗಳಲ್ಲಿ, ಪ್ರಮಾಣಗಳಲ್ಲಿ ಇಂದಿಗೂ ಆಚರಣೆಯಲ್ಲಿರುವ ಈ ತತ್ತ್ವಪದಗಳನ್ನು ಇನ್ನಷ್ಟು ವಿಸ್ತೃತ ಕ್ಷೇತ್ರಕಾರ್ಯದ ಮೂಲಕ ಶೋಧಿಸಿ ತೆಗೆಯಬೇಕಾದ ಅವಶ್ಯಕತೆ ಇದೀಗ ಇನ್ನಷ್ಟು ಹೆಚ್ಚಾಗಿದೆ.


ಪರಸ್ಪರ ಅಸಹನೆ ಹಾಗೂ ಧಾರ್ಮಿಕ ವಿಕಾರಗಳಿಂದ ನರಳುತ್ತಿರುವ ಸದ್ಯದ ಸಮಾಜಕ್ಕೆ ವಿವೇಕವನ್ನು ಮೂಡಿಸುವ ದಿಕ್ಕಿನಲ್ಲಿ ಅಪಾರ ಚೈತನ್ಯದ ಗಣಿಯಂತಿರುವ **ಹಲವು ತೋಟದ ಹೂಗಳು** ಗ್ರಂಥವನ್ನು ಹೆಮ್ಮೆಯಿಂದ ನಾಡಿಗೆ ಅರ್ಪಿಸುತ್ತಿದ್ದೇವೆ.

ದೀಪಾವಳಿಯ ಶುಭಾಶಯಗಳೊಡನೆ,

ಮೈಸೂರು - ೫೭೦ ೦೦೬

೨೮-೧೦-೨೦೦೦


## ತತ್ತ್ವಪದಗಳೊಂದಿಗೆ ಅನುಸಂಧಾನ



ತತ್ತ್ವಪದಗಳು ಕನ್ನಡ ಸಂಸ್ಕೃತಿಯಲ್ಲಿ ಕೈವಲ್ಯ ಸಾಹಿತ್ಯ, ಅನುಭಾವ ಸಾಹಿತ್ಯ ಎಂದು ಗುರ್ತಿಸಲ್ಪಟ್ಟಿವೆ. ತತ್ತ್ವಪದಕಾರರ ಪರಂಪರೆಯನ್ನು ಕನ್ನಡದಲ್ಲಿ ೧೨ನೇ ಶತಮಾನದ ಶರಣರ ಕಾಲಘಟ್ಟದಿಂದ ಊಹಿಸಬಹುದಾದರೂ, ೧೭ನೇ ಶತಮಾನದಿಂದ ೧೯ನೆಯ ಶತಮಾನದ ಅಂಚಿನವರೆಗೆ ಸ್ಪಷ್ಟವಾಗಿ ಅದರ ರೂಪ-ಧ್ವನಿಗಳನ್ನು ಗುರುತಿಸಬಹುದಾಗಿದೆ. ಆದರೂ ಇದರ ಉಗಮ ವಿಕಾಸಗಳನ್ನು ಗೆರೆಕೊರೆದು ನಿರ್ಧರಿಸಲಾಗದು. ಚೆನ್ನೂರ ಜಲಾಲ್ ಸಾಹೇಬ್ ಹೇಳುವಂತೆ **ನಿರಾಕಾರಸೆ ಆಕಾರ್‌ಹುವೇ** ಎಂದು ಹೇಳಿ ಮೌನವಾಗಿರುವುದೇ ಲೇಸು.

ಕರ್ನಾಟಕದ ಮಧ್ಯಯುಗದಿಂದೀಚೆಗೆ ಸಾಹಿತ್ಯಕ ಅಭಿವ್ಯಕಿಗಳಲ್ಲಿ ಆದ ಜಾಗೃತಿಯು, ಉಳಿದ ಕಾಲಘಟ್ಟದಲ್ಲಿ ಕನ್ನಡವು ಪಡೆದುಕೊಂಡ ಸ್ವರೂಪಕ್ಕಿಂತ ಸಂಪೂರ್ಣ ಬೇರೆಯದ್ದಾಗಿದೆ. ಸಾಮಾನ್ಯವಾಗಿ ಹದಿನೇಳರಿಂದ ಹತ್ತೊಂಬತ್ತನೆಯ ಶತಮಾನದವರೆಗಿನ ಅವಧಿಯನ್ನು, ಕನ್ನಡ ಸಾಹಿತ್ಯವು ಮೌನವಾಗಿದ್ದ ಕಾಲವೆಂದು ಹೇಳಲಾಗಿದೆ. ವಾಸ್ತವವಾಗಿ ಈ ಯುಗದಲ್ಲಿ ಬಂದ ಸಾಹಿತ್ಯದ ಪಠ್ಯಗಳು, ತಮ್ಮ ಹಿಂದಣ ಸಾಂಸ್ಕೃತಿಕ ಮಾದರಿಗಳನ್ನೇ ಪ್ರಶ್ನಿಸುತ್ತವೆ. ಬಹುರೂಪಿ ಸಂಸ್ಕೃತಿಯ ಒಡಲಿನಿಂದ ರೂಪುಗೊಂಡ **ರಾಮನಾಥ ಚರಿತೆ, ಸಿರುಮನ ಸಾಂಗತ್ಯ, ಅನುಭವಾಮೃತ** ಪಠ್ಯಗಳು ವಿಸ್ಮಯ ಹುಟ್ಟಿಸುವ ಸೂಕ್ಷ್ಮಾತಿಸೂಕ್ಷ್ಮ ಸಾಂಸ್ಕೃತಿಕ ವಿವರಗಳನ್ನು ಕಟ್ಟಿಕೊಡುತ್ತವೆ. ಇದೇ ಅವಧಿಯಲ್ಲಿ ಸಾಮಾಜಿಕವಾಗಿ, ರಾಜಕೀಯವಾಗಿ ನಿರ್ಲಕ್ಷಿಸಲ್ಪಟ್ಟ ಕೆಳವರ್ಗಗಳಿಂದ ಬಂದ ತತ್ತ್ವಪದಕಾರರು ಮಧ್ಯಕಾಲೀನ ಕರ್ನಾಟಕ ಸಂಸ್ಕೃತಿಯ ಪಲ್ಲಟಗಳಿಗೆ ತೀವ್ರವಾಗಿ ಪ್ರತಿಕ್ರಿಯಿಸಿದ್ದಾರೆ. ಆದ್ದರಿಂದಲೇ ನಮ್ಮ ಕವಿಚರಿತೆಕಾರರು ಏಕರೂಪ ಸಂಸ್ಕೃತಿಯ ಸ್ಥಾಪಿತ ಮಾದರಿಗಳನ್ನು ನಿರಾಕರಿಸಿದ


ಪಠ್ಯಗಳು ಮೈದಾಳಿದ ಅವಧಿಯನ್ನು **ಮೌನದ ಯುಗ** ಎಂದು ಕರೆದು ಷರಾ ಬರೆದಿದ್ದಾರೆ. ಇದೇ ಮಹಾಮೌನದ ಕಾಲಘಟ್ಟದಲ್ಲಿ ನಿಚ್ಚಳವಾಗಿ ಆಕಾರ ಪಡೆದ ಜನಪದ ಮಹಾಕಾವ್ಯಗಳಾದ **ಮಾದೇಶ್ವರ ಕಾವ್ಯ, ಮಂಟೇಸ್ವಾಮಿ ಕಾವ್ಯ, ಜುಂಜಪ್ಪನ ಕಾವ್ಯ**ಗಳೂ ಕೂಡ ಮಾರ್ಗಪರಂಪರೆಯ ಮೀಮಾಂಸೆಯನ್ನೇ ಬುಡಮೇಲು ಮಾಡುತ್ತವೆ. ತಮ್ಮೊಳಗಿನ ಅಪ್ಪಟ ದೇಶೀ ಚಿಂತನೆಗಳಿಂದ ; ವೈದಿಕ ಪರಂಪರೆಯ ನಂಬಿಕೆ-ಪುರಾಣ- ಪರಿಕರಗಳನ್ನು ತಿರಸ್ಕರಿಸಿ, ತಮ್ಮದೇ ಆದ ಸಂಸ್ಕೃತಿಯ ವಿವರಗಳು-ಪುರಾಣ-ಆಚರಣೆಗಳಿಂದ ಜೀವ ದ್ರವ್ಯಗಳನ್ನು ಪಡೆದುಕೊಂಡು ಮೌಖಿಕ ಪರಂಪರೆಯ ಗಾಳಿ-ಬೆಳಕು-ನೀರು- ಮಣ್ಣು ಪದರಗಳಲ್ಲಿ ಹಾಸುಹೊಕ್ಕಾಗಿವೆ. ಇಂದಿಗೂ ನಮ್ಮ ಪಂಡಿತರು ಮಹಾಕಾವ್ಯದ ಸ್ವರೂಪವನ್ನು ಶಿಷ್ಟಮಹಾಕಾವ್ಯಗಳ ಮೂಲಕವೇ ಗುರುತಿಸುವುದು ವಾಡಿಕೆಯೇ ಆಗಿದೆ. ಯಾವುದು ತನಗೆ ಪ್ರತಿರೋಧವನ್ನು ಒಡ್ಡುತ್ತದೆಯೋ ಅಂಥದ್ದನ್ನು ಸಾರಾಸಗಟಾಗಿ ತಿರಸ್ಕರಿಸುವ ಗುಣ ವೈದಿಕ ಸಂಸ್ಕೃತಿಗಿದೆ. ಆ ಸಂತತಿಯಿಂದಲೇ ಬಂದ ಮತೀಯ ಕವಿಚರಿತೆಕಾರರು ಜನಮುಖಿಯಾದ ತತ್ತ್ವಪದಕಾರರನ್ನು, ಜನಪದ ಮಹಾಕಾವ್ಯಗಳನ್ನು ನಿರ್ಲಕ್ಷಿಸಿದ್ದಾರೆ. ಇದೇ ರೀತಿಯಾಗಿ ವಚನಯುಗದಲ್ಲಿ ನಾಲಗೆ ಪಡೆದ ಕೆಳಜಾತಿಗಳಿಂದ ಬಂದ ನೂರಾರು ವಚನಕಾರರು ಅವಜ್ಞೆಗೆ ಒಳಗಾಗಿದ್ದಾರೆ.



ಕನ್ನಡ ಸಂಸ್ಕೃತಿಯಂತೂ ಹಿಂದಿನಿಂದಲೂ ಎರಡು ಬಗೆಯ ಕಾವ್ಯ ಸಮಾಜವನ್ನು ಪೋಷಿಸಿಕೊಂಡು ಬಂದಿದೆ. ಒಂದು: ಶಬ್ದಸೂತಕದ ಹಂಗಿಲ್ಲದೆ, ತನ್ನದೇ ನಂಬಿಕೆ-ಪುರಾಣ-ಆಚರಣೆ- ದೈವ ಎಲ್ಲವನ್ನೂ ಒಳಗೊಂಡ ಅವೈದಿಕ ಕಾವ್ಯ ಪರಂಪರೆ. ಎರಡು: ಗ್ರಂಥಸ್ಥವಾಗಿರುವುದೇ ಪರಮೋಚ್ಚ ಎಂದು ತಿಳಿದು ವೈದಿಕ ಮೌಲ್ಯಗಳಿಂದ ನಿರ್ದೇಶಿಸಲ್ಪಡುವ 'ಅಹಂ' ಕೇಂದ್ರಿತ ಆತ್ಮವಾದಿ ಕಾವ್ಯ ಪರಂಪರೆ. ಬೌದ್ಧರು, ಸಿದ್ಧರು, ಸೂಫಿಗಳು, ಅನುಭಾವಿಗಳು, ವಚನಕಾರರು, ತತ್ತ್ವಪದಕಾರರು ಹಾಗು ಜನಪದ ಕಾವ್ಯಗಳು ಅನಾತ್ಮವಾದಿ

ಪರಂಪರೆಯ ಮಹಾವೃಕ್ಷದ ಕವಲುಗಳು. ಮಾರ್ಗಪರಂಪರೆಯ ಕವಿಗಳು ಕೀರ್ತನಕಾರರು, ಹರಿದಾಸರು ಆತ್ಮವಾದಿ ವೈದಿಕ ಪರಂಪರೆಯ ರೂಪಗಳು. ಚರಿತ್ರೆಯುದ್ದಕ್ಕೂ ಗಮನಿಸಿದರೆ, ಈ ಎರಡೂ ಧಾರೆಗಳು ಒಮ್ಮೊಮ್ಮೆ ಸಂಧಿಸುತ್ತಾ, ವಿಘಟಿಸುತ್ತಾ, ಒಂದರ ಹೊಡೆತಕ್ಕೆ ಇನ್ನೊಂದು ಸಿಗದೆ ವ್ಯೋಮಕಾಯರಂತೆ, ವಜ್ರಕಾಯರಂತೆ ಇಂದಿಗೂ ಮುಖಾಮುಖಿಯಾಗುತ್ತಿವೆ. ಆದರೆ ಆಶ್ಚರ್ಯಕರ ಸಂಗತಿಯೆಂದರೆ ವೈದಿಕ ಕಾವ್ಯಪರಂಪರೆ ತಾನು ನಿರ್ಜೀವವಾಗಿದ್ದ ಕಾಲಗಳಲ್ಲಿ ಅವೈದಿಕ ಕಾವ್ಯಪರಂಪರೆಗಳಿಂದ ಜೀವ ಪಡೆದದ್ದನ್ನು ಮರೆಯುವಂತಿಲ್ಲ.


## ಅನುಭಾವದ ಬೆಡಗು



ಕನ್ನಡದಲ್ಲಿ ಈಚೀಚೆಗೆ ತತ್ತ್ವಪದಗಳು ಕಲ್ಯಾಣದ ಶರಣರ ವಚನಗಳ ಮುಂದುವರಿಕೆಯ ರೂಪಗಳೆಂದು ಭ್ರಮಿಸಿ; ಸ್ವರವಚನಗಳೆಂದು ಕರೆಯಲಾಗುತ್ತಿದೆ. ಎಚ್.ಎಸ್. ಶಿವಪ್ರಕಾಶರ ಮಾತಿನಲ್ಲಿ ಹೇಳುವುದಾದರೆ "ಹನ್ನೆರಡನೆ ಶತಮಾನದ ಶರಣರು ಶೈವಧರ್ಮದ ಕೆಲವು ಪರಿಕರಗಳನ್ನು ಉಳಿಸಿಕೊಂಡು, ಇನ್ನೂ ಕೆಲವನ್ನು ನವೀಕರಿಸಿಕೊಂಡು ಉಳಿದೆಲ್ಲ ಸಂಸ್ಕೃತಿಗಳ ನಂಬಿಕೆ ಆಚರಣೆಗಳನ್ನು ನಿರಾಕರಿಸಿದರು. ಯಾಗ, ದಾನ, ಬಲಿ, ದೇವಾಲಯ, ಗ್ರಾಮದೇವತೆಯೇ ಮುಂತಾದ ಕೆಳಸಂಸ್ಕೃತಿಗಳ ಬಹು ದೇವತೋಪಾಸನಾ ಪ್ರವೃತ್ತಿಗಳು; ಈ ಎಲ್ಲವುಗಳ ಮೇಲೆ ವಚನಕಾರರು ಉರಿವ ನಾಲಗೆಯನ್ನು ಹರಿಬಿಟ್ಟಿದ್ದಾರೆ. ಅನಂತರದ ದಾಸಪಂಥದವರೂ ಹರಿಭಕ್ತರಾದರೂ ಹರಿಹರೈಕ್ಯ ಭಾವವನ್ನು ನಿರಾಕರಿಸದೆ ಮೇಲು ಸಂಸ್ಕೃತಿಯ ಕುರುಹುಗಳಾದ ದೇವಾಲಯ, ದಾನ, ಧರ್ಮ, ಯಜ್ಞ ಯಾಗ- ಇವೆಲ್ಲವನ್ನೂ ಸ್ವೀಕರಿಸಿದರು. ಆದರೆ ಅವರ ನಿರಾಕರಣೆ ಇದ್ದುದು - ಕನಕದಾಸರ ಮಾತಿನಲ್ಲಿ ಹೇಳಬೇಕೆಂದರೆ **ಬಣಗುದೈವಗಳ** ಬಗ್ಗೆ. ಹೀಗೆ ದಾಸಪಂಥ'ದವರು ಬಹುಮಟ್ಟಿಗೆ ಕೆಳಸಂಸ್ಕೃತಿಗಳನ್ನು ನಿರಾಕರಿಸಿದರು. ಶರಣ ಚಳವಳಿ ಮತ್ತು

ದಾಸಪಂಥಗಳೆರಡೂ ಮೂಲಭೂತವಾಗಿ ಏಕದೇವೋಪಾಸನೆಯ ಮಾದರಿಗಳು.

ಆದರೆ ತತ್ತ್ವಪದಕಾರರು ಮೇಲು-ಕೆಳ ಸಂಸ್ಕೃತಿಗಳ ಸಂಕೇತಗಳ ವಿಚಾರದಲ್ಲಿ ಸ್ವೀಕಾರಭಾವವನ್ನು ತಾಳಿ, ಆ ಎಲ್ಲ ಬಾಹ್ಯ ಆಚರಣೆಗಳ ವೈವಿಧ್ಯದಲ್ಲಿ ಅಂತರಂಗದ ಅನುಭವದ ಏಕತೆಯನ್ನು ಹುಡುಕುತ್ತಾರೆ. ಶಿಶುನಾಳ ಷರೀಫರು ಎಲ್ಲಮ್ಮನ ಜಾತ್ರೆಯ ಬಗ್ಗೆ, ಪಂಚಮಿ ಹಬ್ಬದ ಬಗ್ಗೆ ಮನದುಂಬಿ ಹಾಡಿದ ಹಾಗೆ ಬಸವಾದಿ ಶರಣರು ಹಾಡುವುದನ್ನು ಊಹಿಸುವುದೂ ಕಷ್ಟ.'' ಹಾಗೆಯೆ ಶರಣರ ವಚನಗಳಲ್ಲಿ ಬಳಕೆಯಾಗಿರುವ ಭಾಷೆಯ ಸ್ವರೂಪ ಗ್ರಂಥಸ್ಥ ಕನ್ನಡವಾದರೆ, ತತ್ತ್ವಪದಗಳಲ್ಲಿ ಬಳಕೆಯಾಗಿರುವ ಭಾಷೆ ರೂಕ್ಷತೆಯ ಆಡು ಕನ್ನಡ. ಶರಣರು ನಿವೃತ್ತಿ ಮಾರ್ಗದವರಲ್ಲ. ಲೌಕಿಕದ ಸಕಲ ವಿವರಗಳಲ್ಲೂ ಒಡಬೆರತವರು. ತತ್ತ್ವಪದಕಾರರು **ಪದ್ಮಪತ್ರದ ಜಲಬಿಂದುವಿನಂತೆ** ಸಮಾಜದ ನಡುವೆ ಇದ್ದೂ ಇಲ್ಲದಂತೆ; ಸಮುದಾಯದ ಅಂಚಿನಲ್ಲಿರುವವರು.




ಭಾರತೀಯ ಧಾರ್ಮಿಕ ಪರಂಪರೆಯಲ್ಲಿ ತತ್ತ್ವಪದಗಳ ಪರಂಪರೆಯನ್ನು ಬೌದ್ಧ-ಸಿದ್ಧರು, ನಿರ್ಗುಣರು, ನಾಥ ಸಂಪ್ರದಾಯಗಳಲ್ಲಿ ಗುರುತಿಸಬಹುದಾಗಿದೆ. ಈ ಸಂಪ್ರದಾಯಗಳಲ್ಲಿ ಇವುಗಳನ್ನು **ಸಂಧಾಭಾಷಾ**ಗಳೆಂದು ಕರೆಯಲಾಗಿದೆ. ಅಂದರೆ ಈ ಪಠ್ಯಗಳ ಹೊರ ಅರ್ಥವು ಲೌಕಿಕವಾಗಿದ್ದರೆ ಅದರ ಒಳಾರ್ಥವು ಉನ್ನತವಾದ ಆತ್ಮೋನ್ನತಿಯ ಅರ್ಥದಲ್ಲಿ ಇರುತ್ತದೆ.

ತತ್ತ್ವಪದಗಳು ಕನ್ನಡ ಸಂಸ್ಕೃತಿಯಲ್ಲಿ ಮಾತ್ರ ಇರುವಂತಹವೇನಲ್ಲ. ಲೋಕದ ನಾನಾ ಭಾಷೆಗಳಲ್ಲಿ, ಸಂಸ್ಕೃತಿಗಳಲ್ಲಿ, ಅಲ್ಲಲ್ಲಿನ ನೆಲದ ಸ್ವಭಾವಕ್ಕನುಗುಣವಾಗಿ ಇವು ಅನುಭಾವೀ ಸಾಹಿತ್ಯ ರೂಪ ತಳೆದಿವೆ. ಸೂಫಿ, ಝೆನ್, ದೋಹಾ ಹೀಗೆ ನಾನಾ ರೂಪಗಳಲ್ಲಿ, ಬಗೆಬಗೆಯ ರೂಪಕಗಳಲ್ಲಿ ಅನುಭಾವಿ ಸಾಹಿತ್ಯ ಮೈದಾಳಿದೆ. ಹೀಗೆ ವಿಭಿನ್ನ

ದೇಶ, ಕಾಲ, ಸಂಸ್ಕೃತಿ, ಭಾಷೆಗಳಲ್ಲಿ ಹುಟ್ಟುಪಡೆದಿರುವ ಸಂತರ ಸಾಹಿತ್ಯವು ಎಲ್ಲಾ ಬಗೆಯ ಪ್ರಾಂತೀಯತೆ, ರಾಷ್ಟ್ರೀಯತೆ, ಕಾಲ ಹಾಗು ಭಾಷೆಯ ಗಡಿ-ಗೆರೆಗಳನ್ನು ದಾಟಿ ಎಲ್ಲೆಡೆಯಲ್ಲಿಯೂ ಸಂಚರಿಸುವ ಗುಣ ಅವುಗಳ ಅಂತರ್ಯದಲ್ಲೇ ಇದೆ. ಈ ಕಾರಣದಿಂದಲೇ ಲೋಕದ ಎಲ್ಲಾ ಅನುಭಾವಿಗಳೂ **ಸ್ವಪ್ನಸಂಧಾನ**ದ ಮೂಲಕ ಮಹಾಮೌನದ ನೆಲೆಯಲ್ಲಿ ಮಾತನಾಡುವುದು ಒಂದೇ ಪರಿಭಾಷೆಯಲ್ಲಿ.

ಎಲ್ಲಾ ಅನುಭಾವಿಗಳ ಮುಖ್ಯ ಗುರಿ  ಅಂತರಂಗದ ಸಕಲ ಕಲ್ಮಶಗಳನ್ನು ತೊಳೆದುಕೊಂಡು, ಹುಟ್ಟು-ಸಾವು ಐಹಿಕ ಸುಖ-ದುಃಖದಿಂದ ಬಿಡುಗಡೆ ಪಡೆದು ಆತ್ಮೋನ್ನತಿಯನ್ನು ಪಡೆಯುವುದೇ ಆಗಿರುತ್ತದೆ:



**ತನುವ ತೋಂಟವ ಮಾಡಿ**
**ಮನವ ಗುದ್ದಲಿ ಮಾಡಿ**
**ಅಗೆದು ಕಳೆದೆನಯ್ಯಾ ಭ್ರಾಂತಿಯೆಂಬ ಬೇರ...**


**–ಪ್ರಭುದೇವರು**

**ಶರೀರವೆಂದೆಂಬುವ ಹೊಲನ ಹಸನ ಮಾಡಿ**
**ಪರತತ್ತ್ವ ಬೆಳೆಯನೆ ಬೆಳೆದುಣ್ಣಿರೋ....**

**–ಸರ್ಪಭೂಷಣ ಶಿವಯೋಗಿ**

ಈ ಮೂಲಕ ತಮ್ಮೊಳಗೆ ಜ್ಞಾನದ ಜ್ಯೋತಿಯನ್ನು ಕಾಣುವುದೇ ಆಗಿದೆ. ಇದನ್ನೇ ಸೂಫಿ ಸಂತರು **ಅರಿವು ಪರಮಾರ್ಥ ಸತ್ಯದ ದಿಡ್ಡಿ ಬಾಗಿಲು** ಎಂದಿದ್ದಾರೆ. ವೈದಿಕ ಚಿಂತನಾ ಪರಂಪರೆಯ ಋಷಿಗಳು ಸ್ವರ್ಗಸುಖಕ್ಕಾಗಿ ಇಹಲೋಕದಲ್ಲಿ ಎಲ್ಲವನ್ನೂ ಪರಿತ್ಯಜಿಸಿದರೆ, ಸಂತನಾದವನು ಸ್ವರ್ಗಸುಖವನ್ನೂ ನಿರಾಕರಿಸುತ್ತಾನೆ. ಈ ಬಗೆಯ ಪ್ರವೃತಿಯನ್ನೇ ವಚನಕಾರರು **ಸ್ವರ್ಗವೆನ್ನುವುದು ಬಂಜರುಭೂಮಿ...** ಎನ್ನುತ್ತಾರೆ. ಸೂಫಿ ಸಂತಳಾದ ರಬಿಯಾ ತನ್ನ ಒಂದು ಕೈಯಲ್ಲಿ ಬೆಂಕಿ ; ಮತ್ತೊಂದು ಕೈಯಲ್ಲಿ ನೀರನ್ನು ಹಿಡಿದುಕೊಂಡು, ಈ ಬೆಂಕಿಯಿಂದ ಸ್ವರ್ಗವನ್ನು ಸುಡುತ್ತೇನೆ. ಈ ನೀರಿನಿಂದ ನರಕದ ಕಿಚ್ಚನ್ನು ನಂದಿಸುತ್ತೇನೆ ಎಂದು ಬಸ್ರಾ

ಪಟ್ಟಣದಲ್ಲಿ ಓಡಾಡುತ್ತಿದ್ದಳಂತೆ. ದುಶ್ಚಿಂತೆಯೊಳಗೆ ಕುದಿಯುವ ಲೋಕದ ದುಃಖವನ್ನು ಕಳೆದು-ಸಕಲ ಜೀವಿಗಳ ಕಲ್ಯಾಣಕ್ಕಾಗಿ ಮಿಡಿಯುವುದು, ಈ ಅನುಭಾವಿಗಳ ಮೂಲ ಗುಣ. ಶಿಶುನಾಳ ಷರೀಫರು ಲೋಕವನ್ನೇ **ಸದ್ಗುರುವಿನ ತೋಟ**ವನ್ನಾಗಿ ಕಾಣಲು ಧ್ಯಾನಿಸುವಂತೆ ; ಎಲ್ಲ ತತ್ತ್ವಪದಗಳ ಧಾರ್ಮಿಕ ನೆಲೆಯ ದರ್ಶನ ಅಂತಿಮವಾಗಿ ಇದೇ ಆಗಿದೆ. ಆದ್ದರಿಂದಲೇ ಇವರು ತಮ್ಮನ್ನು **ಶಿವಯೋಗಿ**ಗಳೆಂದು ಕರೆದುಕೊಂಡಿರುವುದು. **ಶಿವ** ಎಂದರೆ ಮಂಗಳ ಎಂದೇ ಅರ್ಥ. ಅಂದರೆ ಎಲ್ಲ ಜೀವಿಗಳಿಗೂ ಮಂಗಳವನ್ನೇ ಬಯಸುವ ಯೋಗಿಗಳು ಈ ತತ್ತ್ವಪದಕಾರರು. ಇದೆಲ್ಲದರ ಪ್ರತಿಫಲನವೆಂದರೆ ಕನ್ನಡದಲ್ಲಿನ ಅಸಾಧಾರಣ ದೇಶೀ ಮೇಧಾವಿತನಗಳು ಸ್ಪಷ್ಟವಾಗಿ ಆಕಾರ ಪಡೆದದ್ದು ಅಲ್ಲಮಪ್ರಭು, ತತ್ತ್ವಪದಕಾರರು ಮತ್ತು ಜನಪದ ಕಾವ್ಯದ ವಾಗ್ರೂಪದಲ್ಲಿ. ಇವರ ಅಭಿವ್ಯಕ್ತಿಗಳಲ್ಲಿ ತತ್ತ್ವ, ಬದುಕಿನ ಸೌಂದರ್ಯ ಮತ್ತು ಕ್ರಿಯಾಶೀಲತೆಗಳು **ಕರುವಿನ ಬೊಂಬೆಯುಸುರಿ ಕೊಂಡಂತೆ** ಪಕ್ವಗೊಂಡು ಒಂದರೊಳಗೊಂದು ಮಿಳಿತವಾಗಿವೆ.



ತತ್ತ್ವಪದಗಳನ್ನು ಕೇವಲ **ಕಾಯ** ರೂಪದಲ್ಲಿ ಮಾತ್ರ ನೋಡುವಂತಹುದಲ್ಲ. ಅವುಗಳು ಸಂಪೂರ್ಣವಾಗಿ ಬೆಳುದಿಂಗಳ ಬೀದಿಯಲ್ಲಿ ಆಚರಣಾ ಪ್ರಧಾನವಾದ **ಗುರು** ಕೇಂದ್ರಿತ ಬಹುಸಂಸ್ಕೃತಿಯ ನಡುವಿನಿಂದ ಹುಟ್ಟುಪಡೆದವು. ಆದ್ದರಿಂದ ತತ್ತ್ವಪದಕಾರರಿಗೆ **ಗುರುವೆ** ಗೋವಿಂದನಾಗುತ್ತಾನೆ.

**ಗುರುವಿನ ಮಗನಾದರೂ ಗುರತ ತಿಳೀಬೇಕು**
**ಗುರುವಿಲ್ಲದ ಕುರುಹುದೆಲ್ಲಣ್ಣಾ**

**–ಖೈನೂರು ಕೃಷ್ಣಪ್ಪ**

**ಪೊಡವಿಯೊಳಗೆ ಶಿಶುನಾಳಂತೀ**
**ದೃಢಗೋವಿಂದ ಯೋಗಿಯ ಚಿಂತೀ**
**ಬಿಡದಾತನ ಸೇವೆ ಮಾಡಂತೀ**
**ಭಯವಿಲ್ಲದ ಗುರುವಿನ ಕೂಡಂತೀ**

**–ಶಿಶುನಾಳ ಷರೀಫ**

ಹಾಗೆಯೇ ಇವೆಲ್ಲವೂ ಕೂಡ ತತ್ತ್ವಪದಕಾರರ ಬೆಳದಿಂಗಳ ಕೂಟಗಳಲ್ಲಿ ಪಾಲ್ಗೊಳ್ಳುವ ಅನುಭಾವಿಗಳ ಬದುಕಿನ ವಿವರಗಳಲ್ಲಿ ಕರಗಿ, ಆಚರಣೆಗಳ ಮೂಲಕ ಸಾಕಾರಗೊಳ್ಳುತ್ತವೆ. ವಚನಗಳಂತೆ, ದಾಸರ ಹಾಡುಗಬ್ಬಗಳಂತೆ ತತ್ತ್ವಪದಗಳೂ ಕೂಡ ಹಾಡುವ ಸಂಸ್ಕೃತಿಯಿಂದ ರೂಪುಗೊಂಡವಾಗಿವೆ.



ಭಾರತೀಯ ಪರಂಪರೆಯಲ್ಲಿ ಜಾತಿ ಅಸಮಾನತೆ, ಲಿಂಗಬೇಧ ನೀತಿ, ಅಕ್ಷರವಂಚನೆ, ಅಸ್ಪೃಶ್ಯತೆಗಳಂತಹ ಪಾಶವೀ ಕೃತ್ಯದ ವಿಚಾರಗಳನ್ನು ಪ್ರತಿನಿಧಿಸುವ ಲಿಖಿತ ಪರಂಪರೆಯನ್ನು ಬೆಂಗಾವಲಾಗಿ ಇಟ್ಟುಕೊಂಡಿರುವ ವೈದಿಕ ಅಧ್ಯಾತ್ಮಿಕ ಪರಂಪರೆಗೆ ಪರ್ಯಾಯಾವಾದ, ಇಲ್ಲಿನ ದೇಶೀ ದರ್ಶನಗಳಿಂದ ಮೈಪಡೆದ ತತ್ತ್ವಪದಗಳು ಭಾರತೀಯ ಪರಂಪರೆಯಲ್ಲಿರುವ ಅವೈದಿಕ ಜಾತ್ಯತೀತ ಧಾರ್ಮಿಕ ನೆಲೆಗಳನ್ನು ಅರಿಯಲು ನೆರವಾಗುತ್ತವೆ. ವೈದಿಕ ಪ್ರಣೀತ ಅಧ್ಯಾತ್ಮವು ಏಕರೂಪ ಸಂಸ್ಕೃತಿಯಿಂದ ಹೊರಡುವ ಮಂತ್ರೋಚ್ಚಾರದ ಒಂದೇ ಧ್ವನಿಯಂತೆ ಕೇಳಿಸಿದರೆ, ತತ್ತ್ವಪದಗಳು ಬಹುಕೇಂದ್ರಿತ ಧಾರ್ಮಿಕ ನೆಲೆಯನ್ನು ಒಳಗೊಂಡು ಅನೇಕ ಧ್ವನಿಗಳಂತೆ ಕೇಳಿಸುತ್ತವೆ. ಆದ್ದರಿಂದಲೇ ತತ್ತ್ವಪದಗಳಲ್ಲಿ ಒಬ್ಬೊಬ್ಬರಿಗೂ ಒಂದೊಂದು ಅಸ್ತಿತ್ವವಿದೆ. ಅವರ ಧ್ವನಿಯಲ್ಲಿ ವೈವಿಧ್ಯತೆಯಿದೆ. ಈ ಕಾರಣವಾಗಿಯೇ ಏಕರೂಪ ಸಂಸ್ಕೃತಿಯ ಪ್ರಭಾವ ಇಂಥ ಬಹುಕೇಂದ್ರಿತ ಜಾತ್ಯತೀತ ಧಾರ್ಮಿಕ ಪರಂಪರೆಗಳ ಮೇಲೆ ಆಗಲು ಸಾಧ್ಯವಾಗಿಲ್ಲ. ಆದ್ದರಿಂದಲೇ ತತ್ತ್ವಪದಗಳು ಈವೊತ್ತಿಗೂ ಬಿಸಿಲು ಕೊಯ್ದಂತೆ ತಾಜಾತನದಿಂದ ನಳನಳಿಸುತ್ತವೆ.


ಏಕರೂಪ ಸಂಸ್ಕೃತಿಯನ್ನು ಪ್ರತಿನಿಧಿಸುವ ವೇದ-ಆಗಮಗಳು, ಎಲ್ಲ ಜ್ಞಾನವೂ ತನ್ನಿಂದಲೇ ಎನ್ನುವ ಶಠತ್ವದಿಂದಾಗಿ **ನಾನು** ಎನ್ನುವ ಅಧ್ಯಾತ್ಮಿಕ ವಿಕಾರಕ್ಕೆ ತುತ್ತಾಗಿರುವುದನ್ನು ಕಂಡ ಶರಣರು

ವೇದಕ್ಕೆ ಒರೆಯನಿಕ್ಕುವೆ ಶಾಸ್ತ್ರಕ್ಕೆ ನಿಗಳವತೊಡಿಸುವೆ
ತರ್ಕದ ಬೆನ್ನ ಬಾರನ್ನೆತ್ತುವೆ....

–ಬಸವಣ್ಣ

ವೇದವೆಂಬುದು ಓದಿನ ಮಾತು
ಶಾಸ್ತ್ರವೆಂಬುದು ತಗರಹೋರಟೆ
ಪುರಾಣವೆಂಬುದು ಪುಂಡರ ಗೋಷ್ಠಿ....

–ಪ್ರಭುದೇವರು



ಅಕ್ಕಮಹಾದೇವಿಯಂತೂ ವೇದಶಾಸ್ತ್ರಗಳನ್ನು ನುಚ್ಚು–ತೌಡು ಎಂದಿದ್ದಾಳೆ. ತತ್ತ್ವಪದಗಳಾದರೊ ಎಲ್ಲ ಮೂಲಗಳಿಂದ ಬರುವ ಬೆಳಕಿನ ಕಿರಣಗಳನ್ನು ಮನದೆರೆದು ಒಳಗೊಳ್ಳುವ ಅಧ್ಯಾತ್ಮಿಕ ನಮ್ರತೆಯನ್ನು ಮೈಗೂಡಿಸಿಕೊಂಡಿವೆ. ಆದ್ದರಿಂದಲೇ ತತ್ತ್ವಪದಗಳು **ನಾನಾರೆಂಬುದು ನಾನಲ್ಲ** ಎಂಬ ಅನಾತ್ಮವಾದಿ ನೆಲೆಯಿಂದ ಹೊರಡುವಂತಹವು. ಈ ಬಗೆಯ ಕಾರಣಗಳಿಂದಾಗಿಯೇ ಭಾರತೀಯ ಸಮಾಜದಲ್ಲಿ ಜಾತ್ಯತೀತ ಅನುಭಾವಿ ಪರಂಪರೆ ಅಗಾಧ ಪ್ರಮಾಣದಲ್ಲಿ ನೆಲೆಗೊಂಡಿವೆ. ಬಾಬಯ್ಯನ ಜಲ್ದಿ, ಉರುಸ್, ಜಾತ್ರೆ, ಕರಗ ಮುಂತಾದವು ಇಂಥ ಜಾತ್ಯತೀತ ಧಾರ್ಮಿಕ ಆಚರಣೆಗಳ ರೂಪಕಗಳಾಗಿ ಇಂದಿಗೂ ಸಮಾಜದ ನಡುವೆ ಉಳಿದಿವೆ.

ವೈದಿಕ ಅಧ್ಯಾತ್ಮವು ದೇವರು, ಧರ್ಮ ಜ್ಞಾನ ಎಲ್ಲವನ್ನೂ ಗ್ರಂಥಸ್ಥವಾಗಿಸಿ ಗರ್ಭಗುಡಿಯಲ್ಲಿರಿಸಬೇಕು ಎನ್ನುತ್ತದೆ. ತತ್ತ್ವಪದಗಳಾದರೊ ಗರ್ಭಗುಡಿ ಸಂಸ್ಕೃತಿಯನ್ನು ನಿರಾಕರಿಸಿ ಜನಸಮುದಾಯದ ನಡುವೆ ಏಕತಾರಿ ನಾದದ ಜೊತೆಯಲ್ಲಿ ಧ್ಯಾನಸ್ಥವಾಗಿರುತ್ತವೆ. ಗರ್ಭಗುಡಿಯು ಸಂಸ್ಕೃತಿ ತಿಳಿಸಿಕೊಡಲಾಗದನ್ನು ಬಯಲಿನಲ್ಲಿರುವ ತತ್ತ್ವಪದಗಳ ಒಂದು ವಾಕ್ಯ ನಮ್ಮದೇ ಭಾಷೆಯಲ್ಲಿ, ನಮ್ಮದೇ ನಿತ್ಯಬದುಕಿನ ವಿವರಗಳ ಮೂಲಕ ತಿಳಿಸಿಕೊಡುತ್ತದೆ.

ತತ್ತ್ವಪದಗಳು ಇಂದಿಗೂ ನಮ್ಮ ಸಂಸ್ಕೃತಿಯಲ್ಲಿ ಉಳಿದು ಬರುತ್ತಿರುವುದಕ್ಕೆ ಬಹುಮುಖ್ಯ ಕಾರಣ, ಇವು ಸಾಂಸ್ಥಿಕ ರೂಪವನ್ನು ಪಡೆಯದಿರುವುದೇ ಆಗಿದೆ. ಹಾಗೆ ನೋಡಿದರೆ,

ಎಲ್ಲ ಸಾಂಸ್ಥಿಕ ರೂಪಗಳನ್ನು ಒಡೆಯುವುದೇ ತತ್ತ್ವಪದಗಳ ಮೂಲ ಸ್ವಭಾವ. ಇಲ್ಲಿನ ಭಾಷೆ, ಛಂದಸ್ಸು ಈ ಯಾವುವೂ ಮೀಮಾಂಸಕರ ಸಿದ್ಧ ಮಾದರಿಗಳಿಗೆ ಸಿಗುವಂತಹುದಲ್ಲ.



ತತ್ತ್ವಪದಗಳು ಲಿಖಿತ ಮತ್ತು ಮೌಖಿಕ ಪರಂಪರೆಗಳ ನಡುವೆ ಸಂಕೀರ್ಣ ಸಂಬಂಧಗಳನ್ನು ಹೊಂದಿವೆ. ಈವೊತ್ತಿಗೂ ನೂರಾರು ತತ್ತ್ವಪದಕಾರರು ಮೌಖಿಕ ಮಹಾಪರಂಪರೆಯ ಸೀಮೆಯನ್ನು ದಾಟಿಲ್ಲ. ಈ ಬಗೆಯ **ನೆಲದ ಮರೆಯ ನಿಧಾನ**ವಾಗಿರುವ ತತ್ತ್ವಪದಗಳ ತಾಜಾ ಸಂಗ್ರಹವೇ ನಿಮ್ಮೆದುರಲ್ಲಿರುವುದರಿಂದ, ನಿಮ್ಮ ಮತ್ತು ತತ್ತ್ವಪದಗಳ ಅನುಸಂಧಾನಕ್ಕೆ ಅನುವು ಮಾಡಿಕೊಟ್ಟು ನನ್ನ ಅಧ್ಯಯನದ ಕೆಲವು ಟಿಪ್ಪಣಿಗಳನ್ನು ಇಷ್ಟಕ್ಕೇ ನಿಲ್ಲಿಸುತ್ತೇನೆ. ಈ ಸಂಪುಟವು ಮೌಖಿಕ ಸಂಪ್ರದಾಯದಲ್ಲಿರುವ ಹಾಗು ಲಿಖಿತ ಪರಂಪರೆಯಲ್ಲಿ ಲಭ್ಯವಾದ ವಿಶಿಷ್ಟ ತತ್ತ್ವಪದಗಳನ್ನು ಒಳಗೊಂಡಿದೆ. ಬಹಳಷ್ಟು ಜನ ತತ್ತ್ವಪದಕಾರರು ತಮ್ಮ ನಾಮರೂಪಗಳ ಕುರುಹುಗಳನ್ನು ಕಳೆದುಕೊಂಡು, ನಮ್ಮ ಜನಪದ ಕವಿಗಳಂತೆ ಅಜ್ಞಾತವಾಗುಳಿದಿದ್ದಾರೆ. ಕಾಯವಳಿದು ತಮ್ಮೊಳಗಿನ ಬೆಳಕನ್ನು ಮಾತ್ರ ತೋರಿರುವ ಅಜ್ಞಾತ ಸಂತರ ಪದಗಳನ್ನು **ಹಲವು ತೋಟದ ಹೂಗಳು** ಸಂಪುಟದ **ನಾನಾರೆಂಬುದು ನಾನಲ್ಲ** ಎನ್ನುವ ಮೊದಲ ಭಾಗ ಒಳಗೊಂಡಿದೆ. **ಯಾವ ದೇಶದ ಹೂವಿದ್ದಾವ** ? ಇದೇ ಸಂಪುಟದ ಎರಡನೆಯ ಭಾಗ. ಕನ್ನಡಕಾವ್ಯ ಸಮಾಜದ ಬೇರೆ ಬೇರೆ ಕಾಲಘಟ್ಟದಲ್ಲಿ ಅನುಭಾವಿ ಪರಂಪರೆಯ ಸತ್ವಗಳನ್ನು ಮೈಗೂಡಿಸಿಕೊಂಡ ವಿವಿಧ ಕವಿಗಳ ಉತ್ಕೃಷ್ಟ ರಚನೆಗಳು ಹಾಗೂ ಹದಿನೇಳರಿಂದ ಇಪ್ಪತ್ತನೆ ಶತಮಾನದ ಸಂಜೆಯವರೆಗೆ ಕರ್ನಾಟಕ ಸಂಸ್ಕೃತಿಯಲ್ಲಿ ಮೈದಾಳಿದ ತತ್ತ್ವಪದಕಾರರ ಪ್ರಾತಿನಿಧಿಕ ಪದಗಳನ್ನು ಒಳಗೊಂಡಿದೆ.

ನೂರಾರು ಬೆಳದಿಂಗಳ ತಂಪಲ್ಲಿ ಕಾಳೇಗೌಡ ನಾಗವಾರ ಮತ್ತು ನಾನು ಕರ್ನಾಟಕದಾದ್ಯಂತವಿರುವ ತತ್ತ್ವಪದಗಳಿಗಾಗಿ ವ್ಯಾಪಕ ಕ್ಷೇತ್ರಕಾರ್ಯಮಾಡಿ, ಊರು-ಕೇರಿ, ಕುಲ-ಗೋತ್ರಗಳ



ಹಂಗಿಲ್ಲದೆ ಹರಿದಾಡುವ ತತ್ತ್ವಪದಗಳನ್ನು ಜೋಳಿಗೆ ಹಿಡಿದು ಸಂಗ್ರಹಿಸಿ ಈ ಸಂಪುಟದಲ್ಲಿ ಸೇರಿಸಿದ್ದೇವೆ. ಇನ್ನೂ ನೂರಾರು ಅನುಭಾವಿಗಳ ಸಾವಿರಾರು ತತ್ತ್ವಪದಗಳು ನಮ್ಮ ನೆಲದ ಸಂಸ್ಕೃತಿಯಲ್ಲಿ ಹಾಸುಹೊಕ್ಕಾಗಿವೆ. ಅವುಗಳನ್ನೆಲ್ಲಾ ಒಂದೆಡೆಯಲ್ಲಿ ಕಲೆಹಾಕಬೇಕಾದ ಸಾಮೂಹಿಕ ಹೊಣೆಗಾರಿಕೆಯ ಕಾರ್ಯ ದೊಡ್ಡ ಪ್ರಮಾಣದಲ್ಲಿ ನಡೆಯಬೇಕಾಗಿದೆ. ಆ ದಿಸೆಯಲ್ಲಿ ನಮ್ಮದೊಂದು ಸಣ್ಣಪ್ರಯತ್ನ ಇದಾಗಿದೆ.

ಈ ಸಂಪುಟದಲ್ಲಿರುವ ತತ್ತ್ವಪದಗಳ ಓದು-ಮರುಓದಿನ ಓದುವಿಕೆಗೆ ಮತ್ತೆ ಮತ್ತೆ ಎಳಸುತ್ತ ; ಓದುಗರಿಗೆ, ಹಾಡುಗರಿಗೆ, ಕೇಳುಗರಿಗೆ ತಮ್ಮೊಳಗಿನ ಪ್ರಭೆಯನ್ನು ತೆರೆಯುತ್ತವೆಂದು ವಿನಮ್ರವಾಗಿ ಸೂಚಿಸಬಯಸುತ್ತೇನೆ.

ಎಲ್ಲೆ ಮೀರಿದ ಭೋಗ ಜೀವನದ ದಾಹ ಹಾಗು ಕೋಮುವಾದದ ಕಿಚ್ಚಿನಲ್ಲಿ ಬೇಯುತ್ತಿರುವ ನಮ್ಮ ಕಣ್ಣೆದುರಿನ ಸಮಾಜಕ್ಕೆ ಜಾತ್ಯತೀತ ನಿಲುವಿನ, ಪ್ರೇಮಭಾವದ ತತ್ತ್ವಪದಕಾರರು ತೋರಿದ ದಾರಿ ಆದರ್ಶವಾಗಬಲ್ಲದು ಎಂದು ಆಶಿಸುತ್ತೇನೆ.

ಹುತ್ತರಿ
೧೧ ಡಿಸೆಂಬರ್ ೨೦೦೦

**ಜಿ ವಿ ಆನಂದಮೂರ್ತಿ**

ಆಲೋಚನೆ - ಪುನರಾಲೋಚನೆಗಳ ನಡುವೆ ಜಾನಪದದ ಅಂತರಂಗಕ್ಕೆ ವಿಶಾಲವಾದ ಅರ್ಥದಲ್ಲಿ ಸಂಕೇತವಾಗಬಲ್ಲ ಲಾಂಛನವನ್ನು ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿಯು ರೂಪಿಸಿತು: ವಾಸ್ತವವಾಗಿ ಜಾನಪದವು ಗಂಧವತಿ ಪೃಥ್ವಿಯ ಸಕಲ ಸಲ್ಲಕ್ಷಣಗಳನ್ನು ಒಳಗೊಂಡಿರುವ, ಪಂಚಭೂತಗಳ ವಂಚನೆರಹಿತ ಗುಣಧರ್ಮದ ಆಗರವಾಗಿದೆ. ಭರತಖಂಡದ ಪ್ರಾಚೀನತಮ ಜಾನಪದದ ತುಂಬುಮನಸ್ಸು ನಿರ್ಮಿಸಿರುವ ನಿತ್ಯಮಂಗಳಕರವಾದ ಶಿವತತ್ತ್ವದ; ಅರ್ಧನಾರೀಶ್ವರ ಗುಣದ, ಸಕಲ ಜೀವರಾಶಿಗಳ ಬಗೆಗಿನ ಅಪಾರ ಅಂತಃಕರಣದ ಶಿವ ಮತ್ತು ಜಾನಪದದ ವೈವಿಧ್ಯಮಯ ಸೂಕ್ಷ್ಮಗಳನ್ನು ಒಂದೇ ಸಮನೆ ಧ್ಯಾನಿಸಿದ ಪರಿಶುದ್ಧ ಮನಸ್ಸಿನ ಅಂತರಾಳದಿಂದ ಹೊರಹೊಮ್ಮುವ ವಿಶಾಲ ಪ್ರಸನ್ನತೆಯ ಸಾಕ್ಷಾತ್ ಪ್ರತೀಕವಾದ ಬುದ್ಧದೇವ ಹಾಗೂ ಕಾಡಿನ ಬೇಡರ ಹುಡುಗನಾಗಿ ಹುಟ್ಟಿ-ಬೆಳೆದು, ಜ್ಞಾನದ ಬಗೆಗಿನ ಅಪರಿಮಿತ ಆಕಾಂಕ್ಷೆಯಿಂದ ನಿರಂತರ ಶ್ರಮ ಮತ್ತು ಪ್ರತಿಭಾಸಂಪನ್ನತೆಯ ಹಾದಿಯಲ್ಲಿ ಸಾಗಿ ತುತ್ತತುದಿಯನ್ನು ತಲುಪಿದ, ನಮ್ಮ ಸಮಾಜದ ಎಲ್ಲ ತಬ್ಬಲಿಗಳ ಪ್ರತಿನಿಧಿಯಾದ ಏಕಲವ್ಯನನ್ನು ನೆನಪಿಸುವ, ಜಾನಪದದ ಮಹತ್ವವನ್ನು ನಿರಂತರವಾಗಿ ವಿಸ್ತರಿಸುತ್ತಿರುವ ಸೃಜನಶೀಲ ರೂಪಕ ಇದಾಗಿದೆ.


**– ಕಾಳೇಗೌಡ ನಾಗವಾರ**

ಮೈತ್ರಿ ಮತ್ತು ಕರುಣಾಭಾವಗಳಿಂದ ಲೋಕದ ಸಕಲ ಜೀವಿಗಳ ಹಿತಕ್ಕಾಗಿ ಧ್ಯಾನಸ್ಥವಾಗಿರುವ ಪ್ರಸನ್ನ ಮುಖಭಾವ, ಸೃಷ್ಟಿಶೀಲತೆಯ ಸಂಕೇತವಾದ ವೃಕ್ಷ, ಲೋಕವನ್ನು ಸದಾ ಬೆಳಗುವ ಸೂರ್ಯ–ಚಂದ್ರರು ; ಜನಪದರ ಸಂಭ್ರಮದಲ್ಲಿ ಪಾಲ್ಗೊಂಡ ಅವರ ನಿತ್ಯಸಂಗಾತಿಗಳಾದ ಸಕಲ ಜೀವರಾಶಿಗಳು ಸೂಕ್ಷ್ಮ ವಿನ್ಯಾಸಗಳೊಂದಿಗೆ ಈ ಪ್ರತೀಕದಲ್ಲಿ ಅಪೂರ್ವವಾಗಿ ಸಂಯೋಜಿಸಲ್ಪಟ್ಟಿವೆ. ಪ್ರಕೃತಿಯಂತೆ ನಿತ್ಯವೂ ಹೊಸತಾಗುವ ಸತ್ವಗಳನ್ನು ಒಳಗೊಂಡು, ನಿರಂತರ ತುಂಬಿ ತುಳುಕುವ ಹೊಳೆಯಂತೆ ವಿಸ್ತಾರವೂ ಪಾರದರ್ಶಕವೂ ಆಗಿರುವ ಇದು ಎಲ್ಲ ಮನಸ್ಸುಗಳ ಏಕತೆಯನ್ನು ಸಂಕೇತಿಸುತ್ತದೆ. ಮಾನವೀಯ ತಳಹದಿಯ ಮೇಲೆ ರೂಪುಗೊಂಡಿರುವ ಈ ಲಾಂಛನವು ಅಕಾಡೆಮಿಯ ಚಟುವಟಿಕೆಗಳ ವಿಕಾಸಶೀಲ ಪ್ರತಿಮೆಯಾಗಿದೆ.

**– ಜಿ ವಿ ಆನಂದಮೂರ್ತಿ**

# *ಹಲವು ತೋಟದ ಹೂಗಳು*

## ಪರಿವಿಡಿ




ನಿತ್ಯಮಂಗಳಕರತತ್ತ್ವ ೧

ತತ್ತ್ವಪದಗಳೊಂದಿಗೆ ಅನುಸಂಧಾನ ೨

ಅಜ್ಞಾತ ತತ್ತ್ವಪದಕಾರರು

ನಡುರಂಗದ ಜ್ಯೋತಿ ೧

ನಾನಳಿದು ಬಯಲಾದೆ ೨

ಮೇಲು ಮಂಟಪದಲ್ಲಿ ನೋಡಣ್ಣ ೪

ಜ್ಞಾನಶಕ್ತಿ ೫

ನಡೆನುಡಿ ಒಂದಾಗಿ ೬

ನಿಂತಲ್ಲಿ ನೆರಳೇ ಅವಗಿಲ್ಲ ೭

ಪೃಥ್ವಿಯೊಳಗೆ ಬೆಂದೆ ೮

ಹಣ್ಣು ತಂದೇನಮ್ಮಾ ೯

ತನುವಿನೊಳಗೆ ಅನುದಿನವಿದ್ದು ೧೦

ತೇರು ಬಂತಮ್ಮ ೧೧

ಶಿವನ ಹೊಳೆ ೧೨

ಗುರುವಿಲ್ಲದಾ ಮೇಲೆ ೧೩

ಮೂರು ವರ್ಣದ ವೃಕ್ಷ ೧೪

ಸಾವಿನ ಗುಂಡಿ ೧೫

ಮಗುವು ಜನಿಸೈತೆ ೧೬

ಗಿಡದ ಹೂವು ನೋಡ ೧೭




ಅಂದವಾದ ಲೋಕದಲ್ಲಿ ೧೮

ಹುಟ್ಟಿದ್ದು ಹೊಲೆಯೂರು ೧೯


ಹಾರಾಡುವ ಮನಸು ೨೦


ಓಂ ಜೋಳದ ಹೊಲವಣ್ಣ ೨೧

ಹಾರಿಹೋದ ಹಂಸೆ ೨೨







ರುದ್ರನೆಂಬ ಕಂಕಣ ಕಟ್ಟಿ ೨೩
ಹತ್ತು ವರ್ಣದ ಮುತ್ತು ೨೪
ಕಂಬ ಸೂತ್ರದ ಗೊಂಬೆ ೨೫
ನಾದದನುಭವ ತಿಳಿದು ೨೬
ಕಣ್ಣಲ್ಲಿ ಬೆಳಗುವ ಕಾಂತಿ ೨೭
ನಾದಬಿಂದು ಕಳೆ ೨೮
ಆರಕ್ಷರದ ತೊಟ್ಟಿಲು ೨೯
ಬಯಲು ತೋಟದಲ್ಲಿ ೩೦
ತೈಲವಿಲ್ಲದ ಜ್ಯೋತಿ ೩೧
ಮೂರು ಕಾಲಿನ ಪಕ್ಷಿ ೩೨
ಹಂಸ ಪಕ್ಷಿ ೩೩
ಜ್ಞಾನದ ಸರಪಳಿ ೩೪
ಗುರುವು ಕೊಟ್ಟ ಮದ್ದು ೩೫
ಆತ್ಮನ ಬೆಳಕು ೩೬
ಗುರುಮಂತ್ರದ ಬೆಂಕಿ ೩೭
ಏಳುಸುತ್ತಿನ ಕೋಟೆ ೩೮
ಸದ್ಗುರುವಿನ ಸಂಗ ೩೯
ಬೆಳಕು ೪೦
ರತಿಕೂಟದ ಬೆಡಗು ೪೧
ಮಾಯ ಬಿತ್ತಿದ ಬೆಳಸು ೪೨
ಮೂರೈದು ಗೇಣಿನ ಗುಡಿ ೪೩
ಶಿವಜೀವೈಕ್ಯ ೪೪
ಮಂಗಳ ಪ್ರಭೆ ೪೫
ಗುರು ತೋರಿದ ದಾರಿ ೪೬
ನಾದ ಸಂಪದ ೪೭
ಅರಿವು ಗುರುವನು ನುಂಗಿ ೪೮
ಶೀಲವಂತರ ಸಂಗ ೪೯
ಸೋಬಾನದ ಸೊಬಗು ೫೦
ಹೋಗುವಾಗ ಒಬ್ಬರಿಲ್ಲ ೫೧
ಬರುವಾಗ ಬಸುರಾದೆ ೫೨
ನೆಟ್ಟಗೆ ಮುಂದಕೆ ಸಾಗುತ ನೋಡಿ ೫೩






ಬಲು ತುಂಬಿದ ಬಳಗ ೫೪
ಎಂಥ ಸೋಜಿಗವಾಯಿತೆಲೆ ಕಾಂತೆ ? ೫೫
ನಾಗಲಿಂಗಯೋಗಿ ೫೬
ಶಿವನ ಮನೆ ೫೭
ಶಿವನು ಕೈಲಾಸದಲ್ಲಿ ೫೮
ಶಿಷ್ಯ ಗುರುವನು ನುಂಗಿ ೬೦
ನಾದ ದನಿಗಳನೆ ತೋರಿ ೬೧
ಎಂತ ಮಾತಾಡಿದನೆ ? ೬೨
ನಿಜಶರಣ ೬೩
ತುಂಬಿದ ಬೆಳಕು ೬೪
ಶಿವಯೋಗಿ ೬೫
ಸುಮ್ಮನಿರು ನಾಲಿಗೆ ೬೬
ಮಂಗಳವಾಗಿಹುದು ೬೭
ಜ್ಞಾನದ ಗಂಜಿಯ ತಳೆದು ೬೮
ತುಂಗಭದ್ರೆಯ ಉದಕವ ತಂದು ೬೯
ಬ್ರಹ್ಮಕುಂಬಾರ ೭೦
ನಿನಗೊಪ್ಪಿದ ಗಂಡನ ಪಡೆಯವ್ವ ೭೧
ಗುರುರಾಯನೊಲಿದ ಮೇಲೆ ೭೨
ನೆರಳಿಲ್ಲದ ಗುರು ೭೩
ಮೋಹದ ಕಂದ ೭೪
ಅಂತಃಕರಣ ನೋಡಮ್ಮಾ ೭೫
ದಾರಿ ಆವುದಣ್ಣಾ ? ೭೬
ಅರಿವಿನ ದೀಪ ೭೭
ಈರೇಳು ಲೋಕ ಬೆಳಗುವ ಜ್ಯೋತಿ ೭೮
ಸಂದಿ ಸಂದಿಗೆ ಜಡಿದಿಹುದು ೭೯
ನೀರು ಇಲ್ಲದ ಜಳಕ ೮೦
ಕಣ್ಣಿಲ್ಲದವನು ನೋಡಿ ೮೧
ತನ್ನೊಳು ತಾ ತಿಳಿಯಲಿಲ್ಲ ೮೨
ಮೂರು ನದಿಯ ನಟ್ಟನಡುವೆ ೮೩
ಮಸೂತಿಯೊಳಗಿನ ಮೂಲವ ತಿಳಿದು ೮೪
ಬೆಳಗುವ ಮನಸ ೮೫




ತಾನೇ ತಾನು ಕುಳಿತು ೮೬
ಸುತ್ತ ಸುಳಿವ ಮನವ ನಿಲಿಸಿ ೮೭
ತಾನೂ ಇಲ್ಲ ನೀನೂ ಇಲ್ಲ ೮೮
ದೃಷ್ಟಿಯೊಳಗೆ ದೃಷ್ಟಿ ೮೯
ಕಂಗಳಲ್ಲಿ ಕಣ್ಣ ಕಂಡು ೯೦
ಬೈಲೊಳಗಾಡುವುದೇನಮ್ಮ ? ೯೧
ಎತ್ತಿಕೊಂಡೊಯ್ಯೊ ಅಂಬಿಗಾ ೯೨
ಹರಗುರುವಿನ ನೆನೆಯಮ್ಮ ೯೩
ಬೆಳ್ಳನ ಬೆಳದಿಂಗಳು ೯೪
ಮನೆಮನೆ ತಿರುಗೋದು ಬೆಕ್ಕು ೯೫



## **ಯಾವ ದೇಶದ ಹೂವಿದ್ದಾವ ಇವು**

### **ಅಲ್ಲಮ ಪ್ರಭು**


ಉದಕಕ್ಕೆ ಕನಸಿಲ್ಲ ೯೯
ಬಿನುಗು ಭಾವ ೧೦೦
ಜಲದೊಳಗಣ ಕಿಚ್ಚು ೧೦೧
ಹೊಳೆವ ಬಾಸಿಗಕೆ ೧೦೨
ಹಾರುವ ಹಂಸ ೧೦೩


### **ಅಕ್ಕಮಹಾದೇವಿ**


ನಿಬ್ಬಣಕ್ಕೆ ಹೋದಡೆ ೧೦೪
ಅಂಬಿಗ ೧೦೫
ಮುಕುತಿಯ ಫಲ ೧೦೬
ನಿರಂತರ ಫಲ ೧೦೭
ನೀರ ಹೊಳೆ ೧೦೮
ಚಿತ್ತವೆ ಕಲಕಿವೆ ೧೦೯
ಮತ್ತಿನ್ನಾರಿಗೆ ಹೇಳುವೆ ೧೧೦
ಚಿತ್ತವಲ್ಲಭ ೧೧೧




**ಬಸವಣ್ಣ**

ಪರಮ ಸುಖಿ ೧೧೨

**ನಿಜಗುಣಯೋಗ**

ಹರಳಿಲ್ಲದ ಗೆಜ್ಜೆ ೧೧೩

**ನೀಲಾಂಬಿಕೆ**

ಶ್ರೀಗುರು ಕರದಲ್ಲಿ ೧೧೪

**ಪುರಂದರದಾಸ**

ಕಲ್ಲುಸಕ್ಕರೆ ಸವಿ ೧೧೫
ತನುವೆಂಬ ಭಾಂಡವ ತೊಳೆದು ೧೧೬
ಕುಶಲ ಬುದ್ಧಿಯ ಗಿಳಿಯು ೧೧೭
ಮನವೆಂಬ ಸಂಚಿಯ ಬಿಚ್ಚಿ ೧೧೯

**ಕನಕದಾಸ**


ಬಯಲೊಳಗೆ ಆಲಯವೊ ೧೨೦
ಜಲದ ಕುಲವನೇನಾದರೂ ಬಲ್ಲಿರಾ ? ೧೨೧
ಕೊಂಪೆಯಲಿ ಶೃಂಗಾರ ೧೨೨
ತನುವ ದಂಡಿಸಿ ೧೨೩

**ನಿಜಗುಣ ಶಿವಯೋಗಿ**

ಕೋಗಿಲೆ ಚೆಲ್ವ ಕೋಗಿಲೆ ೧೨೪

**ಚಿದಾನಂದವಧೂತರು**

ಮುತ್ತಿನ ಮಹಿಮೆ ೧೨೫
ನಾನು ಎಂಬುದು ಅಳಿದು ೧೨೬
ಕಾಯವ ಬಿಟ್ಟು ಆತ್ಮಲ್ಲಿ ೧೨೭
ಮಲ್ಲಿಗೆ ಮಳೆಗರೆವುದ ಕಂಡೆ ೧೨೮
ಗುಣವೆಲ್ಲ ಕಳಕೊಂಡೆ ೧೨೯




ಶಕುನದ ಹಕ್ಕಿ ೧೩೦
ಯಮನೇಮ ಬೇಡ ೧೩೧
ಕೋಟಿ ಮಿಂಚಿನ ಬೆಳಕು ೧೩೨

**ಮುಪ್ಪಿನ ಷಡಕ್ಷರಿ**

ಬಯಲು ಭ್ರಾಂತು ೧೩೪
ಬೆನ್ನ ಬಿಡದಕ್ಕಯ್ಯ ! ೧೩೬
ಹಾರು ಕಂಡ್ಯಾ ಹಂಸ ೧೩೮
ಜೀವ - ದೇವ ೧೩೯

**ಸರ್ಪಭೂಷಣ ಶಿವಯೋಗಿ**

ಮನವೆಂಬ ಮರ್ಕಟ ೧೪೦
ಬಿಡು ಬಾಹ್ಯದೊಳು ೧೪೧
ಶರೀರವೆಂದೆಂಬ ಹೊಲ ೧೪೨
ಅನುಭಾವದಡಿಗೆ ೧೪೩
ಜೋಕಾಲಿ ೧೪೪
ಕಾಯ ಕಾಂತಾರ ೧೪೫

**ರಾಮಪುರ ಬಕ್ಕಪ್ಪ**


ಹೊಳೆಯ ದಾಟಿಸೊ ೧೪೬
ಹತ್ತಿ ಬಿತ್ತಿ ಬತ್ತಿ ಕಾಣೆ ೧೪೭
ಚಕಮಕಿ ಚೀಲ ೧೪೮
ಆತ್ಮದ ತೇರು ೧೪೯
ದಾರಿ ಎಷ್ಟು ಹರದಾರಿ ? ೧೫೦

**ಕಡಕೋಳ ಮಡಿವಾಳಪ್ಪ**

ಎಂಥ ಆಕಳ ? ೧೫೧
ಮುಡಚಟ್ಟಿನೊಳು ಬಂದು ೧೫೨
ಸಾಧು ಸಂತರು ೧೫೩
ಮಾತಿನ ನೀತಿ ತಿಳಿಯಬೇಕು ೧೫೪
ಸುಳ್ಳೇ ಶೀಲ ಮಾಡ್ತೇರಿ ೧೫೫

**ಕೂಡಲೂರ ಬಸವಲಿಂಗ ಶರಣರು**



ಅಳುತಿದ್ಯಾ ಕಂದ ೧೫೬
ಗುರುವಿನಾಜ್ಞೆ ೧೫೭
ಅಗಸರೊ ನಾವು ೧೫೮
ಪಂಡಿತ ೧೫೯
ಒಕ್ಕಲುಮಗ ೧೬೦

**ಶಿಶುನಾಳ ಶರೀಫ**




ಸಾವಿರ ಕೊಡಗಳ ಸುಟ್ಟು ೧೬೨
ಕಬ್ಬಕ್ಕಿ ೧೬೩
ಮನೆಯ ಮಾಳಿಗೆ ೧೬೪
ಬುದ್ಧಿವಂತರು ತಿಳಿದು ೧೬೫
ನಾಗಲಿಂಗಯೋಗಿ ೧೬೬
ಮಾಯದ ಸೂಜಿ ೧೬೭
ಸದಾಶಿವಧ್ಯಾನ ೧೬೮
ಅವರಿವರರಿಯದೆ ೧೬೯
ಮಾರಿದೇವಿ ಕುಮಾರ ೧೭೦
ಹೊರವಳಗೊಂದೇ ಪರಿ ೧೭೧
ಸ್ನೇಹ ೧೭೨
ಪ್ರೀತಿ ಗೆಳತನ ೧೭೩
ಬಾಳಬಲ್ಲವರಿಗೆ ತಂಬೂರಿ ೧೭೪

**ಬಾಲಲೀಲಾ ಮಹಂತ ಶಿವಯೋಗಿ**




ಕಂಡು ಕಂಡದ ಬೇಡಿ ೧೭೫
ಅರಸುವ ಜನರಿಗೆ ೧೭೬
ಶಿವಯೋಗಿ ೧೭೭
ಒಳಗೇನು ಸುಖವಿಲ್ಲ ೧೭೮
ಮನಗಿಳಿ ೧೮೦
ದೊರೆ ೧೮೧




**ಶಂಕರಾನಂದ ಯೋಗಿಶ್ವರ**

ತಿಂಗಳ ಬೆಳಕಿನ ತಿಳಿರಸ ೧೮೨
ಬರುವ ಕಾಲದಿ ಬರಿಗೈಯಿ ೧೮೩
ಮೂರು ನದಿಯ ನಡುವೆ ಮಿಂದು ೧೮೪
ಜ್ಞಾನದ ಇರಮನೆ ೧೮೫
ಅಮೃತ ಕೊಳ ೧೮೬
ರತ್ನಪರೀಕ್ಷೆ ೧೮೭

**ಶಿವಲಿಂಗವ್ವ ಜತ್ತಿ**

ಸೂರ್ಯ ಹುಟ್ಟಿದನವ್ವ ೧೮೮
ಆತ್ಮನ ಅನುಭವ ಬಲ್ಲವರು ೧೮೯

**ಖೇಮಣ್ಣ (ಬಂಡೆಗುರು)**


ಗಿಣಿ ೧೯೦
ಹಾವನು ಹಿಡಿಯುವ ಗಾರುಡಿಗ ೧೯೧
ಕಂಗಳೆರೆಡು ಕದಲದಂತೆ ೧೯೨
ಅಲಾಯಿ ೧೯೩
ನಮಾಜು ೧೯೪
ಆಶ್ಚರ್ಯ ಪಕ್ಷಿ ೧೯೫

**ಚನ್ನಾರೂಢ**

ಕಾಯದೊಳಗಿನ ಕೀಲ ೧೯೬
ಹುಣ್ಣಿಮೆ ಚಂದ್ರ ೧೯೭
ಸೂರ್ಯಚಂದ್ರ ಬೀದಿಗಳು ೧೯೮
ಗರುಡ - ಸರ್ಪನ ಸ್ನೇಹ ೧೯೯
ರಾಗವಳಿದ ಯೋಗಿ ೨೦೦

**ಶೀಲವೇರಿ ಶಿವಪ್ಪ**

ಅರುವು-ಮರವು-ಕುರುಹು ಕೂಡಿ ೨೦೧
ಬ್ರಹ್ಮಪ್ರಕಾಶ ೨೦೨
ನಿಮ್ಮ ಬದಿ ಬಿದ್ದೆನಯ್ಯಾ ೨೦೩
ಗುರುಪುತ್ರ ೨೦೪




**ಶ್ರೀಸತ್ ಉಪಾಸಿ ಮಲ್ಲಣ್ಣನವರು**

ಗುಟ್ಟನರಿತು ಗುರುವಿನಿಂದ ೨೦೫
ಯೋಗಿಯಾಗಣ್ಣ ೨೦೬
ಮರ್ಮದ ಕಣ್ಣು ೨೦೭
ಸೂರ್ಯನಿಲ್ಲದೆ ಜ್ಯೋತಿ ೨೦೮
ಸೂರ್ಯಚಂದ್ರಾಯುಧವ ಹಿಡಿದು ೨೦೯
ತುಂಬಿದ ಕೊಡನಮ್ಮ ೨೧೦

**ಕೊಳ್ಳೂರ ಹುಸೇನ ಸಾಹೇಬ**

ಅರಮನೆ ೨೧೧
ಕಾಯಾಪೂರ ೨೧೨
ಸಿಗತಾನ ಮುಕ್ಕಣ್ಣ ೨೧೪

**ಕರಿಬಸವೇಶ್ವರ**

ಚಿತ್ತದಂಗನೆ ೨೧೬
ಮಹದಾರ ಚನ್ನಯ್ಯ ಬಂದ ೨೧೭

**ಕೈವಾರ ನಾರೇಯಣಪ್ಪ**


ಜಾತಿ ಭೇದದ ಪಾತಕ ೨೧೮
ಆತ್ಮದ ಆನಂದ ೨೧೯
ಕಣ್ಣುಗಳು ಕಪಟಿಗಳು ೨೨೦

**ಮೈಲಾರ ಬಸವಲಿಂಗ ಶರಣರು**

ಚಿತ್ತ ಬತ್ತಿಯ ಜ್ಯೋತಿ ೨೨೨
ನೀರು ಬೀಜವ ಬಿತ್ತಿ ೨೨೩
ಕರಿಯೆಂಟು ನರಿ ನುಂಗಿತಲ್ಲಾ ! ೨೨೫

**ಖೈನೂರು ಕೃಷ್ಣಪ್ಪ**

ಅತ್ತೇ ಹೋಗಣ್ಣ ೨೨೬
ಏಸು ದಿವಸ ಇಲ್ಲೇ ಇದ್ದೇನಂತಿ ? ೨೨೭
ಹಸ್ತರ ಕರೆವರು ಯಾರವ್ವ ? ೨೨೮
ಸಿಕ್ಕರೆ ಸುಮ್ಮನೆ ಕೊಡರೆವ್ವ ೨೨೯




**ಗಟ್ಟಿಹಳ್ಳಿ ಆಂಜನಪ್ಪ**

ಗಂಗೆದೇವರ ನಿಲಿಸಬೇಕಣ್ಣ ೨೩೦
ಆತ್ಮಕಾಂತೆ ೨೩೨

**ಚನ್ನೂರ ಜಲಾಲ ಸಾಹೇಬ**

ತೊಳೆಯಬೇಕರಿ ಒಳಗಿನ ಮೈಲಾ ೨೩೪
ಅಲ್ಲಾನ ಜಾತ್ರಿ ೨೩೫

**ಕರಿವೃಷಭೇಂದ್ರ**

ಹೊಕ್ಕುಳವ ಕೊಯ್ಯಿರವ್ವ ೨೩೬

**ಕುಕಡೊಳ್ಳಿ ಚನ್ನಮಲ್ಲಯ್ಯ**

ಹುಟ್ಟಿದ ತಾವ ಅರಿಯಣ್ಣ ೨೩೭
ಮದ್ದಾನಿ ೨೩೮

**ಕರಿಗೂಳೇಶ್ವರ**

ಬತ್ತಲಿಯಾಗೆಂದ ೨೩೯
ಎಣ್ಣಿಲ್ಲದ ಜ್ಯೋತಿ ೨೪೦
ಗುರುವೇ ಹರನು ೨೪೧

**ಸಿರಗಾಪೂರ ಬಂಡೆಪ್ಪ**


ನೀಲಿ ತೇರಿಗೆ ಹಗ್ಗ ಬಿಗಿಸಿ ೨೪೨
ಹತ್ತು ದಿಕ್ಕಿನೊಳಗೆ ಹುಡುಕಣ್ಣಾ ೨೪೩
ಇಹಪರವೆಂಬ ಖೂನ ತಿಳಿಯಣ್ಣ ೨೪೪

**ಹೇರೂರು ವಿರುಪನಗೌಡ**

ಬಡಮನವಾಗದೆ ೨೪೫
ಜಂಗಮನೊಳು ಜಗವೆಲ್ಲವ್ವ ೨೪೬

**ಹಾರಕೂಡ ಚನ್ನಬಸವ ಶಿವಯೋಗಿ**

ತಿಳಿದರೆ ನೀ ಉಳಕೊ ೨೪೭
ಹೊಲ ಹಸನ ಮಾಡಿದ ೨೪೮




**ಗೊಬ್ಬೂರು ಹಂಪಣ್ಣ**

ಪರಕೆ ಪರನಾಗು ೨೪೯

**ಕೆಸ್ತೂರ ದೇವರು**

ಮೇಲು ಶಿಖರವ ಹತ್ತಿ ೨೫೦

**ಘನಮಠ ನಾಗಭೂಷಣ ಶಿವಯೋಗಿ**

ನೀನೇನಾದಿ ? ೨೫೧

**ಚಲವಾದಿ ಚಂದಪ್ಪ**

ನಿಜವೆ ನಿರ್ಗುಣ ೨೫೨

ಏಳು ಸಮುದ್ರಕಿಂತ ಹೊರಗ ! ೨೫೩

**ಮರಕುಂದಿಯ ಬಸವಣ್ಣಪ್ಪ**

ಕಣ್ಣ ಬೆಳಕಿನೊಳು ಇಹಪರವು ೨೫೪

**ನೀರಲಕೇರಿ ಬಸವಲಿಂಗ ಶಿವಯೋಗಿ**

ಇನ್ನೇನಿನ್ನೇನು ? ೨೫೫

ಅಗಣಿತ ರೂಪ ೨೫೬

ಅಂತರಂಗದ ಪೇಟೆ ೨೫೭

**ಆದಿ ಅಮಾತೆಪ್ಪ**

ಬೆಳಗು ನೋಡನು ಬಾರೆ ೨೫೯

**ಅಯ್ಯಪ್ಪಜ್ಜನವರು**


ಸೊಡರಿನ ಎಡಬಲದಿ ೨೬೦

**ಗೂಗಲ್ಲು ಪರಪ್ಪಯ್ಯ**

ಮಾಂಗಲ್ಯನಾಗೊ ಎನಗೆ ೨೬೧

**ತಿಪ್ಪಣ್ಣ**

ನವಣೆಯ ಹೊಲ ೨೬೨




**ಮೋಟ್ನಳ್ಳಿ ಹಸನ ಸಾಹೇಬ**

ಶಿವನೆಲ್ಲಿಲ್ಲಾ ? ೨೬೪
ಶೂನ್ಯಕೆ ಶೂನ್ಯ ೨೬೫
ತನುಮನ ಬಾಗುತ ೨೬೬
ಅರಿವಿನ ಅಂಗಿ ೨೬೭

**ಹೊಸೂರು ತಿಪ್ಪಣ್ಣ**

ಸೆರಗನು ಬೀಸಿ ಸೇತುವೆ ಕಟ್ಟಿ ೨೬೮
ಮಲ್ಲಿಗೆ ಹೂವಿನ ಪ್ಯಾಟಿ ೨೬೯

**ಯರಮಾರೆಪ್ಪ**

ಕಾನನದೊಳಗಿದ್ದ ಮಾತು ೨೭೦
ಸತ್ಯ ಶರಣರ ಕೂಟ ೨೭೧
ಸತ್ಯ ಕತ್ತಿಯ ಪಿಡಿದು ೨೭೨

**ಸಾವಳಗಿ ಮಹಮ್ಮದ ಸಾಹೇಬ**

ಹಚ್ಚಿದ ಹಸರ ಜಂಡಾ ೨೭೩
ಸದಾ ದೀವಳಗೀ ೨೭೪
ಜ್ಞಾನದ ಹಾದಿ ೨೭೫
ಹಾವು ಹರಿದ ಜಾಗದಲ್ಲಿ ೨೭೬

**ಯೋಗಿ ಬಲಭೀಮ**


ಗೊಲ್ಲನ ಮಾತ್ರಕೆ ಅಂಜಿತು ಹಾವಾ ೨೭೭
ಸುಜ್ಞಾನವೆಂಬೊ ಕಿಡಕಿ ೨೭೮
ಹಾವ ಹಿಡಿದು ಒಳಗೆ ಹಾಕಿ ೨೭೯

**ಬೆನೂರ ಹಜರತ್ ಕಾಕಿ ಪೀರ**

ಅಪರೂಪದ ಪಕ್ಷಿ ೨೮೦
ಅರಿವಿನ ಕಲ್ಲಿಟ್ಟು ಹೊಡೆದೆನಲ್ಲ ೨೮೨

**ಗೋನಾವರದ ರಾಮದಾಸ (ಬಡೇಸಾಬ)**

ಬೀಳುವ ಎಚ್ಚರ ಮರೆತಿದ್ದಿ ೨೮೩




**ಷೇಕ್ ಅಬ್ದುಲ್ ಬಾಬಾ**

ಮೌನದಿಂ ಮಾತಾಡುತ ೨೮೪
ಮಂಚಕೆ ಸಾವಿರ ಕಾಲಿತ್ತು ೨೮೬
ಮೂಲಭಾವವು ತಿಳಿದಮೇಲೆ ೨೮೭

**ಮಹಾಗಾಂವ ಮೀರಾಸಾಹೇಬ**

ನಮ್ಮ ಕೃತಿ ೨೮೯
ಸೂಕ್ಷ್ಮ ಗಡಗಿ ೨೯೦

**ಮಂಜರ್ಲಾ ಖಾದರ ಸಾಹೇಬ**

ಶಾಂತಿಯ ಸ್ಥಾನ ೨೯೧
ಅರಿವ ಹಾದಿ ೨೯೨

**ಗುರುಗೋವಿಂದ ಭಟ್ಟ**

ಕತ್ತಲೆ ಬೆಳಕು ಮೀರಿ ೨೯೩

**ಶ್ರೀರಾಂಪುರ ಪರಪ್ಪಸ್ವಾಮಿ**

ಬಿದಿರು ಕಂಟಿನ ಗುಡ್ಡ ೨೯೪

**ಅಂದೇವಾಡಿ ಗೈಬಿಸ್ವಾ**

ಆಚಿಕಡಿ ಯಾರೂ ಇಲ್ಲ ೨೯೫

**ಹಸನ್ ಮಾತಾಜಿ**

ನಿತ್ಯಾನಂದನು ಬಂದನು ೨೯೬

**ರಸ್ತಾಪುರದ ಭೀಮಕವಿ**

ಭಕ್ತಿಯೆಂಬ ಕೊಳಲು ೨೯೮

**ಅರವಲಿ ಬಿಜಲಿ ವಸ್ತಾದಿ**

ಸ್ನೇಹವ ಮಾಡು ೨೯೯

**ರೇವಗಿಪುರದ ಸಿದ್ಧಲಿಂಗೇಶ್ವರ**

ಬಯಲಿಗೆ ಬಯಲು ೩೦೦




**ಐನೂಲಿ ಕರಿಬಸವಾರ್ಯ**

ಚಂಡಿ ಮನವೆ ೩೦೧

**ತಿಂಥಣಿ ಮೋನಪ್ಪಯ್ಯ**

ಅಮೃತದ ಹೊಂಡ ೩೦೨

**ಸೋಮೆಕಟ್ಟೆ ಚನ್ನವೀರಸ್ವಾಮಿ**

ಸದಾಶಿವನತ್ತಲು ೩೦೩

**ಹಾಗಲವಾಡಿ ಮುದ್ವೀರಸ್ವಾಮಿ**

ಬೆಳಗ ಕಂಡ ಕಂಗಳು ೩೦೪

**ಶಂಕರದೇವ**

ಒಂದಲ್ಲ ಎರಡಲ್ಲ ೩೦೫

**ನಿಂಬರಗಿ ಮಹಾರಾಜ**

ಕುಂಡಲ ಮಧ್ಯದ ಜ್ಯೋತಿ ೩೦೬
ವಿವೇಕವೆಂಬ ಅಕ್ಕಿ ೩೦೮

**ಅನುಬಂಧ**

ಕೆಲವು ಅಭಿಪ್ರಾಯಗಳು ೩೧೧
ತತ್ತ್ವಪದಕಾರರ ಪರಿಚಯ ೩೧೫
ಪಾರಿಭಾಷಿಕ ಶಬ್ದಕೋಶ ೩೨೯
ಅರ್ಥಕೋಶ ೩೩೧
ತತ್ತ್ವಪದಗಳ ಅಕ್ಷರಾನುಕ್ರಮ ೩೩೩
ನೆರವು ೩೪೩

**ಸಂಪಾದಕರ ಪರಿಚಯ**

ಪ್ರೊ. ಕಾಳೇಗೌಡ ನಾಗವಾರ ೩೪೬
ಜಿ ವಿ ಆನಂದಮೂರ್ತಿ ೩೪೮
ಬೆಳುದಿಂಗಳ ಹಾದಿಯಲ್ಲಿ ೩೫೦



# ನಾನಾರೆಂಬುದು ನಾನಲ್ಲ

ಅಜ್ಞಾತ ತತ್ತ್ವಪದಕಾರರು

## ನಡುರಂಗದ ಜ್ಯೋತಿ

ಗುರುವಿನ ಮಹಿಮೆ ಗುರುಭಕ್ತರೆ ಬಲ್ಲರು ಚಂದಮಾಮ
ಮೂಢ ನರರೇನು ಬಲ್ಲರು
ನಡುರಂಗದ ಜ್ಯೋತಿಯ ಚಂದಮಾಮ ?

ತಡರು ಗಾತ್ರದ ಮರ ಕುದುರೆ ಗಾತ್ರದ ಹೂ ಚಂದಮಾಮ
ಆನೆ ಗಾತ್ರದ ಕಾಯಿ ಒಂಟೆ ಗಾತ್ರದ ಹಣ್ಣು ಚಂದಮಾಮ
ಕಣ್ಣಿಲ್ಲದಾತನು ಕಂಡವನೆ ಆ ಮರವ ಚಂದಮಾಮ
ಕೈಯಿಲ್ಲದಾತನು ತಬ್ಬವನೆ ಆ ಮರವ ಚಂದಮಾಮ
ಮೂಢ ನರರೇನು ಬಲ್ಲರು
ನಡುರಂಗದ ಜ್ಯೋತಿಯ ಚಂದಮಾಮ ?

ಕಾಲಿಲ್ಲದಾತನು ಹತ್ತವನೆ ಆ ಮರವ ಚಂದಮಾಮ
ಕೈಯಿಲ್ಲದಾತನು ಕಿತ್ತವನೆ ಆ ಹಣ್ಣ ಚಂದಮಾಮ
ತಳವಿಲ್ಲದ ಪುಟ್ಟಿಯಲ್ಲಿ ಇಟ್ಟವನೆ ಆ ಹಣ್ಣ ಚಂದಮಾಮ
ಶಿರವಿಲ್ಲದಾತನು ಹೊತ್ತವನೆ ಆ ಹಣ್ಣ ಚಂದಮಾಮ
ಮೂಢ ನರರೇನು ಬಲ್ಲರು
ನಡುರಂಗದ ಜ್ಯೋತಿಯ ಚಂದಮಾಮ ?

ಸತ್ತು ಹುಟ್ಟುವ ಸಂತೇಲಿಟ್ಟವರೆ ಆ ಹಣ್ಣ ಚಂದಮಾಮ
ಕಾಸಿಲ್ಲದಾತನು ಬೆಲೆಮಾಡಿದ ಆ ಹಣ್ಣ ಚಂದಮಾಮ
ಬೆರಳಿಲ್ಲದಾತನು ಕುಟುಕಿ ನೋಡಿದ ಆ ಹಣ್ಣ ಚಂದಮಾಮ
ಚಾಕಿಲ್ಲದಾತನು ಕುಯ್ದ ಆ ಹಣ್ಣ ಚಂದಮಾಮ
ಮೂಢನರರೇನು ಬಲ್ಲರು
ನಡುರಂಗದ ಜ್ಯೋತಿಯ ಚಂದಮಾಮ ?

ಚಾಕಿಲ್ಲದಾತನು ಕುಯ್ದ ಮೇಲೆ ಆ ಹಣ್ಣ ಚಂದಮಾಮ
ನಾಲಗಿಲ್ಲದಾತನು ರುಚಿಯ ನೋಡಿದ ಆ ಹಣ್ಣ ಚಂದಮಾಮ
ಅಂಗುಳಿಲ್ಲದಾತನು ನುಂಗ್ಯಾನೆ ಆ ಹಣ್ಣ ಚಂದಮಾಮ
ಮರದಲ್ಲಿ ಮರಹುಟ್ಟಿ ಮರಮಾಯವಾಯಿತೋ ಚಂದಮಾಮ
ಮೂಢ ನರರೇನು ಬಲ್ಲರು
ನಡುರಂಗದ ಜ್ಯೋತಿಯ ಚಂದಮಾಮ ?

❍

## ನಾನಳಿದು ಬಯಲಾದೆ

ಮೊದಲು ಪಾಡುವೆ ನಾ ಸದಮಳ ಗುರುವಿನ
ಚದುರ ಮತಿಗಳನು ಬಲಗೊಂಡು । ಈ ತತ್ತ್ವ
ಪದಗಳನು ಮುದದಿಂದಾ

ಆಕಾಶದೊಳಗಣ ಜ್ಯೋತಿಯ ಪ್ರಭೆ ಬಂದು
ಲೋಕಂಗಳೊಳಗೆ ಮುಸುಕಲು । ಅದ ಕಂಡು
ಏಕಾಂಗಿಯಾದ ನಾ ಮುಕ್ತನಾದೆ

ನೂರೊಂದು ಮಣಿಯನ್ನು ಮೂರು ಭಾಗವ ಮಾಡಿ
ಮೂರು ಪುರುಷರಿಗೆ ಅಳವಡಿಸಿ । ಮೂವರನು
ಸೇರಿ ನಾನಳಿದು ಬಯಲಾದೆ


ಕೋಟಿ ರವಿಶಶಿಗಳಿಗೆ ನೀಟಾದ ಪ್ರಭೆ ಬಂದು
ನಾಟೀತು ಎನ್ನ ಮನದೊಳಗೆ । ಅದರಿಂದ
ದಾಂಟೀದೆ ಭವದ ಕೊಳಗಳನು

ಆರು ಮುಖದ ಮುತ್ತು ನೀರೊಳಗಿರಿಸಲು
ನೀರಳಿದು ಮುತ್ತುಳಿಯಲು । ಆ ಮಣಿಯು
ಸೇರಿತು ಎನ್ನ ಪುರದೊಳಗೆ

ಹಿತ್ತಲ ಬಾಗಿಲ ತೆಗೆದು ಸತ್ತವನ್ನೆಬ್ಬಿರಿಸಿ
ಹೆತ್ತಮ್ಮನ ಕರವ ಪಿಡಿದು । ಅವಳಾಗ
ಕೊಟ್ಟಾಳು ತನ್ನ ಪದಕವ

ಪಶ್ಚಿಮದ ಕೊಳದಲ್ಲಿ ಅಚ್ಚತಾವರೆ ಅರಳಿ
ನಿಚ್ಚಳದ ಗಂಧವೆಸೆಯಲು । ಅದ ಕಂಡು
ಸತ್‌ಚಿತ್ತದ ಭ್ರಮರವೆರಗೀತು

ಕುಂಡಲಿಯ ಸರ್ಪನು ಕೊಂಡು ಮೇಲಕ್ಕೆ ತಗೆಯೆ
ಮಂಡಲವು ಮೂರು ಬೆಳಗಾಗಿ । ನಡೆವಾಗ
ಅಖಂಡ ಜ್ಯೋತಿಯೊಳು ಬಯಲಾದೆ



ನೆಲೆಯಿಲ್ಲದ ತೋಟದಲಿ ಎಲೆಯಿಲ್ಲದ ಗಿಡಹುಟ್ಟಿ
ಫಲವಿಲ್ಲದ ಹಣ್ಣು ತಳೆದಿರಲು । ಅದ ಕಂಡು
ಮೆಲಲಿಲ್ಲದೆ ಸವಿದೇನೊ

ಸಪ್ತಸಾಗರ ಬತ್ತಿ । ಹತ್ತು ಹಂಸೆಯು ಸತ್ತು
ಮುತ್ತು ಮಾಣಿಕವು ತಲೆದೋರೆ । ಅದ ಕಂಡು
ಸತ್ತವನೆದ್ದು ಕುಣಿದಾನು

ಹತ್ತು ಸಾಗರದಲ್ಲಿ ಮತ್ತೆ ಸ್ನೇಹವ ಮಾಡಿ
ಹತ್ತೊಂದು ತೆರದ ಉಣಿಸುಗಳ । ನಾನುಂಡು
ಕತ್ತಲೆಯಳಿದು ಬಯಲಾದೆ

## ಮೇಲು ಮಂಟಪದಲ್ಲಿ ನೋಡಣ್ಣ

ಮೇಲು ಮಂಟಪದಲ್ಲಿ ನೋಡಣ್ಣ
ಫಾಲಾಕ್ಷಪಾಲ ಬ್ರಹ್ಮ ತನ್ನೊಳಗಿಹನು ಕಾಣಣ್ಣ

ಕೀಳು ಮೇಲು ಹೋಗುತ್ತೈತೆ
ಮೇಲೆ ಜ್ಯೋತಿಯು ಬೆಳಗುತ್ತೈತೆ
ಗಾಳಿಗೋಪುರ ಗಗನದಲ್ಲಿ
ಬಾಲಕೃಷ್ಣನ ಲೀಲೆಯಲ್ಲಿ

ಎಷ್ಟು ದಿನ ಇಲ್ಲಿದ್ದರೇನಣ್ಣ ?
ಈ ಲೋಕದೊಳಗೆ ಕಷ್ಟವೈತೆ ತಿಳಿಯೊ ನಮ್ಮಣ್ಣ
ಅಷ್ಟದಳದ ಕಮಲದಲ್ಲಿ ಇಷ್ಟಲಿಂಗನ ಕೋಣೆಯಲ್ಲಿ
ಮುಟ್ಟಿ ಪೂಜೆಯ ಮಾಡುವಂಥ
ಯೋಗಾಟವನ್ನೆ ಸಾಧಿಸಣ್ಣ

ಯೋಗ ಎಂಟನು ನೆಚ್ಚ ಬ್ಯಾಡಣ್ಣ
ನಿರ್ಗುಣ ರಾಜಯೋಗಿ ತನ್ನೊಳಗಿಹನು ಕಾಣಣ್ಣ
ಒಂಬತ್ತು ಬಾಗಿಲು ಮುಚ್ಚಿ ಬುದ್ಧಿಯನ್ನೆ ಸಾಧಿಸಣ್ಣ

ಜೀವ ಸ್ಥಾನವು ಯಾವುದೇಳಣ್ಣ ?
ಈ ದೇಹದೊಳಗೆ ಜೀವಪಕ್ಷಿಯಲ್ಲಿಹನು ಕಾಣಣ್ಣ
ಜೀವಜೀವ ಇಬ್ಬರಿಗೂ ಸರ್ವಸಾಕ್ಷವನೊಬ್ಬನಣ್ಣ
ಜೀವಶಿವರೊಳು ಐಕ್ಯವಾಗುವ ಸ್ಥಾನವದು ಗೋಪ್ಯವಣ್ಣ

ಕರ್ಮಕಾಂಡವ ಕಳೆಯಬೇಕಣ್ಣ
ಹರಿಭಕ್ತನಾದರೆ ಗುರುಸ್ಮರಣೆ ಮಾಡಬೇಕಣ್ಣ
ಗುರುಸ್ಮರಣೆ ಮಾಡಬೇಕು
ಗುರುತು ತನ್ನೊಳಗೆ ಅರಿಯಬೇಕು
ಅರಿವು ತೋರಿದ **ಗುರು ಮುಕುಂದ**ನ ಮರೆಯದಿರುವುದೆ ಮರ್ಮವಣ್ಣ

❍

## ಜ್ಞಾನಶಕ್ತಿ

ಎಷ್ಟು ಬೇಡಿಕೊಂಡರೊಲಿವಳಲ್ಲ ಕಾಣೋ ಬಹಳ
ಕಷ್ಟವೈತೆ ಜ್ಞಾನಶಕ್ತಿ । ಮುಟ್ಟಿ ಪೂಜೆ ಮಾಡುವವರಿಗೆ

ತುಂಟರೈವರ ಸಂಗವ ಬಿಡೆಂಬುತಾಳೆ ನಿನ್ನ
ಕಂಟಕನಾರನು ಕಳಿಯೆಂಬುತಾಳೆ ನೀಲ ।
ಕಂಠನಂಘ್ರಿ ಸ್ಮರಣೆಯಲ್ಲಿ ಜಂಟಿಯಾಗಿ ಇದ್ದರೆ ನಿನ್ನ
ಭಂಟೆಯಾಗಿ ಹಗಲು ಇರುಳು ಉಂಟುಮಾಡೆಂಬುತಾಳೆ

ಜಲಧಿ ಸಾಗರವ ದಾಟಿಬಿಡೆಂಬುತಾಳೆ ನಿನ್ನ
ಜಲವನೆಲ್ಲ ಹೀರೆನೆಂದೆಂಬುತಾಳೆ ಲಲನೆಯೋರ್ವಳ ಸಂಗದಲ್ಲಿ
ಲಲನನಾಗಿ ಇದ್ದರೆ ನಿನ್ನ ಲಲನೆಯಾಗಿ ಹಗಲು ಇರುಳು
ಒಲಿದು ಇದ್ದೇನೆಂಬುತಾಳೆ

ಆರು ಲಿಂಗದ ಪೂಜೆಯ ಮಾಡೆಂಬುತಾಳೆ ಅಲ್ಲಿ
ಆರುವುಂಟು ಆರು ಇಲ್ಲೆಂಬುತಾಳೆ
ಆರು ಲಿಂಗಕ್ಕಾರು ಶಕ್ತಿ ಆರು ಪ್ರಸಾದವ ಕೊಟ್ಟರೆ ನಿನ್ನ
ನಾರಿಯಾಗಿ ಹಗಲು ಇರುಳು ಸೇರಿ ಇದ್ದೇನೆಂಬುತಾಳೆ

ಅಷ್ಟದಳದ ಮಂಟಪವ ರಚಿಸೆಂಬುತಾಳೆ ಅಲ್ಲಿ
ನಿಷ್ಟೆಯೆಂಬೊ ಹಾಸಿಗೆ ಹಾಸೆಂಬುತಾಳೆ
ಇಷ್ಟಪ್ರಾಣ ಭಾವದಲ್ಲಿ ಗಟ್ಟಿಯಾಗಿ ಇದ್ದರೆ ನಿನ್ನ
ಪಟ್ಟದ ರಾಣಿಯಾಗಿ ನಾನು ಮುಟ್ಟಿಕೊಂಬೆನೆಂಬುತಾಳೆ

ಅಂಗಲಿಂಗದ ಸಂಗವ ಮಾಡೆಂಬುತಾಳೆ ನೀನು
ಲಿಂಗವಂತನಾಗಿ ನಡಿಯೆಂಬುತಾಳೆ ಹಿಂಗದೆ ಗುರು
ಲಿಂಗಸ್ವಾಮಿಯ ಸಂಗವ ನೀ ಮಾಡಿಯಾದರೆ । ನಿ
ನ್ನಂಗನೆಯಾಗಿ ಹಗಲು ಇರುಳು ಹಿಂಗದಿರುವೆನೆಂಬುತಾಳೆ


❍

## ನಡೆನುಡಿ ಒಂದಾಗಿ

ಶಿವಶಿವ ಎನ್ನುತ ನುಡಿಯಮ್ಮಾ
ನೀನು ಹರಹರ ಎನ್ನುತ ನಡೆಯಮ್ಮ
ನಿನ್ನ ನಡೆನುಡಿ ಒಂದಾಗಿ ನಡೆದರೆ
ಪಡೆದು ಪದವಿ ಸುಖ ಹೊಂದಮ್ಮ

ಹುಟ್ಟಿದ ಮೂಲವ ತಿಳಿಯಮ್ಮಾ
ನಿನ್ನ ಮುಟ್ಟಿನ ದೇಹವ ಮರೆಯಮ್ಮ
ಪಟ್ಟಣ ಕಾವೇರಿ ನದಿಯಲ್ಲಿ ಮುಳುಗಿದರೆ
ಮನವು ಶುದ್ಧವಾಗುತ್ತೈತೆ ತಿಳಿಯಮ್ಮ

ಪರ್ವತಕ್ಕೋದರೂ ಇಲ್ಲಮ್ಮ
ಪರಪುರುಷನ ಕೂಡಿದರೆ ಇಲ್ಲಮ್ಮ
ಪರಮ ಪ್ರಸಾದದ ನೆಲೆಯನು ಅರಿತರೆ
ಪರಶಿವಗೆ ಸತಿ ನೀನಮ್ಮ



ತಿರುಪತಿ ಯಾತ್ರೆಯೊಳಿಲ್ಲಮ್ಮಾ
ನೀನು ತಿರುತಿರುಗಿ ಬಹು ನೊಂದ್ಯೆಮ್ಮ
ತಿರುಗುವ ತಿರುಪತಿ ನೆಲೆಯನು ಅರಿತರೆ
ತಿರುಗಿ ಬರುವುದೇನು ಇಲ್ಲಮ್ಮ

ಖಂಡಿತ ಮಾತದು ಬೇಡಮ್ಮಾ
ಅದ ಕಂಡವರಿಲ್ಲ ಕೇಳಮ್ಮ
ಖಂಡಿತ ಮಾಡುವ ಜಾಗವನು ಅರಿತರೆ
ಅಖಂಡ ಮೂರುತಿ ನೀನಮ್ಮ

❍

## ನಿಂತಲ್ಲಿ ನೆರಳೇ ಅವಗಿಲ್ಲ

ಎಂಥ ಶಿವಯೋಗಿ ಬಂದಿಹನೆ
ಊರಿಂದ ಹೊರಗೆ
ಕುಂತಲ್ಲಿ ನೆರಳೇ ಅವಗಿಲ್ಲ ಗುರುವೆ
ನಾ ನೋಡಿ ಬಂದೆ

ಬಾಲಪ್ರಾಯದ ಪರದೇಶಿ
ಆ ಶಿವಯೋಗಿ
ಕಂಠಸೂರವೆ ಮೊದಲಿಲ್ಲ
ನಾ ನೋಡಿ ಬಂದೆ

ಆರು ರಾಜ್ಯವನಾಳಿದನೆ
ಆ ಶಿವಯೋಗಿ
ಮೂರೂರಿಗೆ ಬೆಂಕಿಯ ತೋರಿದನೆ
ನಾ ನೋಡಿ ಬಂದೆ



ನಾಗಮಾಲಿಂಗಪ್ಪನ ಕರಸ್ಥಳಕೆ
ನಾನ್ಹೋಗಿ ಬಂದೆ
ಯೋಗಿ ಮಾಲಿಂಗಪ್ಪನ ದರುಶನವ
ನಾ ನೋಡಿ ಬಂದೆ

ಸಿಂಗ್ರಿ ರಾಗವ ಪಾಡಿದನೆ
ಆ ಶಿವಯೋಗಿ
ಕಂಠಸೂರವೆ ಮೊದಲಿಲ್ಲ
ನಾ ನೋಡಿ ಬಂದೆ

ಎಂಥ ಶಿವಯೋಗಿ ಬಂದಿಹನೆ
ಊರಿಂದ ಹೊರಗೆ
ನಿಂತಲ್ಲಿ ನೆರಳೇ ಅವಗಿಲ್ಲ ಗುರುವೆ
ನಾ ನೋಡಿ ಬಂದೆ.

## ಪೃಥ್ವಿಯೊಳಗೆ ಬೆಂದೆ

ನಾನೆನ್ನಬಹುದೆ ಈ ದೇಹವ
ನಾನೆನ್ನಬಹುದೆ ?
ಜ್ಞಾನ ಮೂರುತಿ ತಾನು ಕಾಣುತೆಲ್ಲವನಿಲ್ಲಿ
ಪ್ರಾಣ ಹಾರಿದ ಮೇಲೆ ಹೂಣುವ ಹೆಣವಿದ

ನಿತ್ಯನಲ್ಲೆಂದೆ ಸುಪ್ತಿಯೊಳಿದ್ದ ಸತ್ವವ ಕೊಂದೆ
ಮೃತ್ತಿಕೆಯನು ತಂದೆ ಭೃತ್ಯ ನಾನದಕೆಂದೆ
ಸತ್ತು ಹುಟ್ಟುತ ಬಂದೆ ಪೃಥ್ವಿಯೊಳಗೆ ಬೆಂದೆ
ನಾನೆನ್ನಬಹುದೆ ಈ ದೇಹವ ?

ಯಾರು ನೀ ಪೇಳ್ಳೈ ದೇಹವ ಬಿಟ್ಟು
ಬೇರೆ ನೀನೆಳ್ಳೈ ತೋರುವೀ ತನುವಿಗೆ
ಬೇರೆ ನೀನಾದೊಡೆ ಹಾರಿತೀ ಜಗವೆಲ್ಲ
ತೋರಲಿನ್ನೇನಿಲ್ಲ । ನಾನೆನ್ನಬಹುದೆ ?

ಪೊರೆಯೊ ಶ್ರೀ ಹರಿಯೇ
ಯೆಂಬುವದೊಂದೇ ಹರಿಯ ನೀನರಿಯೆ
ಹರಿಯರವಂದವನರಿಯಲು ನೀ ನಮ್ಮ
**ಗುರುಶಂಕರಾರ್ಯ**ನೋಳ್ ಬೆರಿಯೋ ನರಕುರಿಯೇ

❍

## ಹಣ್ಣು ತಂದೇನಮ್ಮಾ

ಹಣ್ಣು ತಂದೇನಮ್ಮಾ ಮನಿಗೊಂದ್ಹಣ್ಣು ತಂದೇನೆ
ಕಣ್ಣು ಮನದ ಗೋಚರ ವನದಿ ಹಣ್ಣು ತಂದೇನೆ

ತಿಂಗಳಿನೊಳು ಬೆಳದಿಂಗಳು ಕಾದಿದ್ದು
ಹಣ್ಣು ತಂದೇನೆ । ಮೂಸಿದರೆ
ವಾಸನೆಯೆ ಇಲ್ಲ । ಅಮ್ಮ ನೀ ಕೇಳೆ

ಕಿವಿಯಲಿ ಕಣ್ಣಿಟ್ಟಿರುವ ಭಕ್ತರ
ಭಾಗ್ಯದ ನಿಧಿಯಂತೆ ಬಣ್ಣಗೆಟ್ಟು
ಹುಳಿತೋದ ಹಣ್ಣು । ಮಣ್ಣು ಪಾಲಂತೆ

ಬಾಯಿಸತ್ತು ಬಯಸದಿದ್ದರೆ ಹಣ್ಣು
ಸಿಹಿಯಂತೆ । ಬಾಯಿತೆರೆವವರನು
ಹದ್ದು ಕಾಗೆಗೆ ಇದ್ದ ಬಯಕೆಯಂತೆ

ಮೂಡ ಪಡುವಲ ದೇಶದೊಳಗಿಂದ
ಮುನಿದು ತಂದೇನೆ । ಉತ್ತರ ತನುವಿನ
ಎತ್ತರ ಗುಡಿಯೊಳು ಮುತ್ತ ತಂದೇನೆ

ಬಾರದ್ಹಣ್ಣು ಬಾಯಿಸಣ್ಣ ನಾ
ಸತ್ವ ತಿಳಿಯಬೇಕು । ಸತ್ಯ **ಶ್ರೀಗುರು ಮರುಳಸಿದ್ಧನ**
ಕರುಣ ಪಡೆಯಬೇಕು

❍

## ತನುವಿನೊಳಗೆ ಅನುದಿನವಿದ್ದು

ತನುವಿನೊಳಗೆ ಅನುದಿನವಿದ್ದು
ಎನ್ನ ಮನಕ್ಕೊಂದ ಮಾತ ಹೇಳದೆಹೋದೆ ಹಂಸ

ಹಳ್ಳಕೊಳ್ಳದ ಮಧ್ಯ ತಂಪಿನ ಬಳ್ಳಿ ಹುಟ್ಟಿ
ಬಳ್ಳಿಯ ಹಣ್ಣು ನೆಲಕ್ಕುದುರಿ ಹೋಗುವಾಗ
ತನ್ನ ಬಳ್ಳಿಗೊಂದ ಮಾತ ಹೇಳದೆಹೋದೆ ಹಂಸ


ಕಾಯದ ಕೊಂಬೆ ಮೇಲೆ ಮಾಯಾದ ಗಿಳಿ ಕುಳಿತು
ಕಾಯವ ಬಿಟ್ಟು ಗಿಳಿ ಹಾರಿ ಹೋಗುವಾಗ
ತನ್ನ ಕಾಯಕ್ಕೊಂದ ಮಾತ ಹೇಳದೆಹೋದೆ ಹಂಸ

ಗಾಳಿಪಂಜರದಂತೆ ಮಾಳಿಗೆ ಮನೆಮಾಡಿ
ಗಾಳಿಯೂ ಬೀಸಿ ಎಲೆ ತೂರಿ ಹೋಗುವಾಗ
ಎನ್ನ ತಾಳೀಗೊಂದ ಮಾತ ಹೇಳದೆಹೋದೆ ಹಂಸ



ಕಾರೆಂಬೊ ಕತ್ತಲಲ್ಲಿ ಬೋರೆಂಬೊ ಮಳೆಸುರಿದು
ಕೆರೆಕಟ್ಟೆ ಬಯಲಾಗಿ ಹೋಗುವಾಗ
ತನ್ನ ಬಯಲೀಗೊಂದ ಮಾತ ಹೇಳದೆಹೋದೆ ಹಂಸ

ಆಯುಳ್ಳ ಗಿಡದ ಮೇಲೆ ಛಾಯುಳ್ಳ ಗಿಳಿ ಕುಳಿತು
ಪಕ್ಷಿ ಮಾಡಿತು ಮರಿಗಳ ಸುಖದಲ್ಲಿ
ಪಕ್ಷಿಗೆ ಸಾವು ಬಂದು ಪಕ್ಷಿಹಾರಿ ಹೋಗುವಾಗ
ಪಕ್ಷಿಗೊಂದ ಮಾತ ಹೇಳದೆಹೋದೆ ಹಂಸ



ನೀರುಳ್ಳ ಕೆರೆಯನು ಏರಿಯು ತಡೆದಂತೆ
ನೀನೆ ನನ್ನ ತಡೆದೆ ಹೇ ದೇಹವೆ !
ಏರಿಯು ಒಡೆದು ನೀರರ್‍ಹಿದು ಹೋಗುವಾಗ
ತನ್ನ ಏರಿಗೊಂದ ಮಾತ ಹೇಳದೆಹೋದೆ ಹಂಸ

ಹಳ್ಳಾದ ಕೆರ್‍ಯಾಗ ಪುಣ್ಯಾದ ಸ್ಥಳದಲ್ಲಿ
ಬಳ್ಳಿ ಬಿಟ್ಟಿತ್ತು ಹೂವು-ಕಾಯಿಗಳ
ಬಳ್ಳಿಯ ಒಡೆಯ ಕುಯ್ಕೊಂಡು ಹೋಗುವಾಗ
ತನ್ನ ಬಳ್ಳಿಗೊಂದ ಮಾತ ಹೇಳದೆ ಹೋದೆ ಹಂಸ

## ತೇರು ಬಂತಮ್ಮ

ತಂಗಿ ಶೃಂಗಾರ ನೋಡಮ್ಮ
ವನದ ಶೃಂಗಾರ ನೋಡಮ್ಮ

ಪುಣ್ಯದಿಂದ ತೇರು ಬಂತಮ್ಮ
ಈ ತೇರಿಗೆ ಧೂಪ ಹೊಯ್ದು । ದೀಪ
ಬೆಳಗಮ್ಮ
ಈ ತೇರಿಗೆ ಹೂವ ದವನ ತಂದು ಸುರಿಯಮ್ಮ
ಕಾಯ್ನೊಡೆದು ಕೈಯ ಮುಗಿಯಮ್ಮ

ಮೂರು ಮುತ್ತಿನ ತೇರು
ಆರು ಚಕ್ರದ ಗಾಲಿ
ತೇರಿನೊಳಗೆ ಜನರ ನೋಡಮ್ಮ
ಏಳೆಂಟು ಮಂದಿ ಹಾಳಾಗಿ ಹೋದರಲ್ಲಮ್ಮ



ಆರು ಚಕ್ರದ ಗಾಲಿ
ಮೂರು ಮುಳ್ಳಿನ ತೇರು
ತೇರಿನೊಳಗೆ ಜನರ ನೋಡಮ್ಮ
ಏಳೆಂಟು ಮಂದಿ ಹಾಳಾಗಿ ಹೋದರಲ್ಲಮ್ಮ

ಬಯಲಿಗೆ ಬಯಲು ಕಾಣಮ್ಮ
ಬಯಲಲ್ಲಿ ತಿರುಗಿ ಐಲಾಟ ಬಿಟ್ಟುಬಿಡಮ್ಮ
ತಂಗಿ ಶೃಂಗಾರ ನೋಡಮ್ಮಾ
ಈ ತೇರಿನ ಆಸೆಯ ಬಿಟ್ಟುಬಿಡಮ್ಮಾ

ಪುಣ್ಯದಿಂದ ತೇರು ಬಂತಮ್ಮ
ಈ ತೇರಿಗೆ ಮಾನಭಂಗವು ನೋಡಮ್ಮ
ತಂಗಿ ಶೃಂಗಾರ ನೋಡಮ್ಮಾ
ಈ ತೇರಿನ ಆಸೆಯ ಬಿಟ್ಟುಬಿಡಮ್ಮಾ

❍

## ಶಿವನ ಹೊಳೆ

ಗುಡುಗೂ ಇಲ್ಲದ ಮಿಂಚೂ ಇಲ್ಲದ ಮಳೆ ಸುರಿಯುತ್ತೈತೆ
ಮಳೆ ಸುರಿಯುತ್ತೈತೆ
ಶಿವನ ಹೊಳೆ ಹರಿಯುತ್ತೈತೆ

ಹೊಳೆಯ ದಡದಲಿ ಬಿಳೇದು ಒಂದು ಗರುಕೆ ಬೆಳದೈತೆ
ಗರುಕೆ ಬೆಳದೈತೆ । ಶಿವನ
ಆನೆ ಮೆಯ್ಯುತ್ತೈತೆ
ಶಿವನ ಹೊಳೆ ಹರಿಯುತ್ತೈತೆ

ಕಾಲುಜಾರಿ ಹೊಳೆಗೆ ಬೀಳಲು ಹೊತ್ತೆ ಹೋಗುತ್ತೈತೆ
ಹೊತ್ತೆ ಹೋಗುತ್ತೈತೆ । ಶಿವನ
ಆನೆ ಹೋಗುತ್ತೈತೆ
ಶಿವನ ಹೊಳೆ ಹರಿಯುತ್ತೈತೆ

ಬಲೆಯ ಬೀಸುವ ಅಂಬಿಗರಣ್ಣನು ಅಡಲಾಗಿ ಬಂದವನೆ
ಅಡಲಾಗಿ ಬಂದವನೆ । ಶಿವನ
ಹರಿಗೋಲು ಹರಿದೈತೆ
ಶಿವನ ಹೊಳೆ ಹರಿಯುತ್ತೈತೆ


ಹೊಳೆಯ ದಡದಲಿ ನೂರಾರು ಜನ ಸುತ್ತಾ ಕುಂತೈತೆ
ಎಡದ ಶರೀರ ಬಿಟ್ಟು
ಬಲದ ಶರೀರ ಮೇಲೆ ನಿಂತೈತೆ
ಶಿವನ ಹೊಳೆ ಹರಿಯುತ್ತೈತೆ

ಅಂಬಿಗರಣ್ಣನ ಹತಾರು ತಪ್ಪಿ ಹರಿಗೋಲು ಮುಳುಗೈತೆ
ಅದರೊಳಗೆ ನೂರಾರು ಜನವೆ ಕುಂತೈತೆ
ಶಿವನ ಹೊಳೆ ಹರಿಯುತ್ತೈತೆ

❍

## ಗುರುವಿಲ್ಲದಾ ಮೇಲೆ

ಏನಂತಾ ಕರೆಯಬೇಕು ಶಿವನ
ತಾನಾಗಿ ಬಾರದವನ
ತಾನಾಗಿ ಬಾರಲಿಲ್ಲ ಎನಗೆ ಸಂತೋಷವಿಲ್ಲ
ಯಾರ ಕೇಳಿದರೂ ಸರಿಹೋಗಲಿಲ್ಲ



ನಾನೊಂದು ಹುತ್ತವಾದೆ
ನೀನೊಂದು ಸರ್ಪವಾದೆ
ಸರ್ಪವಿಲ್ಲದಾದ ಮೇಲೆ ಸರಸವಿಲ್ಲೆಂಟು

ನಾನೊಂದು ಗುಡಿಯಾದೆ
ನೀನೊಂದು ದೇವರಾದೆ
ದೇವರಿಲ್ಲದಾದ ಮೇಲೆ
ಹಾಳು ಗುಡಿ ಎನ್ನುವರಲ್ಲ


ನಾನೊಂದು ಕತ್ತಲಾದೆ
ನೀನೊಂದು ಜ್ಯೋತಿಯಾದೆ
ಜ್ಯೋತಿಯಿಲ್ಲದ ಮೇಲೆ ಪ್ರೀತಿಯೆಲ್ಲುಂಟು



ನಾನೊಂದು ಅಂಗವಾದೆ
ನೀನೊಂದು ಲಿಂಗವಾದೆ
ಲಿಂಗವಿಲ್ಲದಾ ಮೇಲೆ ಭಂಗವಾಗಿ
ಹೋಯಿತಲ್ಲಾ



ನೀನೊಂದು ಗುರುವಾದೆ
ನಾನೊಬ್ಬ ಶಿಷ್ಯನಾದೆ
ಗುರುವಿಲ್ಲದಾ ಮೇಲೆ ಗುರುತು ಇನ್ನೆಲ್ಲುಂಟು?



## ಮೂರು ವರ್ಣದ ವೃಕ್ಷ

ಬ್ರಹ್ಮಾಂಡದೊಳಗೊಂದು ಹಮ್ಮಿನ ಮರವುಟ್ಟಿ ಚಂದಮಾಮ
ನಾದಬಿಂದು ಕಳೆ ಮೂರುವರ್ಣದ ವೃಕ್ಷ ಚಂದಮಾಮ

ಇಳಾಪಿಂಗಳೆಂಬೊ ಗಾಳಿನೀರೊಳು ಬೆಳೆದು ಚಂದಮಾಮ
ಮೇದಿನಿಯೊಳು ಸೇರಿ ಪ್ರಜ್ವಲಿಸುತಲಿದೆ ಚಂದಮಾಮ

ಬೇರು ಮೇಲಕ್ಕಿದೆ ಕೋವೆ ಕೆಳಕ್ಕಿದೆ ಚಂದಮಾಮ
ಯಾರಿಗೂ ತಿಳಿಯದ ಥಳಥಳ ಮರ ಚಂದಮಾಮ

ಎಪ್ಪತ್ತೆರಡು ಸಾವಿರದ ಎಲೆಗಳುಂಟು ಚಂದಮಾಮ
ಇದಕ್ಕೊಪ್ಪುವ ಕೊಂಬೆಗಳು ಇನ್ನೂರ್ಹದಿನಾರು ಚಂದಮಾಮ

ಪೂರ್ವದಿಕ್ಕಿನಲ್ಲಿ ಆರುವರ್ಣದ ಕಾಯಿ ಚಂದಮಾಮ
ಸೇರಿ ಉತ್ತರದಲ್ಲಿ ದ್ವಾರಗಾಯಾಯಿತು ಚಂದಮಾಮ


ಸೇರಿ ತಕ್ಷಣದಲ್ಲಿ ಹಣ್ಣಾಗಿ ನಿಂತಿತು ಚಂದಮಾಮ
ಪಶ್ಚಿಮದ ಕೊಳದಲ್ಲಿ ತೊಟ್ಟುಕಳಚಿ ಬಿತ್ತು ಚಂದಮಾಮ
ತೊಟ್ಟು ಇಲ್ಲದ ಹಣ್ಣು ಕೊಟ್ಟ ಗುರುವಿನ ಸ್ವಾಮಿ ಚಂದಮಾಮ
ಆ ಹಣ್ಣು ಮುಟ್ಟಿ ಸವಿದವಗೆ ಹುಟ್ಟು ನಾಶವಾಯಿತು ಚಂದಮಾಮ

❍

## ಸಾವಿನ ಗುಂಡಿ

ಎಲ್ಲ ನಮ್ಮಲ್ಲಿ ನಂಬುವಿರಲ್ಲ
ಅವಗುಣ ಹೋಗಲಿಲ್ಲ
ಸೊಲ್ಲಿಗೆ ಶರಣರ ಕಥೆಗಳ ಪೇಳುತ
ಅಲ್ಲದ ನುಡಿಗಳ ನುಡಿಯುವಿರಲ್ಲ

ಗುರುಗಳೆನುತ ತಿರುಗುವಿರೆಲ್ಲ
ಗುರುತನ ತನಗಿಲ್ಲ
ಸಾಧುಗಳೆಂದು ಹೇಳುವಿರೆಲ್ಲ
ಸಾವಿನ ಗುಂಡಿಲಿ ಬೀಳುವಿರಲ್ಲ



ಬ್ರಹ್ಮನೆಂದು ಎಣಿಸಿದಿರೆಲ್ಲ
ಹಮ್ಮನು ಬಿಡಲಿಲ್ಲ
ಕಾವಿಯನುಟ್ಟು ತಿರುಗುವಿರೆಲ್ಲ
ಕಾಮನ ಬಿಡಲಿಲ್ಲ

ಪರಿಪರಿ ದೇಶವ ತಿರುಗಿದರಿಲ್ಲ
ಪೊರೆಯುವರ್‍ಯಾರಿಲ್ಲ
ಒಮ್ಮನ ಗುರುವಿನ ಪಾದ ಕಮಲಕೆ
ಎರಗದೆ ನೀನಿಲ್ಲ

❍

## ಮಗುವು ಜನಿಸ್ಯೆತೆ


ಮಗುವು ಜನಿಸ್ಯೆತೆ ಒಡಲೊಳು
ಮಗುವು ಜನಿಸ್ಯೆತೆ
ಮಗುವು ಜನಿಸಿ ನಗುತ ಒಡಲೊಳು
ಜಗವ ಜಯಿಸ್ಯೆತೆ ।

ಮಾಯೆ ಮಮತೆ ಇಲ್ಲದ ಮಗುವು
ಒಡಲೊಳು ಜನಿಸ್ಯೆತೆ
ನೋಡಲು ಬಂದ ಜನಗಳ ನೋಡಿ ನಗುತ್ಯೆತೆ

ಆರು ಬಾಗಿಲಿನಿಂದ ಆಚೆ ಕುಳಿತ್ಯೆತೆ
ನೋಡಲು ಬಂದ ಜನಗಳ ಕಂಡು
ನೋಡಿ ನಗುತ್ಯೆತೆ

ಸತ್ಯವೆಂಬ ಹಾಲನು ಕುಡಿದು ಕಾಲವ ಮಾಡುತ್ಯೆತೆ
ಮುಕ್ತಿ ಪದಕೆ ಹೋಗುವ ಮಾರ್ಗವ
ಮೊದಲೆ ತಿಳಿದ್ಯೆತೆ

❍




## ಗಿಡದ ಹೂವು ನೋಡ

ಯಾವ ದೇಶದ ಹೂವಿದ್ದಾವ ಇವು
ಹೂವಂದರ ಹೂವನಲ್ಲ, ಈ ದೇಶದ ಹೂವನಲ್ಲ
ಸೂರ್ಯದ್ವರ್ಣ ಶುದ್ಧ ಹೂವ । ಸೂರಿ ಸೂರಿ ಆಗತಾವ

ಕುಶಲ ಕುಂಡಲ ಹೂವ ನೋಡ
ಎಸಳ ಮಲ್ಲಿಗೆ ಹೂವ ನೋಡ
ಹರುಷ ಆತ್ಮನ ಪಾದದಲ್ಲಿ
ಹರಿಸಿ ಸುರಿದು ಬೀಳುತಾವ

ಚುಕ್ಕಿವರ್ಣದ ಹೂವ ನೋಡ
ಕೆಂಪು ವರ್ಣದ ಹೂವ ನೋಡ
ಬಿಳಿಯ ಹೂವು ಕಳೆಯು ತುಂಬಿ
ಕಣ್ಣಮುಂದೆ ಸುರುಯುತಾವ

ದೇಶದೊಳಧಿಕವಾದ **ಉಮ್ಮದಿ ಗುರುದೇವ**
ಈಶನ ಮುಖದಲ್ಲಿ ಪುಟ್ಟಿದ
ಗಿಡದ ಹೂವ ನೋಡ



## ಅಂದವಾದ ಲೋಕದಲ್ಲಿ

ಗುರುವಿನ ಕರುಣದಿಂದ ಅರಿವಿನೊಳಗೆ ಅರಿವಾಯ್ತು ಚಂದಮಾಮ
ಅರಿವಿನ ಮರೆವ ಒಂದಿರುವೆ ನುಂಗಿತ್ತು ಚಂದಮಾಮ

ಕುಂಡಾಲ ಸರ್ಪ ಭೂಮಂಡಲಕ್ಕೆ ಇಳಿದಿತ್ತು ಚಂದಮಾಮ
ಅದರ ಮಂಡೆಯೊಳು ಅಮೃತವ ಅಂಡಾಧೀಶನೆ ಬಲ್ಲ ಚಂದಮಾಮ

ಗಂಗಾತೀರದಿ ಮಧ್ಯ ಲಿಂಗದ ಗುಡಿಯುಂಟು ಚಂದಮಾಮ
ಲಿಂಗದ ಗುಡಿಯೊಳಗೆ ಅಖಂಡ ಬೆಳಗುತಿದೆ ಚಂದಮಾಮ

ಅಂದವಾದ ಲೋಕದಲ್ಲಿ ಆರುಮೂರು ದ್ವಾರದಲ್ಲಿ ಚಂದಮಾಮ
ಆದಿ ಅಂಬರದೊಳು ಸೇರಿ ಒಲ್ಯೆಸುತಿದೆ ಚಂದಮಾಮ

ಪರವಾಸದೊಳಗಿದೆ ಪೂರ್ಣಚಂದ್ರನ ಕಳೆ ಚಂದಮಾಮ
**ಪರವಾರು ಕೊಂಡಾರ್ಯ** ಸದ್ಗುರುವೆ ಬಲ್ಲ ಚಂದಮಾಮ

❍

## ಹುಟ್ಟಿದ್ದು ಹೊಲೆಯೂರು

ಅನುದಿನದಲಿ ತನುವ ಸೂರೆಗೊಂಡೆ
ಎನಗೊಂದು ಮಾತ್ಹೇಳು ಜೀವವೆ
ಘನಕೋಪದಿಂದ ಬಂದು ಯಮರೆಳೆದೊಯ್ವಾಗ
ನಿನಕೂಟ ಯಾತರ ಮಾತು ಕಾಯವೆ

ಬೆಲ್ಲದ ಹೇರಿನಷ್ಟು ಬಂದ್ಯೆತೆ ಬಂಧುಬಳಗ
ನಿಲ್ಲು ಮಾತಾಡ್ತೀನಿ ಜೀವವೆ
ನಿಲ್ಲಗೆಡದೆ ಬಂದು ಯಮರೆಳೆದೊಯ್ವಾಗ
ಬೆಲ್ಲ ಬೇವಾಯಿತು ಕಾಯವೆ

ಸಕ್ಕರೆ ಹೇರಿನಷ್ಟು ಸವಿದುಂಡೆ ಹಾಲುಮೊಸರು
ಬಿಟ್ಟೆಲ್ಲಿ ಹೋಗ್ತಿಯಾ ಜೀವವೆ
ದುಃಖಗೊಡದೆ ಬಂದು ಯಮರೆಳೆದೊಯ್ವಾಗ
ಸಕ್ಕರೆ ಇಸವಾಯಿತು ಕಾಯವೆ

ಅಂದಾಣದೈಶ್ವರ್ಯ ದಂಡಿಗೆ ಪಲ್ಲಕ್ಕಿ
ಮಂದಗಮನೆ ನೋಡು ಜೀವವೆ
ಮಂದಗಮನೆಯ್ಯಾರು ? ಮಡದಿ ಮಕ್ಕಳ್ಯಾರು?
ಬಂದಂತೆ ಹೋಗ್ತೀನಿ ಕಾಯವೆ

ಹುಟ್ಟಿದ್ದು ಹೊಲೆಯೂರು ಬೆಳದಿದ್ದು ಮೊಲೆಯೂರು
ಹೋಗ್ತಿನಿ ಕಾಡೂರಿಗೆ ಕಾಯವೆ
ಸೃಷ್ಟಿಗಧಿಕವಾದ ಬಸವಾನ ಪ್ರಮಥರ
ಮುಟ್ಟಿ ಪೂಜಿಸು ನೀನು ಕಾಯವೆ

❍

## ಹಾರಾಡುವ ಮನಸು

ಗುರುವಿನ ಮೂಲ ತಿಳಿಯಲಾಗದು
ನರಮಾನವರಿಗೆ ಗುರುವಿನ ಮೂಲ ತಿಳಿಯಲಾಗದು

ಗುಡಿಗೋಪುರವ ಕಟ್ಟಿಸಬಹುದು
ದೃಢವಂತರಾಗಬಹುದು
ನಡೆನುಡಿ ಒಂದಾಗಿ ನ್ಯಾರದಿಂದಿರಲಾಗದು

ನೀರಿನೊಳಗೆ ಮುಳಗಬಹುದು
ನಾರಿಯರನೆ ತೊರೆಯಬಹುದು
ಹಾರಾಡುವ ಮನಸ ನಿಲಿಸಿ ಜ್ಞಾನದಿಂದಿರಲಾಗದು

ಭಂಗಿಯನ್ನೆ ಸೇದಬಹುದು
ಲಿಂಗವಂತರಾಗಬಹುದು
ಅಂಗಚೇಷ್ಟೆಗಳನ್ನು ಬಿಟ್ಟು ಇಂಗಿತದಿಂದಿರಲಾಗದು

ವೇದವನ್ನೆ ಓದಬಹುದು
ಗಾದೆ ಪುರಾಣ ಹೇಳಲುಬಹುದು
ಆದಿ ಅಂತ್ಯದ ನೆಲೆಯರಿದು ಅರಿವಿನಿಂದಿರಲಾಗದು

ದೇಶ ದೇಶ ತಿರುಗಬಹುದು
ದೇಶದನುಭವ ತಿಳಿಯಲುಬಹುದು
ದಾಸನಂದದಿ ಮನೆಮನೆ ತಿರುಗುತ
ದಾಸ ಚಿನ್ಮಯನಾಗಿರಲಾಗದು

ಕಂಡ ಕಡೆ ಓಡಾಡಬಹುದು
ಕಂಡವರಿಗೆ ಕೈ ಮುಗಿಯಲುಬಹುದು
ಕೊಂಡಗೋತಿಯಂತೆ ಕುಣಿಯುತ ಕಾಲನ ಗೆಲ್ಲಲಾಗದು

ದಂಡಿಗೆಯನ್ನೆ ಪಿಡಿಯಬಹುದು
ಮಂಡೆ ಬೋಳಾಗಲುಬಹುದು
**ಕೊಂಡಗುರು**ವಿನ ಪಾದಹಿಡಿದು ಅಖಂಡನಾಗಿರಲಾಗದು

❍

## ಓಂ ಜೋಳದ ಹೊಲವಣ್ಣ



ಕಾಕನಾಗಿ ಹಕ್ಕಿಯ ಹೊಡೆಯಣ್ಣ
ಓಂ ಜೋಳದ ಹೊಲವಣ್ಣ
ಕಾಗೆ ಗುಣಗಳೆಲ್ಲ ನಿಮಗೆ
ಕಾಗೆ ಹಿಂಡಿನಂಗೆ ಬರುತಾವಣ್ಣ
ಓಂ ಜೋಳದ ಹೊಲವಣ್ಣ

ಸಪ್ತ ವರ್ಣದ ಪಕ್ಷಿ
ಹತ್ತೆಂಟು ದಿಕ್ಕಿನಿಂದ ಬರುತಾವಣ್ಣ
ದಿಕ್ಕು ದಿಕ್ಕನ್ನೇ ಕಟ್ಟಣ್ಣ
ಓಂ ಜೋಳದ ಹೊಲವಣ್ಣ

ಎಂಟು ಕಟ್ಟಿನ ಕವಣೆ
ನೂರೆಂಟು ಹೆಜ್ಜಾದ ಕವಣೆ
ಮನವೆಂಬೊ ಗುಂಡನೆ ಮಡಗಣ್ಣ
ಓಂ ಜೋಳದ ಹೊಲವಣ್ಣ

ಕರ್ಮವೆಂಬೊ ಕಲ್ಲನೆ ಮಡಗಿ
ಶಿವಯೆಂಬೊ ಕವಣೆಯನಿಡಿದು
ಓಂಕಾರವೆಂಬೊ ಹಕ್ಕಿಯ ಹೊಡೆಯಣ್ಣ
ಓಂ ಜೋಳದ ಹೊಲವಣ್ಣ

ಸೂರ್ಯಮಂಡಲದಿ ಬಂದು
ಚಂದ್ರಮಂಡಲದಿ ನಿಂತು
ಶಿವಪುರಕೆ ಗುರಿಯನೆ ಹಿಡಿಯಣ್ಣ
ಓಂ ಜೋಳದ ಹೊಲವಣ್ಣ

ಸತ್‌ಚಿದಾನಂದ ಮತ್ತೆ ಬೃಹದಾನಂದ
ಉತ್ತಮ ಶ್ರೀಗುರು ಪಾದವ ಹಿಡಿಯಣ್ಣ
ಓಂ ಜೋಳದ ಹೊಲವಣ್ಣ

## ಹಾರಿಹೋದ ಹಂಸೆ

ತನುವಿನೊಳಗೆ ಬಹಳದಿನವಿದ್ದೆ । ಆಹಾ
ಎನಗಾದರೊಂದು ಮಾತು ಹೇಳಲಿಲ್ಲ ಹಂಸೆ

ಅಳ್ಳದ ಅರಗಿಣಿ ತಳ್ಳಂದು ಇಂಪೀಲಿ
ಬಳ್ಳಿ ಹುಟ್ಟಿತು ಕಾಯ ಸುಖದಿಂದಲಿ
ಬಳ್ಳಿಗಾರಣ್ಣ ಬಂದು ಕಾಯಿ ಕುಯ್ಕೊಂಡು ಹೋಗುವಾಗ
ಬಳ್ಳಿಗಾದರೊಂದು ಮಾತು ಹೇಳಲಿಲ್ಲ ಹಂಸೆ

ಆಯವಾದ ಕೊಂಬೆಮೇಲೆ ಮಾಯವಾದ ಪಕ್ಷಿ ಕುಂತಿತ್ತು
ಆ ಪಕ್ಷಿ ಸುಖದಿಂದಲೆ ಪುರ್ರನೆದ್ದು ಹಾರಿ ಹೋಗುವಾಗ
ಕೊಂಬೆಗಾದರೊಂದು ಮಾತು ಹೇಳಲಿಲ್ಲ ಹಂಸೆ

ತುಪ್ಪವನೊಯ್ದಿದ್ದೆ ಜ್ಯೋತಿಯನ್ನಚ್ಚಿದ್ದೆ
ತುಪ್ಪವ ಸವಿದುಂಡು
ಬತ್ತಿಗಾದರೊಂದು ಮಾತು ಹೇಳಲಿಲ್ಲ ಹಂಸೆ

ದಾಳಿಂಬ್ರೆ ಕೆತ್ತಿದ ಮನೆಯ ಮಂಟಪದೊಳು
ಕಂಬವ ಸವಿದುಂಡು ಜವನಿಂದೆ ಹೋಗುವಾಗ
ಕಂಬಕ್ಕಾದರೊಂದು ಮಾತು ಹೇಳಲಿಲ್ಲ ಹಂಸೆ

ಒಂಬತ್ತು ಬಾಗಿಲೊಳು ಗುರುವಿದ್ದಾನೆ
ಡಿಂಭವ ಸವಿದುಂಡು ಜವನಿಂದೆ ಹೋಗುವಾಗ
ಡಿಂಭಕ್ಕಾದರೊಂದು ಮಾತು ಹೇಳಲಿಲ್ಲ ಹಂಸೆ

ಶರಧಿಯೊಳಗೆ ಕಪ್ಪೆಚಿಪ್ಪಿನಲಿರುವ ಕೆಂಪನೆ ಮುತ್ತೆ
ಕಟ್ಟಾಣಿ ಮುತ್ತೆ ನೀ ಕೈಬಿಟ್ಟು ಹೋಗುವಾಗ
ಕಪ್ಪೆಚಿಪ್ಪಿಗಾದರೊಂದು ಮಾತು ಹೇಳಲಿಲ್ಲ ಹಂಸೆ

**ಸರ್ಪಭೂಷಣ**ನಾದ ಲಿಂಗ ಹೇಳಿದ ಮಾತು
ಮತ್ತೆ ಇದು ಲೋಕಕ್ಕೆ ಸ್ಥಿರವಾಗಲೊ

❍

## ರುದ್ರನೆಂಬ ಕಂಕಣ ಕಟ್ಟಿ

ಎಂಥ ಮೋಹ ಬಂಗಾರನಮ್ಮ ಭ್ರಾಂತು ತೀರದು
ಗುರುವಿನ ಭ್ರಾಂತು ತೀರದು
ಶಾಂತಿ ಪುರುಷ ಇವನ್ಯಾರಮ್ಮಯ್ಯ ಚಿಂತೆ ತೋರದು
ಗುರುವಿನ ಚಿಂತೆ ತೋರದು

ಕರೆದು ಶರಣುಮಾಡು ಎಂದು ಶಿರದೊಳು ನೆಲಸಿದ
ಗುರುವರ ಶಿರದೊಳು ನೆಲಸಿದ
ಶಿರದ ಮಧ್ಯದಲ್ಲಿ ಭಸಿತ ಬರೆದು ಧರಿಸಿದ
ಗುರುವರ ಬರೆದು ಧರಿಸಿದ

ಅಂಗ ನಿನಗೆ ಇಲ್ಲವೆಂದು ಸಂಗವ ಬೆರಸಿದ
ಗುರುವರ ಸಂಗವ ಬೆರಸಿದ
ಕಂಗಳೊಳಗೆ ಇಗೋ ನೋಡೆಂದು ಲಿಂಗವ ತೋರಿದ
ಗುರುವರ ಲಿಂಗವ ತೋರಿದ

ಭದ್ರ ಮಂಟಪದಲ್ಲಿ ಹೋಗುವ ಬಗೆಯ ತೋರಿದ
ಗುರುವರ ಬಗೆಯ ತೋರಿದ
ರುದ್ರನೆಂಬ ಕಂಕಣ ಕಟ್ಟಿ ಲಗ್ನವ ಮಾಡಿದ
ಗುರುವರ ಲಗ್ನವ ಮಾಡಿದ

ಮೂರು ಮುಖದ ಮುತ್ತನು ತಂದು
ನಂದಿಗೆ ಬಿಗಿಸಿದ ಗುರುವರ ನಂದಿಗೆ ಬಿಗಿಸಿದ
ಆರು ಅರಿಯದಂಥ ಮರವೆ ಮುರಿದು ಹಾಕಿದ
ಗುರುವರ ಮುರಿದು ಹಾಕಿದ

ಯಾರೂ ಅರಿಯದಂಥ ನಾಸಿಕ ತುದಿಯಲಿ ನೆಲಸಿದ
ಗುರುವರ ತುದಿಯಲಿ ನೆಲಸಿದ
ಮದ್ದುಕೊಟ್ಟು ಜೀವವನು ಎನಗೆ ಪಾಲಿಸಿದ
ಗುರುವರ ಎನಗೆ ಪಾಲಿಸಿದ

ಮುದ್ದುತಾತ ಸಕ್ಕರೆಕೊಟ್ಟು ಬಚಿಟ್ಟ ಒಡವೆ ತೋರಿದ
ಗುರುವರ ಒಡವೆ ತೋರಿದ !
ಮುದ್ದುವೀರ **ಜಲಜನಾರೇಯಣ** ಮುಕ್ತಿಗೆ ಸಾರಿದ
ಗುರುವರ ಮುಕ್ತಿಗೆ ಸಾರಿದ

❍

## ಹತ್ತು ವರ್ಣದ ಮುತ್ತು

ಮುತ್ತು ಕಂಡೆನಮ್ಮ ತಂಗಿ ನೀನೊಂದಾ
ಮೂಗಿನ ಮೇಲ್ಭಾಗದ ಮುತ್ತೊಂದಾ

ಒಂದು ವರ್ಣದ ಮುತ್ತು ಓಂಕಾರದಲ್ಲಿತ್ತು
ಎರಡು ವರ್ಣದ ಮುತ್ತು ಎಡಭಾಗದಲ್ಲಿತ್ತು

ಎರಡು ವರ್ಣದ ಮುತ್ತು ಎಡಭಾಗದಲ್ಲಿತ್ತು
ಮೂರು ವರ್ಣದ ಮುತ್ತು ಮುಮ್ಮೂರ್ತಿಗಳಿಗೆ ಗೊತ್ತು

ನಾಲ್ಕು ವರ್ಣದ ಮುತ್ತು ನಾಭಿ ಕಮಲದಲ್ಲಿತ್ತು
ಐದು ವರ್ಣದ ಮುತ್ತು ಐದು ತತ್ವದಲ್ಲಿತ್ತು

ಆರು ವರ್ಣದ ಮುತ್ತು ಆರೂಢಸ್ವಾಮಿಗೆ ಗೊತ್ತು
ಏಳು ವರ್ಣದ ಮುತ್ತು ಏಳುತ್ತಲೆ ಇತ್ತು

ಎಂಟು ವರ್ಣದ ಮುತ್ತು ಮೇಲೆ ಮಂಟಪದಲ್ಲಿತ್ತು
ಒಂಬತ್ತು ವರ್ಣದ ಮುತ್ತು ತುಂಬಿ ತುಳುಕುತಲ್ಲಿತ್ತು

ಹತ್ತು ವರ್ಣದ ಮುತ್ತು ತತ್ವ ಬಲ್ಲವರಿಗೆ ಗೊತ್ತು
ಹನ್ನೊಂದು ವರ್ಣದ ಮುತ್ತು ಒಂದೊಂದೆ ಭಾಗಿಸಿದವರಿಗೆ ಗೊತ್ತು

ಹನ್ನೊಂದು ವರ್ಣದ ಮುತ್ತು ಒಂದೊಂದೆ ಭಾಗಿಸಿದವರಿಗೆ ಗೊತ್ತು
ಹನ್ನೆರಡು ವರ್ಣದ ಮುತ್ತು ಅಂಡಾಂಡ ಬ್ರಹ್ಮಾಂಡದಲ್ಲಡಗಿತ್ತು

❍

## ಕಂಬ ಸೂತ್ರದ ಗೊಂಬೆ

ಡಿಂಬದಲ್ಲಿ ಇರುವ ಜೀವ
ಕಂಬ ಸೂತ್ರದ ಗೊಂಬೆಯಂತೆ
ಎಂದಿಗಾದರೊಂದು ದಿನ ಸಾವು ತಪ್ಪದು
ಗುರುವೆ ಮರಣ ತಪ್ಪದು

ಹುಟ್ಟುತೇನೂ ತರಲಿಲ್ಲ
ಸಾಯಿತೇನೂ ಒಯ್ಯಲಿಲ್ಲ
ಸುಟ್ಟು ಸುಟ್ಟು ಸುಣ್ಣದ್ಹರಳು ಆಯಿತೀ
ದೇಹ
ಗುರುವೇ ಆಯಿತೀ ದೇಹ



ಗಟ್ಟಿಮಣ್ಣು ಸುದ್ಧ ಮಾಡಿ
ಹೊಟ್ಟೆಯೊಳಗೆ ಇರಿಸಾಲಿಲ್ಲ
ಕೊಟ್ಟ ದೇವರು ಕೊಂಡೊಯ್ದರೆ
ಕುಟ್ಟಿಕೊಂಡು ಅಳುವುದೇಕೊ

ಬೆಳ್ಳಿಬಂಗಾರ ಇಟ್ಟುಕೊಂಡು
ಒಳ್ಳೆವಸ್ತ್ರವ ಉಟ್ಟುಕೊಂಡು
ಬಿಟ್ಟು ಹೋಗುವಾಗ ಭುವಿ ಬಟ್ಟೆಕಾಣದು
ಗುರುವೆ ಬಟ್ಟೆಕಾಣದೊ

ಅನ್ನವಸ್ತ್ರ ಭೋಗಕ್ಕಾಗಿ
ತನ್ನ ಸುಖವು ಕಾಣಲಿಲ್ಲ
ಸಿಳ್ಳಿ ಪಿಳ್ಳಿ ಬೊಂಬೆಯಂತೆ ಆಡಿ ಹೋಯಿತು
ಗುರುವೆ ಆಡಿ ಹೋಯಿತೊ

❍

## ನಾದದನುಭವ ತಿಳಿದು

ಶರಣಾರ್ತಿ ಹಾಕುವೆನು ಸಾಧು ಜನಕೆ
ಕರುಣಿಸಿ ಎಂದೆನುತ

ವೇದಾಂತ ಸಾರುವನೊ
ಸಾಧಿಸು ನೋಡಿ ಬೋಧೆಯೊಳಗಿರುವರಿಗೆ
ವಾದ ವೇದವು ಮರೆತು
ನಾದದನುಭವ ತಿಳಿದು
ಬಾಧೆ ತಪ್ಪಿಸಿಕೊಂಡ ಚಿದಾನಂದರಿಗೆಲ್ಲಾ
ಶರಣಾರ್ತಿ ಹಾಕುವೆನು
ಕರುಣಿಸಿ ಎಂದೆನುತ

ಪಂಚಭೂತವನಳಿದು
ಶ್ರೀಗುರುವಿಂದ ಪಂಚೇಂದ್ರಿಯಗಳ ತಿಳಿದು
ಪಂಚಾಕ್ಷರಿ — ಪಂಚಮೂರ್ತಿಯ ಸೇವೆ
ಇಂತೀ ಮಾಡಿರುವ ಪ್ರಪಂಚವಾದಿಗಳಿಗೆ
ಶರಣಾರ್ತಿ ಹಾಕುವೆನು
ಕರುಣಿಸಿ ಎಂದೆನುತ


ಜನ್ಮ ಪವಿತ್ರರಿಗೆ
ತಾನಳಿದ ಚಿನ್ಮಯ ರೂಪದವರಿಗೆ
ತನ್ನೊಳು ಬೆಳಗುವ ಚಿನ್ಮಯ ಜ್ಯೋತಿಯು
ಸನ್ಮಾರ್ಗದಲ್ಲಿ ಕಂಡ ಸಾಧು ಸಜ್ಜನರಿಗೆಲ್ಲಾ
ಶರಣಾರ್ತಿ ಹಾಕುವೆನು
ಕರುಣಿಸಿ ಎಂದೆನುತ

ಹೀನ ಪ್ರಪಂಚವನು ನಾಶಮಾಡುವ
ಜ್ಞಾನ ಕಂಡವರಿಗೆ
ದಾನದ ಋಣಿಯೊಳು ಏನೇನೂ ಇಲ್ಲದೆ
ತಾನೆ ತಾನಾಗಿರುವ ಘನವ ಕಂಡವರಿಗೆ
ಶರಣಾರ್ತಿ ಹಾಕುವೆನು
ಕರುಣಿಸಿ ಎಂದೆನುತ

## ಕಣ್ಣಲ್ಲಿ ಬೆಳಗುವ ಕಾಂತಿ

ವರಗುರು ತಾತನ ಪಾದವ ನೆನೆದರೆ
ಪಾಪವು ಇಲ್ಲವೋ ತಮ್ಮ
ಅರಿಯದೆ ಮನದಲಿ ತಾತಯ್ಯ ಎಂದರೆ
ಭವಭಯವಿಲ್ಲವೊ ತಮ್ಮ

ಲೋಕ ಎಂಟನು ನೀನು ಸಾಧಿಸಲ್ಯಾತಕೆ ?
ಗುರುಬೋಧನೆ ನೆನೆಯೊ ತಮ್ಮಾ
ಮೂರು ಆರನು ಮೀರಿ ನಿಂತಲ್ಲಿ ನಿಂತರೆ
ಆನಂದ ರೂಪವೊ ತಮ್ಮ



ಹಾವನ್ನು ಶಿರವೆಂದು ನಂಬಲು
ಮೋಸ ಹೋಗುವುದೊ ತಮ್ಮಾ
ಮಮತೆಯನು ಬಿಟ್ಟು ನಿಜದಲ್ಲಿ ನಿಂತರೆ
ಮೋಕ್ಷವಾಗುವುದೊ ತಮ್ಮ

ಕಣ್ಣಲ್ಲಿ ಬೆಳಗುವ ಕಾಂತಿಯ ತಿಳಿದರೆ
ಕಲ್ಮಶವಿಲ್ಲವೊ ತಮ್ಮಾ
ಕಾಂಚಣ ವಾಸನೆ ಕಳೆದುಹೋದರೆ
ಕರ್ಮವು ಹೊಂಟದೊ ತಮ್ಮ

ಮಾಲೂರು ಪುರದಲ್ಲಿ ನೆಲಸಿಹ ತಾತನ
ಗುರುಕರುಣೆಯ ನೆನೆಯೊ ತಮ್ಮಾ
ಕೈವಾರ ಪುರದಲ್ಲಿ ನೆಲಸಿಹ ತಾತನ
ಪಾದಸೇವಕನೊ ತಮ್ಮ

## ನಾದಬಿಂದು ಕಳೆ

ಮರೆಯಬಾರದು ಶಿವನ ಮರೆಯಬಾರದು
ಮರೆತು ಹೋದಮೇಲೆ ಮುಂದೆ
ದೊರೆಯದೆಂದಿಗೂ ಶಿವನ ಪಾದ

ಆಗ ಈಗ ಎನ್ನುವುದಲ್ಲ
ಹಗಲು ಇರುಳು ಕಳೆಯುವುದಲ್ಲ
ಹೋಗುವ ಕಾಲ ಬಂದಾ ಮೇಲೆ
ಒಂದರಗಳಿಗೆ ನಿಂತು ಹೋಗುವುದಲ್ಲ
ಮರೆಯಬಾರದು ಶಿವನ ಮರೆಯಬಾರದು

ಹಿಂದೆ ಘೋರಾರಣ್ಯ ಗಿಡವು
ಮರದ ಪಕ್ಷಿ ಜೀವರಾಶಿ
ಪುಣ್ಯ ಹೊಂದಿ ಬಂದೀತೆಂದು ತಿಳಿದಾ ಮೇಲೆ
ಮರೆಯಬಾರದು ಶಿವನ ಮರೆಯಬಾರದು

ಹದ್ದು ಕಾಗೆ ಗೆದ್ದಲು ಉಂಡು
ಬಿದ್ದು ಹೋಗುವ ಘಟವು ಮುಂದೆ
ನಿರ್ಧಾರವನು ಮಾಡಿ ನಿನ್ನ ಬುದ್ಧಿಯಿಂದ ತಿಳಿದಾ ಮೇಲೆ
ಮರೆಯಬಾರದು ಶಿವನ ಮರೆಯಬಾರದು

ಹಗ್ಗದಲ್ಲಿ ಕಟ್ಟುವುದಲ್ಲ
ತಲೆಯ ಮೇಲೆ ಹೊರುವುದಲ್ಲ
ನಾದಬಿಂದು ಕಳೆಯನ್ನುಳ್ಳ ಆದಿಮೂರ್ತಿ ಜ್ಞಾನವಮಾಡಿ
ಮರೆಯಬಾರದು ಶಿವನಾ ಮರೆಯಬಾರದು

❍

## ಆರಕ್ಷರದ ತೊಟ್ಟಿಲು

ಆರಕ್ಷರದ ತೊಟ್ಟಿಲು ಆರಂಭವಾಯಿತು ಉಯ್ಯಾಲು
ರಕ್ಷಿಗನು ಚಿನ್ಮಯ ತೊಟ್ಟಿಲೊಳಗೆ ತಾನು
ತೂಗುತಲಿದ್ದನು ಉಯ್ಯಾಲು

ಪಂಚಾಕ್ಷರಿ ಮಂತ್ರ ಪಠನೆಯ ಮಾಡಿದರೆ
ಆಡಾಡುವ ತೊಟ್ಟಿಲು ಉಯ್ಯಾಲು
ಪಂಚಾಕ್ಷರಿ ಸುತ್ತ ಪರಬ್ರಹ್ಮನೆ ಕೊಟ್ಟು
ಪಂಚಭೂತಗಳಾಯ್ತು ಉಯ್ಯಾಲು

ಮಣ್ಣು ನೀರು ಅಗ್ನಿ ವಾಯುವಿಂದಲಿ
ನಾಲ್ಕು ಕೋಲನ್ನೆ ಮಾಡಿದರು ಉಯ್ಯಾಲು
ಅಷ್ಟ ದಿಕ್ಕುಗಳು ಸೇರಿ ದೃಷ್ಟಿಯಿಂದಲಿ
ಎಂಟು ಬಟ್ಟೆಯ ಮಾಡಿದರು ಉಯ್ಯಾಲು

ಪಂಚಗನ್ನೇರು ಕೂಡಿ ಪಂಚವೇದವನೋದಿ
ಆಕಡೆ ತೂಗಿದರು ಉಯ್ಯಾಲು
ಪಂಚಗನ್ನೇರು ಕೂಡಿ ಪಂಚಮವೇದವ ಮಾಡಿ
ಈಕಡೆ ತೂಗಿದರು ಉಯ್ಯಾಲು

ಕೆಂಪು ಬಿಳುಪು ಕಪ್ಪು ಹಸುರು ಮಿಂಚುವ
ಒಳ್ಳೆ ಹಾಸಿಗೆ ಹಾಸಿದರು ಉಯ್ಯಾಲು
ಶ್ವಾಸ ಉಶ್ವಾಸಗಳೆರಡ ಹಗ್ಗಗಳನು ಮಾಡಿ
ದೂಲಕ್ಕೆ ನಿಲುಗಟ್ಟಿ ಉಯ್ಯಾಲು

ಹಗ್ಗವಿಪ್ಪತ್ತೈದು ಮಾರು
ತೊಟ್ಲಿಗೆ ಮನದೀಯ ಮಾಡಿದರು ಉಯ್ಯಾಲು
ಅಂಡ ಪಿಂಡಾಂಡ ಬ್ರಹ್ಮಾಂಡಗಳೆರಡನ್ನು
ಆಕಡೆ ಈಕಡೆ ದಿಂಡುಗಳೆ ಮಾಡಿದರು ಉಯ್ಯಾಲು

❍



## ಬಯಲು ತೋಟದಲ್ಲಿ

ಬಟ್ಟಬಯಲು ತೋಟದಲ್ಲಿ
ಹುಟ್ಟಿತೊಂದು ಜಾಜಿಯ ಮೊಗ್ಗು
ಮುಟ್ಟಿ ಕುಯ್ಯಲೆಂದರೆ ಸಿಗದಣ್ಣ
ಓಂ ಗುರುಸಿದ್ಧಾ

ಹುತ್ತದೊಳಗೊಂದು ಸರ್ಪ
ಸುತ್ತಮುತ್ತ ನೋಡುತಲಿದೆ
ಎತ್ತಹೋದರು ದಾರಿಯಿಲ್ಲಣ್ಣ
ಓಂ ಗುರುಸಿದ್ಧಾ

ಈ ಊರಿನೊಳಗೆ ಭಾರಿ ತಿರುವು
ಜಾರಿ ಜಾರಿ ಬೀಳುತಲಿದೆ
ಸುತ್ತ ಮುತ್ತು ನೋಡುತಲಿದೆ
ಓಂ ಗುರುಸಿದ್ಧಾ

ಎಲೆಯಿಲ್ಲದ ಕೊಂಬೆ ಮೇಲೆ
ಗರಿಯಿಲ್ಲದ ಪಕ್ಷಿಯು ಕುಳಿತು
ಸುತ್ತ ಮುತ್ತು ನೋಡುತಲಿದೆ
**ಓಂ ಗುರುಸಿದ್ಧ**

## ತೈಲವಿಲ್ಲದ ಜ್ಯೋತಿ

ನಿದ್ರೆ ಬಾರದು ಕಣ್ಣಿಗೆ
ನಮ್ಮಾತನು ಎದ್ದುಬಾರನು ಮನೆಗೆ


ಅರ್ಧೊಮ್ಮೆ ರಾತ್ರಿಯೊಳಗೆ
ಮತ್ತೊಮ್ಮೆ ಮಲಗಿದೆ
ಮದ್ದಾಲೆ ಧ್ವನಿ ಕೇಳಿ
ಮನ ಸಂತೋಷವಾಯಿತು

ಐದು ಮಂದಿಯ ಮಿಂಡರಿಗೆ
ಆಶ್ರಯ ಕೊಟ್ಟು ಕೈಗೂಡದೆ ನಾನಿದ್ದೆನು
ಐದು ಮಂದಿಯ ಬಿಟ್ಟು ಆರುಮಂದಿಯ ಸುಟ್ಟು
ಎಂಟು ಮಂದಿಯ ಗೆದ್ದು ಮಂಟಪದೊಳಗಿದ್ದೆ

ಒಂಬತ್ತು ಮನೆ ಬಾಗಿಲೊ
ಇದರಲ್ಲಿ ನಾನೊಬ್ಬಳೆ ಇರುತ್ತಿದ್ದೆನೊ
ಹಂಬಾಲ ಹರಿದಿತ್ತು ಹಗಲಿರುಳೆನ್ನದೆ
ತುಂಬಿದ ತೊಟ್ಟಿಲೊಳಗೆ ತೂಗಾಡುತಲಿದ್ದೆ

ತೈಲವಿಲ್ಲದ ಜ್ಯೋತಿಯ
ಬೆಳಕಿನೊಳು ತುಟ್ಟತುದಿಯೊಳಿಟ್ಟಿದ್ದೆ
ಮೈಲಿಗೆ ಹರಿದಿತ್ತು : ಮನಸಂತೋಷವಾಯಿತು
ಲೀಲೆಯಿಂದಲಿ ಕಂಡೆ **ನಾಗಲಿಂಗನ** ಪಾದ

❍



## ಮೂರು ಕಾಲಿನ ಪಕ್ಷಿ

ಹರಗಿ ಬಿತ್ತಲಿಲ್ಲ ಮೊಳದುದ್ದ ತೆನೆಯಾಯ್ತು ಶಂಭುಲಿಂಗ
ತಿನಬಂದ ಗಿಣಿಗಳು ಬೆದರಿ ಹೋಗುತಲಿದೆ ಶಂಭುಲಿಂಗ


ಹುಲ್ಲನೆ ಮೆಲದು ನೀರನೆ ಕುಡಿಯದು ಶಂಭುಲಿಂಗ
ಹಿಡಿದರೆ ಮೊಲೆಯಿಲ್ಲ ಕೊಡಹಾಲು ಕರೆಯುವುದು ಶಂಭುಲಿಂಗ

ಕರಿಯ ಎಂಟೆಮೇಲೆ ಬಿಳಿಯ ಬೀಜವ ಬಿತ್ತಿ ಶಂಭುಲಿಂಗ
ಕೊಂಬುವರುಂಟು ತಿಂಬುವರಾರಿಲ್ಲ ಶಂಭುಲಿಂಗ

ಮೂರು ಕಾಲಿನ ಪಕ್ಷಿ ನೀರೊಳು ನಿಂತಿದೆ ಶಂಭುಲಿಂಗ
ಪಕ್ಷಿಗೆ ರೆಕ್ಕಿಲ್ಲ ಹಾರಿತು ಗಗನಕ್ಕೆ ಶಂಭುಲಿಂಗ

ಇಬ್ಬರು ಸ್ತ್ರೀಯರಿಗೆ ಒಬ್ಬನೆ ಪುರುಷನು ಶಂಭುಲಿಂಗ
ಪುರುಷರಿಗೆ ರೂಪಿಲ್ಲ **ಗುರುಮಹೇಶ್ವರ** ಬಲ್ಲ ಶಂಭುಲಿಂಗ

❍



## ಹಂಸಪಕ್ಷಿ


ಪಕ್ಷಿ ಆಡುತಾದೆ ಹಂಸಪಕ್ಷಿ ಆಡುತಾದೆ
ಪಕ್ಷಿ ಆಡುತದ ಪರ್ವತ ತುದಿಯಲಿ
ಈಕ್ಷಿಸಿ ನೋಡಲು ವೃಕ್ಷ ಆಕಾಶದಿ

ತ್ರಿಕೂಟ ಸ್ಥಾನದಲ್ಲಿ
ತ್ರಿಪುರಾಂತಕನ ಕೆರೆಯಲ್ಲಿ
ಸ್ಫಟಿಕ ವರ್ಣದಿಂದ
ನಿಟಿಲ ತೋಟದಿ ನಿಜವಾಗಿ

ಗಂಗೆ ಯಮನೆಯಲ್ಲಿ
ಸಪ್ತ ಸಂಗಮ ನದಿಯಲ್ಲಿ
ತುಂಗಾತೀರದ ಚಿತ್ಕಳೆ ಮಧ್ಯದಿ
ಶೃಂಗಾರ ಕೋಣೆಯೊಳು ಸೂಕ್ಷ್ಮದಿಂದ

ಮಂಡಲ ತ್ರಯಂಗಳಲಿ
ದುಂಡುಮಲ್ಲಿಗೆ ತೋಟದಲ್ಲಿ
ಅಂಡಪಿಂಡ ನವಖಾಂಡ ಪೃಥ್ವಿಯೊಳು
**ಉಮದಿ ಶ್ರೀಗುರು ಧ್ಯಾನದಿಂದಲಿ**

❍



## ಜ್ಞಾನದ ಸರಪಳಿ

ಹುಚ್ಚುನಾಯಿ ಕಚ್ಚಲು ಬರುತ್ತೈತೆ ಎಚ್ಚರಿಕೆಲಿರು ತಂಗೆಮ್ಮ
ಹುಚ್ಚುನಾಯಿ ಕಟ್ಟಬೇಕಾದರೆ ಮತ್ತೇನುಂಟೆ ತಂಗೆಮ್ಮ ?
ಹುಚ್ಚುನಾಯಿ ಕಟ್ಟಬೇಕಾದರೆ ಜ್ಞಾನದ ಸರಪಳಿ ಬೇಕಮ್ಮ

ಜ್ಞಾನದ ಸರಪಳಿ ತರಬೇಕಾದರೆ ಮತ್ತೇನುಂಟೆ ತಂಗೆಮ್ಮ ?
ಜ್ಞಾನದ ಸರಪಳಿ ತರಬೇಕಾದರೆ ಗುರುವಿನ ಕರುಣವೆ ಬೇಕಮ್ಮ

ಗುರುವಿನ ಕರುಣವು ಪಡೆಯಬೇಕಾದರೆ ಮತ್ತೇನುಂಟೆ ತಂಗೆಮ್ಮ ?
ಗುರುವಿನ ಕರುಣವು ಪಡೆಯಬೇಕಾದರೆ ಪಂಚಾಕ್ಷರಿ ನೆಲೆ ಬೇಕಮ್ಮ

ಪಂಚಾಕ್ಷರಿ ನೆಲೆ ಪಡೆಯಬೇಕಾದರೆ ಮತ್ತೇನುಂಟೆ ತಂಗೆಮ್ಮ?
ಪಂಚಾಕ್ಷರಿ ನೆಲೆ ಪಡೆಯಬೇಕಾದರೆ ಗುರುವಿನ ಸುಕೃತವು ಬೇಕಮ್ಮ

❍

## ಗುರುವು ಕೊಟ್ಟ ಮದ್ದು

ಎಂಥ ಔಷಧಿ ಕೊಟ್ಟು ಚಿಂತೆ ಹರಿಸಿದನೊ
ಸಂತೆಕೂಟದ ರೋಗ ಸಂಹರಿಸಿದನೊ


ಪಂಚಾಕ್ಷರಿ ಮಂತ್ರ ಪಂಚವರ್ಣದ ಯಂತ್ರ
ಮೂಡುವ ಮಂತ್ರ ಎಂಥ ಸ್ವಾತಂತ್ರ್ಯ

ಕಷಾಯವ ಕೊಟ್ಟು ಕಡುಪಥ್ಯವನೆ ಇಟ್ಟು
ಕಳೆಯದ ರೋಗವ ಕಳೆದು ಹಾಕಿದನಮ್ಮ

ರಾಮಾಜೋಗಿಯ ಮಾತ್ರೆ ರಾಣಿವಾಸದ ಪಾತ್ರೆ
ತಾಮಸಗಿರಿ ಯಾತ್ರೆ ಏನು ವಿಚಿತ್ರ

ಪೂರ್ವಜನ್ಮದ ಎನ್ನ ಪೂಜಾಫಲ
ಸರ್ವರೋಗಗಳು ಸಂಹಾರವಾಯಿತಲ್ಲ
ಗುರುವು ಕೊಟ್ಟ ಮದ್ದು: ರೋಗ ಗುಣವಾಯಿತು.

❍



## ಆತ್ಮನ ಬೆಳಕು

ತಾ ಬೇರೆಯಾಗ ಬೇಕಣ್ಣಾ
ತನ್ನ ತಾನು ತಿಳಿದ ಮೇಲೆ ಬಯಲಾದೀತಣ್ಣ

ನಾನು ನೀನೆಂಬುದು ಎಲ್ಲಾ ಒಂದೆ
ಸುಳ್ಳೇ ಆಗಿ ಕೂತಿರಿ ಘನವಾಗಿ ತಂದೆ
ದೇಹದೊಳಗೆ ಶಂಭು ಬಂದೆ
ಬಯಲಿಗೆ ಬಯಲಾಗಿ ನಿಂತಾನೊ ತಂದೆ

ಮನಿ ಬೇರೆ ದೀವಿಗೆಲ್ಲ ಒಂದೆ
ಘಟ ಬೇರೆ ಆತ್ಮನ ಬೆಳಕೆಲ್ಲ ಒಂದೆ
ಗಗನಕ್ಕೆ ಚಂದ್ರ ಎಂಬುದೊಂದೆ
ನೋಡುವದರೊಳಗೆ ತಾಳಾ ಬಿಟ್ಟಿರಿ ತಂದೆ

ಜಗತ್ತಿಗೆ ಗುರು ಎಂಬುದೊಂದೆ
ಕನ್ನಡಿ ಮನೆಯೊಳು ಕುಳಿತವನ ಮೋರೆಲ್ಲ ಒಂದೆ
ಎರಡಂತ ತಿಳಿಬೇಡೊ ತಂದೆ
**ಮುಗುಲಿ ಸಂಗಮನ** ನೋಡುವನು ತಾನಾಗಿ ಹೋದೆ

## ಗುರುಮಂತ್ರದ ಬೆಂಕಿ

ಎಂಥಾ ದಯಾವಂತರಿವರು ಸದ್ಗುರು ಮಹಾರಾಜರು
ಎಂಥಾ ದಯಾವಂತರಿವರು ಭವಬಾಧೆ ಬಿಡಿಸಿದರು
ಮಾಯವನ್ನು ಮರೆಮಾಡಿ ನಿಜರೂಪ ತೋರಿದರು

ಕಾಮ ಎಂಬುವ ಚೇಳು ಕಡಿದಿತ್ತೋ
ಅಹಂಕಾರ ಹಾವು ಉಪರಾಟ ವಿಷಕಾರಿತ್ತೋ
ಕಾಮ ಚೇಳಿನ ಕಳಿ ಹಿಡಿದು ಕ್ರೋಧ ಸರ್ಪನ ಬುರುಗು ಬಂದು
ಹಾಳಾಗಿ ಹೋಗುತ್ತಿದ್ದೆ ಗಂಟುಬಿತ್ತೋ ಗುರುಪಾದ

ಮೂರು ಕೂಡಲ ದೆವ್ವ ಬಡಿದಿತ್ತೋ
ಮನೆದೆವ್ವ ಮೂರು ಊರೆಲ್ಲ ತಿರುಗಿ ಬಂದಿತ್ತೋ
ಮದಮತ್ಸರ ದೆವ್ವ ಬಂದು ಸದ್ಬುದ್ಧಿ ಹಾರಿಸಿತ್ತೋ
ಅಧೋಗತಿಗೆ ಹೋಗುತ್ತಿದ್ದೆ ಪಂಚಾಕ್ಷರ ಉಳಿಸಿತೋ

ಗುರುಮಂತ್ರದ ಬೆಂಕಿಕೊಟ್ಟರು
ಆ ಬೆಂಕಿಯಿಂದ ಕೆಟ್ಟ ಕಾಂತಾರ ಸುಟ್ಟುಬಿಟ್ಟರು
ಕತ್ತಲೆಂಬುದು ದೂರ ಹೋಯ್ತು
ಧ್ಯಾನ ಪ್ರಕಾಶ ಜ್ಯೋತಿ ಹೊಳದಿತ್ತು
ಗುರು ವಿರಕ್ತನ ಪಾದದೋರಿತು
ಭೀಮನ ಮನ ಲೋಪವಾಯ್ತು

❍

## ಏಳುಸುತ್ತಿನ ಕೋಟೆ


ಈಗ ನೀ ಹ್ಯಾಂಗ ಹೋದಿ ಹೆಡ್ಡ
ಅಲ್ಲಿ ಬೀಗ ಬಿತ್ತಾ ಕಾರಿಬೋರಿ ಕಂಟಿಹತ್ತಿದ ಗುಡ್ಡ

ಅಲ್ಲಿದಲ್ಲಿಗೆ ಕಣಿವೆ ಕಲ್ಲೊ
ಅಲ್ಲಿ ಭೂತಪೀತ ಆಡುತಾವ ಹಗಲು ಇರುಳು ಗುಲ್ಲೊ
ಕಣ್ಣು ಮುಚ್ಚಿ ಬಾಯಿ ತೆರದಿಯಲ್ಲೋ
ನೀ ಬಲ್ಲವನಾದರೆ ಹೋಗಬ್ಯಾಡ ನಿಲ್ಲೋ

ಅಲ್ಲಿ ಏಳುಸುತ್ತಿನ ಕೋಟೆಯಲ್ಲಿ
ಕಾಳಕೂಟ ವಿಷಜ್ವಾಲೆ ಕತ್ತಲ ಮುಸುಕಿತಲ್ಲಿ
ತಿಳಿದು ಉಳಿದವರ‍್ಯಾರಿಲ್ಲಿ
ನಿನಗ ಕಳಿಸಿದಂಥಾ ಪುರುಷನ ಕಾಣಬೇಕಿಲ್ಲಿ

ಹಮ್ಮಿನಿಂದಲೇ ಹೋಗುವ ದಾರಿ ಅಲ್ಲಾ
ಅದು ಬ್ರಹ್ಮ ವಿಷ್ಣು ರುದ್ರರಿಗೆ ಸಾಧ್ಯವಾದದ್ದಲ್ಲಾ
ಸುಮ್ಮನೆ ಶಾಸ್ತ್ರವ ಓದಿದರಿಲ್ಲಾ
ಅಲ್ಲಿ ಬ್ರಹ್ಮ **ಚಿದಾನಂದ ತಾನೆ** ತಾ ಬಲ್ಲಾ

❍



## ಸದ್ಗುರುವಿನ ಸಂಗ

ಕೋಲು ಕೋಲೆನ್ನಿರೋ ಸದ್ಗುರುವಿನ
ಸಂಗ ಮೇಲೆನ್ನಿರೋ

ಇಡಾಪಿಂಗಳ ಮಧ್ಯ ಧ್ವನಿಯ ನಾದವು ಕೇಳಿ
ನರರೇನು ಬಲ್ಲರು ನಡೆನುಡಿಯಿಲ್ಲದೆ

ರೆಕ್ಕೆ ಇಲ್ಲದ ಹಕ್ಕಿ ಹಾರಿತು ಗಗನಕೆ
ಹಕ್ಕಿಯ ಹೆಸರನು ಹೇಳಲಾರವೆನ್ನಿರೋ

ಹುಟ್ಟು ಬಂಜೆಯ ಮಗ ಸುಟ್ಟನು ತವರೂರ
ಬೆಟ್ಟಿ ಆಗ್ಯಾನ ಮಣಿಪುರದಿ ಅನ್ನಿರೋ

ಗುರು ಕಂಡನು ಲೀಲಾ ಗುರುವಿಗೆ ಹೆಸರಿಲ್ಲಾ
ಗುರುಭಕ್ತನಾದವನಿಗೆ ಕುಲವಿಲ್ಲವೆನ್ನಿರೋ

## ಬೆಳಕು

ಕಾಣಿಸುತಿದೆ ನೋಡು ಕಂಗಳಾಲಿಯ ನಡು
ಠಾಣ ದೀವಿಗೆಯ ಮೇಲೆ
ಘ್ರಾಣದಗ್ರದಿ ಗಂಗಾ ಯಮುನಾ ಸರಸ್ವತಿಗಳು
ಕೋಣೆಯೊಳಗೆ ಸಂಗಮೇಶನೆನಿಪ ಜ್ಯೋತಿ

ತಾಲು ಮೂಲ ದ್ವಾದಶಾಂತವೆಂದೆನಿಸಿಕೊಂಬ
ವಾಯು ಅಂಬರದ
ನೀಲ ಬಿಂದುವಿನಂತರಾಳದೊಳಗೆ ಸೂಕ್ಷ್ಮ
ಜಾಲಂಧರದೊಳು ಮಿಗೆ ಬೆಳಕು ತೋರುವ ಜ್ಯೋತಿ

ಬಿಳಿದು ಕರಿದು ಕೆಂಪುವೆರದು
ರಂಗಿಪ ಮೂರು ಬಳಸಿನೊಳಗೆ
ಮಿರುಪ ನಾಳಿನಾತ್ಪ ರಾಜಾಗ್ನಿ ಮಂಡಲ ತ್ರಯಗಳಿಂ
ಮಿಳಿತವಾಗಿಹ ಮಹಾಮಂಡಳದೊಳಗೀಗ

ಬಿಂದು ನಾದಾತ್ಮವಿದ್ಯಾನಾಮ
ಸಚ್ಚಿದಾನಂದ ಮಂಟಪದೊಳಗೆ
ಅಂದವಪ್ಪಿಹ ಶೂನ್ಯ ಸಿಂಹಾಸನದೊಳೊಲವಿಂದ
ತೋರುವ **ಸಂಗಮೇಶ**ನೆನಿಪ ಜ್ಯೋತಿ

❍

## ರತಿಕೂಟದ ಬೆಡಗು

ಏನ ಹೇಳುವೆನಮ್ಮಾ ಸೊಬಗಾ ?
ಎನ್ನ ಪ್ರಾಣಕಾಂತನ ರತಿಕೂಟದ ಬೆಡಗಾ

ಧಾರುಣಿಯೆಂಬುದು ತೋರಿ ಬಹು
ನೀರಿನ ಕಡಲೊಳು ತಡಿಯನ್ನು ಸಾರಿ
ಏರಿ ಹರಿ ಹರಿವೇರಿ ಮೇಲೆ ಭೋರೆಂಬೋ ಝೀಂ
ಕಾರದೊಳು ಬೆರೆದಾಡಿದಾ ಸೊಬಗಾ

ಮೂರು ಪುರಂಗಳು ಬೆರಿದಾ ಮೈ
ಉರವಣಿಸಿರುವಂತ ಉರಗನ ಪಿಡಿದಾ
ವರಚೌಕ ಮಧ್ಯದೊಳ್ ಬೆರೆದಾ ಅಲ್ಲಿ
ಪರಿಪೂರ್ಣ ಕಾಂತಿಯೊಳ್ ಸೆಳೆದಪ್ಪಿದೊಯಿದಾ

ಕಾಣದಾಭರಣಗಳಿಟ್ಟಾ ತನ್ನ
ಪ್ರಾಣವಾದ ಅರುವೆಯ ತಾನುಡಕೊಟ್ಟಾ
ಮಾಣದ ಮಾಯೆಯ ಮುಂದಿಟ್ಟಾ ಅಲ್ಲಿ
ಮಾನಿನಿ ಬಾರೆಂದು ಕರದೊಳಿಂಬಿಟ್ಟಾ

ಹತ್ತಿ ನಡೆವ ಹಾದಿ ತೋರಿಸಿ ಅಲ್ಲಿ
ಬೆತ್ತದ ಪೀಠದೊಳೆನ್ನ ಮೇಳೈಸಿ
ಅತ್ಯಂತ ರಮಣೀಯ ಗ್ರಹಿಸಿ ಅಲ್ಲಿ
ಒತ್ತಿಲಿ ತಾನಾದ ಕೂಟದೊಳು ಬೆರಸಿ

ಬಾಯಿಗೆ ನಾ ಮರುಳಾದೆ ಅಲ್ಲಿ
ಬಾಯ ರಂಗಕೆ ಬಂದು ನಾ ಬಯಲಾದೆ
ಹೇಯ ಬಾಧೆಗಳನ್ನು ತೊರೆದೆನು
ಸುಯಿಗ್ನಾನ ಲಿಂಗದೊಳ್ಬೆರೆದು ನಾ ಲೀನವಾದೆ

❍

## ಮಾಯ ಬಿತ್ತಿದ ಬೆಳಸು

ನಚ್ಚದಿರು ಕಾಯವನು ವೆಚ್ಚವಾಗದ ಮುನ್ನ
ನಿಚ್ಚ ಭವಹರನ ಪೂಜೆಯ ಮಾಡಿಕೋ

ತೊಗಲುಬೊಂಬೆ ಕಾಯ ನೆಗೆನೆಗೆದು ಕುಣಿಕುಣಿದು
ಜಗವೆಲ್ಲ ತನಗಾಗಬೇಕೆಂಬುದು
ಹಗೆ ತನ್ನ ಕೊಂದವನ ಹುಗಿದು ಮಣ್ಣನೆ ಮುಚ್ಚಿ
ಹುಗಿಯೆಂದವನ ಕೊಂದೆ ಎಲೆ ಮಾನವಾ ?

ಢಂಬಕದ ಕಾಯವಿದು ಕೊಂಬದಿದು ಕೊಡವದಿದು
ತುಂಬಿ ಕೆಡುವುದು ತನ್ನ ದಿವಸ ಬರಲು
ಬೆಂಬಿಡದೆ ಕಾಲನ ಭಟರು ಎಳೆದುಕೊಂಡೊಯ್ಯುವಾಗ
ಬೆಂಬಲಾದವರುಂಟೆ ಎಲೆ ಮಾನವಾ ?

ಸಿಡಿಲು ಗರ್ಜಿಸಿ ಹೊಯ್ಯೆ ಕೊಡೆ ಕಾಯಬಲ್ಲದೆ
ಮೃಢನ ಒಲುಮೆಯು ತಪ್ಪಿದರೆ ನಗೆ ಕೊಡುವರುಂಟೆ
ಪಿಡಿದು ಕಾಲನ ಭಟರು ಎಳೆದುಕೊಂಡೊಯ್ಯುವಾಗ
ಬಿಡಿಸಿಕೊಂಬವರುಂಟೆ ಎಲೆ ಮಾನವಾ ?

ಕುಲಕುಲವೆಂಬಿರಿ ಕುಲಚಲಕೆ ಹೋರುವಿರಿ
ಕುಲದಲ್ಲಿ ಅಧಿಕಾರಾರೆಲೆ ಮಾನವಾ
ಹೊಲೆಮಾಂಸವೆರಸಿಪ್ಪ ತಾಯಿಗರ್ಭದಿ ಜನಿಸಿ
ಕುಲಲವವಿಲ್ಲದವನ ಪೂಜೆಯ ಮಾಡಿರೋ

ಕಾಯವಿದು ಸ್ಥಿರವಿಲ್ಲ ಮಾಯ ಬಿತ್ತಿದ ಬೆಳಸು
ಕಾಯಿ ಹಣ್ಣಾಗಿ ಧರೆಗುರುಳುವಂತೆ
ಸಾಯದವರಾರುಂಟು ಈ ಸಕಲ ಜೀವಿಗಳೊಳಗೆಯೀ
ಕಾಯವೆರವಿನ ಸೊಮ್ಮು ಎಲೆ ಮಾನವಾ ನಚ್ಚದಿರು

❍

## ಮೂರ್ಕೈದು ಗೇಣಿನ ಗುಡಿ

ಭಜನೆ ಬ್ರಹ್ಮಾನಂದ ರಸವು
ಸೋಹಂ ಭಜನೆ ಬ್ರಹ್ಮಾನಂದ ಆನಂದ ಸುಖವು

ಮೂರ್ಕೈದು ಗೇಣಿನ ಗುಡಿಯು
ಹದಿನಾರು ಸ್ತಂಭವು ಸಪ್ತಪ್ರಕಾರದೊಳವು
ದ್ವಾರವಂಬತ್ತೈದು ಕಳಶಗಳಾರು ಮೆಟ್ಟಿಲುಗಳೈದು
ವರ್ಣದ ತೋರಣಂಗಳ ಕಾದು ಇರುತಿಹ
ದ್ವಾರಪಾಲಕರೀರ್ವರೊಪ್ಪುವ

ಪರಬ್ರಹ್ಮ ದಂಡಿವೀಣೆಯನು ಮಾಡಿ
ಮೆರೆವೆಯೊ ಚಕ್ರದ ಮೆಟ್ಲುಗಳಮಾಡಿ
ದ್ವಾರವಂಬತ್ತೈದು ಕಳಶಗಳಾರು ಮೆಟ್ಟಿಲುಗಳೈದು
ವರ್ಣದ ತೋರಣಂಗಳ ಕಾದು ಇರುತಿಹ
ದ್ವಾರಪಾಲಕರೀರ್ವರೊಪ್ಪುವ

❍

## ಶಿವಜೀವೈಕ್ಯ


ಔಷಧಿ ತಿನಬೇಕು ಭವರೋಗದ ಔಷಧಿ ತಿನಬೇಕು
ಔಷಧಿ ತಿನಬೇಕು ಹವಣಿಸಿ ಮನದಲ್ಲಿ
ವಿವರಿಸಿ ಪೇಳುವೆ । ಶಿವಜೀವೈಕ್ಯದ  ಔಷಧಿ

ಅಂಗ ಗುಣಗಳೆಲ್ಲಾ ಕಳಿಯದೆ
ಹಿಂಗಿಸಿ ಪೋಗುವೆಯೆಲ್ಲಿ
ಕಂಗಳ ನೋಟವು ನಾಡಿ ತ್ರಿಕೂಟದಿ । ಸಂಗವಾಗಿಹ
ಶಿವಲಿಂಗನೋಳ್ ಬೆರೆವಂಥ

ಭಕ್ತಿ ಮೂರನಳಿದೊ । ಸಮರಸ ಭಕ್ತಿಲಿ ನಿಲ್ಲುವುದು
ವಿರಕ್ತಿಲಿ ಮನವು । ವಿರಕ್ತಿಯ ತಾಳಿನ್ನು
ಮುಕ್ತಿ ಕುಲದಿ ಸೇರುವಂಥ

ಔಷಧಿ ತಿನಬೇಕು
ಅಹಂಮತ್ವದಲಿ ಚಿತ್ತವು ನೇಮದಿ ಕೂಡಿ । ಅಲ್ಲಿ
ನಾಮವಿರಹಿತ **ಸ್ವಾಮಿ ಬಂಡೇಶನ**
ಪ್ರೇಮದಿ ಪಾದಪಿಡಿದು
ಭ್ರೂಮಧ್ಯದಿರುವಂಥ ಔಷಧಿ ತಿನಬೇಕು

❍



## ಮಂಗಳ ಪ್ರಭೆ

ಬ್ರಹ್ಮಾನಂದ ಸುಖವು
ಸುಮ್ಮನೊದಗಿತೆ ಮನುಜಾ

ಒಂಭತ್ತು ಬಾಗಿಲ ಮುಚ್ಚುವ ತನಕ
ಆಕಾಶ ಕದವು ತೆರೆಯುವ ತನಕ
ತ್ರಿನದಿ ಸಂಗಮ ದಾಟುವ ತನಕ
ಎರಡಾಗಿ ಹಾದಿ ನಡುಹೋಗುವ
ತನಕ

ಅಂಗದೊಳು ನಿಸ್ಸಂಗವಾಗುವ ತನಕ
ರಂಗಮಂಟಪ ಮಧ್ಯ ಸೇರುವ ತನಕ
ಕಂಗಳು ಮುಚ್ಚಿ ಕೈಮುಗಿವ ತನಕ
ಮಂಗಳ ಪ್ರಭೆಯೊಳಗಾಡುವ ತನಕ

ಶಂಖ ಕಿನ್ನೂರಿ ಸ್ವರ ಸೇರುವ ತನಕ
ಕಿಂಕರ ನಾದ ರಂಗೇರುವ ತನಕ
ಶಂಕರ ರೂಪ ನೀನಾಗುವ ತನಕ
ಒಡೆಯ ಪಂಚಾಕ್ಷರಿ ಒಲಿಯುವ
ತನಕ

❍

## ಗುರು ತೋರಿದ ದಾರಿ

ದಾರಿ ಚೆಲ್ಲಿದೇ ಮುಕ್ತಿಯ ಗುರು
ತೋರಿಸಿದಲ್ಲದೆ ಕಾಣಿಸದು

ವೇದದ ಮೊದಲಿಗೂ ಮೂಲವಿದು
ಮೇದಿನಿಯೊಳು ತಾ ಬಂದಿಹುದು
ಹಾದಿ ಹಾದಿಗೇ ಬಿದ್ದಿಹುದು ಗುರು
ತೋರಿಸಿದಲ್ಲದೆ ಕಾಣಿಸದು

ಎತ್ತ ನೋಡಿದರಲ್ಲಿ ಪರಬ್ರಹ್ಮವಿದು
ಸುತ್ತಮುತ್ತಲೇ ಸುಳಿದಿಹುದು
ಚಿತ್ತದೊಳು ಸದಾ ತುಂಬಿಹುದು
ಗುರುಪುತ್ರರಿಗಲ್ಲದೆ ಕಾಣಿಸದು

ಮುಂದೆ ನೋಡಿದರೆ ಬಂದಿಹುದು
ಹಿಂದೆ ನೋಡಿದರೆ ಬಂದಿಹುದು
ಸಂದು ಸಂದಿಗೆ ತುಂಬಿಹುದು
ಆನಂದ **ಗುಹೇಶ್ವರ** ಲಿಂಗವಿದು

❍

## ನಾದ ಸಂಪದ

ಬೇಡಿಕೊಂಬೆನು ಸದ್ಗುರುವೆ ನಿಮ್ಮನು
ಪದವಿಯ ನೀಡೋ ಎನಗೆ ರೂಢಿಯೊಳು

ಚದುರ ನಿಮ್ಮ ಮೂಲ ಪಿಡಿದು
ಹೃದಯ ಕಮಲದಲ್ಲಿ ಬೆರಸಿ
ಸದಮಲ ಸಂತೋಷದಿಂದಲಿ
ಸಲಹೋ ಎನ್ನ ಸಾಂಬಶಿವನೆ




ಆರು ಪುರಗಳು ಮೂರು ಹೊತ್ತು
ಮೇಲೆ ಇರುತಿಹುದು ಆ
ಮೂಲ ಪೀಠವನೇರಿ ನೋಡಲು
ಮೇಲಿಹವು ಮೂರು ಸ್ಥಾನಗಳು

ಅಂಬುರಾಗ್ರದಿ ತುಂಬಿರುವ
ಕುಂಭ ಕೋಣೆ ಮಧ್ಯದಿ
ಸಂಭ್ರಮದ ಜಂಬೂದ್ವೀಪದಿ
ಗಂಗಾಧರ ಭವದ ಹಂಗ ಹರಿಯೋ

ಗಂಗ ಯಮುನೆಯರು ನಡುರಂಗ
ಮಧ್ಯದಿ ತುಂಗಭದ್ರೆಯರು
ಕಾಳಿಂಗ ಮಡುವು ಕಡಲ ದಾಟಿಸು
ಸದಮಲದಿ ನೀ ಒದಗು

ಸಾರಿ ಕೂಗುವಂಥ ನಾದ ಸಂಪದ ಕೇಳುತ
ಮೂಲ ನಿಮ್ಮ ಬಿಂಬದಲ್ಲಿ
ದೃಷ್ಟಿ ತೋರೆನ್ನ ಕಂಗಳಲ್ಲಿ
ಕುಮತಿ ನಾ ಸಲಹೊ ಗುರುವೆ

❍



## ಅರಿವು ಗುರುವನು ನುಂಗಿ

ಅಂಕೆ ತಪ್ಪಿ ಆಮಿಷವೆಂಬುವ
ಹಾವ ನುಂಗಿತಣ್ಣಯ್ಯ

ಒಂಬತ್ತು ತೂತಿನ ಪುಂಗೀ
ನಾದ ಬ್ರಹ್ಮನ ನುಂಗೀ
ನೆರಿಹೊರಿ ನೋಡುವನರರಿಗೆ
ನಿದ್ದಿ ನುಂಗಿತಣ್ಣಯ್ಯ

ಕನಸು ಮನಸಿಗೆ ನುಂಗಿ
ವ್ಯಸನ ಹಸನಕ ನುಂಗಿ
ಜಾಗ್ರಾವಸ್ಥೆ ಸ್ವಪ್ನಾವಸ್ಥೆಗೆ
ಸುಷುಪ್ತಿ ನುಂಗಿತ್ತಣ್ಣಯ್ಯಾ

ಸ್ಥೂಲ ಶರೀರ ಬೇಲಿ ನುಂಗಿ
ಸೂಕ್ಷ್ಮ ಶರೀರ ತೋಟವ ನುಂಗಿ
ಗ್ವಾಡೆ ಮೇಲಿನ ಚಿತ್ರದ ಮನಸ
ದೇಹ ನುಂಗಿತ್ತಣ್ಣಯ್ಯ

ಅರುವು ಗುರುವಿಗೆ ನುಂಗಿ
ಶಿಷ್ಯ ಶಿಖರವ ನುಂಗಿ
ಸತ್ಯವಂತರ ಸರ್ವಸ್ವ
ದೈವ ನುಂಗಿತಣ್ಣಯ್ಯ

❍

## ಶೀಲವಂತರ ಸಂಗ

ಎಷ್ಟು ತೊಳೆಯಲಮ್ಮ ಈ ದೇಹದ
ಮೈಲಿಗ್ಹೋಗದಮ್ಮಾ ತಂಗಿ
ಹೀನ ಮನುಜರ ಸಂಗ ಮಾಡಿದರೆ
ಜ್ಞಾನ ಬಾರದಮ್ಮ

ಶೀಲವಂತರಮ್ಮ ಪಾತಾಳ
ಸೆರಗು ಪಿಡಿದಳಮ್ಮ ತಂಗಿ
ಕೆಮ್ಮಿ ಕ್ಯಾಕರಿಸಿ ದೇಹವು ತೊಳೆದರೆ
ಹಸನು ಆಗದಮ್ಮ ದೇಹ

ಹ್ಯಾಗೆ ಮಾಡಲಮ್ಮ ಕೊಂಚ
ಭಾರಿ ದೇಹವಮ್ಮಾ ತಂಗಿ
ಅನ್ನವು ಉದಕವು ಬಹಳ ಆದರೆ
ಹಾಳಾಗಿ ಹೊಗ್ವದಮ್ಮಾ ದೇಹ

ಪೊಡವಿಯೊಳಗಧಿಕಮ್ಮ ಕಡಕೊಳು
ಸಿದ್ಧನ ಮಗಳಮ್ಮ ತಂಗಿ
ಪರಿಪರಿ ಬೋಧಿಸಿ **ಗುರುಮಡಿವಾಳನ**
ಪಾದದಲ್ಲಿ ಮನಸಿರಬೇಕಮ್ಮ

❍

## ಸೋಬಾನದ ಸೊಬಗು

ಸೋಬಾನವೆನ್ನೀರೆ ಸೋಬಾನವೆನ್ನೀರೆ
ಸೋಬಾನ ಎನ್ನಿ ಶಿವ ಎನ್ನಿ ಸೋಬಾನವೇ

ಸೋಬಾನದಸೊಬಗನ್ನ ನರರೇನು ಬಲ್ಲರು
ತಾ ಬಲ್ಲ ತನ್ನ ತಿಳಿದಾತ ಸೋಬಾನವೇ

ಧರೆಯ ರಕ್ಷಣೆಗಾಗಿ ನರನ ರೂಪವ ಧರಿಸಿ
ಧರಣಿಗುಪಕಾರಿ ಗುರುರಾಯ ಸೋಬಾನವೇ

ಸಂಸಾರ ಸಂಕಟಹತ್ತಿ ಧ್ವಂಸವಾಗ್ವದು ಕಂಡು
ಕಂಸಾರಿ ನಿಮಿತ ಗುರುಬಂದ ಸೋಬಾನವೇ

ಕಂಸಾರಿ ನಿಮಿತ ಗುರುಬಂದು ಕೈಹಿಡಿದು
ಎನ್ವೊಂಶ ಉದ್ಧಾರ ಮಾಡಿದನೆ ಸೋಬಾನವೇ

ಗುರುವಿನ ಗುಪ್ತದಲ್ಲಿ ಇರುವ ಶರೀರಕ್ಕೆ
ಮರುಳ್ಹುಟ್ಟುವ ಚಿಂತೆ ಮೊದಲಿಲ್ಲ ಸೋಬಾನವೇ

ಮರುಳ್ಹುಟ್ಟುವ ಚಿಂತೆ ಮೊದಲಿಲ್ಲ ಯಮರಾಯ
ಮರತೊಮ್ಮೆ ಮುಟ್ಟಲರಿಯನೆ ಸೋಬಾನವೇ

ಅಂತರಂಗದ ಪ್ಯಾಟೆ ಸಂತಿಗ್ಹೋದನೆ ತಂಗಿ
ಚಿಂತಿಸದಲೆ ಕೊಂಡೆ ರತುನಾವ ಸೋಬಾನವೆ

ಚಿಂತೆಸದಲೆ ಕೊಂಡೆ ರತುನಾದ ಬೆಳಕೀಲೆ
ಕಾಂತೆ ಕೇಳವ್ವ ಕೌತುಕವ ಸೋಬಾನವೆ

ಕಂಗಳ ಮುರನ ಕಂಡೆ ಮಂಗಳಾತ್ಮನ ಕಂಡೆ
ಗಂಗೆಯ ಕಂಡು ಗವಿಹೊಕ್ಕು ಸೋಬಾನವೆ

ಗಂಗೆಯನೆ ಕಂಡು ಗವಿಹೊಕ್ಕೆ ಗುರುಪಾದ
ಎನ್ನಂಗದೊಳು ಕಂಡು ಮಯ್ಯ ಮರತೆ ಸೋಬಾನವೆ

ಭಕ್ತಿಭಾವಗಳಿಂದ ಯುಕ್ತಿ ಸಂಗ್ರಹಮಾಡಿ
ಮುಕ್ತಿಯ ತವರಮನೆಗ್ಹೋದೆ ಸೋಬಾನವೆ

ಕವಲೂರು ಕಡೆಯಿಂದ ಬರುವೊ ಸಾಧುರು ಕಂಡು
ಸಾಧಿಸಿ ಸಕಲ ಪಡಕೊಂಡೆ ಸೋಬಾನವೆ

❍

## ಹೋಗುವಾಗ ಒಬ್ಬರಿಲ್ಲ

ಸಾಕು ಮಾಡಯ್ಯ ಜಲುಮ
ಸಾಕು ಮಾಡೋ ಜಲುಮವ

ಯಾವ ಕುಲವ ಪಡೆಯಲಾರೆ
ಯಾಕೆ ಗುರುವೆ ತಡವ ಮಾಳ್ಪೆ
ಸಾಕು ಮಾಡಯ್ಯ ಜಲುಮ
ಸಾಕು ಮಾಡೋ ಜಲುಮವ

ತಂದೆ ತಾಯಿ ಸೇವೆ ಮಾಡಿ
ಸ್ವರ್ಗಲೋಕಕೆ ದಾರಿಮಾಡಿ
ಬಂಧು ಬಳಗ ಸೇವೆ ಮಾಡಿ
ಸ್ವರ್ಗಲೋಕಕೆ ದಾರಿಮಾಡಿ

ಹೊಟ್ಟೆ ಒಳಗೆ ಮಕ್ಕಳುಂಟು
ಹೋಗುವಾಗ ಒಬ್ಬರಿಲ್ಲ
ಬರುವಾಗ ನಾನು ಬೆತ್ತಲೆಯು
ಹೋಗುವಾಗ ಕತ್ತಲೆಯು

ಅದೃಷ್ಟದಲ್ಲಿ ಬರೆದ ಬ್ರಹ್ಮಂಗೆ
ಎಷ್ಟು ಎಂದು ವರ್ಣಿಸಲಿ
ಸಾಕು ಮಾಡಯ್ಯ ಜಲುಮ
ಸಾಕು ಮಾಡೋ ಜಲುಮವ



○

## ಬರುವಾಗ ಬಸುರಾದೆ

ಹುಬ್ಬಳ್ಳಿ ಕೆರೆಬಾವಿ ಜಂಗಮ
ನೀರಿಗೊಬ್ಬಳೆ ಹೋಗಲಾರೆ ಜಂಗಮ
ಇಬ್ಬನಿ ಮಳೆಯಲ್ಲಿ ಜಂಗಮ
ನಾನು ಒಬ್ಬಾಳೆ ಇರಲಾರೆ ಜಂಗಮ

ಕನ್ಯಾ ಸೂತಕವಾದೆ ಜಂಗಮ
ನನ್ನ ಕರೆದು ಮಲಗುವರಿಲ್ಲ ಜಂಗಮ
ಉಂಡಾಡಿ ಹೋದರು ಚಂಡಾಡಿ ಹೋದರು
ಚಂಡಿ ನಾನೊಬ್ಬಳೆ ಜಂಗಮ

ಕೋಟೆಯಿಲ್ಲದ ಮನೆ ಜಂಗಮ
ಅದಕೆ ರಾಟುಂಟು ಕದವಿಲ್ಲ ಜಂಗಮ
ನಿತ್ಯ ಪಾಳೇಗಾರ ರಾಟವೆಂತೇಳಲ್
ನಾಟಕ ಗೋಚರ ಜಂಗಮ

ನನ್ನ ಗಂಡ ದಂಡಿಗ್ಹೋದ ಜಂಗಮ
ನಮ್ಮ ಮಾವ ಮಲ್ನಾಡಿಗ್ಹೋದ ಜಂಗಮ
ಹೋಗುವಾಗ ಹೊಲೆಯಾದೆ ಜಂಗಮ
ಬರುವಾಗ ಬಸುರಾದೆ ಜಂಗಮ

ಆರು ಮಕ್ಕಳ ತಾಯಾದೆ ಜಂಗಮ
ನನ್ನ ಗಂಡನ ಗುರುತ ನಾನರಿಯದೆಹೋದೆ ಜಂಗಮ

ಹಾಸಿಗೆ ಹಾಸಿದೆ ಜಂಗಮ
ನಡುಮನೆಯಲ್ಲಿ ಪರಂಜ್ಯೋತಿ ಉರಿಯುತಾಳೆ ಜಂಗಮ
ನನ್ನ ಹಾಸಿಗೆ ತಕ್ಕಂಥ ಪುರುಷನಿಲ್ಲದ ಮೇಲೆ ?
ಪರದೇಶಿ ನಾನಾದೆ ಜಂಗಮ

**ಕೋಶರಾಮೇಶ್ವರ**ನಿಂದ ನೀ ತಿಳಿದಿಕೋ ಜಂಗಮ
ನಿನಗೆ ಹುಚ್ಚುನಾಯಿ ಕಡಿತಾದೆ ಜಂಗಮ

## ನೆಟ್ಟಗೆ ಮುಂದಕೆ ಸಾಗುತ ನೋಡಿ

ಹತ್ತಿನೋಡಿ ಬೆಟ್ಟ ಹತ್ತಿನೋಡಿ
ಮತ್ತೆ ನೋಡಿ ದೃಷ್ಟಿ ಇತ್ತು ನೋಡಿ

ಹತ್ತಿದ ಬೆಟ್ಟವ ಇಳಿಯಲು ನೋಡಿ
ಸುತ್ತಲು ಮುತ್ತಲು ನೋಡಲು ಬೇಡಿ
ಕತ್ತಲೆ ಬೆಳಕಿಗೆ ಮನಗೊಡಬೇಡಿ
ನೆಟ್ಟಗೆ ಮುಂದೆ ಸಾಗುತ ನೋಡಿ

ಬೆಟ್ಟ ಸುತ್ತುವ ಸುಸುಮ್ನ ನಾಡಿ
ಗುಟ್ಟನು ತಿಳಿಯುತ ಅದರೊಳಗೂಡಿ
ಕೆಟ್ಟ ಭಾವದ ಬಲುಬಂಧವ ದೂಡಿ
ನೆಟ್ಟಗೆ ಮುಂದಕೆ ಸಾಗುತ ನೋಡಿ

ಆರನೆ ಬೆಟ್ಟದ ತುದಿಯೊಳು ನೋಡಿ
ಮೂರನೆ ಗವಿಯೊಳು ಪರಿಕಿಸಿ ನೋಡಿ
ಬೇರಾವನಾದಾನಂದದೊಳ್ ಕೂಡಿ
ಮೂರನೆ ಗವಿಯನು ಪರಿಕಿಸಿ ನೋಡಿ

ಒಂದನೆ ಗವಿಯೊಳು ಪರಿಕಿಸಿ ನೊಡಿ
ಸಂದಿಪ ಎರಡನೆ ಗವಿಯೊಳು ತೂರಿ
ಮುಂದಿಹ ಬೆಟ್ಟದಾ ತುದಿಯೊಳು ನೋಡಿ
ವಂದಿಸಿ ಗಣಪನ ಪೂಜೆಯ ಮಾಡಿ

ಅಂಬಾರ ಕಂದ್ರುಪ ಬೆಟ್ಟವ ನೋಡಿ
ತುಂಬಿದಾ ಬಯಲಿನೊಳ್ ಅಲೆದಾಡಿ
ಸಾಂಬಸದಾಶಿವ ಲಿಂಗನೊಳ್ ಕೂಡಿ
ಬಿಂಬವದರೊಳಗೆ ಏಕವ ಮಾಡಿ

ಕೀಟ ಬ್ರಮರದ ರೂಪವ ನೋಡಿ
ನೋಟದ ರೂಪವ ತಾ ದಿಟ ಮಾಡಿ
ಸಾಟಿಯನೀವುದು ಜಗಕದುನೋಡಿ
ದಾಟಿಯ ನಂದನರೊಳು ಕೂಡಿ


## ಬಲು ತುಂಬಿದ ಬಳಗ

ಯಾರು ಅರಿಯರು ನಮ್ಮೂರು
ಗುರುಭಕ್ತರಿಗೊಲಿವುದು ನಮ್ಮೂರು
ಇಂಬು ಕಾಣೋ ನಮ್ಮೂರು
ಬಲು ತುಂಬಿದ ಬಳಗವೆ ನಮ್ಮೂರು

ಅಕ್ಷಯದೊಳಗೆ ನಮ್ಮೂರು
ಬಹು ನಿಕ್ಷೇಪವಿರುವುದು ನಮ್ಮೂರು
ಕಕ್ಷಕಾಣೊ ನಮ್ಮೂರು
ಬಹು ಪಂಚಾಕ್ಷರೀ ಮಹಿಮೆ ನಮ್ಮೂರು

ಪರಾತತ್ಪರವೇ ನಮ್ಮೂರು
ಪರದೇಶಿಗಳಿರುವುದು ನಮ್ಮೂರು
ಮಂಡಲ ತುದಿಯಲೆ ನಮ್ಮೂರು
ಇದ ಕಂಡವರಿಲ್ಲವೊ ನಮ್ಮೂರು

ಪರಿಸೆ ಕಾಣೊ ನಮ್ಮೂರು
ಗುರುಸಭೆಯೊಳಗಿರುವುದು ನಮ್ಮೂರು
ಇಂಬು ಕಾಣೊ ನಮ್ಮೂರು
ಬಲು ತುಂಬಿದ ಬಳಗವೆ ನಮ್ಮೂರು



## ಎಂಥ ಸೋಜಿಗವಾಯಿತೆಲೆ ಕಾಂತೆ ?

ಎಂಥ ಸೋಜಿಗವಾಯಿತೆಲೆ ಕಾಂತೆ
ಇದರಂತಸ್ತವನ್ನು ಕೇಳೆ ಮತಿವಂತೆ

ಹೂವೊಂದು ಉಡವನು ಹಡದೀತು
ಬರುವ ಕೋಟಿಗಳೆಂಟನು ಬಡದೀತು
ಪ್ರಾಣವಿಲ್ಲದ ಶಿಶು ಹುಟ್ಟೀತು
ಹೆತ್ತ ಬಾಣಂತಿಯನು ನುಂಗಿಬಿಟ್ಟೀತು

ಕೋಗಿಲೆ ಗಿಡುಗನ ಕೊಂದೀತು
ಚಿಕ್ಕಮೊಲ ಬೇಟೆನಾಯಿಗಳ ಕಚ್ಚೀತು
ಕಾಗೆ ಗೂಗೆಯ ತಿಂದು ತೇಗೀತು
ಕಂಡ ಬೋಗಿಯು ಹೆಡೆಯೆತ್ತಿ ತೂಗೀತು

❍

## ನಾಗಲಿಂಗಯೋಗಿ

ನಾಗಲಿಂಗಯೋಗಿ ಹುಟ್ಟಿ ಬರತೀನಂದಾವ
ಇನ್ನು ಯಾಕಬರಲಿಲ್ಲ ಸ್ವಾಮಿ ನೆನಸೋದ ಜೀವ

ಸ್ನಾನ ಸಂಜನ ಜಪತಪ ಮಾಡಲಿಲ್ಲಾವ
ಸುಡುಗಾಡಾದಾಗ ಸಿದಿಗೆ ಹೊತ್ತು ಊರಾಗೆ ಮೆರೆದಾವ


ಕ್ಯಾಟ್ಯಾಗೊಕ್ಕು ಕೂಟಿಲಂಗಡಿ ಲೂಟಿ ಮಾಡ್ವಾವ
ಗಲ್ಲದಾಗ ರೊಕ್ಕ ತಂದು ಸೂರಿಮಾಡಿದಾವ

ದ್ಯಾಮವ್ವ ದುರುಗವ್ವ ಡಾಗಿನ ಮಾರಿ ಸೆರಿಯ ಕುಡಿದಾವ
ಸಮಗಾರ ಭೀಮವ್ವ ತಾಯಿಯೆಂದು ಮೊಲೆಯ ಕುಡಿದಾವ

ನಾರುಣ್ಣು ಆದ ಕಾಲು ಕುಲಮ್ಯಾಗಿಟ್ಟಾವ
ಕುಂಬಾರವನ ತಿದಿಯ ಮಾಡಿ ಜಗ್ಗಾಕಚ್ಯಾವ

ನೆಲ ಊದಿ ಉರಿಹಚ್ಚಿ ಮಾಯವಾದಾವ
ನೆನಸಿದವರ ಕನಸಿನೊಳಗ ಇದ್ದಾ ಇರಾವ

❍



## ಶಿವನ ಮನೆ

ಮನೆ ಮನೆ ಯಲ್ಲೈತು ಮನೆ
ನೀನೋದ ಮಠ ನಮ್ಮ ಗುರುಮನೆ
ಸಂಸಾರ ಮಾಡಲು ಬರೀ ಮನೆ
ನೀ ಸತ್ತ ಮೇಲೆ ಸುಡುಗಾಡು ಮನೆ

ಒಂದು ದೇಹಕೆ ಒಂಬತ್ತು ಮನೆ
ಇದು ಬಾಳಗೆಟ್ಟ ಬರೀ ನಾಮಮನೆ
ಬಣ್ಣಗೆಟ್ಟ ಬಂಡಾಟದ ಮನೆ
ಇದು ತಿಂದುಕೆಡಿಸಿದ ಎಂಜಲು ಮನೆ

ಆತ್ಮದೊಳಗೆ ಒಂದು ಜ್ಞಾನ ಮನೆ
ಇದು ಅರಸ ಪ್ರಧಾನಿಗೆ ಸರಸ ಮನೆ
ತುಡುಕು ಮಾಡಿದರೆ ಎಡಮುರಿ ಕಟ್ಟಿ
ದೀಕ್ಷೆ ಕೊಡುವ ಸದ್ಗುರುವಿನ ಮನೆ

ಮಳೆಬಂದರೆ ಸೋರೊ ಮನೆ
ಸೋರಿದ ಬಳಿಕ ಬರೀ ಗಾಳಿಮನೆ
ನೀ ತಿಳಿದ ನೋಡು ಇದು ಯಾರ ಮನೆ
**ಗುರುಬ್ರಹ್ಮ ಚಿದಾನಂದ** ಶಿವನ ಮನೆ

❍

## ಶಿವನು ಕೈಲಾಸದಲ್ಲಿ

ಗುರುವೆ ನಿನ್ನಾಟ ಬಲ್ಲವರ್‍ಯಾರುಂಟು ?
ಶಿವನೆ ನಿನ್ನಾಟ ಬಲ್ಲವರ್‍ಯಾರುಂಟು ?

ಕುಂಬಾರ ಗುಂಡಪ್ಪನ ಮನೆಯ
ಕುಡಿಕೆ ಶಬ್ದಾವ ಕೇಳಿ
ಶಿವನು ಕೈಲಾಸದಲ್ಲಿ ಥೈ ಥೋಂ ಎಂದು ಕುಣಿದು

ಶಿವನೆ ನಿನ್ನಾಟ ಬಲ್ಲವರ್‍ಯಾರುಂಟು ?
ಗುರುವೆ ನಿನ್ನಾಟ ಬಲ್ಲವರ್‍ಯಾರುಂಟು ?

ಹಡಪಾದ ಅಪ್ಪಣ್ಣನ ಮನೆಯ
ಸೋಲಿನ ಶಬ್ದಾವ ಕೇಳಿ
ಶಿವನು ಕೈಲಾಸದಲ್ಲಿ ಥೈ ಥೋಂ ಎಂದು ಕುಣಿದು

ಶಿವನೆ ನಿನ್ನಾಟ ಬಲ್ಲವರ್‍ಯಾರುಂಟು ?
ಗುರುವೆ ನಿನ್ನಾಟ ಬಲ್ಲವರ್‍ಯಾರುಂಟು ?


ಮಡಿವಾಳ ಮಾಚಪ್ಪನ ಮನೆಯ
ಮುಡಿಯ ಸೃಂಗರವ ನೋಡಿ
ಶಿವನು ಕೈಲಾಸದಲ್ಲಿ ಥೈ ಥೋಂ ಎಂದು ಕುಣಿದು

ಶಿವನೆ ನಿನ್ನಾಟ ಬಲ್ಲವರ್‍ಯಾರುಂಟು ?
ಗುರುವೆ ನಿನ್ನಾಟ ಬಲ್ಲವರ್‍ಯಾರುಂಟು ?

ಹೊಲೇರ ಹೊನ್ನಯ್ಯನ ಮನೆಯ
ಹೊನ್ನ ಪ್ರಸಾದಕ್ಕಾಗಿ
ಶಿವನು ಕೈಲಾಸದಲ್ಲಿ ಥೈ ಥೋಂ ಎಂದು ಕುಣಿದು

ಶಿವನೆ ನಿನ್ನಾಟ ಬಲ್ಲವರ್‍ಯಾರುಂಟು ?
ಗುರುವೆ ನಿನ್ನಾಟ ಬಲ್ಲವರ್‍ಯಾರುಂಟು ?

ಮಾದಾರ ಹರಳಯ್ಯನ ಮನೆಯ
ಮೋಜಿನಂಬಲಿ ಸವಿದು
ಶಿವನು ಕೈಲಾಸದಲ್ಲಿ ಥೈ ಥೋಂ ಎಂದು ಕುಣಿದು



ಶಿವನೆ ನಿನ್ನಾಟ ಬಲ್ಲವರ್‍ಯಾರುಂಟು ?
ಗುರುವೆ ನಿನ್ನಾಟ ಬಲ್ಲವರ್‍ಯಾರುಂಟು ?

ಕುರುಬರ ಬೀರಪ್ಪನ ಮನೆಯ
ಕಂಬಳಿ ಗದ್ದುಗೆ ನೋಡಿ
ಶಿವನು ಕೈಲಾಸದಲ್ಲಿ ಥೈ ಥೋಂ ಎಂದು ಕುಣಿದು

ಶಿವನೆ ನಿನ್ನಾಟ ಬಲ್ಲವರ್‍ಯಾರುಂಟು ?
ಗುರುವೆ ನಿನ್ನಾಟ ಬಲ್ಲವರ್‍ಯಾರುಂಟು ?

## ಶಿಷ್ಯ ಗುರುವನು ನುಂಗಿ

ಎಂಥ ಕಪ್ಪೆ ಹದಿನಾರು ಗಾವುದ ಸರ್ಪನುಂಗಿತಣ್ಣಯ್ಯ
ಸರ್ಪ ಹಾವುಗಾರನ ನುಂಗಿ ಹಾವುಗಾರನ ಪುಂಗಿ ನುಂಗಿ
ನೋಡಲಿಕ್ಕೆ ಬಂದವರ ನೆಲ ನುಂಗಿತಣ್ಣಯ್ಯ

ಅಟ್ಟ ಎದ್ದು ಬೆಟ್ಟವ ನುಂಗಿ ತೋಟ ಎದ್ದು ಬೇಲಿಯ ನುಂಗಿ
ತೋಟ ಮಾಡಿದ ರೈತನ ಬಳ್ಳಿಯು ನುಂಗಿತಣ್ಣಯ್ಯ

ಸುಣ್ಣ ಎದ್ದು ಗ್ವಾಡೆಯ ನುಂಗಿ ಗ್ವಾಡೆ ಎದ್ದು ಊಡೇವ ನುಂಗಿ
ಗ್ವಾಡೆ ಕಟ್ಟಿದ ಗೌಂಡ್ಯಾಗ ನಡುವಿನ ಮಾಡ ನುಂಗಿತಣ್ಣಯ್ಯ

ಇಲಿಯು ಬಂದು ಬೆಕ್ಕನು ನುಂಗಿ ತೊಲೆಯು ಜಂತಿಯ ನುಂಗಿ
ಬಲವುಳ್ಳ ಆನೆ ಬಂದು ಹೇನ ನುಂಗಿತಣ್ಣಯ್ಯ

ಶಿಷ್ಯ ಬಂದು ಗುರುವನು ನುಂಗಿ ಗುರುವು ಎಲ್ಲಾನುಂಗಿ
**ಅಂದೆವಾಡಿ ಗೌಬೀಷ್ಯಾಗೆ** ಗುರುಪಾದವ ನುಂಗಿತಣ್ಣಯ್ಯ

❍

## ನಾದ ದನಿಗಳನೆ

ಕೋಳಿ ಕೂಗಿತು ಮಗಳೆ ಬೆಳಗಾಯಿತೇಳಮ್ಮ
ಹೇಳಲಿದರೊಳು ಮರ್ಮ ಬಹಳವಿದೆಯಮ್ಮಾ

ಮೂರು ನದಿಗಳ ಸಂಗಮಸ್ಥಳದೊಳಾಡುತಿಹುದು
ಆರು ವರ್ಣಗಳದರ ಮೈಯ್ಯೊಳುಂಟ
ಹಾರಿ ಮೇಲಕ್ಕೆ ಹಂಸಂಗಳೆರಡು ನುಂಗುತ
ಈರ್ರೈದು ನಾದ ದನಿಗಳನೆ ತೋರಿ

ಹಲವು ಮಂತ್ರದೊಳದರ ಹೆಸರೇ ಮೊದಲಿರುತಿಹುದು
ನೆಲಸಿಹವು ಚಂದ್ರತಾರೆಗಳದರೊಳು
ಜಲಜ ವೈದ್ಯರ ಮೇಲೆ ಮನೆ ಮಾಡಿಕೊಂಡಿಹುದು
ಸಿಲುಕದಾರಿಗೆ ಕೈಗಳಿಂದ ಪಿಡಿಯಲ್ಕೆ

ಒಂದು ಬೇರದರ ದನಿಗೇಳಿದವರಿಗೆ ಮುಂದೆ
ಎಂದೆಂದಿಗೂ ನಿದ್ರೆ ಬಾರದಿಹುದು
ತಂದೆ ತಾಯಿಲ್ಲದುದಿಸಿ ಅಳಿದು ಪೋಗದಿದ
ರಂದವನು **ಗುರುಸಿದ್ಧ** ದೇವನೆ ಬಲ್ಲ

○

## ಎಂತ ಮಾತಾಡಿದನೆ ?

ಎಂತವನೆಂತವನೆ ನಮ್ಮ ಗುರು
ಎಂತ ಮಾತಾಡಿದನೆ
ಕಾಂತೆಯೇ ನೀನಿಂದು ಏಕಾಂತ ಬಾರೆಂದು
ಎಂತ ಮಾತ್ಹೇಳಿದನೆ.

ಆರನ್ನ ಅಳಿ ಎಂದನೆ ನಮ್ಮ ಗುರು
ಮೂರನ್ನ ಬಿಡೆಂದಾನೆ
ಆರು ಮೂರೊಂಬತ್ತು
ಕುಟ್ಟಿ ಧೂಳನು ಮಾಡಿ
ಗಾಳಿಗೆ ತೂರೆಂದನೆ ನಮ್ಮ ಗುರು

ಗುರುಪೂಜೆ ಮಾಡೆಂದನೆ
ನಮ್ಮ ಗುರು ಶರಣರಿಗೆ ಎರಗೆಂದನೆ
ಶರಣರ ಬಳಿ ನೀ ಮೋಕ್ಷ ಪಡಿದು
ಮನೆಗಿನ್ನು ಹೋಗೆಂದನೆ ನಮ್ಮ ಗುರು

❍


## ನಿಜಶರಣ

ಎಷ್ಟು ವರ್ಣಿಸಲೆ ಅಗಾಧ ಗುರುವಿನ ಲೀಲಾ
ಬೋಧಿಸಿ ಪಾವನ ಮಾಡಿದ
ಅಂತರಂಗದೊಳು ಶಿವಲಿಂಗ
ನೀರೊಳು ಜ್ಯೋತಿ ಉರಿದಂಗ
ನೀ ತಿಳಿದುಳಿಯೋ ಅಗಾಧ ಗುರುವಿನ ಲೀಲಾ

ಇದು ನರಜನ್ಮ ತಿರುಗಿ ಬರೋದಿಲ್ಲ ಪುನಃ
ನೀ ತಿಳಿಯೋ ಆತ್ಮದ ಖೂನ
ತಿಳಿದವನೆ ಯೋಗಿ ನಿಜ ಶರಣ
ಅವನಿಗಿಲ್ಲೊ ಜನನ ಮರಣ
ನೀ ತಿಳಿದುಳಿಯೋ ಅಗಾಧ ಗುರುವಿನ ಲೀಲಾ

ಸತ್ಯಶರಣರು ಮೂರು ಲೋಕಕೆ ಮಹಾಪಿತರು
ಪ್ರಾಣ ಪ್ರತಿಷ್ಠೆ ಮಾಡುವರು
ಧರೆಯೋಳು ಚಿಗರಿಯ ವಾಸ
ಅಲ್ಲಿ ಇರುವುದು **ಗುರುಬಸವೇಶ**
ಜಗದುದ್ಧಾರ ಅಗಾಧ ಗುರುವಿನ ಲೀಲಾ.

❍



## ತುಂಬಿದ ಬೆಳಕು

ಆರೂ ಅರಿಯರು ನಮ್ಮೂರು
ಗುರುಭಕ್ತರಿಗೊಲಿವುದು ನಮ್ಮೂರು

ಅಂಬರದೊಳಗೆ ನಮ್ಮೂರು
ತ್ರ್ಯಂಬಕನಿರುವುದು ನಮ್ಮೂರು
ಇಂಬುಕಾಣೋ ನಮ್ಮೂರು
ತುಂಬಿದ ಬೆಳಕು ನಮ್ಮೂರು

ಅಕ್ಷಯದೊಳಗೆ ನಮ್ಮೂರು
ನಿಕ್ಷೇಪವಿರುವುದು ನಮ್ಮೂರು
ಲಕ್ಷ ಕಾಣೋ ನಮ್ಮೂರು
ಪಂಚಾಕ್ಷರಿ ಮಹಿಮೆ ನಮ್ಮೂರು

ಬಯಲಿಗೆ ಬಯಲೇ ನಮ್ಮೂರು
ಬಯಲ ಬ್ರಹ್ಮವೇ ನಮ್ಮೂರು
ಭವಹರನಿರುವುದು ನಮ್ಮೂರು
ಭವಪಾಶವಳಿವುದು ನಮ್ಮೂರು

ಮಂಡಲ ತುದಿಯಲಿ ನಮ್ಮೂರು
ಇದ ಕಂಡವರಿಲ್ಲ ನಮ್ಮೂರು
ಖಂಡಿತ ಜಗದೊಳು ನಮ್ಮೂರು
ನಡುಮಂಡಲ ಸ್ಥಳದೊಳು
ನಮ್ಮೂರು

ಪರಾತ್ಪರದೊಳು ನಮ್ಮೂರು
ಪರದೇಶಿಗಳಿರುವುದು ನಮ್ಮೂರು
ಪರಿಸೆ ತುಂಬಿತು ನಮ್ಮೂರು
ಗುರುಸಭೆಯೊಳಗಿರುವುದು
ನಮ್ಮೂರು

❍

## ಶಿವಯೋಗಿ

ಯೋಗಿ ಬಂದನೋ ಶಿವಯೋಗಿ ಬಂದನೋ
ಭೋಗ ಸುಖವ ತ್ಯಾಗ ಮಾಡಿ
ಆಗಮೋಕ್ತದಿಂದ ನಡೆವ

ತತ್ತ್ವಮಸಿ ಮಹಾಕಾವ್ಯ
ತತ್ತ್ವ ತಿಳಿಸಿ ಮಾಯ ಮೋಹ
ಕತ್ತಲೆಯ ಕಡಿದು ಚಿತ್ತ
ನಿತ್ಯದಲ್ಲಿ ನಿಲ್ಲಿಸುವಂಥ

ತಮ್ಮ ತಾವು ಮರೆತು ಜನರು
ಹಮ್ಮಿನೊಳಗೆ ಬಿದ್ದಿರುವರು
ಕರ್ಮವನ್ನು ಕಡಿದು ಪರ
ಬ್ರಹ್ಮವನ್ನು ತೋರಿಸುವಂಥ

ತಂದೆ ಭವತಾರಕನ ಪಾದ
ಹೊಂದಿದವರಿಗೆಲ್ಲ ಪರಮಾ
ನಂದ ಪದವಿ ಕೊಟ್ಟು ದಯಾ
ಸಿಂಧು ಮುಕ್ತಿ ಪಡಿಸುವಂಥ

## ಸಮ್ಮನಿರು ನಾಲಿಗೆ

ಸಮ್ಮನಿರು ನಾಲಿಗೆ ಸುಮ್ಮನಿರು ನಾಲಿಗೆ
ಸಾಕ್ಷಾತ ನಾಲಿಗೆ ಸುಮ್ಮನಿರು
ಸುಮ್ಮನಿದ್ದರೆ ನೀನು ಬ್ರಹ್ಮನಾಗುವಿ
ಸುಮ್ಮನಿದ್ದೆನೆಂಬ ಹಮ್ಮನಳಿದು

ಪರರ ನಿಂದಿಸಬೇಡ ಪರವಸ್ತು ಮರೆಯ ಬೇಡ
ಪರತರಾನಂದವನು ಬಿಡಲೇ ಬೇಡ
ಪರರು ಎನ್ನವರೆಂದು ಭೇದ ಮಾಡಲೆ ಬೇಡ
ಪರಕೆ ಪರವಾದ ಪರವಸ್ತು ನೀನು

ಕೋಪ ತಾಪವು ಬೇಡ ಕೋಪದವರೆನ ಬೇಡ
ಕೋಪದವರ ಕೂಡ ಸಹವಾಸ ಬೇಡ
ಕೋಪತಾಪವು ಮೀರಿ ಸೋಪಾನವನೇರಿ
ಭೂಪ ಚಿದ್ರೂಪನು ತಾನೆ ಆಗಿ

ಶಾಂತ ಗುರುವಿನ ಹೊಂದಿ ಶಾಂತಗಣದೊಳಗಾಡಿ
ಶಾಂತನಾಗಿದ್ದರೆ ಶಾಂತಿಯಹುದು
ಶಾಂತ ನಿರುಪಾಧಿಯ ಕಾಂತಿಯೊಳು ಮನಮುಳುಗಿ
ಶಾಂತ ಸರ್ವಾಂತರ್ಯಾಮಿಯಾಗಿ

❍

## ಮಂಗಳವಾಗಿಹುದು

ಮಂಗಳವಾಗಿಹುದೆ ಜಯ ಜಯ
ಮಂಗಳವಾಗಿಹುದೆ

ಕಂಗಳ ಕೊನೆಯಲಿ ತಳತಳ ಹೊಳೆಯುವ
ತಿಂಗಳು ಬೆಳಕಿನ ತಿಳಿರಸ ಉಜ್ವಲ

ರವಿಶಶಿ ತಾರೆಗಳು ಬೆಳಗುವ
ಪರಿಮಳ ಚಿತ್ಕಳೆಯೊ
ಕವಿಯೊಳಗ್ಹೊರಗೊಂದು ಎಂಬುದು ತೋರ್ಪದು

ವಿರತಿ ಎಂಬುವ ಭಕ್ತಿ
ನಿರತವಾಗುವ ತೈಲ
ಎರಡು ಒಂದಾಗಿಹ ಅರಿವೆಂಬ ಜ್ಯೋತಿ
ಅವಿರಳ **ಮಹಾಗುರುಲಿಂಗನ** ನೆನೆಯುತ

❍

## ಜ್ಞಾನದ ಗಂಜಿಯ ತಳೆದು

ಮಡಿಯ ಮಾಡುವರಮ್ಮ ನಾವು ಒಳ್ಳೆ
ಮಡಿವಾಳರಹುದಮ್ಮ ಕೇಳಿರಿ ನೀವು

ಹತ್ತು ಮನೆಗೆ ಸರಿಯಾಗಿ ತಂ
ದೆತ್ತಿದ ಕರ್ಮದ ಅರಿವೆ ಮುಂತಾಗಿ
ಹತ್ತು ನಾಲ್ಕಾರು ಒಂದಾಗಿ ಮೂರು
ಸುತ್ತಿನ ಮೇಲೆ ಆಗಲೆ ಸಾಗಿ ಪೋಗಿ

ಗುಣವೆಂಬ ಹುಬ್ಬೆಯನಿಟ್ಟು ಜಡ
ವೆನಿಪ ಮೈಲಿಗೆ ಒಟ್ಟಿ ಭಾಂಡದೊಳಿಟ್ಟು
ಘನ ಬೋಧ ಬೆಂಕಿಯ ಕೊಟ್ಟು
ನಾನಾ ದಿನಸಿನ ಭವದ ಕಟ್ಟಿಗೆ ಸುಟ್ಟುಬಿಟ್ಟು

ನಾನೆಂಬೋ ಕಸುರೆಲ್ಲ ಕಳೆದು । ಗುರು
ಧ್ಯಾನದ ನೀರಲ್ಲಿ ಗಟ್ಯಾಗಿ ಶೆಳೆದು
ಜ್ಞಾನದ ಗಂಜಿಯ ತಳೆದು । ನಾನು
ತಾನೆಂಬೋ ನಿಜವಾದ ಬಿಸಿಲಿನೋಳೆಳೆದು

ಎರಡೊಂದು ಗಳಿಗೆ ಏರ್ಪಡಿಸಿ । ಗುರು
ವರಶಾಂತದಲಿ ಗಟ್ಯಾಗಿ ಮಡಿಸಿ
ಸರಿಮನೆ ಹಾರಕ್ಕೆ ಕೊಡಿಸಿ। ನಿತ್ಯ
ಗುರುಪುತ್ರ ಬಳಗಕ್ಕೆ ವುಡಿಗೆಯನುಡಿಸಿ

ದಿನ ದಿನ ಮಾಡುವುದಲ್ಲ । ಒಂದು
ದಿವಸ ಮಾಡಿದ ಗಂಜಿ ಮಾಸುವುದಲ್ಲ
**ಹನುಮಂತ ಗುರುರಾಯ** ಬಲ್ಲ । ಒಳ್ಳೆ
ನಿಜವಾದ ಮುಕ್ತಿಯ ಪಡಕೊಂಡೆವೆಲ್ಲಾ

❍

## ತುಂಗಭದ್ರೆಯ ಉದಕವ ತಂದು

ಬರಲಿಲ್ಲ್ಯಾಕೊಂದಿರುಳಿನ ರಾತ್ರಿ
ಸರಿಹೊತ್ತಿನ ತನಕ ಕಾದಿದ್ದೆ


ಹಿತ್ತಲಿಗೋಡಿ ಕನ್ನವ ಕೊರದು
ಹೋಗುವಂಗೆ ಬರುವಂಗೆ ಮಾಡಿದ್ದೆ


ಅತ್ತೆಯಾನಾದರು ಬಿಟ್ಟಿದ್ದೆ ನಾ
ಮಾವನ ಕಂಭಕೆ ಕಟ್ಟಿದ್ದೆ
ಕತ್ತಲೆ ಮನೆಯೊಳು ಜೋಕಿಯ ಬೆಳಕಿಲಿ
ಬೆತ್ತಲು ನಾನು ಕುಳಿತಿದ್ದೆ

ಮಂಗಳವಾರವ ಮಾಡಿದ್ದೆ ನಾ
ಅಂಗಳ ಕಸಬೂದಿ ತೆಗೆದಿದ್ದೆ
ತುಂಗಭದ್ರೆಯ ಉದಕವ ತಂದು
ಕಂಗಳ ತುಂಬ ಬಡಿಸಿದ್ದೆ

ಹಾಸಿಗೆ ಮಂಚವ ಹಾಸಿದ್ದೆ ನಾ
ಲೇಸಾಗಿ ತಲೆದಿಂಬು ಮಾಡಿದ್ದೆ
**ಈಶ ಮಡಿವಾ**ಳನ ದತ್ತ ದಿಗಂಬರ
ಧ್ಯಾನದೊಳಗೆ ನಾ ಮಲಗಿದ್ದೆ

❍





## ಬ್ರಹ್ಮಕುಂಬಾರ

ಬ್ರಹ್ಮಕುಂಬಾರ ನೀನಾದೆ ನೀನಾದೆ
ಬ್ರಹ್ಮಾಂಡ ತುಂಬಿದ ಗಡಿಗೆ ನೀನೆ ಮಾಡಿದೆ

ಧರ್ಮ ಎಂಬೊ ಕುಳವನ್ನ ನೆಲಕೆ ಮೀಟಿದೆ
ಧರ್ಮ ಎಂಬೊ ದಂಡಿಗೆ ಹಿಡಿದು ತಿಗರಿ ತಿರುಗಿದ್ದೆ

ಮುನ್ನೂರ ಅರವತ್ತು ಗಡಿಗೆಗಳನು ನೀನೆ ಮಾಡಿದ್ದೆ
ಮುನ್ನೂರ ಅರವತ್ತು ಪೆಟ್ಟುಗಳನು ನೀನೆ ಕೊಟ್ಟಿದ್ದೆ

ಧರ್ಮ ಎಂಬೊ ಆವಿಗೆ ಒಳಗೆ ಕಸವ ತೆಗೆದಿಟ್ಟೆ
ಗುರು ಎಂಬೊ ಮೂಲಮಂತ್ರ ಪುಟವ ಮಾಡಿ ಮಡಿಕೆ ಸುಟ್ಟಿದ್ದೆ

ಸತ್ತು ಹುಟ್ಟೋ ಸಂತೆ ಒಳಗೆ ವ್ಯಾಪಾರ ಮಾಡುತಿದ್ದೆ
ನಮ್ಮ ಬಹುವನಳ್ಳಿ **ಸಂಕಾವಧೂತ**ನೊಳಗೆ ಅಡಕವಾಗಿದ್ದೆ

❍

## ನಿನಗೊಪ್ಪಿದ ಗಂಡನ ಪಡೆಯವ್ವ

ಸಾಕಾಯಿತು ಈ ಊರವ್ವ
ಬಲು ಜೋಕಾಗಿ ಹೋಗೋಣ ಬಾರವ್ವ
ಒಂಬತ್ತು ಬಾಗಿಲ ಊರವ್ವ
ನಾವಿರುವುದು ಮನೆ ಬಹು ದೂರವ್ವ

ವೀಳಯ ಶಾಸ್ತ್ರಕೆ ಹೋಗವರೆ
ಅವರು ಮಾಳಿಗೆ ಮನೆಯಲಿ ಕುಂತವರೆ
ಹೋಳಿಗೆ ತುಪ್ಪ ಉಂಡವರೆ
ನಿಮ್ಮ ನೆಪ ನೋಡಬೇಕೆಂದು ಬಂದವರೆ

ಸಾಕಾಯಿತು ಈ ಊರವ್ವ
ಬಲುಜೋಕಾಗಿ ಹೋಗೋಣ ಬಾರವ್ವ
ಹಿಡಿ ಹಿಡಿ ಹಿಡಿ ಗುರುಪಾದವ
ಹುಡುಗಾಟದ ಬುದ್ಧಿ ಸಾಕವ್ವ

ಚಪ್ಪರದ್ಹಟ್ಟಿಗೆ ನಡೆಯವ್ವ
ನಿನಗೊಪ್ಪಿದ ಗಂಡನ ಪಡೆಯವ್ವ
ತಟ್ಟೇಲಿ ಇರುವ ತಾಳಿಯ ತೆಗೆದು
ಮುಪ್ಪೂರಿ ಮಡಿವಾಳಿಗ್ಹಾಕವ್ವ

ಮಾವ ಮೈದರು ಊಟಕೆ ಬಂದರೆ
ಕಾವಲಾಡ ಬೇಡ ಕಾಣವ್ವ
ಅತ್ತೆಮಾವರು ಗಂಡನಿಗೆ ನೀನು
ಬಹಳ ನೇಮದಿಂದಿರವ್ವ

ಸಾಕಾಯಿತು ಈ ಊರವ್ವ
ಬಲು ಜೋಕಾಗಿ ಹೋಗೋಣ ಬಾರವ್ವ
ಒಂಬತ್ತು ಬಾಗಿಲ ಊರವ್ವ
ನಾವು ಜೋಕಾಗಿ ಹೋಗೋಣ ಬಾರವ್ವ

❍

## ಗುರುರಾಯನೊಲಿದ ಮೇಲೆ

ಗುರುರಾಯನೊಲಿದಮೇಲಮ್ಮ
ಈ ಧರಣಿಯ ಭ್ರಮೆಗಳು ಇರಬಾರದಮ್ಮ

ಹಿಂದಣ ಸುಕೃತವಿದಮ್ಮ
ಗುರುಬಂದು ತನ್ನಂತೆಗೈದ ಕಾಣಮ್ಮ

ಬಂಧನ ಅರುವಾಯಿತಮ್ಮ
ಮುಕ್ತಿ ಒಂದೆ ಸಾಕು ಇನ್ನೇನು ಬೇಡಕಾಣಮ್ಮ

ನುಡಿದಂತೆ ನಡೆಯಬೇಕಮ್ಮ
ಬಾಳ ಧೃಢಭಕ್ತಿ ಇರಬೇಕು ಮನದೊಳಗಮ್ಮ

ನುಡಿಯೊಳು ವಂಚಿಸಬಾರದಮ್ಮ
ಈ ಒಡಲಿಗೆ ಕಡುಕಷ್ಟ ಬರಬಹುದಮ್ಮ

ವರರಂಭ ಪುರದೊಳಗಿರುವ
ಅಲ್ಲಿ ಕುಂಭಿನಿ ಪೊರೆವ ರೇಣುಕರಿರುವರಮ್ಮ

ನಂಬಿದ ವರಪ್ರಿಯ ನಮ್ಮ
ಗುರು ಎಮ್ಮೊಳಗಿರುವನೆ **ಅಗ್ರೇಶನಮ್ಮ**

❍

# ನೆರಳಿಲ್ಲದ ಗುರು

ನಾನುಟ್ಟ ಬಟ್ಟೆಯು ಒಂಭತ್ತು ಹರಕು
ಹರಕು ಬಟ್ಟೆನುಟ್ಟಕೊಂಡು ನನ್ನದೊಂದು ಝೋಕು
ಒಳ್ಳೆ ಷೋಕು
ಮಾನನಿಧಿಗಳೆ ನೋಡಿರಿ ಇದರ ಕುಣಿದಾಟ
ಮನಹರಿದಾಟ। ಇದರ ಹೋರಾಟ
ಅನ್ನಮದದಾಟ
ಇಂದ್ರಜಾಲದ ಬಟ್ಟೆ ಅಂದ ನೋಡಿರಿ
ಇದರ ಚಂದ ನೋಡಿ
ಚಂದ್ರನಂತೆ ತೋರ್ವನೆಂದು
ತನಗೆ ತಾನೆ ಹಿಗ್ಗುತ್ತೈತೆ
ಎರಡು ಹರಕಿನೊಳಗೆ ಬೆಳಕು ಕಾಣುತ್ತೈತೆ
ಜಗವ ನೋಡುತ್ತೈತೆ
ಬ್ಯಾರೆ ಎರಡು ಹರಕಿನೊಳು
ಗಾಳಿ ತೂರುತ್ತೈತೆ ಓಡಾಡುತ್ತೈತೆ
ಇನ್ನೆರಡು ಹರಕಿನೊಳು ಶಬ್ದ ಕೇಳುತ್ತೈತೆ
ಅದು ತಿಳಿಯುತ್ತೈತೆ
ಇನ್ನೊಂದು ದೊಡ್ಡಹರಕು। ದಿನಸು ತುಂಬುತ್ತೈತೆ
ಅದು ನುಂಗುತ್ತೈತೆ
ನುಂಗಿದ ದಿನಸೆಲ್ಲ ಕೆಳಗಿನ ಹರಕಿನಲ್ಲಿ
ಹೋಗುತ್ತೈತೆ ಜಾರಿ ಹೋಗುತ್ತೈತೆ
ಸಂಗಿ ಬಿಂಗಿ ಇನ್ನೊಂದು ಹರಕಿನೊಳು
ನೀರು ಸೋರುತ್ತೈತೆ । ಮಾಯಿ ಅಲ್ಲೈತೆ
ಎಂಥಾ ಮಾಯದ ಬಟ್ಟೆ ನೇದ
ಸಾಲೆಗಾರ । ಪದ್ಮಸಾಲೆಗಾರ
ನಿಂತರೆ ನೆರಳಿಲ್ಲದ ಗುರು ಮಾಯಕಾರ । ಬಹು ಖುಷಿಗಾರ
ಇಂತು **ಗುರು ತಿಪ್ಪೇಸ್ವಾಮಿ** ನುಡಿಸಿದ ಪದಗಾರ
ನರಸಿಂಹ ದಾಸನು ಕಿಂಕರ । ಗುರು ಕಿಂಕರ

## ಮೋಹದ ಕಂದ

ಅಯ್ಯೋ ಮೋಹದ ಕಂದ ಕಯ್ಯೊಳು ಅಗಲಿದ
ಅಯ್ಯೋ ಶಿವನೆ ಕೊಟ್ಟು ಒಯ್ಯುದು ಧರ್ಮವೇನೊ

ನೊವ್ವ ತಿಂಗಳು ದಿನ ಹತ್ತು ನಿನ್ನ ಹಡೆದಿದ್ದೆ
ನೆತ್ತಿಗೆಣ್ಣೆಯನ್ನೊತ್ತಿ ಎತ್ತಿ ಮುದ್ದಾಡಲಿಲ್ಲ

ಬೆಣ್ಣೆ ಮೊಲೆಹಾಲನುಣಿಸಿ ಗಿಣ್ಣ ಬಟ್ಟಲಲಿ
ಜೋ ಜೋ ಯೆಂಬೊ ತೊಟ್ಟಿಲ ಕಟ್ಟಿ ಜೋ ಎಂದು ಪಾಡಲಿಲ್ಲ

ಸಣ್ಣ ಕಡಗವ ಕಟ್ಟಿ ಕರಿ ಅಂಗಿಯ ಹೊಲಿಸಿ
ಬಣ್ಣ ಕುಲಾವಿ ಕಟ್ಟಿ ಅಂದವ ನೊಡಲಿಲ್ಲ

ಚಂದದ ಹರಳೋಲೆಗಳ ಮಾಡಿಸಿ ಕಂದಮ್ಮ
ಚಂದ ಚಂದದಲಿ ನಿನಗಿಟ್ಟಂದವ ನೋಡಲಿಲ್ಲ

ಬೆಂಡು ಬತ್ತಾಸು ಜಿಲೇಬಿಯ ಕೊಂಡು ಉಡಿಯಲಿ ಕಟ್ಟಿ
ತಿಂದನೆಂದೆಂಬ ಬಾಯ ಒಂದುಮಾಡಿದೆ ಶಿವನೆ

ಧರೆಯೊಳು ಹರಿಹರ ದೊರೆವ್ಯಾಟ **ವೃಷಭನ**
ಕರುಣೆ ತಪ್ಪಿದ ಮೇಲೆ ಕಾಯ್ವರಿನ್ನಾರು ಶಿವನೆ ?

❍

## ಅಂತಃಕರಣ ನೋಡಮ್ಮಾ

ಅಂತಃಕರಣ ನೋಡಮ್ಮಾ ಗುರುರಾಯ
ತನ್ನಂತೆ ಮಾಡಿದ ಎನ್ನಕಾಯ

ಮುತ್ತು ಸಿಂಪಿಯೊಳಗೆ ಪುಟ್ಟಿದಂತೆ
ಚಿತ್ತದೊಳು ಚಿನ್ಮಯ ಬೆರೆದಂತೆ
ಮುತ್ತು ಕೊಟ್ಟನು ಇಟ್ಟುಕೊಳ್ಳಂತೆ

ಭೃಂಗಸಂಗದಿ ಕೀಟಕವಹುದಂತೆ
ನಿ:ಸಂಗ ನಿರ್ಗುಣ ಬ್ರಹ್ಮ ನೀ ಹೌದಂತೆ
ಹಿಂಗಿಹೋಯಿತು ಭವಕೆ ಬರದಂತೆ

ಅಂತು ಇಂತು ಅಂಬುವ ಮನಸೇನ ಥರಾ
ಕುಂತಹರ ಹೇಳಿದ ಮಾತೀಲೆ ಉದ್ಧಾರಾ
ನಿಶ್ಚಿಂತನಾದೇನೊ **ಮೌನೇಶ್ವರ**

❍

## ದಾರಿ ಆವುದಣ್ಣ ?

ಊರಿಗೆ ನಾ ಹೋಗಬೇಕಣ್ಣ
ದಾರಿ ಆವುದಣ್ಣ ?
ದಾರಿ ಎನಗೆ ತೋರಬೇಕು
ಮುರಹರನ ಪಾದವಿಡಿದು
ಸೇರಿ ಮುಕ್ತನಾಗಬೇಕು

ಮೂರುದಾರಿಯ ಬಿಡಲಿಬೇಕಣ್ಣ
ವೈರಾಗ್ಯವೆಂಬ ಜ್ಞಾನಮಾರ್ಗದಿ ನಡೆಯಬೇಕಣ್ಣ
ಆರು ಅರಿಯದಂತೆ ಎರಡು ಸೂರ್ಯಚಂದ್ರಗಿರಿಯ ಮಧ್ಯೆ
ತೂರಿ ಪೋಗಿ ನೋಡಿದರೆ ತಾರಕಬ್ರಹ್ಮನು ಇರ್ಪ

ಹತ್ತುಗ್ರಾಮವ ಸುತ್ತಬೇಕಣ್ಣ
ಮತ್ತೆಂಟು ಗ್ರಾಮವ ಬಿಟ್ಟು ಮುಂದಕೆ ನಡೆಯಬೇಕಣ್ಣ
ಒತ್ತಿಲಾರು ಹಳ್ಳಿಯುಂಟು ಅತ್ತ ತಿರುಗಿ ನೋಡಬೇಡಣ್ಣ
ಚಿತ್ತದೊಳಗೆ ಜ್ಞಾನ ತಿಳಿದು ಹತ್ತಿನೋಡು ಗುಡ್ಡವನ್ನು

ಭಕ್ತಿ ಮಾರ್ಗದಿ ನಡೆಯಬೇಕಣ್ಣ
ಮುಕ್ತಿ ಎಂಬ ಶಕ್ತಿಯನ್ನು ಕೂಡಬೇಕಣ್ಣ
ಯುಕ್ತಿಯಿಂದ ವಿಚಾರವಿಡಿದು ವಿರಕ್ತರ ಸೇವೆಯ ಮಾಡಿ
ಭುಕ್ತ ಶೇಷವನುಂಡು ನಾನು ಇತ್ತ ತಿರುಗಿ ಬಾರದಂತೆ
ಊರಿಗೆ ನಾನು ಹೋಗಬೇಕಣ್ಣ

❍

## ಅರಿವಿನ ದೀಪ

ಅರಿವಿನ ದೀಪವೆಚ್ಚರಿಕೆ ಕಂಡ್ಯ ?
ಬಟ್ಟಬರಿದೆ ಆನಂದ ತೋರುವುದು ಕಂಡ್ಯ ?

ಕಣ್ಣುಕಾಣದೆ ಬಾಗಿಲೊಳಗೆ ಕಂಡ್ಯ । ಮೂರು
ಬಣ್ಣದ ಸೊಡರ ರತ್ನಪಣತೆ ಕಂಡ್ಯ ?

ಎಣ್ಣೆ ಬತ್ತಿಯ ಹಂಗಿಲ್ಲ ಕಂಡ್ಯ । ಅದು
ಸಣ್ಣನಾಗಿ ಉರಿವ ನಿಜಕಂಡ್ಯ ?
ಹುಬ್ಬಳ್ಳಿ ನಟ್ಟ ನಡುವೆ ಕಂಡ್ಯ ?
ಮುಗರಿ ಬಿಟ್ಟು ದಾಟವು ನಿಲಲಿ ಕಂಡ್ಯ ?

ಹಗಲಿರುಳು ಆನಂದಯಿಹುದು ಕಂಡ್ಯ ?
ಇಹಲೋಕ ಪರಲೋಕ ಸಾಧನವು ಕಂಡ್ಯ ?
ನಿತ್ಯ ನೀ ರಕ್ಷಿಸು ನೋಡು ಕಂಡ್ಯ ?
ನಮ್ಮ **ಗುರುಶಾಂತ ಬಸವೇಶ** ತಾನೆ ಕಂಡ್ಯ

❍

## ಈರೇಳು ಲೋಕ ಬೆಳಗುವ ಜ್ಯೋತಿ

ಜ್ಯೋತಿಯೊಳಗೊಂದು ಜ್ಯೋತಿ ಬೆಳಗುತಿದೆ
ನೀ ತಿಳಿಯದೆಯೆತ್ತ್ತೀಡಾಡುವೆ ತನುಜ

ಎಣ್ಣೆ ಬತ್ತಿಗಳ ಹಂಗಿಲ್ಲದ ಜ್ಯೋತಿ
ಉಣ್ಣಲೆಳಸುವರ ಕಾಣದ ಜ್ಯೋತಿ
ಬಣ್ಣಸರವ ನುಂಗಿ ಯುಗಳದ ಜ್ಯೋತಿ
ಕಣ್ಣಿಗೆ ರಚನೆಗೊಪ್ಪುವ ಜ್ಯೋತಿ

ವೇದ ಬ್ರಹ್ಮಾಮೃತವೆಸೆವ ಪಾತ್ರೆ ಜ್ಯೋತಿ
ಮೇದಿನಿಯುಪರಿಯೊಳಮಳ ಸುಜ್ಯೋತಿ
ಕಾದಂಬಿನಿಯೊಳಗಚಲಿತ ಜ್ಯೋತಿ
ಶೋಧಿತ ತತ್ತ್ವವದೆನಿಪ ಜ್ಯೋತಿ

ನೀರಕೊಡನೊಳಿರ್ದು ನಂದದ ಜ್ಯೋತಿ
ಮೂರು ಬಣ್ಣದೊಳು ಪ್ರಕಾಶಿಪ ಜ್ಯೋತಿ
ತಾರೆಯಂದದಿ ಬೆಳಗುವ ಜ್ಯೋತಿ
ಸಾರವಾರನು ಸತ್ಯವೆನಿಸುವ ಜ್ಯೋತಿ

ನೀರಧಿವೆನಿಸೊಪ್ಪುವ ಜ್ಯೋತಿ
ಸೂರ್ಯಾಗ್ನಿ ಶಶಿಗಳನೊಳಕೊಂಡ ಜ್ಯೋತಿ
ಮೇರು ರಜತಗಿರಿ ಮೇಲಿರ್ಪ ಜ್ಯೋತಿ
ವಾರಿಜದಳಮಧ್ಯ ಗಗನಸ್ಥ ಜ್ಯೋತಿ

ಬೋರೆಮುಳ್ಳಿನ ಮನೆಯೊಳು ಸೂಕ್ಷ್ಮ ಜ್ಯೋತಿ
ಈರೇಳು ಲೋಕ ಬೆಳಗುವ ಜ್ಯೋತಿ
ಧೀರರ ದಯಾಹೃದಯವೆ ಜ್ಯೋತಿ
ನೀರ ನಿರಂಜನ ನಿರುಪಮ ಜ್ಯೋತಿ

❍

## ಸಂದಿ ಸಂದಿಗೆ ಜಡಿದಿಹುದು

ಸಾರಿ ಚೆಲ್ಲಿದೆ ಮುಕುತಿ । ಗುರು
ತೋರಿಸಿದಲ್ಲದೆ ಕಾಣಿಸದಣ್ಣಾ

ವೇದದ ಮೊದಲಿನ ಮೂಲವಿದು
ಮೇದಿನಿಯೊಳು ತಾ ತುಂಬಿಹುದು
ಹಾದಿ ಹಾದಿಗೆ ಬಿತ್ತಿಹದು । ಇದು
ಸಾಧಕ ಜನರಿಗೆ ಕಾಣುವದಣ್ಣಾ

ಎತ್ತ ನೋಡಲೂ ಪರಬ್ರಹ್ಮವಿದು
ಸುತ್ತ ಮುತ್ತಲೂ ಸುಳಿಯುವುದು
ಮತ್ತೆ ಮತ್ತೆಯಾಗಿ ಕಾಂಬುವದು । ಗುರು
ಪುತ್ರರಿಗಲ್ಲದೆ ಕಾಣಿಸದಣ್ಣಾ

ಹಿಂದೆ ನೋಡಲು ಬಂದಿಹುದು
ಮುಂದೆ ನೋಡಲು ನಿಂದಿಹುದು
ಸಂದಿ ಸಂದಿಗೆ ಜಡಿದಿಹುದು। ಆ
ನಂದ **ಗುಹೇಶ್ವರ** ಲಿಂಗವಿದಣ್ಣಾ

❍

## ನೀರು ಇಲ್ಲದ ಜಳಕ

ಹೌದಪ್ಪಾ ಹೌದಪ್ಪಾ ಹೌದು ದೇವರ
ನಿಂದು ನೀ ತಿಳಿದರ ಇಲ್ಲಪ್ಪಾ ದೂರ

ತಂಬಾಕಿಲ್ಲದೆ ಬತ್ತಿ ಸೇದಿರಬೇಕು
ದಾರೂ ಕುಡಿಯದೆ ನಿಶಾ ಆಗಿರಬೇಕು
ಯಬ್ಬಡ ತಬ್ಬಡ ಇಲ್ಲದೆ ನಾಲಿಗೆ ಹೋಗಿರಬೇಕು
ಝೋಲಿ ಹೋಗಿ ಗುರುಪಾದಕೆ ಹೊಂದಿರಬೇಕು

ನೀರು ಇಲ್ಲದ ಜಳಕ ಮಾಡಿರಬೇಕು
ಅರಿವಿ ಇಲ್ಲದೆ ಮಡಿ ಉಟ್ಟಿರಬೇಕು
ಉಣ್ಣದೆ ಹೊಟ್ಟೆ ತುಂಬಿರಬೇಕು
ಎಚ್ಚರದೊಳಗೆ ನಿದ್ದಿ ಹತ್ತಿರಬೇಕು

ಚಿಂತ್ಯಾಗ ಸಂತೋಷ ಆಗಿರಬೇಕು
ಭ್ರಾಂತಿ ಬಡಿದು ಬ್ರಹ್ಮ ದೊರಕಿರಬೇಕು
ಈ ಜನರಿಗೆ ಹುಚ್ಚನ್ಹಾಂಗ ಕಾಣಿಸಬೇಕು
ಹಿಂದು ಮುಂದಿನ ಸುದ್ಧಿ ತಿಳಿದಿರಬೇಕು

ಸೂರ್ಯಚಂದ್ರನ ಕಳೆ ಬಂದಿರಬೇಕು
ಸಜ್ಜನ ಸಂಗದಲಿ ಬೆರತಿರಬೇಕು
ಕುಂದ ಇಲ್ಲದ ಮುಕ್ತಿ ದೊರಕಿರಬೇಕು
**ನಿರುಪಾಧಿಗೆ** ಮಗಾ ಹುಟ್ಟಿ ಹೀಂಗಿರಬೇಕು

❍

## ಕಣ್ಣಿಲ್ಲದವನು ನೋಡಿ

ಅಂದವಾದ ಶ್ರೀಗಂಧದ ಗಿಡದೊಳು
ನಿಂದ ಹಣ್ಣುಗಳನು ಕಾಣದೆ ಇವನ್ನು
ಸವಿಯದೆ ಹೋಗದಿರೆಂದಾದರೂ
ಓಂ ಸುಜ್ಞಾನಿಗಳಿರಾ । ಸವಿದವರಿಗೆ ಅಮೃತಸಾರವು

ಕಣ್ಣು ಇಲ್ಲದವನೆ ನೋಡಿ
ಕಾಲು ಇಲ್ಲದವನೆ ಏರಿ
ಕೈಯಿಲ್ಲದವನೆ ಹರಿಯ ಬಂದನು
ಓಂ ಸುಜ್ಞಾನಿಗಳಿರಾ । ಬಾಯಿ ಇಲ್ಲದವನೆ ತಿಂದನೊ

ಏಳೆಂಟು ಆರು ಹತ್ತು ಮಂದಿ
ಕಳ್ಳರು ವೇಳೆ ಇದೇ ಎಂದು ನೋಡಿ
ಕಳ್ಳ ಮತಿಯಲ್ಲಿ ಕಾಯಿ ಹರಿಯ ಬಂದರು
ಓಂ ಸುಜ್ಞಾನಿಗಳಿರಾ । ಕೋಳಿ ಕೂಗಿತಪ್ಪರೊಳಗೆ

ಗಿಡವ ಕಾಯುವ ಕಾವಲುಗಾರ
ನೋಡಲು ಬಂದು ತಡಮಾಡದಲೆ
ಉಡಿಗೆ ಉಟ್ಟಿದ್ದು ಸಿಡಿಲಿನಂತೆ ಹೊಡೆದನೊ
ಓಂ ಸುಜ್ಞಾನಿಗಳಿರಾ। ಹಿಡಿದು ಪಾಲ್ಮೋರ ಜಿಲ್ಲೆಗೆ ಕಳುಹಿದನೊ

ಜಿಲ್ಲಾ ದೊರೆಯು ಅಲ್ಲಿಯ ಸಾಹೇಬ
ಕಳ್ಳರನ್ನೆಲ್ಲ ವಿಚಾರಮಾಡಿ
ಕಳ್ಳತನಕೆ ಸಲ್ಲುವಷ್ಟು ಜುರ್ಮಾನವ
ಓಂ ಸುಜ್ಞಾನಿಗಳಿರಾ। ಆಳಿಗರವತ್ತು ದಂಡವ ಮಾಡಿದನು

ದಂಡದ ರೂಪಾಯಿ ಕೊಡುವುದಕ್ಕೆ
ಬಂದೆ ಗುರುವಿನ ಅಡಿಗಳ ಪಿಡಿದು
ದಂಡ ಕೊಟ್ಟು ಧನ್ಯರಾದರು
ಓಂ ಸುಜ್ಞಾನಿಗಳಿರಾ । ಕಂಡೆನಯ್ಯಾ **ಶ್ರೀಗುರುಕರುಣದಿ**

❍

## ತನ್ನೊಳು ತಾ ತಿಳಿಯಲಿಲ್ಲ

ಆರಿಗೆ ಕಾಣದೀ ಮುತ್ತು । ಗುರುವಿನ ಕರುಣಾಗದೆ
ತಿಳಿಯದು ಗೊತ್ತು

ಕಾಷ್ಟದೊಳಗ್ನಿಯಂತಿಹುದು । ಅದು
ಕೋಟಿ ಸೂರ್ಯರ ಪ್ರಭೆ ಮೀಟಾಗಿಹುದು
ನೋಟಕ್ಕೆ ಅದು ಕಾಂಬುದು । ನಿಜ
ನಿಷ್ಠೆಯುಳ್ಳವರಿಗೆ ಘಟ್ಟಿಗೊಂಡಿಹುದು

ಕತ್ತಲೆಯೊಳು ಕಾಂಬುವುದು । ಇದು
ಎತ್ತನೋಡಲು ಪ್ರಭೆಯೆತ್ತಿ ತೋರುವುದು
ನೆತ್ತಿಯೊಳು ಗೊತ್ತು ಮಾಡಿಹುದು । ಅದು
ಉತ್ತರ ಉನ್ಮನಿ ಸೇರಿಕೊಂಡಿಹುದು

ಸೂತ್ರದ ಬಲವಿರಬೇಕು । ಆ
ಸೂತ್ರವ ಹಿಡಿದು ತಾ-ಬಂದಿರಬೇಕು
ತಾಪ-ತ್ರಿಗುಣ ಅಳಿಯಬೇಕು । ಸು
ಪಾತ್ರ ಸುಜ್ಞಾನದ ನೆಲೆ ತಿಳಿಯಬೇಕು

ಉದಯಾಸ್ತವೆರಡದಕ್ಕಿಲ್ಲಾ । ವೇದ
ಶ್ರುತಿಶಾಸ್ತ್ರ ಆಗಮಕದು ನಿಲುಕಿಲ್ಲಾ
ತನ್ನೊಳು ತಾ ತಿಳಿಯಲಿಲ್ಲಾ । ಇದು
ಕಲ್ಲು ಮೆತ್ತಗೆ ಮಾಡುವವನೆ ಬಲ್ಲಾ

ರೇವಗಿ ಪುರಕೆ ಹೋಗಬೇಕು । ದೊಡ್ಡ
ಮಹಾಮೇರು ಪರ್ವತವನು ಹತ್ತಬೇಕು
ಅಭಿಮಾನದಿ ಗವಿ ಹೊಗಬೇಕು । ದೊಡ್ಡ
**ರೇವಣಸಿದ್ಧಲಿಂಗನ** ನೋಡಬೇಕು

❍

## ಮೂರು ನದಿಯ ನಟ್ಟನಡುವೆ

ಲಿಂಗಪೂಜೆ ಆಗುತದಣ್ಣಾ। ಯಾವಾಗ ನೋಡಲು
ಲಿಂಗಪೂಜೆ ಆಗುತದಣ್ಣಾ

ಲಿಂಗಪೂಜೆ ಆಗುತದ । ಅಂಗ ಎಂಬೊ ಗುಡಿಯ ಒಳಗೆ
ಲಿಂಗದಂಥಾ ಮನಸು ತನ್ನ । ಕಂಗಳಿಗೆ ಕಾಣುತದ


ಆರು ಮೂರು ಕಟ್ಟಬೇಕಣ್ಣಾ । ಆ ಲಿಂಗಪೂಜೆಗೆ
ಆರು ಮೂರು ಕೆಡಿಸಬೇಕಣ್ಣಾ
ಆರು ಮನಿಯಾ ದಾಟಬೇಕು । ಮೂರು ನದಿಯಾ ನಟ್ಟ ನಡುವೆ
ಏರಿ ಶಿಖರದಲ್ಲಿ ನೋಡಲು । ಭೇರಿಗುಟ್ಟಿ ಕೂಗುತದ

ನಾಲ್ಕು ದಾರಿ ಉಂಟು ನೋಡಣ್ಣಾ । ಆ ಲಿಂಗಪೂಜೆಗೆ
ಮೇಲ್ಕೆ ಏರಿ ನಿಲಬೇಕಣ್ಣಾ
ಕಾಕ ಬುದ್ಧಿ ಕಳೆಯಬೇಕು । ನೂಕಬೇಕೊ ಮದಗಳೆಲ್ಲಾ
ಏಕನಾಗಿ ನೋಡಲು । ಅನೇಕ ಬೆಳಕು ಕಾಣುತದ

ಯೋಗಿ ಉನ್ಮನಿ ವಾಸನೋಡಣ್ಣಾ । ಆ ನಂಬಿದವರಿಗೆ
ಚಿನ್ಮಯ ರೂಪಾ ಹೊಳೆಯುತದಣ್ಣಾ
ಆಗ ಈಗ ಎನ್ನದೆ ದೇಹ । ಸಾಗಿ ನಿನ್ನ ಹೋಗುತದ
ಹೋಗುವಾಗ **ಗಂಗಾಧರ**ನ । ಬೇಗ ನೀವು ಬಲ್ಲಿರಣ್ಣಾ

❍

## ಮಸೂತಿಯೊಳಗಿನ ಮೂಲವ ತಿಳಿದು



ಹುಸೇನಿ ಸಾಹೇಬರ ಬದಿಯಲಿ ಹೋಗಿ
ಹಸನಾಗಿ ನಾವು ಬಂದೇವು
ಮಸೂತಿಯೊಳಗಿನ ಮೂಲವ ತಿಳಿದು
ದೀನ ದಯಾಳನ ನೆನೆದೇವು

ಲಾಡ ಬಂಧನದ ಲಾಡಿಯ ಕಟ್ಟಿ
ಓಡ್ಯಾಡು ಪಂಜೆಯ ಹಿಡಿದೇವೊ
ಸೂರ್ಯ ಚಂದ್ರರು ಎಂದಿಗೆ ಇಲ್ಲಾ
ಅಂದೊಬ್ಬ ಪೀರನ ಕಂಡೇವೊ

ಹಸರು ಹಳದಿ ಬಿಳಿದು ಕೆಂಪು
ಕುಶಲದ ಚೌಕಿಯ ಕಂಡೇವೊ
ಮುಸಲರಗೂಡ ಫಕೀರರಾಗಿ
ಸವಿ ಸವಿ ಪ್ರಸಾದ ಉಂಡೇವೊ

ಖತಾಲವೆಂಬೊ ಕತ್ತಲೆಯೊಳಗೆ
ಸುತ್ತೆಲ್ಲ ಜ್ಯೋತಿಯ ಕಂಡೇವೊ
ಉತ್ತರ ಪಶ್ಚಿಮ ನವಬಾಜೆ ವಾದ್ಯವ
ಅದರ ಭ್ರಮಿ ನಾವುಗೊಂಡೇವೊ

ಖಾಲಿಯೆಂಬುವ ಡೋಲಿಯ ಮುರಿದು
ಒಳಗಿನ ಮೂಲವ ತಿಳಿದೇವೊ
**ಕಲಬುರಗಿಯ ಸಿದ್ಧೇಶ್ವರನ**
ಬಾಲರಾಗಿ ಪಡಕೊಂಡೇವೊ

## ಬೆಳಗುವ ಮನಸ

ಬಾ ಬಾ ಬಾ ಎನ್ನ ಮನಸ
ಯತಿ ಮುನೀಶ್ವರರಿಗೆ ಗತಿಗ್ಹಚ್ಚುವ ಕೂಸ

ಹರ ಗುರುವಿನ ಒಲಿಸುವುದು ಬಿರಿಯಲ್ಲೊ ಮನಸ
ನೀನೊಲಿದರೆ ಮೂರು ಲೋಕ ಒಲಿಯುವುದು ಕೂಸ

ಮೂಲ ಸಾಲಿ ಬೀಜಮಂತ್ರಾ ಓದು ಕಲಿ ಮನಸ
ಆದಿ ಅನಾದಿ ಆಚಕಿನ ಸುದ್ಧಿ ಕದ್ದುಹೇಳು ಕೂಸ

ಸಾಧನ ಮಾಡಿ ನಾದಬಿಂದು ಕಳೆ ತಿಳಿಯುವ ಮನಸ
ನೀಲಮನೆಯೊಳು ಮೇಲು ಮಂಟಪದಿ ಲೋಲ್ಯಾಡು ಕೂಸ

ಅರಿತು ಅಮೃತ ಗಟಗಟ ಕುಡಿಯುವ ಮನಸ
ಬಿಟ್ಟ ಬೈಲ ತೊಟ್ಟಿಲದೊಳು ಮಲಗುವ ಕೂಸ

ಉರಿ ಉಂಡ ಕರ್ಪುರದಂತೆ ಬೆಳಗುವ ಮನಸ
ಸಂಗ - ಲಿಂಗ ಅಂಗಸಹಿತ ನುಂಗುವ ಕೂಸ

❍

## ತಾನೇ ತಾನು ಕುಳಿತು


ಸದಾ ಬೆಳಗುತಿದೆ ಜ್ಯೋತಿ
ಸದಾ ಬೆಳಗುತಿದೆ
ಸದಾ ಬೆಳಗುತಿದೆ ಹೃದಯ ಕಮಲದೊಳು
ಅಕೊ ಇದೆ ಇಲ್ಯಾದ ನೋಡು ಸಖಿ

ತಾನೇ ತಾನು ಕುಳಿತು । ತನ್ನೊಳು
ಏನು ಕಳೆಯ ತುಂಬಿ
ಏನು ಹೇಳಲಿ ಸ್ವಾನುಭವದ
ಖೂನ ತೋರಿಸಿದ ಜ್ಞಾನಮೂರುತಿ

ತನ್ನ ತಾನೆ ಬೆರೆದು । ನಿಜ ಸುಖ
ದಲೆ ಮೈಮರೆದು
ಅಲ್ಲ ಹೌದು; ಇಲ್ಲೆ ಉಂಟು
ಬಲ್ಲ ಜಾಣರಿಗೆ ಸೊಲ್ಲ ಸೂಕ್ಷ್ಮವಿದು

ನಿತ್ಯ **ನಿರುಪಾಧಿಗೆ** । ಹತ್ತದೆ
ಮೆರೆವುದು ಬಯಲೊಳಗೆ
ಸತ್‌ಚಿತ್ ಆನಂದವಾಗಿ
ಎತ್ತ ನೋಡಲದು ಕರ್ತು ಮೂರುತಿ

❍



## ಸುತ್ತ ಸುಳಿವ ಮನವ ನಿಲಿಸಿ

ಇದ್ದರಿರಲೀ ದೇಹಾ ಹೋದರೆ ಹೋಗಲಿ
ಪಂಚತತ್ವ ಭಾವನಳಿದು । ಪರಮ ಆಸನ ಮುದ್ರೆ ಬಲಿದು
ಸಂಚಿತಾರ್ಥ ಕರ್ಮ ಹರಿದು । ಸರ್ವಸಾಕ್ಷಿಯಾದ ಮೇಲೆ

ಹೆಣ್ಣು ಹೊನ್ನು ಮಣ್ಣು ಬಿಟ್ಟು ಕಣ್ಣಿನೊಳಗೆ ಕಣ್ಣು ಕಂಡು
ಕನ್ನಡಿ ಹಿಡಿದು ನೋಡಿದಂತೆ ತನ್ನ ನಿಜವ ತಿಳಿದ ಬಳಿಕ

ಸುತ್ತ ಸುಳಿವ ಮನವ ನಿಲಿಸಿ । ಚಿತ್ತ ಕಳೆ ಪೂರ್ಣ ತುಂಬಿ
ಮತ್ತೆ ಗಂಗಾ ಯಮುನೆ ಸ್ನಾನ ನಿತ್ಯನೇಮದಿ ಮಾಡಿದ ಮೇಲೆ

ಮೂಲ ಮಂತ್ರ ಜಪವು ಒಲಿದು । ಸ್ಥೂಲಸೂಕ್ಷ್ಮ ಕಾರಣ ತಿಳಿದು
ಕಾಲತ್ರಯದ ಸಮಯನಳಿದು । ಮೂಲ ಬ್ರಹ್ಮನಾದ ಮೇಲೆ

ಗುರುವಿನ ಜ್ಞಾನ ಕಣ್ಣಲೆ ಕಂಡು । ಪರಕೆ ಪರನ ನೆನಿಸಿಕೊಂಡು
**ಶ್ರೀಗಿರಿ ಮಲ್ಲೇಶನ ಕಂಡು** । ಪರಮ ಪಾವನನಾದ ಮೇಲೆ

❍

## ತಾನೂ ಇಲ್ಲ ನೀನೂ ಇಲ್ಲ

ತನ್ನ ತಾ ತಿಳಿದ ಮೇಲೆ ಇನ್ನೇನಿನ್ನೇನು
ತನ್ನಂತೆ ಪರರ ಜೀವರ ಮನ್ನಿಸಿ ಮೂಕನಾದ ಮೇಲೆ

ತಾನೆ ಪೃಥ್ವಿ ಆಪ ತೇಜಾ । ತಾನೆ ವಾಯು ಆಕಾಶಾತ್ಮ
ತಾನೆ ಸೂರ್ಯ ಚಂದ್ರ ತಾರಾ । ತಾನೆ ಬ್ರಹ್ಮಾಂಡದ ಮೇಲೆ


ತಾನೆ ಜಿಹ್ವಾ ಪ್ರಾಣ ನೇತ್ರಾ । ತಾನೆ ಶ್ರೋತೃ ತ್ವಕ್ಕು ಹೃದಯಾ
ತಾನೆ ಕಾಯಾ ಕರಣಾ ಹರಣಾ । ತಾನೆ ಪಿಂಡಾಂಡಾದ ಮೇಲೆ

ತಾನೆ ಲಕ್ಷಸಾವಿರ ನೂರು । ತಾನೆ ಹತ್ತೊಂಬತ್ತು ಎಂಟೇಳು
ತಾನೆ ಆರೈದು ನಾಲ್ಕು ಮೂರು । ತಾನೆ ಎರಡೊಂದಾದ ಮೇಲೆ

ತಾನೆ ಸತ್ತಾ ಅತ್ತಾ ಹೊತ್ತಾ । ತಾನೆ ನಿತ್ಯಾ ಸತ್ಯಾ - ನೃತ್ಯಾ
ತಾನೆ ಅರಿತ ಬೆರಿತಾ ಮರಿತಾ । ಸರ್ವೊಂದಾದ ಮೇಲೆ

ತಾನೆ ನೀನು ನೀನೆ ತಾನು । ತಾನೂ ಇಲ್ಲಾ ನೀನೂ ಇಲ್ಲಾ
ತಾನೆ **ಮಹಂತ** ತಾನೆ ನಾನು। ಏನೊ ಏನೊಂದಾದ ಮೇಲೆ

❍



## ದೃಷ್ಟಿಯೊಳಗೆ ದೃಷ್ಟಿ

ದೃಷ್ಟಿಯೊಳಗೆ ದೃಷ್ಟಿ ನಿಂತಿತು । ನೀ ನೋಡು ಸಖಿಯೆ
ದೃಷ್ಟವೆಲ್ಲ ನಷ್ಟವಾಯಿತು
ಕಷ್ಟವೆಲ್ಲ ಕಡೆಗೆ ಒತ್ತಿ । ದೃಷ್ಟವನ್ನು ಮೀರಿ ನಿಂತು
ಸೃಷ್ಟಿಯೊಳಗೆ ತುಷ್ಟಿಗೈದನೆ

ಕರ್ಮವೆಲ್ಲ ಕಾಣದೆ ಹೋಯಿತು । ಈ ಸರ್ವಕಾಲ
ಧರ್ಮವೆಲ್ಲ ತೂಗಿ ನಿಂತಿತು
ಸರ್ವವೆಲ್ಲ ಇನ್ನು ಮತ್ತೆ । ಊರ್ವಿಯೊಳಗೆ ಜನಿಸಲಾಗಿ
ಪರ್ವತಾಗ್ರ ಭೂಮಿಯನ್ನು । ನಿರ್ವಿಕಾರ ತೋರಿತಲ್ಲಾ

ಐದು ಮಂದಿ ಕೂಡಿ ಬಂದರು । ಕೂಡಿ ಬಂದು
ಐದುಕೈದು ಅಗಲವಾದರು
ಐದರೊಳಗೆ ನೋಡಲಿನ್ನು। ಐದಕೈದು ತಾನೆಯೆಲ್ಲಾ
ಐದರೊಳಗೆ ಬಂದು ನಿಂತೆನೆ

ಹಿಂದು ಎಂದು ಕಂಡಿದ್ದಿಲ್ಲವೆ । ಇಂಥಾ ಸುಖವು
ಮುಂದು ನಾನು ಯಾರಿಗುಸುರಲೆ
ತಂದೆ **ಗುರು ಭವತಾರಕನ** ಪಾದ । ಹೊಂದಿದ್ದವರಿಗೆ ಕೇಳಿದೆನೊ
ಎಂದಿಗಿಂದಿಗೆ ಹೀಂಗೆ ಅಂಬುರೆ

❍

## ಕಂಗಳಲ್ಲಿ ಕಣ್ಣ ಕಂಡು

ಬ್ರಹ್ಮಾನಂದದ ಸುಖವೇನು ನಿನಗೆ
ಸುಮ್ಮನಿದ್ದರೆ ಹ್ಯಾಂಗಾಗುವದರುವೆ ?

ದ್ವಾರಗಳೊಂಬತ್ತು ಬಾಗಿಲ ಮುಚ್ಚುವ ತನಕ
ಪರಪ್ರಕಾಶದ ಕದ ತೆರೆಯುವ ತನಕ
ಹರಿವ ತ್ರಿನದಿ ಸಂಗಮ ದಾಟುವ ತನಕ
ಎರಡು ದಾರಿಯ ಬಿಟ್ಟು ನಡು ಹೋಗುವ ತನಕ

ರಂಗಮಂಟಪ ಪೊಕ್ಕು ಸ್ಥಿರವಾಗುವ ತನಕ
ಹಿಂಗದ ರವಿಕೋಟಿ ಪ್ರಭೆ ಕಾಣುವ ತನಕ
ಕಂಗೊಳಿಸುವವಾರ್ಭಟ ಕೇಳುವ ತನಕ
ಕಂಗಳಲ್ಲಿ ಕಣ್ಣ ಕಂಡು ಬೆರಗಾಗುವ ತನಕ

ಘನ ಮಹಾಲಿಂಗನ ಪೂಜೆ ಆಗುವ ತನಕ
ಅನುಹತದಿಂದ ಮೈಮರೆದಿರುವ ತನಕ
ಮನಸಿನ ಮೈಲಿಗೆ ತೊಳೆದು ಹೋಗುವ ತನಕ
**ದಿನಕರ ಬಸವನ** ದಯವಾಗುವ ತನಕ

## ಬೈಲೊಳಗಾಡುವುದೇನಮ್ಮ ?

ಆನಂದವಾದ ಚಿದ್‌ಘನ ವಸ್ತು ನಾ ಕಂಡೆ
ಭಾನುವಿಲ್ಲದ ಬಿಸಿಲೇನಮ್ಮಾ ?
ತಾನು ಅಲ್ಲದೆ ತನ್ನ ತವರೂರ ಮನೆಯೊಳು
ತಾನು ಮಾಡಿದ ಪುಣ್ಯ ತನಗಮ್ಮಾ

ಕುಂಡಲದೊಳಗೊಂದು ನೀಲಗನ್ನಡಿ ಇಟ್ಟು
ಮಂಡಲದೊಳಗಾಡುವದೇನಮ್ಮಾ ?
ಸೇರಿ ಉನ್ಮನಿಯೊಳು ಗುರುವಿನ ಪುಣ್ಯದಿ
ಘನವಸ್ತು ದೊರಕಿತು ಎನಗಮ್ಮಾ

ನಡುನೀರ ಮಧ್ಯದಿ ವಟವೃಕ್ಷ ನಾ ಕಂಡೆ
ಹೂವಿಲ್ಲ ಮಿಡಿಗಾಯಿ ಹಣ್ಣಮ್ಮಾ
ಅಖಂಡ ವನದೊಳು ಅಮೃತ ಕೂಡ ಉಕ್ಕಿ
ಉಂಡುಂಡು ಸುಖಿಸಿ ಬಾಳುವೆನಮ್ಮಾ

ಕೈಲಾಸ ಭೂಮಿ ಅಲ್ಲಾ ಕನಕ ಭೂಷಣವಲ್ಲಾ
ಬೈಲೊಳಗಾಡುವದೇನಮ್ಮಾ
ವರಕವಿ **ನಾಗಲಿಂಗ ಗುರು**ವಿನ ಪುಣ್ಯದಿ
ಸ್ಥಿರ ಮುಕ್ತಿ ದೊರಕಿತು ಎನಗಮ್ಮಾ

❍

## ಎತ್ತಿಕೊಂಡೊಯ್ಯೊ ಅಂಬಿಗಾ

ಅಂಬಿಗ ನಾ ನಿನ್ನ ನಂಬಿದೆ
ಜಗದಂಬಿಕೆ ರಮಣನ ಹೊಂದಿದೆ

ಒಂದು ಹರಿಗೋಲೀಗಂಬಿಗ । ಅದ
ಕೊಂಬತ್ತು ದ್ವಾರಗಳಂಬಿಗ
ಇಂಬ ನೋಡಿ ನಡೆಸಂಬಿಗ । ಬಹಳ
ಸಂಭ್ರಮದಿಂದಲಂಬಿಗ

ಹೊಳೆಯ ಭರವ ನೋಡಂಬಿಗ । ಅದರ
ಸೆಳವು ಬಹಳಂಬಿಗ
ಸುಳಿಯೊಳಗಾದೆನಂಬಿಗ । ಎನ್ನ
ಸೆಳೆದುಕೊಂಡು ಒಯ್ಯೊ ಅಂಬಿಗ

ಆರು ತೆರೆಯ ನೋಡಂಬಿಗ
ಏರಿಬರುತಾದಂಬಿಗ
ಆರಿಂದಲತ್ತತ್ತ ಅಂಬಿಗ । ಪುಣ್ಯ
ದಾರಿಯ ನೀ ತೋರಂಬಿಗ

ಹತ್ತು ಇಮ್ಮಡಿ ನೋಡಂಬಿಗ । ಅದರ
ಹತ್ಯಾರು ಬಂದ್ಯೊಯ್ವರಂಬಿಗ
ಭೃತಕ್ಕೆ ಒಳಗಾದೆನಂಬಿಗ । ಎನ್ನ
ಎತ್ತಿಕೊಂಡೊಯ್ಯೊ ಅಂಬಿಗ

ಸತ್ಯವೆಂಬುದು ಹುಟ್ಟಂಬಿಗ
ಸದ್‌ಭಕ್ತಿ ಮೂರಾಯಿತಂಬಿಗ
ಕರ್ತ ಮೂರುತಿ ನಮ್ಮ **ಶ್ರೀ ವಿರೂಪಾಕ್ಷನ**
ಮುಕ್ತಿಮಂಟಪಕೊಯ್ಯೊ ಅಂಬಿಗ

❍

## ಹರಗುರುವಿನ ನೆನೆಯಮ್ಮ


ಅಜ್ಞಾನದ ಮಡಕೆಯ ತೊಳೆದು
ತನುವೆಂಬ ಪಾವಡ ಬಿಗಿದು
ಮನವೆಂಬುವ ಮೊಸರ ಸೋಸಮ್ಮ
ಹರಗುರುವಿನ ನೆನೆಯಮ್ಮ

ಆತ್ಮದೊಳು ರೇವಗಿ ನಿಲಸಿ
ಘನಸೂತ್ರದ ಹಗ್ಗವ ಪಿಡಿದು
ಸಂಸಾರವ ಮಥನವ ಮಾಡಮ್ಮ
ಹರಗುರುವಿನ ನೆನೆಯಮ್ಮ

ವಿಚಾರದ ಬೆಣ್ಣೆಯ ತಗದು
ಮಣಪಾಕದ ತುಪ್ಪವ ಕಾಸಿ
ಘನವಾಗದ ದೀವಿಗಿ ಮುಟಿಸಮ್ಮ
ಹರಗುರುವಿನ ನೆನೆಯಮ್ಮ

ಕಲ್ಪನದ ತಾಂಬಂಡಿ ತೊಳೆದು
ನಿಷ್ಕಿಕಾಮದ ನೈವೇದ್ಯ ಮಾಡಿ
ಮನಬೀಸು ತುಪ್ಪವ ಬಡಿಸಮ್ಮ
ಹರಗುರುವಿನ ನೆನೆಯಮ್ಮ

ಚಿತ್ರಾಪುರದ ನಗರಕೆ ಬಂದು
ಪಂಚಮಠದೊಳು ನೋಡಿ ನಿಂದು
ಶಿವಯೋಗಿಯೇ ಗತಿಯೆಂಬುದಮ್ಮ
ಹರಗುರುವಿನ ನೆನೆಯಮ್ಮ



## ಬೆಳ್ಳನ ಬೆಳದಿಂಗಳು

ಕನಸೊಂದ ಕಂಡೆನಮ್ಮ
ಎಂಥ ಸೋಜಿಗವಾಯಿತಮ್ಮ

ಬಿದಿಗಿ ಚಂದ್ರಮ ಮೂಡಿದ ಕನಸಿನೊಳಗ
ಮೂಡಲ ದಿಕ್ಕಿನೊಳು ಬೆಳ್ಳಿಚುಕ್ಕಿ ಮೂಡಿತಮ್ಮ
ಬೆಳ್ಳನ ಬೆಳದಿಂಗಳಾಯಿತೋ

ಬೊಡ್ಡಿನಿಲ್ಲದ ಮರದ ಮ್ಯಾಲೆ
ಬಣ್ಣನಿಲ್ಲದ ಪಕ್ಷಿಯು ಕುಂತು
ಸಣ್ಣದೊಂದು ಗೂಡುಗಟ್ಟಿದೆ

ಗೂಡನೊಯ್ದು ಗುಡ್ಡದೊಳಿಟ್ಟು
ಸುತ್ತಮುತ್ತ ಸುಳಿದಾಡುತ್ತಿತ್ತು
ಹೆಣ್ಣು ಗಂಡು ನಾನು ಅರಿಯನೆ

ಕೆಂಪು ಮಾರಿಯ ಪಕ್ಷಿ ತಂಪಿನೊಳಗಾಡುತ್ತಿತ್ತು
ಕೊಂಡಿ ಕೊನೆಯಲ್ಲಿ ಸುಳಿದಾಡುತ್ತಿತ್ತು
ಹೆಣ್ಣು ಗಂಡು ನಾನು ಅರಿಯನೆ

ಲಕ್ಷ ಯೋಜನೆಯು ಮೇಲೇರುತ್ತಿತ್ತು
ಲಕ್ಷ ಕೊಟ್ಟಾರೆ ಕಾಣುತ್ತಿತ್ತು
ಕಾಳಿಧ್ವನಿಯ ಮಾಡುತ್ತಿತ್ತಮ್ಮ

ನಿಡವಂಚೆ ಗ್ರಾಮದಲ್ಲಿ ನಿಜಲಿಂಗನ ಮೂರುತಿ
ಕಂಡೆ
**ಭದ್ರಿನಾಥ ಗುರು**ವೀನ ಕಂಡೇನೆ
ಬೈಲಿಗಾದೇನೆ.


## ಮನೆ ಮನೆ ತಿರುಗೋದು ಬೆಕ್ಕು

ಭಿನ್ನ ಭೇದವ ಮಾಡಬ್ಯಾಡಿರೋ
ಇದರ ಉನ್ನತನವನು ಚೆನ್ನಾಗಿ ತಿಳಿಯಿರೋ

ಮನೆಮನೆ ತಿರುಗೋದು ಬೆಕ್ಕು
ಅಯ್ಯ ಆರವರ ಮನೆಯಲ್ಲಿ
ಕ್ವಾಂಮ್ಟಿಗರ ಮನೆಯಲ್ಲಿ
ಆಚಾರ್ಯರ ಮನೆಯಲ್ಲಿ
ಹಾಲು ನೆಕ್ಕೊದು ನೋಡು ಬೆಕ್ಕು

ಅಯ್ಯ ಹೊಲೆಯರ ಮನೆಯಲ್ಲಿ
ಮಾದಿಗರ ಮನೆಯಲ್ಲಿ
ಕುರುಬರ ಮನೆಯಲ್ಲಿ
ಗೌಡರ ಮನೆಯಲ್ಲಿ
ಬಾಡು ತಿನ್ನೋದು ನೋಡು ಬೆಕ್ಕು
ಇಂಥ ಸರ್ವಜಾತಿಯೊಳಗೆ
ಬೆರೆತು ಹೋಗಿರೋ ನಮ್ಮ ಬೆಕ್ಕು


ಸ್ವಾಮಿ ಹಸಿದವನು ಹೊಲೆಯ
ಸುಸ್ತಾದವನು ಚಾಂಡಾಳಿ
ನಮ್ಮ ಹಿಂಭಾಗ ಕೊಲ್ಲುವ ಮೈಲಾರಲಿಂಗ
ಮೈಲಾರಲಿಂಗ - ಮೈಲಾರಲಿಂಗ



ಸ್ವಾಮಿ ಬಾಯಲ್ಲಿ ಬೆಲ್ಲ
ಎದೆಯಲ್ಲಿ ಕತ್ತರಿ
ಇಂಥ ಜಾತಿಗಳ ಸಂಘವ
ಮಾಡಲು ಬ್ಯಾಡಿರಿ

ಅಯ್ಯ ಉತ್ತಾರಿ ಮಳೆ ಬಂದು
ಸುತ್ತಿ ಸುತ್ತಿ ಹೊಡೆದಾಗ
ನೆತ್ತಿಮೇಗಳ ನೀರು ಗಂಬಾಲಿಗಳಿದಾವಲ್ಲೋ
ಇರವಲ್ಲ ಸ್ಥಿರವಲ್ಲ ನಮಗೆ
ಇರವಲ್ಲ ಸ್ಥಿರವಲ್ಲ
ಆಡಿಕೊಳ್ಳಲು ಬ್ಯಾಡಿ ಬಡವಾರ ಬದುಕ
ಕತ್ತಲೆ ಬೆಳದಿಂಗಳೊಳಗೆ

❍




ಯಾವ ದೇಶದ ಹೂವಿದ್ದಾವ ಇವು ?

# ಅಲ್ಲಮ ಪ್ರಭು

## ಉದಕಕ್ಕೆ ಕನಸಿಲ್ಲ

ನುಡಿಯ ಗಡಣದ ಬೆಳಗು ಮರುತ
ಪರಿಮಳದಂತೆ
ಭಾವವಿಲ್ಲದ ಬಯಲು ಪರವು ತಾನೆ ?
ಅರುಹು ಕುರುಹಿನ ಮರಹು ತೆರಹಿಲ್ಲದಾ ಘನವು
ನಿಂದ ನಿಜಪದದಿಂದ ಪ್ರಭೆಯಾಯಿತು

ಎಳೆಯ ಮಾಣಿಕದಂತೆ ಹೊಳೆವ ಜ್ಞಾನದ ಜ್ಯೋತಿ
ನವನಾಳದಲಿ ಪ್ರಾಣಲಿಂಗಭರಿತ
ಪಿಂಡಬ್ರಹ್ಮಾಂಡವನು ಮೀರಿ ತೋರುವ ವಚನ
ಗಗನದುದಯದ ಮೇಲೆ ಘನಕೆ ಗಮನ




ಆಕಾಶದಿಂದತ್ತಲಾರು ಬಲ್ಲವರಿಲ್ಲ
ಪಾತಾಳದ ಪ್ರಮಾಣ ಕಾಬರಾರೋ ?
ಆತುಮನವಿಡಿದು ಪರಮಾತುಮನ ಪರಿಭಾವ
ನೋಡ ನೋಡಾ ನೋಡ ಘನಕೆ ಗಮನ

ಇರುಳು ಮನವನೆ ನುಂಗಿ, ಹಗಲು ಘನವನೆ
ನುಂಗಿ
ಮಾತು ಮಥನವ ನುಂಗಿದಾತ ಭರಿತ
ನೀತಿನಿಜ ನಿಂದಲ್ಲಿ ನಿಜದ ನಿರ್ಮಲಜ್ಯೋತಿ
ಪ್ರಾಣಲಿಂಗದ ಘನಕೆ ಪ್ರಮಾಣೆಲ್ಲವೋ

ಆರು ದರುಶನದೊಡೆಯನಂತರಂಗದೊಳಿಪ್ಪ
ಆರಿಗಾದಡೆ ಗಗನ ಭುವನವೊಂದೇ
ಹೃದಯಕಮಲದ ಬೆಳಗು ಪರಬ್ರಹ್ಮದಲಿ ತುಂಬಿ
ಪರಿಣಾಮ ಪರಮಪದವಿಯ ತೋರಿತು

ಧರೆಗೆ ನಿದ್ರೆಯು ಇಲ್ಲ, ಉದಕಕ್ಕೆ ಕನಸಿಲ್ಲ
ಅಗ್ನಿ ಕಳವಳಕೆ ಒಳಗಾಗದೆಂತೋ
ಸುಳಿವ ಪವನನು ತಾನು ತಾಮಸಕ್ಕೊಳಗಾಗ
ಬಯಲಿಂಗೆ ಭ್ರಮೆಯುಂಟೆ **ಗುಹೇಶ್ವರ**

❍



## ಬಿನುಗು ಭಾವ

ದೇವರೇ, ಎನ್ನೇ ದೇವರೇ, ಕಾಯ್ಯೆ
ದೇವರೇ ಎನ್ನ ದೇವರೇ!

ಅತ್ತೆಯ ಕಣ್ಣೆರಿಯಲಿ,
ಮಿತ್ತು ಭಾವನ ಕಾಲ್ ಮುರಿಯಲಿ,
ಹಿತ್ತಲ ಗೋಡೆ ಬೀಳಲಿ, ಕಾ-
ಳ್ಗತ್ತಲೆ ಬಂದು ಕವಿಯಲಿ

ಮನೆಯಾತನು ಮಾಯವಾಗಲಿ,
ಬಿನುಗು ಭಾವ ಮರುಳಾಗಲಿ,
ಸನಿಯನ್ನ ನಾದಿನಿ ಸಾಯಲಿ,
ದಿನಕರನತ್ತ ಹೋಗಲಿ.

ಕಂದನ ಕಣ್ಣು ಮುಚ್ಚಲಿ,
ಚಂದ್ರನ ಹಾವು ಕಚ್ಚಲಿ,
ಇಂದು ನಮ್ಮ **ಗುಹೇಶ್ವರ** ಲಿಂಗವು
ಬಂದೆನ್ನನೊಡಗೂಡಲಿ

❍

## ಜಲದೊಳಗಣ ಕಿಚ್ಚು

ಗಗನದಗಮ್ಯದ ನಿಲವನು ಒಂದು
ಮದಾಳಿ ನುಂಗಿತ್ತ ಕಂಡೆನು.
ಕಾಲನೆಂಬ ಜಾಲಗಾರನ ಘನ
ಸಾಗರ ನುಂಗಿತ್ತ ಕಂಡೆನು.


ಜಂಬೂದ್ವೀಪದ ಹೃದಯದಲೊಂದು
ಸದಮದ ಗಜ ಹಯನಾಯಿತ್ತು.
ಕುಂಭಿನಿಯುದರದ ಕಂದನ ನೊಸಲಲಿ
ಚಂದ್ರಲಿಖಿತವ ಕಂಡೆನು.


ಹದಿನಾಲ್ಕು ಭುವನ ದಿಗುವಳಯ ಒಂದು
ಹರಿಣಿಯ ನಖದೊಳಗಡಗಿತ್ತು
ಅರ್ಕನ ಕೃತಕದ ಭಿತ್ತಿಯ ಮೇಲಣ
ಚಿತ್ತಾರವಡಗಿತ್ತ ಕಂಡೆನು.

ತುಂಬಿಯಮೃತವ ಕಡೆವಲ್ಲಿ
ಅಂಗಜನತ್ತುದ ಕಂಡೆನು.
ಮೇರುಮಂದಿರದಂಗನೆಯ ಬಸಿರಲ್ಲಿ
ನವಖಂಡಪಿಂಡವ ಕಂಡೆನು.

ಜಲದೊಳಗಣ ಕಿಚ್ಚು ಜಲವ ಸುಟ್ಟುದ ಕಂಡೆ
ಜಲ ಬೆಂದು ನೆಲನಿಧಿಯುಳಿಯಿತ್ತು
ಅಜನ ಕಪಾಲವ ಪಿಡಿದಿಹ ರುದ್ರನ
ರಕ ಬೆಂದು ಕಪಾಲ ಉಳಿಯಿತ್ತು!

ಅಳಿಯ ಬಣ್ಣದ ಮೇಲೊಂದು ಪವನ
ನವರತುನವ ನುಂಗಿಯಡಗಿತ್ತು;
ಗುಹೇಶ್ವರ, **ಗುಹೇಶ್ವರ**ನೆಂಬ ಲಿಂಗ
ಸಂಗ ನಿರ್ಲೇಪವಾಯಿತ್ತು.





## ಹೊಳೆವ ಬಾಸಿಗಕೆ

ನಿಬ್ಬಣವೇನಾ ತ್ರಿಜಗದೊಳಗೆ
ಮದುಮಕ್ಕಳ ಸುದ್ದಿಯ ಹೇಳಿರಮ್ಮ!

ಹೆಂಡತಿ ಗಂಡನ ಹಡೆದು, ತೊಟ್ಟಿಲ ಕಟ್ಟಿ,
ಹಾಡಿ, ಹರಸಿ, ಮೈಮರೆದಳು !


ಪುರುಷರತ್ನವೆಂಬ ಪುತ್ರ ಜನಿಸಲಾಗಿ
ಕಂಡವರೈವರು ಕಡುಬೆರಗಾದರು !

ಪಟ್ಟಣದೊಳಗಣ ಪ್ರೌಢರೈವರು,
ಇಟ್ಟ ಕಳಶವ ಹೊತ್ತ ಮುತ್ತೈದೆಯರೈವರು,

ಹೊಳೆವ ಬಾಸಿಗಕೆ ಹದಿನಾರು ದಂಡೆ !
ಮದುವನಿಗನಿರೆ ಮದುವಳಗಿತ್ತಿ ರಂಡೆ !

ಮದುಮಕ್ಕಳ ನೀತಿ ಮದುವೆಯ ಮಾತಲ್ಲ
**ಗುಹೇಶ್ವರ**ಲ್ಲಯ್ಯ ಬಲ್ಲ

❍



## ಹಾರುವ ಹಂಸ

ಕಂಡಿರೆಯಕ್ಕ, ವಿಪರೀತವ? ನಿಜ
ಮುಂಡೆ ಮುತ್ತೈದೆಯಾದಳು ನೋಡಿರೆ !

ನೀರು ನೀರನುಂಬುದ ಕಂಡೆ !
ಉರಿವ ಬೆಂಕಿ ಬಿಸಿಲನೆ ಕಾಯ್ದು
ಹಾರುವ ಹಂಸನ ಹದ್ದು ಹೊಯ್ದುದಾಹಾ !
ಮೇರುವೆಯೊಳಡಗಿತು ನೋಡಿರೇ !

ತುಂಬ ಬಿಟ್ಟು ಕೆರಿಯೊಡೆದುದ ಕಂಡೆ
ಕಂಭ ಮುರಿದು ಮಾಳಿಗೆ ಉಳಿದು
ಬೆಂಬಳಿವಿಡಿದೈವರು ಮಂದಿ
ಉಂಬುತ ಕೈಮರೆದರು ನೋಡಿರೇ !

ಹುಟ್ಟಿದ ಶಿಶು ತಂದೆಯ ಪಡೆದು, ನಿಜ
ದೊಟ್ಟಿಲ ತನ್ನನುವಿನೊಳು ಕಟ್ಟಿ,
ನೆಟ್ಟನೆ ನಮ್ಮ **ಗುಹೇಶ್ವರ**ಲಿಂಗವ
ಮುಟ್ಟಿನ ಜೋಗುಳವಾಡಿತು ನೋಡಿರೇ !

❍

## ಅಕ್ಕಮಹಾದೇವಿ

### ನಿಬ್ಬಣಕ್ಕೆ ಹೋದಡೆ

ನಿಬ್ಬಣಕ್ಕೆ ಹೋಗುತ್ತೈದೇನೆ, ನೋಡಕ್ಕಯ್ಯ !
ನಿಬ್ಬಣಕ್ಕೆ ಹೋದಡೆ, ಮರಳಿ ಬಾರೆನಕ್ಕಯ್ಯ !

ಧನವು ಧಾನ್ಯ ಮನೆಯೊಳುಂಟು;
ಘನವು ಎನ್ನ ಮನೆಯೊಳಿಲ್ಲ:
ಮನೆಯ ಗಂಡ ಮುನಿಯಲೆನ್ನ ಮಂಡೆ ಬೋಳಾಗದು !

ಮಂಡೆದುರುಬ ಮಿಂಡಿತನದಿ
ನಿಬ್ಬಣಕ್ಕೆ ನಾ ಹೋದಡೆ
ಮಂಡೆ ಬೋಳಾಗದನಕವಪ್ಪುದೆನಗೆ ನಿಬ್ಬಣ ?


ಗಂಡನುಳ್ಳ ಗರತಿ ನಾನು
ರಂಡೆಯಾದೆನಯ್ಯೊ; ಇನ್ನು
ಕೊಂಡೊಯ್ಯೊ, ಶಿವನೆ, ಎನ್ನ ಹುಟ್ಟಿದೈವರು ಮಕ್ಕಳ !

ಕಾಮವೆಂಬ ಹೊಲನ ದಾಂಟಿ,
ಸೀಮೆಯೆಂಬ ಹೊಲಬನರಿದು,
ಹೇಮಗಿರಿಯ ಹೊಕ್ಕ ಬಳಿಕ ಮರಳಿ ಬಾರೆನಕ್ಕಯ್ಯ !

ಸಾಗಿ ಬೇಗದಿಂದ
ಹೋಗಿ ನೆರೆಯದಿದ್ದರೆ,
**ಚೆನ್ನಮಲ್ಲಿಕಾರ್ಜುನಯ್ಯ** ಮುನಿವ ಕಾಣಕ್ಕಯ್ಯ !

❍

## ಅಂಬಿಗ




ನಂಬಿದೆ ಗುರುವೇ ನಂಬಿದೆ, ನಂಬಿದೆ
ಸ್ವಾಮಿ
ನಂಬಿದೆ, ಅಂಬಿಕಾರಮಣ, ನೀನಂಬಿಗ

ಹೊಳೆಯ ಬರುವ ನೋಡಂಬಿಗ
ಸೆಳಹು ಬಹಳ ಕಾಣಂಬಿಗ
ಸುಳುಹಿನೊಳಗೆ ಬಿದ್ದೆನಂಬಿಗ । ಎನ್ನ
ಸೆಳೆದುಕೊಳ್ಳೋ ನೀನಂಬಿಗ

ಆರು ತೆರೆಯ ನೋಡಂಬಿಗ ! ಬಲು
ಮೀರಿ ಬರುತಲಿವೆ ಅಂಬಿಗ !
ಹಾರಲೊದೆದು, ಎನ್ನ ತಡಿಗೆ ಸೇರಿಸು,
ನೀ
ದೂರ ಮಾಡದಿರು ಅಂಬಿಗ !

ತುಂಬಿದ ಹರುಗೋಲಂಬಿಗ ! ಅದ
ಕೊಂಬ್ಬತ್ತು ಛಿದ್ರ ನೋಡಂಬಿಗ !
ಸಂಭ್ರಮವನು ನೋಡಂಬಿಗ : ಇದ
ರಿಂಬನರಿದು ತೆಗೆಯಂಬಿಗ !

ಹತ್ತು ಹತ್ತು ನೋಡಂಬಿಗ !
ಹತ್ತಿದರೈವರು ಅಂಬಿಗ !
ಮುತ್ತಿಗೆಗೊಳಗಾದೆನಂಬಿಗ, ಎನ್ನ
ನೆತ್ತಿಕೊಳ್ಳೋ ನೀನಂಬಿಗ !

ಸತ್ಯವೆಂಬ ಹುಟ್ಟಂಬಿಗ, ಸದ್
ಭಕ್ತಿಯೆಂಬ ಪಥವಂಬಿಗ,
ನಿತ್ಯಮುಕ್ತ ನಮ್ಮ **ಚೆನ್ನಮಲ್ಲಿಕಾರ್ಜುನನ**
ಮುಕ್ತಿಮಂಟಪಕೊಯ್ಯೋ, ಅಂಬಿಗ

## ಮುಕುತಿಯ ಫಲ

ಕಂಗಳ ನೋಟವು, ಕಾಯದ ಕರದಲಿ
ಲಿಂಗದ ಕೂಟವು ; ಶಿವಶಿವ ಚೆಲುವನು
ಮಂಗಳ ಮೂರುತಿ ಮಲೆಗಳ ದೇವಂಗೆತ್ತುವೆನಾರತಿಯ

ಜಗವಂದ್ಯಗೆ ಬೇಟವ ಮಾಡಿದೆ, ನಾ
ಹಗೆಯಾದೆನು ಸಂಸಾರಕ್ಕೆಲ್ಲಾ ;
ನಗುತ್ತೈದರೆ ಲಜ್ಜೆನಾಚಿಕೆಯೆಲ್ಲವ ತೊರೆದವಳೆಂದೆನ್ನ.
ಗಗನ ಗಿರಿಯ ಮೇಲಿರ್ದಹನೆಂದಡೆ,
ಲಗುನಿಯಾಗಿ ನಾನರಸುತ ಬಂದೆನು :
ಅಘಹರ ಕರುಣಿಸಿ ನಿಮಗಾನೊಲಿದೆನು ಮಿಗೆ ದಾರತಿಯ

ಭಕುತಿರತಿಯ ಸಂಭಾಷಣೆಯಿಂದವೆ
ಯುಕುತಿಯ ಮರೆದೆನು, ಕಾಯದ ಜೀವದ
ಪ್ರಕೃತಿಯ ತೊರೆದೆನು, ಸುತ್ತಿದ ಮಾಯಾಪಾಶವ ಹರೆದೆನಲಾ
ಸುಕೃತಿಯಾಯಿತು ನಿಮ್ಮ್ರಯ ನೆನಹಿಂದವೆ,
ಮುಕುತಿಯ ಫಲಗಳ ದಾಂಟಿಯೆ ಬಂದೆನು,
ಸಕುತಿಯಾದೆ ನಾ ಪ್ರಾಣಲಿಂಗಕೆ ಮನವೊಲಿದಾರತಿಯ

ಮೆಚ್ಚಿ ಒಲಿದು ಮನವಗಲದ ಭಾವವು
ಬಿಚ್ಚದೆ ಬೇರೂಂದೆನಿಸದೆ, ಪ್ರಾಣವು
ಬೆಚ್ಚಿಂತಿರ್ದುದು, ಅಚ್ಚೊತ್ತಿದ ಮಹಘನ ತಾ ನೆಲೆಗೊಂಡು
ಪಶ್ಚಿಮ ಮುಖದಲಿ ಬೆಳಗು ಪ್ರಕಾಶವು !
ನಿಚ್ಚ ನಿರಂಜನ **ಚೆನ್ನಮಲಿಕಾರ್ಜುನ**
ಗೆತ್ತುವೆನಾರತಿ ಈ ರತಿಯಿಂದವೆ ಮನವೊಲಿದಾರತಿಯ

❍



## ನಿರಂತರ ಫಲ


ಅಂಗಸಂಗಿಯಾಗಿ ಸಂಬಂಧಿಯಲ್ಲ ;
ಲಿಂಗದಲಾಪ್ಯಾಯನಿಯಾಗಿ
ಇತರ ಸುಖಂಗಳ ಬಿಟ್ಟು ಕಳೆದು,
ಸುಮನಸಾರಾಯವಾದ ಶರಣ.

ಮಾಡುವರ ಕಂಡು ಮಾಡುವನಲ್ಲ,
ಮಾಡದವರ ಕಂಡು ಮಾಡದವನಲ್ಲ,
ತಾ ಮಾಡುವ ಮಾಟಕೆ ತವಕಿಗನಾಗಿ
ಹಿಂದುಮುಂದರಿಯದ ಶರಣನು.

ಎಲ್ಲವು ತಾನೆಂಬ ಕರುಣಾಕರನಲ್ಲ;
ನಿಃಕರುಣಿಯಾಗಿ ಜಡದೇಹಿಯಲ್ಲ:
ಭೋಗಿಪ ಭೋಗಂಗಳಾಶೆಯಾಮಿಷ
ತಾಮಸವಿಷಯವಿರಹಿತ ಶರಣನು

ಘನವನಿಂಬುಗೊಂಡ ಮನದ ಬೆಂಬಳಿ
ವಿಡಿದುಳಿದಲ್ಲಿ ನಿಜವಾಗಿ ನಿಂದನು,
ತಾನೆಂಬುದಿಲ್ಲ ನಿರಂತರಸುಖಿ ಗುರು
**ಚೆನ್ನಮಲ್ಲಿಕಾರ್ಜುನಯ್ಯ** ನಿಮ್ಮ ಶರಣ.

❍



## ನೀರ· ಹೊಳೆ

ಹೋದೆನೂರಿಗೆ ಇದ್ದೆ ನಾನಿಲ್ಲಿ
ಹೋದಡೆ ಮರಳಿ ಬಾರೆನವ್ವ ತಾಯಿ

ಪಡುವಣ ದೇಶದಿ ಹುಟ್ಟಿದೆನಮ್ಮ,
ಬಡಗಣ ದೇಶದಿ ಬೆಳೆದೆ;
ಆಗರದ ನಾಡಿಗೆ ಇತ್ತರೆನ್ನನು;
ದೂರಣ ನೀರ ನಾ ಹೊರಲಾರೆನಮ್ಮ

ಕೂಳಿಲ್ಲ ಹೊಟ್ಟೆಗೆ, ತಲೆ ಬತ್ತಿಗಟ್ಟಿತು !
ಬಲ್ಮೊಲೆಗಳು ಬತ್ತಿ ಬಡವಾದೆ !
ಒಲ್ಲದ ಗಂಡನ ಒಲಿಸಿಹೆನೆಂದಡೆ
ಬಲ್ಲವರೊಂದು ಮದ್ದ ಹೇಳಿರಮ್ಮ!

ಆರು ಬಾರದ ತವರೂರ ದಾರಿಯಲಿ
ಬಾರದ ಭವದಲಿ ಬಂದೆನು
ಊರ ಕಡೆಗೆ ನೋಡಿ ಕಣ್ಣೆಲ್ಲ ಕೆಟ್ಟವು
ನೀರ ಹೊಳೆಗೆ ಹೋಗಿ ಅತ್ತೆನಮ್ಮ !

ಅತ್ತೆಯ ಲೇಸುಂಟೆ? ಮಾವನ ಲೇಸುಂಟೆ ?
ಗಂಡನ ಲೇಸುಂಟೆಂಬುದನರಿಯೆ
ಆಸತ್ತು ಬೇಸತ್ತು ಒಲೆಯ ಮುಂದೆ ಕುಳಿತರೆ
ಪಾಪಿ ಗಂಡ ಕಾಲೊಳೊದ್ದನಮ್ಮ !

ಉನ್ನತ ಶ್ರೀಶೈಲ **ಚೆನ್ನಮಲ್ಲಿಕಾರ್ಜುನ**
ನಿನ್ನ ನಂಬಿದ ಭಕ್ತೆ ನಾನೆಯಲ್ಲಾ ? !
ಮುನ್ನಿನ ಶರಣರ ಸಲಹಿದಂದದಿ ಬೇಗ
ಎನ್ನ ಸಲಹೋ ದೇವರ ದೇವ

## ಚಿತ್ತವೆ ಕಲಕಿವೆ

ಕರಕೆ ಕರಕರೆ ಘನವಯ್ಯೋ
ಕರೆದು ಹೇಳಿ ಎಮ್ಮವರಿಗೆ ಸುದ್ದಿಯ

ಅತ್ತೆಯ ಮಾತುಗಳೆ ಚಿತ್ತವ ಕಲಕಿವೆ,
ಮತ್ತೆ ಮಾವನೊಳ್ಳಿದನಲ್ಲ; ಎನ್ನ
ಚಿತ್ತವಲ್ಲಭನಿಂದಾದ ಭಂಡ ನಾ
ವಿಸ್ತರಿಸಲಾರೆ; ಹೇಳಿ, ಎಮ್ಮವರಿಗೆ

ಮುನ್ನ ಹುಟ್ಟಿದ ಮೂರು ಮಕ್ಕಳ ಕಾಟ,
ಕನ್ನೆಯರೈವರ ಕೂಡಿಕೊಂಡು
ಮನ್ನಣೆಯಿನಿತಿಲ್ಲ ಮೈದುನರೈವರ ;
ಇನ್ನಿರಲಾರೆ ಹೇಳಿ, ಎಮ್ಮವರಿಗೆ

ನಾರಿಯರೈವರ ಕೂಡಿಕೊಂಡು, ನಾ
ದಾರಿಸಂಗಡವಾಗಿ ಬರುತಿರಲು
ಭೋರನೆ ಶ್ರೀಶೈಲ ಚೆನ್ನಮಲ್ಲೇಶಂಗೆ
ಓರಂತೆ ಮನಸೋತೆ ಸಾರಿತ್ತ ಬಾರೆನೆ, ತಾಯಿ !

❍

## ಮತ್ತಿನ್ನಾರಿಗೆ ಹೇಳುವೆ

ಒಲ್ಲೆನೊಕತನವ ಒಲ್ಲೆ, ನಾನಾರೆ ;
ಕೊಲ್ಲ ಬಂದಾನೆನೆ ಕೋಪದಲಿ ನಲ್ಲ !

ಮಾವನೆಂಬವ ನನ್ನ ಮನವ ನೋಯಿಸಿದನೆ !
ಆವಾಗ ನಮ್ಮತ್ತೆ ಅಣಕವಾಡುವಳು
ಭಾವನೆಂಬವ ಕಂಡು, ಬಲು ಬಾಧಿಸುತಿಹ ;
ಬೇವುತಲಿರ್ದೆನು ಮತ್ತಿನ್ನಾರಿಗೆ ಹೇಳುವೆ ?

ಮನೆಯಾತನ ಕೊಂದು, ಮಾವನ ಹಳ್ಳವ ಕೂಡಿ,
ಬಿನುಗು ಭಾವದಿರನು ಬೀದಿ ಪಾಲು ಮಾಡಿ
ನನಗೆ ವೈರಿಯಾದ ಅತ್ತೆಯನೆ ಕೊಂದು,
ಮನಸು ಬಂದಲ್ಲಿ ನಾನಿಪ್ಪೆನೆಲೆ ತಾಯಿ !

ಮುನ್ನಿನ ಪ್ರಮಥಗಣಂಗಳೆನ್ನ ಬಂಧು ಬಳಗ
ಉನ್ಮನಿಯ ಜ್ಯೋತಿ ಬ್ರಹ್ಮರಂಧ್ರದ ಮೇಲಿಪ್ಪ
**ಚೆನ್ನಮಲ್ಲಿಕಾರ್ಜುನ**ನೆನ್ನನೊಲಿದಡೆ
ಇನ್ನಿತ್ತ ಬಾರೆ ನಾನೆಲೆ ತಾಯಿ !

❍



## ಚಿತ್ತವಲ್ಲಭ

ಒಲ್ಲೆ ಗಂಡನ ಕೂಟ ಒಗತನವ,
ಅಕ್ಕಟ ಗಂಡನ ಮನೆ ಬಿರಿಸಯ್ಯಯ್ಯೋ !

ಒಡಕು ಗಂಗಳದಲ್ಲಿ ನೀರಂಬಲಿಯ ನೀಡಿ
ಹೊಡೆದಳು ನಮ್ಮತ್ತೆ ಮೊರದಲ್ಲಿ
ಕಡು ದುಃಖದಿಂದ ನಾ ಒಲೆಯ ಮುಂದೆ
ಕುಳಿತರೆ
ಕೂಡಿತನದಿ ಬಂದು ಒದ್ದಳಯ್ಯಯ್ಯೋ !

ನೆತ್ತಿಗೆಣ್ಣೆಯಿಲ್ಲದೆ ತಲೆ ಬತ್ತಿಗಟ್ಟಿತು
ವೃತ್ತ ಜವ್ವನ ಬಾಡಿ ಹೋದವಲ್ಲ !
ಅತ್ತೆಯಾಸೆಯಿಲ್ಲ ಮಾವನ ಲೇಸಿಲ್ಲ
ಚಿತ್ತವಲ್ಲಭನಲ್ಲಿ ಗುಣವಿಲ್ಲವಯ್ಯಯ್ಯೋ !


ಹೇಳಿ ಕಳುಹುವೆ ನಾನವ್ವೆಗಳೂರಿಗೆ
ನಾಳೆ ಕರೆತರಿಸುವೆ ನಮ್ಮಯ್ಯಗಳ
ಕೇಳಯ್ಯ ಶ್ರೀಶೈಲ **ಚೆನ್ನಮಲ್ಲಿಕಾರ್ಜುನ**
ಬ್ಯಾಳ ಪಾಪಿಗಳಲ್ಲಿ ಕೊಟ್ಟರಯ್ಯಯ್ಯೋ !

## ಬಸವಣ್ಣ

### ಪರಮ ಸುಖಿ

ಆಚಾರ-ವಿಚಾರವ ನಾನರಿಯೆನು,
ಜ್ಞಾನಾನುಭಾವದ ಹೊಲಬನರಿಯೆನು;
ಶಿವ, ನಿಮ್ಮ ಪ್ರಸಾದಿಗಳ
ಪ್ರಸಾದವೆನಗೆ ಪ್ರಾಣವಯ್ಯ

ಆವ ಪದವಿಯಂತುಟಲ್ಲವೆನಗೆ
ನಿಮ್ಮ ಶರಣರ ಶೇಷಪ್ರಸಾದ
ಜೀವವೆನಗದು ಬಾಳುವೆಯಾಗಿ
ಬೇರೆ ಮತ್ತನ್ಯವನರಿಯೆನಯ್ಯ




ಹರಗಣಪಂಕ್ತಿಯ ಮುಂದೆ ನಾನು
ಕರವ ಮುಗಿದು ಪರವಶನಾಗಿ, ಎರ
ಡರಿಯದೆ ಒಡೆಯರ ಪರಿಯಾಣವ
ಹರುಷದಿಂ ಹಾರಿಕೊಂಡಿಪ್ಪೆನಯ್ಯ

ಗುರುಲಿಂಗಜಂಗಮವಾರೋಗಣೆಯ ಮಾಡು
ವೆಡೆಯೊಳೆನ್ನಯ ಪ್ರಾಣವನಿಕ್ಕಿ,
ಉಡುಗಿ ಒಕ್ಕ ಪ್ರಸಾದವ ಕೊಂಡು
ಪರಮಸುಖಿಯಾದೆನು **ಕೂಡಲಸಂಗಯ್ಯ**

❍

## ನಿಜಗುಣಯೋಗ



### ಹರಳಿಲ್ಲದ ಗೆಜ್ಜೆ

ಹೂವಿಲ್ಲದ ಕಂಪು, ಹೊನ್ನಿಲ್ಲದ ಬಣ್ಣ
ಕಳೆಯಿಲ್ಲದ ಚಂದ್ರನ ಪರಿಯಂತೆ

ಕಾಲಿಲ್ಲದ ನಡೆ, ಕಣ್ಣಿಲ್ಲದ ನೋಟ
ಹಾಲಿಲ್ಲದ ತುಪ್ಪದ ಪರಿ ನೋಡ !
ನಾಲಿಗೆಯಿಲ್ಲದ ರುಚಿ, ಕಿವಿಯಲ್ಲಿ
ಕೇಳದೆ ಹೇಳುವ ಪರಿ ಶಿವಯೋಗ !

ಹರಳಿಲ್ಲದ ಗೆಜ್ಜೆ, ಹುರುಳಿಲ್ಲದ ಹಯನು,
ಕರ್ಬುನ ಉಂಡ ನೀರಿನ ಪರಿ ನೋಡ !
ಹುರಿದು ಬಿತ್ತಿದ ಬೀಜದ ನಾಟಿಯ
ಪರಿಯಂತೆ ಪರಶಿವಯೋಗ !

ತನುಗುಣಂಗಳನರಿಯದ ಸಮಾಧಿ
ಮನವೋಲಿದು ನೆರೆವ ಸುಖ ; ನಿಮ್ಮ
ನೆರೆಯಲರಿದು : ನಿಜಗುಣಯೋಗ
ಅನುಪಮಸುಖಿ **ಸಿದ್ಧರಾಮೇಶ** ತಂದೆ

❍

## ನೀಲಾಂಬಿಕೆ

### ಶ್ರೀಗುರು ಕರದಲ್ಲಿ

ನೋಡು ನೋಡು, ನೋಡು ನೋಡು, ನೋಡು ಲಿಂಗವೆ!
ನೋಡು ಬಸವಯ್ಯನವರು ಮಾಡಿದಾಟವ

ಅಲ್ಲಿಗೆನ್ನನು ಬರಹೇಳಿದರಂತೆ
ಇಲ್ಲಿ ತಾವಿಲ್ಲವೆ ಸಂಗಯ್ಯನು?
ಅಲ್ಲಿ ಇಲ್ಲಿ ಎಂಬ ಉಭಯ ಸಂದೇಹವು
ಬಲ್ಲ ಮಹಾತ್ಮರಿಗಿದು ಗುಣವೆ?

ಪೊಡವಿಯ ಭಕ್ತಗಣಂಗಳು ಸಹವಾಗಿ,
ಮಡಗಿದ ಶ್ರೀಗುರು ಕರದಲ್ಲಿ:
ದೃಢಚಿತ್ತ ಕರಿಗೊಂಡು ಕೂಡಿಹೆನೆಂದಡೆ-
ನ್ನೊಡೆಯ ಸಂಗಮನಾಥನೀತನಲ್ಲವೇ! ?

ಸಂಗನ ಬಸವಣ್ಣನೆಂದ ನಿರೂಪಕೆ
ಹಿಂಗದೆ ಕರವೆತ್ತಿ ಮುಗಿಯುತಲಿ
ಸಂಗಮನಾಥನೆ ಈತನೆ ಎ-
ನ್ನಂಗೈಯ ಲಿಂಗದೊಳಡುಗುವೆನು !

❍

## ಪುರಂದರ ದಾಸ

### ಕಲ್ಲುಸಕ್ಕರೆ ಸವಿ

ಕಲ್ಲುಸಕ್ಕರೆ ಕೊಳ್ಳಿರೋ ನೀವೆಲ್ಲರು
ಕಲ್ಲುಸಕ್ಕರೆ ಕೊಳ್ಳಿರೋ
ಕಲ್ಲುಸಕ್ಕರೆ ಸವಿ ಬಲ್ಲವರೆ ಬಲ್ಲರು
ಪುಲ್ಲಲೋಚನ ಶ್ರೀ ಕೃಷ್ಣನಾಮವೆಂಬ

ಎತ್ತು ಹೇರುಗಳಿಂದ ಹೊತ್ತು ಮಾರುವುದಲ್ಲ
ಒತ್ತೊತ್ತಿ ಗೋಣಿಯೊಳ್ ತುಂಬುವುದಲ್ಲ
ಎತ್ತ ಹೋದರು ಬಾಡಿಗೆ ಸುಂಕವಿದಕಿಲ್ಲ
ಉತ್ತಮ ಸರಕಿದು ಅತಿ ಲಾಭ ಬರುವಂಥ

ನಷ್ಟ ಬೀಳುವುದಿಲ್ಲ ನಾತ ಹುಟ್ಟುವುದಿಲ್ಲ
ಎಷ್ಟು ಹೊಯ್ದರು ಬೆಲೆ ರೊಕ್ಕವಿದಕಿಲ್ಲ
ಕಟ್ಟಿರುವೆಯು ತಿಂದು ಕಡಿಮೆಯಾಗುವುದಲ್ಲ
ಪಟ್ಟಣದೊಳಗೆ ಪ್ರಸಿದ್ಧವಾಗಿರುವಂಥ

ಸಂತೆ ಸಂತೆಗೆ ಹೋಗಿ ಶ್ರಮಪಡಿಸುವುದಲ್ಲ
ಸಂತೆಯೊಳಗೆ ಇಟ್ಟು ಮಾರುವುದಿಲ್ಲ
ಸಂತತ ಭಕ್ತರ ನಾಲಗೆ ಸವಿಗೊಂಬ
ಕಾಂತ **ಪುರಂದರ** ವಿಠಲನಾಮವೆಂಬ

❍

## ತನುವೆಂಬ ಭಾಂಡವ ತೊಳೆದು

ಅನುಭವದಡಿಗೆಯ ಮಾಡಿ ಅದ
ಕ್ಕನುಭವಿಗಳು ಬಂದು ನೀವೆಲ್ಲ ಕೂಡಿ

ತನುವೆಂಬ ಭಾಂಡವ ತೊಳೆದು, ಕೆಟ್ಟ
ಮನದ ಚಂಚಲವೆಂಬ ಮುಸುರೆಯ ಕಳೆದು
ಘನವಾಗಿ ಮನೆಯನ್ನು ಬಳಿದು, ಅಲ್ಲಿ
ಮಿನುಗುವ ತ್ರಿಗುಣದ ಒಲೆಗುಂಡನೆಡೆದು

ವಿರಕ್ತಿಯೆಂಬುವ ಮಡಿಯುಟ್ಟು, ಪೂರ್ಣ
ಹರಿಭಕ್ತಿಯೆಂಬ ನೀರನ್ನೆಸರಿಟ್ಟು
ಅರಿವೆಂಬ ಬೆಂಕಿಯ ಕೊಟ್ಟು, ಮಾಯಾ
ಮರವೆಂಬ ಕಾಷ್ಠವ ಮುದದಿಂದ ಸುಟ್ಟು

ಶರಣೆಂಬೊ ಸಾಮಗ್ರಿ ಹೂಡಿ, ಮೋಕ್ಷ
ಪರಿಕರವಾದಂಥ ಪಾಕವ ಮಾಡಿ
ಗುರು ಶರಣರು ಸವಿದಾಡಿ, ನಮ್ಮ
**ಪುರಂದರ** ವಿಠಲನ ಬಿಡದೆ ಕೊಂಡಾಡಿ

❍



## ಕುಶಲ ಬುದ್ದಿಯ ಗಿಳಿಯು

ಗಿಳಿಯು ಪಂಜರದೊಳಿಲ್ಲ - ಹರಿಹರಿಯೆ
ಬರಿ ಪಂಜರವಾಯಿತಲ್ಲ!

ಅಕ್ಕ ಕೇಳೆ ಎನ್ನ ಮಾತು
ಚಿಕ್ಕದೊಂದು ಗಿಳಿಯ ಸಾಕಿದೆ
ಅಕ್ಕ ನಾನಿಲ್ಲದ ವೇಳೆ
ಬೆಕ್ಕು ಕೊಂಡು ಹೋಯಿತಯ್ಯೊ

ಅರ್ಥಿಲೊಂದು ಗಿಳಿಯ ಸಾಕಿ
ಮುತ್ತಿನ್ಹಾರವನು ಹಾಕಿದೆ
ಮುತ್ತಿನ್ಹಾರ ಕೊಂಡು ಗಿಳಿಯು
ಎತ್ತಲ್ಹಾರಿ ಹೋಯಿತಯ್ಯೊ?

ಹಸುರು ಬಣ್ಣದ ಗಿಳಿಯು
ಕುಶಲ ಬುದ್ಧಿಯ ಗಿಳಿಯು
ಅಸುವುಗುಂದಿ ಮರಿಯು ತಾನು
ಹಸನ ಗೆಡೆಸಿ ಹೋಯಿತಯ್ಯೊ

ರಾಮ ರಾಮ ಎಂಬ ಗಿಳಿ
ಕೋಮಲ ಕಾಯದ ಗಿಳಿ
ಸಾಮಜಪೋಷಕ ತನ್ನ
ಪ್ರೇಮದಿ ಸಾಕಿದ ಗಿಳಿ

ಒಂಬತ್ತು ಬಾಗಿಲ ಮನೆಯೊಳು
ತುಂಬಿದ ಸಂದಣಿ ಇರಲು
ಕಂಬ ಮುರಿದು ಡಿಂಬ ಬಿದ್ದು
ಅಂಬರಕ್ಕೆ ಹಾರಿತಯ್ಯೊ

ಮುಪ್ಪಾಗದ ಬೆಣ್ಣೆ ತಿಂದು
ತಪ್ಪದೆ ಹಾಕಿದ ಹಾಲ
ಒಪ್ಪದಿಂದ ಕುಡಿದು ಕೈ
ತಪ್ಪಿ ಹಾರಿಹೋಯಿತಯ್ಯೊ

ಅಂಗೈಲಾಡುವ ಗಿಳಿ
ಮುಂಗೈ ಮೇಲೂ ಗಿಳಿ
ರಂಗ **ಪುರಂದರ** ವಿಠಲನ
ಅಂಗಣದೊಳಾಡುವ ಗಿಳಿ

❍

## ಮನವೆಂಬ ಸಂಚಿಯ ಬಿಚ್ಚಿ


ಗುಡುಗುಡಿಯನು ಸೇದಿನೋಡೋ - ನಿನ್ನ
ಒಡಲೊಳಗಿನ ಕಾಮ ಕ್ರೋಧವೀಡಾಡೊ

ಮನವೆಂಬ ಸಂಚಿಯ ಬಿಚ್ಚಿ - ನಿನ್ನ
ದಿನದ ಪಾಪಗಳೆಂಬ ಭಂಗಿಯ ಕೊಚ್ಚಿ
ತನುವೆಂಬ ಚಿಲುಮೆಯ ಚುಚ್ಚಿ - ಅಚ್ಚು
ತನ ನಾಮವೆಂತೆಂಬ ಕಿಚ್ಚನು ಹಚ್ಚಿ

ಬುರುಡೆ ಎಂಬುದೆ ನಿನ್ನ ಶಿರ ಈ
ಶರೀರವೆಂಬುದೆ ಕೊಳವೆಯಾಕಾರ
ಸುರಿ ನಾರಾಯಣನೆಂಬ ನೀರ - ಸ್ವಾದ
ಅರಿತು ತಕ್ಕಳ್ಳೋ ಎಲೊ ಮೋಜುಗಾರ

ಮೆದ್ದ ಮೇಲಮಲೇರುವುದೊ -ನಿನ್ನ
ಹೊದ್ದಿದ್ದ ಪಾಪವು ಸುಟ್ಟು ಹೋಗುವುದೊ
ಹೆದ್ದಾರಿ ವೈಕುಂಠಕಿದು - ನಮ್ಮ
ಮುದ್ದು **ಪುರಂದರ** ವಿಠಲನ ಸೇರಿಪುದು

❍



## ಕನಕದಾಸ

### ಬಯಲೊಳಗೆ ಆಲಯವೊ

ನೀ ಮಾಯೆಯೊಳಗೋ ನಿನ್ನೊಳು ಮಾಯೆಯೊ
ನೀ ದೇಹದೊಳಗೋ ನಿನ್ನೊಳು ದೇಹವೋ ಹರಿಯೆ

ಬಯಲೊಳಗೆ ಆಲಯವೊ ಆಲಯದೊಳಗೆ ಬಯಲೊ
ಬಯಲು ಆಲಯವೆರೆಡು ನಯನದೊಳಗೊ
ನಯನ ಬುದ್ಧಿಯ ಒಳಗೊ ಬುದ್ಧಿ ನಯನದ ಒಳಗೊ
ನಯನ ಬುದ್ಧಿಗಳೆರಡು ನಿನ್ನೊಳಗೊ ಹರಿಯೆ

ಸವಿಯು ಸಕ್ಕರೆಯೊಳಗೊ ಸಕ್ಕರೆಯು ಸವಿಯೊಳಗೊ
ಸವಿಯು ಸಕ್ಕರೆಯೆರಡು ಜಿಹ್ವೆಯೊಳಗೊ
ಜಿಹ್ವೆ ಮನಸಿನ ಒಳಗೊ ಮನಸು ಜಿಹ್ವೆಯ ಒಳಗೊ
ಜಿಹ್ವೆ ಮನಸುಗಳೆರಡು ನಿನ್ನೊಳಗೊ ಹರಿಯೆ

ಕುಸುಮದಲಿ ಗಂಧವೊ ಗಂಧದಲಿ ಕುಸುಮವೊ
ಕುಸುಮ ಗಂಧಗಳೆರಡೂ ಆಘ್ರಾಣದೊಳಗೊ
ಅಸಮಭವ **ಕಾಗಿನೆಲೆಯಾದಿ ಕೇಶವರಾಯ**
ಉಸುರಲೆನ್ನಳವಲ್ಲ ಎಲ್ಲ ನಿನ್ನೊಳಗೊ ಹರಿಯೆ

## ಜಲದ ಕುಲವನೇನಾದರೂ ಬಲ್ಲಿರ ?

ಕುಲ ಕುಲ ಕುಲವೆಂದು ಹೊಡೆದಾಡದಿರಿ ನಿಮ್ಮ
ಕುಲದ ನೆಲೆಯನೇನಾದರೂ ಬಲ್ಲಿರ

ಹುಟ್ಟಿದ ಯೋನಿಗಳಿಲ್ಲ ಮೆಟ್ಟಿದ ಭೂಮಿಗಳಿಲ್ಲ
ಅಟ್ಟು ಉಣ್ಣದ ವಸ್ತುಗಳಿಲ್ಲ
ಗುಟ್ಟು ಕಾಣಿಸ ಬಂತು ಹಿರಿದೇನು ಕಿರಿದೇನು
ನೆಟ್ಟನೆ ಸರ್ವಜ್ಞನ ನೆನೆಕಂಡ್ಯ ಮನುಜ

ಜಲವೆ ಸಕಲ ಕುಲಕ್ಕೆ ತಾಯಲ್ಲವೆ
ಜಲದ ಕುಲವನೇನಾದರೂ ಬಲ್ಲಿರ
ಜಲದ ಬೊಬ್ಬುಳಿಯಂತೆ ಸ್ಥಿರವಲ್ಲವೀದೇಹ
ನೆಲೆಯನರಿತು ನೀ ನೆನೆಕಂಡ್ಯ ಮನುಜ

ಹರಿಯೆ ಸರ್ವೋತ್ತಮ ಹರಿಯೇ ಸರ್ವೇಶ್ವರ
ಹರಿಮಯವೆಲ್ಲವೆನುತ ತಿಳಿದು
ಸಿರಿಕಾಗಿನೆಲೆಯಾದಿ ಕೇಶವರಾಯನ
ಚರಣ ಕಮಲದ ಕೀರ್ತಿಸುವನೆ ಕುಲಜ

❍

## ಕೊಂಪೆಯಲಿ ಶೃಂಗಾರ

ಎಂದಿದ್ದರೀ ಕೊಂಪೆ ಎನಗೆ ನಂಬಿಕೆಯಿಲ್ಲ
ಮುರಿದರಿತು ಹರಿಪಾದ ಹೊಂದುವುದು ಲೇಸು

ಎಲುವುಗಳು ತೊಲೆ - ಜಂತಿ ನರಗಳವು ಬಿಗಿದಂತೆ
ಬಲಿದ ಚರ್ಮವು ಮೇಲು ಹೊದಿಕೆಯಂತೆ
ಗಳಗಳನೆ ನುಡಿದ ನಾಲಗೆ ಗಂಟೆಯಂತೆ
ಕೆಲಕಾಲಕೀಕೊಂಪೆ ಕಡೆಗಾಹುದಂತೆ

ಕಂಡಿಗಳು ಒಂಬತ್ತು ಕಳಬಂಟರೈವರು
ಅಂಡಲೆವುದೊತ್ತಿನಲಿ ಷಡ್ವರ್ಗವು
ಮಂಡಲಕೆ ಹೊಸಪರಿಯು ಅರಿಯದೀ ಕೊಂಪೆ

ಕೊಂಪೆಯಲಿ ಶೃಂಗಾರ ಕೊಂಡಾಡಲಳವಲ್ಲ
ಕೆಂಪು ಬಣ್ಣಗಳಿಂದ ಚೆನ್ನಾಯಿತು
ಇಂಪಿನಲಿ **ಕಾಗಿನೆಲೆಯಾದಿ ಕೇಶವ**ನನ್ನು
ಸೊಂಪಿನಲಿ ನೆನೆನೆನೆದು ಸುಖಿಯಾಗೊ ಮನುಜಾ

❍

## ತನುವ ದಂಡಿಸಿ

ಸಂಸಾರ ಸಾಗರವನ್ನುತ್ತರಿಸುವೊಡೆ
ಕಂಸಾರಿ ನಾಮವೊಂದೆ ಸಾಕು ಮನವೆ

ಯತಿಯಾಗಬೇಡ ನೀ ವೈರಾಗ್ಯವನೆ ಪಿಡಿದು
ಸತತ ವ್ರತವ ಮಾಡಿದನೆಂಬ ಹಮ್ಮು ಬೇಡ
ಶ್ರುತಿ ಸ್ಮೃತಿಗಳನರಿತು ನಡೆವೆನೆನಬೇಡ
ರತಿಪತಿಯ ಶ್ರೀನಾಮವೊಂದೆ ಸಾಕು

ತನುವ ದಂಡಿಸಿ ತುದಿಯ ಕೋಡುಗಲ್ಲಿನ ಮೇಲೆ
ವನಿತೆಯನು ಬಿಟ್ಟು ತಪವಿರಲು ಬೇಡ
ಅನುವರಿತು ನೀರೊಳಗೆ ಬಿಡದೆ ಮುಳುಗಲು ಬೇಡ
ವನಜಾಕ್ಷನಾಮವೊಂದೇ ಸಾಕು ಮರುಳೆ

ತೀರ್ಥಯಾತ್ರೆಗೆ ನೀನು ತಿರುಗಿ ಝೂಂಪಿಸಿ ಕೃ-
ತಾರ್ಥನಾದನೆಂಬ ಹೆಮ್ಮೆ ಬೇಡ
ಧೂರ್ತಭಂಜನ **ಕಾಗಿನೆಲೆಯಾದಿಕೇಶವನ**
ಕೀರ್ತನೆಯ ಮಾಡಿ ಸುಖಿಯಾಗೊ ಮನವೆ

❍

# ನಿಜಗುಣ ಶಿವಯೋಗಿ

## ಕೋಗಿಲೆ ಚೆಲ್ವ ಕೋಗಿಲೆ

ಕೋಗಿಲೆ ಚೆಲ್ವ ಕೋಗಿಲೆ । ಮುದ್ದು
ಕೋಗಿಲೆ ಜಾಣ ಕೋಗಿಲೆ

ಹಿಂದೆ ತಪದೊಳೀಶನೊಂದಿರುತಿರಲೆಚ್ಚ
ಬೆಂದ ಕಾಮನ ಬಿಟ್ಟು ಕೋಗಿಲೆ
ಬಂದು ಬೇಗದಿ ಬಾಲೇಂದುಧರನ ಕೂಡಿ
ಕುಂದದೆ ನೀ ಬಾಳು ಕೋಗಿಲೆ

ಮನುಮುನಿಗಳ ನೀತಿಯನು ಕೆಡಿಸುವ ದುಷ್ಟ
ಮನಸಿಜನನು ಮೀರಿ ಕೋಗಿಲೆ
ಘನಪದವನು ತನ್ನ ನೆನವರಿಗೊಲಿದೀವ
ಧನದಮಿತ್ರನ ಸಾರು ಕೋಗಿಲೆ

ನಲ್ಲರನಗಲಿದ ಮೆಲ್ಲೆದೆಯರ ಕೊಲ್ವ
ಪುಲ್ಲಶರನ ಪಿಂಗಿ ಕೋಗಿಲೆ
ಎಲ್ಲ ಜೀವರಿಗೆರವಿಲ್ಲದೊಲವನೀವ
ಬಲ್ಲಭವನೊಳಿರು ಕೋಗಿಲೆ

ಮಂಗಳರವದೊಳಂಗನ ಬಣ್ಣಿಸೆ
ಭಂಗವಲ್ಲದೆ ನೋಡು ಕೋಗಿಲೆ
ಕಂಗೊಳಿಸುವ ಸರ್ವಮಂಗಳೆಯರಸನ
ಪಿಂಗದೆ ನೀ ಪಾಡು ಕೋಗಿಲೆ

ದುರುಳ ಕಂತುವಿನೊಡನಿರೆ ಲೋಕದೊಳು ನಿನ್ನ
ಪರಪುಟ್ಟನೆಂಬರು ಕೋಗಿಲೆ
ಧರೆಗೆ ಜನಕನಾದ ಗುರು **ಶಂಭುಲಿಂಗ**ದ
ಚರಣಪಲ್ಲವ ಪಿಡಿ ಕೋಗಿಲೆ

❍

# ಚಿದಾನಂದ ಅವಧೂತರು

## ಮುತ್ತಿನ ಮಹಿಮೆ


ಮುತ್ತು ಬಂದಿದೆ ಕೊಳ್ಳಿರಣ್ಣಾ ಅದಕೆ
ವೆಚ್ಚವೇನಿಲ್ಲ ಬೆಲೆಯಾಗದಣ್ಣಾ

ಥಳತಳ ಹೊಳೆಯುತದಣ್ಣಾ
ಅದು ಬಲ್ಲ ಜಾಣಂಗಿನ್ನು ಬಯಲೊಳಗಣ್ಣ
ಕೂದಲ ಎಳಿಗಿಂತ ಅದು ಸಣ್ಣ
ಬಣ್ಣ ಬಣ್ಣದ ಬ್ರಹ್ಮದ ಲೋಕಣ್ಣ

ತನು ಎಂಬ ತಕ್ಕಡಿ ಪಿಡಿದು
ಆದಿ ಶರಣರು ತೂಗ್ಯಾರು ವಾಸನೆ ಕಳೆದು
ಮನವೆಂಬ ಮಣಿದಾರ ಪಿಡಿದು
ಲೋಕ ಹೋಗದೆ ತೂಗ್ಯಾರು ಯೋಗ ಮಾಡಿ ಅವರು

ಮುತ್ತಿನ ಮಹಿಮೆ ಮುಂದದ
ಇದರ ಗೊತ್ತು ತಿಳಿಯದೆ ಮಂದಿ ಸತ್ತು ಹೋಗೇದ
ಸುತ್ತಮುತ್ತಲು ಸುಳಿವುತಲದು
**ಚಿದಾನಂದ**ನ ಚಿತ್ತದೊಳಗದ

❍



## ನಾನು ಎಂಬುದು ಅಳಿದು

ಮಡಿಯಾಗಿ ತಂಗಿ ಮಹಾಲಿಂಗ ಪೂಜೆ ಮಾಡೇ
ಮುಕ್ತಿ ಸದನಕೇರುವೆ ನೋಡೇ

ದೇಹವೆಂಬ ಮನೆಯ ಸಾರಿಸೆ
ಮೋಹವೆಂಬ ತಂಗಳ ಮಡಕೆ ಹೊರಗಿರಿಸೆ
ಸೋಹಂ ಎಂಬ ರಂಗವಲ್ಲಿಯನಿಡೆ
ಜ್ಯೋತಿಯನು ಬೆಳಗಿಸೆ ನೀನು

ನಾನಾವಾಸನೆಯ ಮೈಲಿಗೆಯನು ಬಿಡೆ
ಮನಮೈಲಿಗೆಯನು ತೊಳೆ
ಸ್ವಾನುಭವದ ಪೀತಾಂಬರವನುಡೆ
ನಾನು ಎಂಬ ಕಸವನು ಗುಡಿಸೆ
ನಾದದ ಸುಖವನು ಅನುಭವಿಸೆ ನೀನು

ಧ್ಯಾನ ಮನನೆನಪಿಲ್ಲದಾಗಿ
ಸ್ವಸ್ಥಾನದಲ್ಲಿ ಭಾನುವೀಗ ಬೆಳಗಿದಂತಾಗಿ
ನಾನು ಎಂಬುದ ಅಳಿದು ನೀನೆ
**ಚಿದಾನಂದ**ನಾಗಿ ಪೂಜಿಸು

❍

## ಕಾಯುವ ಬಿಟ್ಟು ಆತ್ಮೆಲ್ಲಿ


ದೇಹವ ಬಿಟ್ಟು ಬ್ರಹ್ಮವು ಎಂತೆನೆ
ದೇಹಬಿಟ್ಟು ಬ್ರಹ್ಮವೆಲ್ಲಿ
ದೇಹವು ಬ್ರಹ್ಮವು ಒಂದೆಯೋ
ದೇಹವು ಇಹುದು ಬ್ರಹ್ಮದಲ್ಲಿ

ಮಾಯೆಯ ಬಿಟ್ಟು ಬ್ರಹ್ಮವು ಎಂದೆನೆ
ಮಾಯೆಯ ಬಿಟ್ಟು ಬ್ರಹ್ಮೆಲ್ಲಿ
ಕಾಯ ಬಿಟ್ಟು ಆತ್ಮವು ಎಂತೆನೆ
ಕಾಯುವ ಬಿಟ್ಟು ಆತ್ಮೆಲ್ಲಿ

ಪಿಂಡವ ಬಿಟ್ಟು ಬ್ರಹ್ಮಾಂಡವೆಂತೆನೆ
ಪಿಂಡಾಂಡಿಲ್ಲದೆ ಬ್ರಹ್ಮಾಂಡವೆಲ್ಲಿ
ಖಂಡವ ಬಿಟ್ಟಾ ಖಂಡವೆಂತೆನೆ
ಖಂಡವ ಬಿಟ್ಟು ಅಖಂಡವದೆಲ್ಲಿ

ಜಗವನು ಬಿಟ್ಟು ತನ್ನನು ತೋರನೆ
ಜಗವನು ಬಿಟ್ಟು ತಾನೆಲ್ಲಿ
ಜಗಪತಿ **ಚಿದಾನಂದ** ಸದ್ಗುರು ನೀನು ನೀ
ಜಗಸಂಶಯವೆಲ್ಲಿ

❍



## ಮಲ್ಲಿಗೆ ಮಳೆಗರೆವುದ ಕಂಡೆ

ಕಣ್ಣಿನೊಳು ಕಣ್ಣುಕಂಡೆ ಕಾಣಬಾರದನು ಕಂಡೆ
ನೋಡಿ ಕಣ್ಣಿನೊಳು ಪನ್ನಗಧರನ ಕಂಡೆ

ಝಗ ಝಗಿಸುವುದನು ಕಂಡೆ ಜ್ಯೋತಿ ಪ್ರಕಾಶವ ಕಂಡೆ
ನೋಡಿ ಕಣ್ಣಿನೊಳು ನಿಗಿನಿಗಿ ಕಿಚ್ಚು ಸುರಿಸುವುದ ಕಂಡೆ

ಮುತ್ತು ಸುರಿವುದ ಕಂಡೆ ಮಲ್ಲಿಗೆ ಮಳೆಗರೆವುದ ಕಂಡೆ
ನೋಡಿ ಕಣ್ಣಿನೊಳು ರತ್ನದ ಕಾಂತಿ ಕಂಡೆ

ಸಾಧು ಸತ್ಪುರುಷರ ಕಂಡೆ ಸಾಕ್ಷನ್ನಿರುಪಾಧಿಯ ಕಂಡೆ
ನೋಡಿ ಕಣ್ಣಿನೊಳು ಗುರು **ಚಿದಾನಂದ**ನ ಕಂಡೆ

❍

## ಗುಣವೆಲ್ಲ ಕಳಕೊಂಡೆ

ಎಂಥಾ ಗಾರುಡಿಗಾ ಸದ್ಗುರು
ಗುರುವಿನ ನಂಬಿ ನಾ ಗುಣವೆಲ್ಲ ಕಳಕೊಂಡೆ

ಶರಣು ಮಾಡೆಂದರೆ ಶರಣು ಮಾಡಲು ಪೋದೆ
ಕರದೊಳು ಇದ್ದ ನಿಜಭೂತಿ
ಶಿರದ ಮೇಲೆ ಎನ್ನ ಮೈಮೇಲೆ ಎಳೆಯಲು
ಶರೀರವ ಮರೆತು ನಾ ಸಾಕ್ಷಿಯಾದೆನು

ಯಾರೂ ಇಲ್ಲದ ನೋಡಿ ಬೇರೆನ್ನ ಕರೆದೊಯ್ದು
ಮರಕಿವಿಯೊಳು ಇಟ್ಟು ಮಂತ್ರಿಸಿದ
ನಾರಿ ಬದುಕು ಮನೆಮಕ್ಕಳನೆಲ್ಲ
ಸೇರಿ ಸೇರದಂತೆ ಮಾಡಿದನೆ ಗುರು

ಭವಗೇಡಿ ಕುಲಗೇಡಿ ಸಂಗಗೇಡಿಯಾದೆ
ಇವರ ವಿಶ್ವಾಸದ ಫಲದಿಂದಾಗಲೇ
ಇವರ ಮೇಲೆ ಎನ್ನ ವ್ಯಾಕುಲ ಹತ್ತಲು
ವ್ಯವಹಾರವೆಂಬುದು ಎಡವಟ್ಟಾಯಿತು

ಮಂತ್ರಿಸಿದಾಗಳೆ ಮರುಳು ಎನ್ನ ಮನ
ಮಂತ್ರ ತಂತ್ರಕೆ ಬಗ್ಗಿತಲ್ಲ
ಮಂತ್ರದ ಮಹಿಮೆಯು ಮಹಾಮಹಿಮನ ಕೈ
ಮಾಂತ್ರಿಕರೊಳು ಬಲು ದೊಡ್ಡವನೆ ಗುರು

ಇವರ ನಂಬಿದ ಮೇಲೆ ಇವರಂತೆ ಆಗದೆ
ಭುವನಕ್ಕೆ ಬಂದುದು ಫಲವೇನು ?
ವಿವರಿಸಿ ಹುರುಳಿಲ್ಲ ಹೇಳು ಕೇಳುವದೇನು
ಭುವನ ರಕ್ಷಕ **ಚಿದಾನಂದ** ತಾನಾದನು

❍

## ಶಕುನದ ಹಕ್ಕಿ

ಸೈ ಶಬಾಸ ಗಬರು ದರೋಡೆ ಬರತದ
ಅಬಬ ನೋಡಿದರ ಅರ್ಭಾಟ
ಸಬದ ಐತಿದು ಸಾಧುರ ಪುಣ್ಯ
ಶುಭ ನುಡೀತದ ಶಕುನದ ಹಕ್ಕಿ

ಐದು ಮಂದಿ ನೆಲಗಳ್ಳರು ಕೂಡಿ
ಸಾರಿ ಆತ್ಮದಲಿ ಸೇರುವರು
ಐಕ್ಯದಿಂದ ಶ್ರೀಗುರುವಿನ ನೆನೆದರೆ
ಐದು ಮಂದಿ ಬಿಟ್ಟೋಡುವರು

ಎಂಟು ಹತ್ತು ಮಂದಿ ಬಂಟರು ಕೂಡಿ
ಮುತ್ತಿಗೆ ಹಾಕಿ ನಿನ್ನ ಕೆಡಹುವರು
ಸತ್ಯನಾದ ಶ್ರೀಗುರುವಿನ ನೆನೆದರೆ
ಹತ್ತು ಮಂದಿ ಬಿಟ್ಟೋಡುವರು

ನೋಡಿ ಒಂದನೊಗಿ ಕಾಡವು ಹುಲಿಗಳು
ಬೇಡಿದ ಪದಾರ್ಥ ದೊರಕುವದು
ಕೂಡಿ ಭಜಿಸೊ ಶ್ರೀ **ಚಿದಾನಂದ**ನ
ಮೂಲಮಂತ್ರ ಪ್ರಣವ ದೊರಕದು

❍

## ಯಮನೇಮ ಬೇಡ

ವೇದ ಬೇಡ ನಿನಗೆ ಶಾಸ್ತ್ರ ಬೇಡ
ಗೋಧಿಕಾಳಿನಷ್ಟು ಭಕ್ತಿಯಿದ್ದರೆ ಸಾಕು
ಆವಾವ ಉಪವಾಸ ಬೇಡ । ಅಡವಿ ಸೇರ ಬೇಡ
ಕಾವಿ ಕಮಂಡಲ ಧರಿಸಲು ಬೇಡ


ಯೋಗ ಮಾಡಲು ಬೇಡ
ಯಮನೇಮವು ಬೇಡ
ಎಲ್ಲಿಗ್ಹೋಗದೆ ದೃಷ್ಟಿ
ಅಲ್ಲೆ ನಿಲ್ಲಿಸಿದರೆ ಸಾಕು

ಮೂಗ ಹಿಡಿಯಲು ಬೇಡ
ಮುಖ ಬಿಗಿಯಲು ಬೇಡ
ಆದಿಯೊಂದಾದಿ ನೀರಲಿ
ಮುಳುಮುಳಗಲಿ ಬೇಡ

ಎರಡು ದೃಷ್ಟಿಯು ಕೂಡಿ
ಇರಲಿರಲಿ ಒಂದೂ
ಶರೀರದೊಳಗೆ ಬಯಲಾಗಿ
ಅರುವು ಅಪ್ಪುವುದೊ

ಅರುವಿಗೆ ಅರಿವುಂಟೋ
ಗುರುವಿಗೆ ಗುರುವುಂಟೋ
**ಗುರು ಚಿದಾನಂದನ**
ಗುರುತ್ತಿದ್ದರೆ ಸಾಕೋ !

❍



## ಕೋಟಿ ಮಿಂಚಿನ ಬೆಳಕು

ಹ್ಯಾಂಗ ಮರೆಯಲಿ । ಗುರುವಿನ
ಹ್ಯಾಂಗ ಮರೆಯಲೀ

ಹ್ಯಾಂಗ ನಾನು ಮರೆಯಲವನ
ಶರೀರದಾಶೆಯ ಬಿಡಿಸಿದವನ
ಪರಿಪರಿಯಿಂದ ತಿಳಿಸಿ ಎನ್ನೊಳು
ಪರಬ್ರಹ್ಮನ ತೋರಿಸಿದವನ

ಮೂಢತನದಿ ಹೇಡಿ । ನಾನು
ಆದೆನೋ ಬಲು ಖೋಡಿ
ಮನಸಿನ ಬೆನ್ಹತ್ತಿ । ಕೇಡು
ಮಾಡಿಕೊಂಡೆನೊ ಅತಿ
ಬಾಡಿಗೆತ್ತಿನಂತೆ ದುಡಿದು ದುಡಿದು

ಕಾಡಜನ್ಮ ತಿರುಗಿ ಕೆಟ್ಟೆನು
ಮೂರು ಮಂದಿ ಪ್ರೀತಿಯ । ಗೆಳೆಯರ
ಮೋಹವ ಬಿಡಿಸಿದನು
ಆರು ಮಂದಿ ವೈರಿಗಳನು
ಊರ ಹೊರಗ ಹಾಕಿದನು
ಪರಮಾರ್ಥದ ತತ್ವದೊಳು ಮನವ
ಸ್ಥಿರವಾಗಿ ನಿಲ್ಲಿಸಿಬಿಟ್ಟನು
ಎಂಟು ಮಂದಿ ಬಂಟರ । ಹೊಡೆದು
ಸೊಂಟವ ಮುರಿದನು
ಏಳು ಪಾಳೇಗಾರರ । ಕಟ್ಟಿ
ಗೋಳು ಹಿಡಿಸಿದನು
ಕಾಳಗತ್ತಲೆಯ ಮನೆಯೊಳಗ
ಕೋಟಿ ಮಿಂಚಿನ ಬೆಳಕ ತೋರಿದನು
ಒಂಬತ್ತು ಬಾಗಿಲಗಳಿಗೆಲ್ಲಾ
ಕೀಲಿ ಹಾಕಿದನು
ಮತ್ತೆ ನಾನು ಭವಕೆ । ಮರಳಿ
ಬರದಂತೆ ಮಾಡಿದನು
ಸುತ್ತು ಮುತ್ತು ಎತ್ತ ನೋಡಲು
ಚಿತ್ತು ಚಿದಾನಂದದಿ ಬೆರೆಸಿದನು

❍

# ಮುಪ್ಪಿನ ಷಡಕ್ಷರಿ


## ಬಯಲು ಭ್ರಾಂತು

ಏಕೆ ಬಯಲು ಭ್ರಾಂತು ನಿನಗೆ
ಸಾಕು ಪರರ ತಿಳುಹದಿರು ವಿ
ವೇಕಿಯಾಗಿ ನಿನ್ನ ನೀನೆ ತಿಳಿದು ನೋಡಲೈ

ತನ್ನ ತಾನೆ ಪಕ್ವಮಾದ
ಹಣ್ಣು ತೊಟ್ಟು ಕಳಚಿಬಿದ್ದು
ಮುನ್ನಿನಂತೆ ಹೋಗಿ ತೊಟ್ಟು ಹತ್ತಬಲ್ಲದೆ ?
ಬನ್ನಬಡುವ ಜನ್ಮ ತೀರಿ
ತನ್ನ ನಿಜವ ಅರಿದ ಆತ್ಮ
ಮುನ್ನಿನಂತೆ ಲೋಕದವರ ಕೂಡಬಲ್ಲನೇ ?

ಹಸಿಯ ಕಾಯ ಕೊಯ್ದು ತಂದು
ಬಿಸಿಯ ತೋರಿ ಮುಸುಕಿ ಇಡಲು
ನಸಿದು ಹೋಹುದಲ್ಲದದುವೆ ಪಕ್ವವಪ್ಪುದೇ ?
ವಸುಧೆಯಾತ್ಮನನ್ನು ತಂದು
ಸಸಿನೆ ಇಟ್ಟು ಬೋಧಿಸಿದಡೆ
ಅಸಮಜ್ಞಾನಿಯಾಗಿ ಶರಣರೊಳಗೆ ಬೆರೆವನೇ ?

ಸತ್ಯ ಜ್ಞಾನ ತಪವು ಮೌನ
ನಿತ್ಯಕ್ಷಮೆಯು ದಮೆಯು ಶಾಂತಿ



ಉತ್ತಮತ್ವವಿರಲು ಪಕ್ವವೆಂದು ತಿಳಿವುದು
ಒತ್ತಿ ನೋಡಲವರ ಮನವ
ಮತ್ತೆ ಬೈಯ್ದು ಹೊಯ್ದು ನೋಡೆ
ಚಿತ್ತದಲ್ಲಿ ಸ್ವಸ್ಥವಾಗಿ ಕಲಕದಿರ್ಪುದು

ಹುಸಿಯು ಹುಳುಕು ಡಂಭಕತ್ವ
ಕೊಸರು ಕೋಪ ನೀಚಹೃದಯ
ನುಸುಳು ವಿಷಯ ವಿರಲಪಕ್ವವೆಂದು ಅರಿವುದು
ಸಸಿನೆ ಅವನ ಕೆಣಕಿ ನೋಡೆ
ಕಿಸುಕುಳತ್ವ ತೋರುತಿಹುದು
ಒಸೆದು ಅವರ ತಿಳುಹೆ ಸ್ವಸ್ಥಶರಣರಪ್ಪರೆ ?

ಇವರ ಭೇದ ಅರಿಯದನಕ
ಅವರ ತಿಳುಹಿ ಫಲವದೇನು ?
ಭವಕೆ ಹೋಗಲವರು ತನಗೆ ಕೊರತೆಯಪ್ಪುದೇ ?
ಭವದ ಕಡೆಯ ಕಂಡ ಬಳಿಕ
ಶಿವನ ನಿಜವು ತಾನೆಯಹುದು
ಶಿವ **ಷಡಕ್ಷರಾಂಕ** ನಿಮ್ಮ ಶರಣಪ್ಪರು

❍

ಬೆನ್ನಬಿಡದಕ್ಕಯ್ಯ ।

ನಮ್ಮ ಮನೆ ಕೇಳಕ್ಕ
ಬ್ರಹ್ಮ ಒಂದೆಡೆಗೊಂಡು
ನಮ್ಮ ಮನೆ ಸುತಬಂಧುಗಳ ಕೊಂದಿತು

ಏಳು ಮಕ್ಕಳ ಕೊಂದು
ಏಳು ತೊತ್ತಿರ ಕೊಂದು
ಮೇಲ್ಶೆವರಣ್ಣಗಳ ಕೊಂದಿತಕ್ಕ
ಕಾಳಿನೊಳಗಿರುತಿರ್ಪ
ಜಾಳಿಗೆಲ್ಲವ ತಿಂತು
ಬಾಳಲೀಸದು ಮನೆಯನೆಲ್ಲರಂತೆ

ಮೂರು ಕರುಗಳ ಕೊಂದು
ಮೂರು ಪಶುಗಳ ಕೊಂದು
ಮೂರ್ಶೆದು ಕೋಣಗಳ ಕೊಂದಿತಕ್ಕ
ಮೂರು ಸೊಸೆಯರ ಕೊಂದು
ಮೂರಳಿಯರನು ಕೊಂದು
ಕೇರಿಕೇರಿಗಳಲ್ಲಿ ಹರಿಯುತಿದೆಕೋ

ಜಡೆಗಳನು ಕೆದರಿ ತಾ
ಹಿಡಿದು ಶೂಲದಿ ಪೆಣನ
ಬಿಡದೆ ಮೈಯೊಳು ಹಾವ ತೊಡರಿಸಿಹುದು
ಕಡಿದ ತಲೆ ಕರದೊಳಗೆ
ಮಡಿದ ತಲೆ ಕೊರಳೊಳಗೆ
ಬಿಡದೆನ್ನನಂಜಿಸುತ ಬರುತಲಿದೆಕೋ



ಇರುಳು ಸುಳಿಯಲಿಕಂಜಿ
ಪುರಮೂರು ಹಾಳಾಗಿ
ನೆರವ ಜನರುಗಳೆಲ್ಲ ಓಡಿತಕ್ಕ
ಪುರಪುರದ ಮಧ್ಯದಲಿ
ಉರಿವುತ್ತ ತಿರುಗುತಿದೆ
ಇರುಳು ನಾ ಕಣ್ಮುಚ್ಚಲಮ್ಮೆನವ್ವ

ಇನ್ನೇನನೆನ್ನುವೆನೆ
ಬೆನ್ನ ಬಿಡದಕ್ಕಯ್ಯ
ತನ್ನನಗಲುವಳೆಂದು ಹಿಂದು ಮುಂದು
ಎನ್ನ ಕಾದಿರುತಿಹುದು
ತನ್ನ ಹೆಸರೇನೆನಲು
ಚೆನ್ನಿಗ ಷಡಕ್ಷರಿಯ ಲಿಂಗವಂತೆ

❍

## ಹಾರು ಕಂಡ್ಯಾ ಹಂಸ

ಹಾರು ಕಂಡ್ಯಾ ಹಂಸ ಹಾರು ಕಂಡ್ಯಾ – ನೀನು
ಮೂರು ಬಲೆಗಳೊಳಗೆ ನಿಲುಕದೆ

ಆಶಾಪಾಶದೊಳಗೆ ಸಿಲ್ಕಿ – ಮಾಯಾ
ರೋಷ ಕಿಚ್ಚಿನಲ್ಲಿ ಬೇಯದೆ
ವಾಸವ ಹರಿಯಜರುಗಳು ಸಿಕ್ಕಿ ಕೆಟ್ಟ
ಹೇಸಿ ಪಥವ ಮೆಟ್ಟದೆ.

ನಿರಯ ಸರಸಿಯೊಳಾಡದೆ – ನೀನು
ಇರದೆ ಘನದತ್ತ ಹಾರುಕಂಡ್ಯಾ ?
ಗಿರಿಯ ಸರಸಿಯೊಳಗೊಪ್ಪುವ – ನೀನು
ಉರುತರು ಕ್ಷೀರವ ಸವಿ ಕಂಡ್ಯಾ

ಸಾಸಿರದಳ ಕಮಲದ ಕರ್ನಿಕೆಯೊಳು – ಅಲ್ಲಿ
ಭಾಸುರ ಬೆಳಗಿನ ಪ್ರಭೆಯೊಳು
ವಾಸವಾಗಿರ್ಪ **ಷಡಕ್ಷ**ರವರ ಮಹಾ
ಧೀಶನ ನೀ ಹೋಗಿ ನೆರೆ ಕಂಡ್ಯಾ

❍

## ಜೀವ - ದೇವ

ಜೀವತ್ವವೆಂಬುದಾವುದೆಂದರಿಯರು ಕೇಳು ಮನವೆ
ಭಾವದೊಳು ಲಿಂಗ ನೆಲಸಿರೆ ದೇವತ್ವವಪ್ಪುದು ಕೇಳುಮನವೆ

ಉರಿವ ಕಿಚ್ಚನೆ ಹೊಕ್ಕು ಬೇಯದೆ ಹೊರಟರೆ ಕೇಳು ಮನವೆ
ನರರುಗಳದನು ದೇವತ್ವವೆಂದೆಂಬರು ಕೇಳು ಮನವೆ
ಭರದಿಂದ ಬಂದು ಹೊಳೆಯ ಮೇಲೆ ನಡೆದರೆ ಕೇಳು ಮನವೆ
ಅರರೆ ಅವರಾಚರಿಸಿದುದೇ ದೇವತ್ವವೆಂಬರು ಕೇಳುಮನವೆ

ಚಿತ್ತದೊಳಿಹ ಮಾತು ಹೇಳಲು ಮರ್ತ್ಯರು ಕೇಳು ಮನವೆ
ಸತ್ಯವಿದತಿಶಯ ದೇವತ್ವವೆಂಬರು ಕೇಳುಮನವೆ
ಹತ್ತಿ ಗಗನದಲ್ಲಿ ನಡೆದರೆ ಧರೆಯೊಳು ಕೇಳು ಮನವೆ
ಉತ್ತರೋತ್ತರ ದೇವತ್ವವೆಂಬರು ಕೇಳುಮನವೆ

ದೂರದೃಷ್ಟಿ ದೂರಶ್ರವಣಗಳಿಂದಲಿ ಕೇಳುಮನವೆ
ಸಾರಿ ದೃಷ್ಟನ ಹಳೇ ದೇವತ್ವವೆಂಬರು ಕೇಳುಮನವೆ
ಆರೈವ ಮನದಿ **ಷಡಕ್ಷರಲಿಂಗ**ವ ಕೇಳುಮನವೆ
ಬೇರಿಲ್ಲದೊಡಗೂಡಬಲ್ಲರೆ ದೇವತ್ವ ಕೇಳುಮನವೆ

❍

# ಸರ್ಪಭೂಷಣ ಶಿವಯೋಗಿ

## ಮನವೆಂಬ ಮರ್ಕಟ

ಮನವೆಂಬ ಮರ್ಕಟನ ತಡೆಯಲಾರೆನು ದೇವಾ
ಎನಿತಿದರ ಚಪಲ ಚೇಷ್ಟೆಗಳ ವರ್ಣಿಸಲಿ

ಧರೆಯನೊಲ್ಲವನೊಂದೆ ಕೂಡೆಯಿಂದಾಳುವುದು
ಗಿರಿಯ ಗುಹೆಯೊಳು ಕುಳಿತು ತಪವ ಮಾಡುವುದು
ತರುಣಿಯರ ಕಂಕುಳೊಳು ಕೈಯಿಕ್ಕಿ ನಗಿಸುವುದು
ಕರಿಯ ಮೇಲಂಬಾರಿಯಲ್ಲಿ ಮೆರೆಯುವುದು

ಅನುಭವದಿ ಜೀವೇಶರೈಕ್ಯವನು ತಿಳಿಯುವುದು
ಧನವ ದಶಲಕ್ಷವನು ಗಳಿಸಿ ಹೂಡುವುದು
ಮನೆಯ ಮಕ್ಕಳ ಬಿಟ್ಟು ವಿರತಿಯಂ ಪೊರಡುವುದು
ವನಜೋದ್ಭವಾಂಡವೊಂದೊಂದೆನೆಣಿಸುವುದು

ಅರಿಗಳನು ಹಿಡಿದು ಹೆಡೆಮುರಿಗಟ್ಟಿ ಹೊಸಗುವುದು
ಸುರಲೋಕಕೈದಿ ರಂಭೆಯೊಳು ರಮಿಸುವುದು
ಬರಿದೆ ನೀನೇಕೆ ಇನಿತು ಚೇಷ್ಟಿಸುವೆಯೆನೆ ಭುವಿಯೊ
ಳಿರುವ ಕೋತಿಗಳಾರ ಶಿಷ್ಯರೆಂಬುವುದು

ಪಿಡಿವನೆನೆ ಮೊದಲೆ ಮುಮ್ಮೂರ ಹಾರುತಿಹುದು
ಪೊಡೆವೆನನಲಾ ನುಡಿಯದಾರದೆಂಬುವುದು
ತುಡುಗ ದನವಿನ ಕೊರಳ ಗುದ್ದೆಯಂದದೊಳೆನ್ನ
ನೆಡೆವಿಡದೆ ಮೂಜಗದೊಳ್ ಎಳೆದಾಡುತಿಹುದು

ಧರೆಯ ನಿಕ್ಷೇಪವನು ಕದ್ದೆಲ್ಲಿಗೋಡಿದರೂ
ಧರೆಯದಲ್ಲಲ್ಲಿ ಕಳ್ಳನ ಕಾಡುವಂತೆ
**ಗುರುಸಿದ್ಧ** ಎನ್ನ ಮನವಾವ ವಿಷಯಂಗಳೊಳ
ಗೆರಗಲಲ್ಲೆಲ್ಲ ನೀಂ ಕಾಣಿಸದೆ ಬಿಡಿಸೈ

❍

## ಬಿಡು ಬಾಹ್ಯದೊಳು

ಬಿಡು ಬಾಹ್ಯದೊಳು ಡಂಭವ ಮಾನಸದೊಳ
ಗೆಡವಿಡದಿರು ಶಂಭುವ
ಒಡಲೊಳು ವಂಚಿಸಿ ಹೊರಗೆ ನೀ ಕೀರ್ತಿಯ
ಪಡೆದರೆ ಶಿವ ನಿನಗೊಲಿವನೆ ಮರುಳೇ

ಜನಮೆಚ್ಚೆ ನಡೆಕೊಂಡರೇನುಂಟು ಲೋಕದಿ
ಮನಮೆಚ್ಚೆ ನಡೆಕೊಂಬುವುದೆ ಚೆಂದವು
ಜನರೇನು ಬಲ್ಲರು ಒಳಗಾಗೊ ಕೃತ್ಯವ
ಮನವರಿಯದ ಕಳ್ಳತನವಿಲ್ಲವಲ್ಲಾ

ಜನರು ಮೆಚ್ಚುತೆ ನಿನ್ನ ಕೈಲಾಸಕೊಯ್ವರೆ
ಜನ ಮೆಚ್ಚದಿರೆ ಶಿವ ಬಿಡುತಿಹನೇ ?
ಜನರಿಲ್ಲಿ ನಿನ್ನನು ದೊಡ್ಡಾತನೆಂದರೆ
ಚಿನುಮಯ ಶಿವನಲ್ಲೆ ಅರಿಯನೆ ಮರುಳೆ

ಮನದೊಳು ಶಿವ ತಾನು ಮನೆಮಾಡಿಕೊಂಡಿಹ
ಮನಮೆಚ್ಚಿ ನಡೆದರೆ ಶಿವ ಮೆಚ್ಚುವ
ಮನಕಂಜಿ ನಡೆಯದೆ ಜನಕಂಜಿ ನಡೆದರೆ
ಮನದಾಣ್ಮ **ಗುರುಸಿದ್ಧ** ಮರೆಯಾಗನೊಲ್ಲ

❍

## ಶರೀರನೆಂದೆಂಬುವ ಹೊಲ

ಶರೀರನೆಂದೆಂಬುವ ಹೊಲನ ಹಸನ ಮಾಡಿ
ಪರತತ್ವ ಬೆಳೆಯನೆ ಬೆಳೆದುಣ್ಣಿರೋ

ಶಮದಯೆಯೆಂಬುವ ಎರಡೆತ್ತುಗಳ ಹೂಡಿ
ವಿಮಲ ಮಾನಸವ ನೇಗಿಲನೆ ಮಾಡಿ
ಮಮಕಾರವೆಂದೆಂಬ ಕರಿಕೆಯ ಕಳೆದಿಟ್ಟು
ಸಮತೆಯೆಂದೆಂಬ ಗೊಬ್ಬರವ ಚೆಲ್ಲಿ

ಗುರುವರನ ಉಪದೇಶವೆಂಬ ಬೀಜವ ಬಿತ್ತಿ
ಮೆರೆವ ಸಂಸ್ಕಾರವೃಷ್ಟಿಯ ಬಲದಿ
ಅರಿವೆಂಬ ಪೈರನೆ ಬೆಳೆಸುತ ಮುಸಗಿರ್ದ
ದುರಿತ ದುರ್ಗುಣವೆಂಬ ಕಳೆಯ ಕಿತ್ತು

ಸ್ಥಿರಮುಕ್ತಿಯೆಂದೆಂಬ ಧಾನ್ಯವ ಬೆಳೆದುಂಡು
ಪರಮಾನಂದದೊಳು ತಣ್ಣನೆ ದಣಿದು
**ಗುರುಸಿದ್ಧ**ನಡಿಗಳಿಗೆರಗುತ್ತೆ ಭವವೆಂಬ
ಬರವನು ತಮ್ಮ ಸೀಮೆಗೆ ಕಳುಹಿ

❍

## ಅನುಭಾವದಡಿಗೆ

ಅನುಭಾವದಡಿಗೆಯ ಮಾಡಿ ಆದ –
ಕ್ಕನುಭಾವಿಗಳು ಬಂದು ನೀವೆಲ್ಲ ಕೂಡಿ

ತನುವೆಂಬ ಭಾಂಡವ ತೊಳೆದು ಕೆಟ್ಟ –
ಮನದ ಜಂಜಡವೆಂಬ ಮುಸುರೆಯ ಕಳೆದು
ಘನವೆಂಬ ಮನೆಯನೆ ಬಳಿದು ಅಲ್ಲಿ
ಬಿನುಗು ತ್ರಿಗುಣವೆಂಬ ಒಲೆಗುಂಡ ತುಳಿದು

ವಿರತಿಯೆಂಬುವ ಮಡಿಯುಟ್ಟು ಪೂರ್ಣ
ಹರಿಭಕ್ತಿಯೆಂಬ ನೀರಿನ ಎಸರಿಟ್ಟು
ಅರಿವೆಂಬ ಬೆಂಕಿಯ ಕೊಟ್ಟು ಮಾಯಾ
ಮರವೆಯೆಂಬುವ ಕಾಷ್ಟಗಳನ್ನೆಲ್ಲ

ವರವೆಂಬ ಸಾಮಗ್ರಿಗೂಡಿ ಸಾರ
ತರ ಮೋಕ್ಷವೆಂದೆಂಬ ಪಾಕವ ಮಾಡಿ
ಹರಶರಣರು ಸವಿದಾಡಿ ನಮ್ಮ
**ಗುರುಸಿದ್ಧ**ದೇವನ ಚರಣವ ಪಾಡಿ

❍



## ಜೋಕಾಲಿ

ತೂಗುತಾದ ನೋಡು ಜೋಕಾಲಿ
ಸದ್ಗುರುವಿನ ದಯದಿಂದ

ತೂಗುತಾದ ನೋಡು ಜೋಕಾಲಿ
ನಾದ ಬ್ರಹ್ಮಾನಂದದಲ್ಲಿ
ರಂಗಮಂಟಪ ಮಧ್ಯದಲ್ಲಿ
ರಂಗಮಹಲಿಂಗರಲ್ಲಿ



ಆರು ಚಕ್ರಕೆ ಕಟ್ಟಿ ಜೋಕಾಲಿ
ಏರಿ ನೀನು ತೆಗಿಯೋ ಕೀಲಿ
ಮೀರಿದ ಹಲ್ಮನಿ ಕಾಣುವಲ್ಲಿ

ಜೋಕಾಲಿಯೆಂಬುವ ಜೋಲಿಯನಿಡಿದು
ನವದ್ವಾರಯೆಂಬ ಸೂತ್ರವ ಬಿಗಿದು
ಚಿತ್ತಯೆಂಬುವ ಕೀಲಿಯ ಬಿಗಿದು
ಭಕ್ತಿಯೆಂಬುವ ಮಿಣಿಯೊಳು ಹಿಡಿದು

ಎಲ್ಲ ಜೋಕಾಲಿ ತನ್ನೊಳಗಲ್ಲಿ
ಕಾಷ ಲಕ್ಷ ಈಶನಲ್ಲಿ
ಹಸನು ಮಾಡಿಕೊ ಮನಸಿನಲ್ಲಿ
**ಗುರುಸಿದ್ಧ** ಮಹಾಲಿಂಗನಲ್ಲಿ

❍

## ಕಾಯಕಾಂತಾರ

ಕಾಯಕಾಂತಾರವ ಹೊಕ್ಕು ಬೇಟೆಯನಾಡಿ
ಮಾಯಾ ಮೋಹದ ಮೃಗಗಳ ಕೊಲ್ಲಿರೊ

ಕೋಪವೆಂಬುವ ಹಿರಿಯ ಹುಲಿಯುಂಟು
ಪಾಪವೆಂಬ ಸೂಕರವುಂಟು
ಚಾಪಲ್ಯವೆಂಬ ಜಿಂಕೆಯುಂಟು
ಕಾಪಟ್ಯವೆಂಬ ನರಿಯುಂಟು

ಮೆರೆವಷ್ಟ ಮದಗಳೆಂಬ ಕೋಣಗಳುಂಟು
ಬರಿಯ ದಂಭವೆಂಬ ಕರಡಿಯುಂಟು
ಉರಿವ ಮತ್ಸರ ಕೇಸರಿಯುಂಟು
ಮರವು ಎಂದೆಂಬ ಮದ್ದಾನೆಯುಂಟು

ಭರತಿ ಸದ್ಭಕ್ತಿ ಎಂದೆಂಬ ಬಿಲ್ಲನೆಮಾಡಿ
ವಿರತಿ ಎಂದೆಂಬ ಸಿಂಜಿನಿಯ ಹೂಡಿ
ಅರಿವೆಂಬ ಬಾಣವನೆಚ್ಚಿ ಕೆಡಹುತೆ
**ಗುರುಸಿದ್ಧ**ನಂಘ್ರಿ ಪಂಕಜಕ್ಕೆರಗಿ.

❍

## ರಾಮಪುರ ಬಕ್ಕಪ್ಪ

### ಹೊಳಿಯ ದಾಟಿಸೋ

ಅಂಬಿಗರಣ್ಣ ಹೊಳಿಯ ದಾಟಿಸೊ
ನಾ ಶುದ್ಧ ಶಿವಭಕ್ತರ ಮಗಳೊ

ಹರಿಗೋಲಕೆ ಹವಳದ ದಾರ
ಮುತ್ತಿನ ಸರ ನಿನಗ್ಹಾಕುವೆ
ನೋಡಾರೆ ನೋಡೊ
ಅಂಬಿಗರಣ್ಣ ಹೊಳಿಯ ದಾಟಿಸೊ

ಅಕ್ಕತಂಗಿದೆರ ಆರು ಮಂದಿ
ನನಗ್ಹಿಡಕೊಂಡು ಏಳುಮಂದಿ
ಅವರಲ್ಲಿ ಚೆಲುವೆ ನಾನಯ್ಯ
ಅಂಬಿಗರಣ್ಣ ಹೊಳೆಯ ದಾಟಿಸೊ

ಎಳ್ಹಚ್ಚಿದ ಸೆಜ್ಜಿ ರೊಟ್ಟಿ
ಎಣ್ಣೀಯ ಬದನಿಕಾಯಿ
ಉಂಡಾರೆ ನೋಡೊ
ಅಂಬಿಗರಣ್ಣ ಹೊಳಿಯ ದಾಟಿಸೊ

ದೇಶಕಧಿಕವಾದ ನಮ್ಮ
ವಾಸುಳ್ಳ ರಾಮಪುರ
ಖಾಸಾ ಬಕ್ಕಪ್ಪಯ್ಯನ ಮಗಳೊ
ಅಂಬಿಗರಣ್ಣ ಹೊಳೆಯ ದಾಟಿಸೊ

❍

## ಹತ್ತಿ ಬಿತ್ತಿ ಬತ್ತಿ ಕಾಣೆ

ಕೋಲು ಕೋಲೆನ್ನಿರೆ
ಬಲ್ಲಿದನ ಸಂಗ ಮೇಲು ಮೇಲೆನ್ನಿರೆ

ಹತ್ತಿ ಬಿತ್ತಿ ಬತ್ತಿ ಕಾಣೆ
ಜೋಳ ಬಿತ್ತಿ ಬೋನ ಕಾಣೆ
ಮನೀ ತುಂಬ ಮಕ್ಕಳ್ಹಡದು
ಗಂಡನ ಸುಖವ ಕಾಣೆ

ಗಂಡ ದಂಡಿಗೆ ಹೋಗೂವಾಗ
ಅರಿವಿನ ಮುದ್ರಿ ಹಾಕಿಹೋದ
ಅರಿವಿನ ಮುದ್ರಿ ಹಾರಿ ಒಡೆದು
ಆರು ಮಕ್ಕಳ ತಾಯಿನಾನಾದೆ

ದನ ಕಾಯ್ವ ಅಣ್ಣಗಳಿರಾ
ಕುರಿ ಕಾಯ್ವ ತಮ್ಮಗಳಿರಾ
ಗಂಡ ದಂಡಿಲೆ ಬಂದರೆ
ಮಿಂಡನ ಕಟಿಗೊಂಡು ಹೋದಳೆನ್ನಿರೆ

ಸಣ್ಣ ಹಳ್ಳಿಯ ಬೂದಿ ಬಸವ
**ರಾಮಾಪುರದ** ಬಕ್ಕ ಭೀಮಾತೀರದಿ ಸಿಕ್ಕ
ತನ್ನೊಳಗೆ ತಾ ತಿಳಿದು
ಕುಂತಲ್ಲೆ ಮಾಯವಾದ

❍

## ಚಕಮಕಿ ಚೀಲ

ಚಂಚಲ ಮನಸಿದು ಮುಂಚ್ಯಾಕ ಎಲ್ಲಿತ್ತು
ನನ್ನ ಚಕಮಕಿ ಚೀಲ ?
ನಿರಹಂಕಾರದೊಳಗಿತ್ತು ಗೋಲ
ಆಕಾರದೊಳಗ ಮಾಡಿಕೊ ಖ್ಯಾಲ

ಭಾವ ಎಂಬ ಗುರುಬೋದಿನ ಮ್ಯಾಲ
ಹೊಲಿಸಿಟ್ಟೇನಿ ಚಕಮಕಿ ಚೀಲ
ಸದ್ಗುಣ ತತ್ವದ ಉಕ್ಕಿನ ಲಾಲ
ಎಲ್ಲಿ ಬಿಟ್ಟ್ಯೋ ತಮ್ಮಾ ಚಕಮಕಿ ಚೀಲ ?


ಯಾರು ಮಾಡ್ಯಾರೊ ತಮ್ಮ ಚಕಮಕಿ ಚೀಲ ?
ಮುನ್ನೂರಾ ಅರವತ್ತು ಕರಿಎಳಿ ನೂಲ
ಅದರ್‍ಯಾಗ ಸೇರ್‍ಯಾದೊ ಗಂಡೆಳಿ ನೂಲ
ಬ್ರಹ್ಮ ನೆಯ್ದಿದನವ್ವ ರಾಟದ ಮ್ಯಾಲ

ಪಂಚತತ್ವ ಕೂಡಿ ಹೊಲಿಸಿದ ಚೀಲ
ನೂರು ವರ್ಷವಾಯ್ತು ಚೀಲದ ಕಾಲ
ಯಮನರು ಬಂದು ಹಾಕ್ಯಾರ ಜಾಲ
ಹರಿದು ಹೋಯ್ತು ತಮ್ಮ ಚಕಮುಕಿ ಚೀಲ

ದೇಶಕ ಅಧಿಕವಾದ ರಾಮಪೂರ ಮಿಗಿಲ
ಬೂದಿಬಸವ ಬಕ್ಕಪ್ಪಯ್ಯನ ಲೀಲ
ಕರುಣವಿರಲಿ ಸದಾ ಭಕ್ತರ ಮ್ಯಾಲ
ಚಕಮಕಿ ಚೀಲದ ಮೂಲ ತಾ ಬಲ್ಲ

❍

## ಆತ್ಮದ ತೇರು



ತೇರು ಸಾಗುತಾದಮ್ಮ ತಂಗಿ
ನೋಡಲಾಕ ಹೋಗೂನ ಬಾರೆ
ಪಂಚಮುಖದ ಪಗಡಿಯ ತೇರ
ಹಂಚಿಕಿಲ್ಲದ ಸಾಗುತಾದ

ಅಂಗೈ ಎಂಬ ಅಚ್ಚವ ಮಾಡಿ
ನಾಲ್ಕು ಗಾಲಿಗಳಿದ್ದಾವ ಜೋಡಿ
ಏಳು ಗೇಣಿನ ಮಂಟಪ ತೇರ
ಬಂಟರೈವರು ಎಳದಾರು ಕೂಡಿ

ಗರ್ವ ಎಂಬ ಕಂಬವ ಜಡಿದು
ನರಗಳೆಂಬ ಹಗ್ಗವ ಬಿಗಿದು
ಗರವು ಮರವು ಕೂಡಿಕೊಂಡು
ಗರ್ದಿಲಿಂದ ಸಾಗುತಾದ

ನಾಲ್ಕು ಮಂದಿ ಐದೇರು ಕೂಡಿ
ತೇರು ಎಳೆದು ಒಯ್ದಾರ ಹಾಡಿ
ಮಾಯವಾಯಿತು ಕಾಮ ಪೂರ
ಮುರಿದು ಬಿತ್ತವ್ವ ಗಡ್ಡಿ ತೇರ

ಅಂಗಕ ಹೊಂದಿತು ಆತ್ಮದ ತೇರ
ಶಂಭುಲಿಂಗ ಅಡಗ್ಯಾನ ಪೂರ
ಹೌದು ಅಲ್ಲ ಮಾಡಿ ವಿಚಾರ
**ರಾಮಪುರದ ಬಕ್ಕ ಕವಿಗಾರ**

❍

## ದಾರಿ ಎಷ್ಟು ಹರದಾರಿ ?

ಸುವ್ವಿ ಸುವ್ವಕ್ಕ ನಾರಿ
ಸುವ್ವಿ ಸುಜ್ಞಾನದ ಪೋರಿ
ದಾರಿ ಎಷ್ಟು ಹರದಾರಿ । ಸುವ್ವಕ್ಕನಾರಿ

ಒಂಬತ್ತು ಬಾಗಿಲ ಮುಚ್ಚಿ
ಒಳಗೆ ಜ್ಯೋತಿಯ ಹಚ್ಚಿ
ನಂಬಿಗಿಲ್ಲದೆ ಒಗೆತನ ಮಾಡಿದೆನೆ

ತನುವೆಂಬ ಕಣ್ಣಿನೊಳು
ಮನವೆಂಬ ತೂಕವನ್ನಾಕಿ
ಒನ ಒನದು ಒಬ್ಬಳೆ ನೆನೆಸಿದನೆ

ಅಷ್ಟ ಧಾನ್ಯಗಳೆಲ್ಲ
ಕಷ್ಟ ಕಡಿಗೆ ಹಚ್ಚಿ
ಕುಟ್ಟಿ ಕುಟ್ಟಿ ಕಚ್ಚವ ಕಳದೇನೆ

ಅಷ್ಟಮದಗಳೆಲ್ಲ
ಕಟ್ಟಿ ಕಡಿಗೆ ಹಚ್ಚಿ
ಲಟ್ಟನೆ ಬಾನವ ಮಾಡಿದೆನೆ

ಅಷ್ಟರೊಳು ಗಂಡ ಬಂದು
ಅಟ್ಟಗಡಗಿಯ ಒಡೆದು
ಹುಟ್ಟ ಮುರಿದು ಗ್ವಾಡಿಗೆ ಒಗದಾನೆ

ಎನ್ನ ಗುರು ಬೂದಿ ಬಸವ
**ರಾಮಪುರದ ಬಕ್ಕ**
ತನ್ನಂತೆ ಎನ್ನ ಮಾಡಿದೆನೆ

❍

## ಕಡಕೋಳ ಮಡಿವಾಳಪ್ಪ

### ಎಂಥ ಆಕಳ ?

ಎಂಥ ಆಕಳ ಕೊಟ್ಟ ಗುರು ಕಾಮಧೇನು
ಹಗಲು ಇರುಳು ಹಾಲಗರಿವದೊಂದೇ ಸವನ
ಉಂಡು ನೋಡಿದವನೇ ಬಲ್ಲ ಇದರ ಹೈನ
ಬೆಲೆ ಮಾಡುವರಿಲ್ಲಪ್ಪ ಅದರ ಸವನ

ಬಾಳ ದಿನದ ಆಕಳಪ್ಪ ಹಳಿ ಮುದಿಕಿ
ಮಾಡುತ ಬಂದೆನಪ್ಪ ಅದಕ ಜ್ವಾಕಿ
ಹಿಡಿದೇನೆಂದರೆ ಸಿಗುವುದಿಲ್ಲ ಬಾಳ ಬೆರಕಿ
ಅದಕ ನನಗ ಆಗಬೇಕು ಅಪರಾಕಿ

ಬಾಯಿ ನೋಡಿದರೆ ಒಂದು ಹಲ್ಲೂ ಇಲ್ಲ
ಗುಡ್ಡದಷ್ಟು ಮೇವು ಅದಕ ಸಾಲುವುದಿಲ್ಲ
ಅಷ್ಟು ತಿಂದು ಗಡಿಬಿಡಿಸುತಾದೊ ಹಗಲೆಲ್ಲ
ನೀರು ಕುಡಿವ ರಾಟೆ ಅದಕ ಮೊದಲೇ ಇಲ್ಲ

ಆಕಳಿರುವ ಸ್ಥೂಲ ಶಿವಪುರದಲ್ಲಿ
ಬಲ್ಲವರಿಗೆ ತಿಳಿದಿತಪ್ಪ ಅದರ ನೆಲಿ
ಆಕಳಗಿ ಇದ್ದವಪ್ಪ ಸಾವಿರ ಮೊಲಿ
ನಮ್ಮ **ಮಹಂತನ** ಹೆಸರ ಮ್ಯಾಲ ಬಿಟ್ಟೇನ ಕಪಲಿ

❍

## ಮುಡಚಟ್ಟಿನೊಳು ಬಂದು

ಮುಡಚಟ್ಟಿನೊಳು ಬಂದು ಮುಟ್ಟೀ ತಟ್ಟೀ ಅಂತೀರಿ
ಮುಡಚಟ್ಟು ಎಲ್ಲ್ಯಾದೆ ಹೇಳಣ್ಣ
ಮುಟ್ಟಾದ ಮೂರು ದಿನಕ ಹುಟ್ಟಿ ಬಂದೀರಿ ನೀವು
ಮುಡಚಟ್ಟು ಎಲ್ಲ್ಯಾದೆ ಹೇಳಣ್ಣ

ತೊಗಲೊಳು ತೊಗಲ್ಹೊಕ್ಕು ತಗಲಿ ಬಂದವ ನೀನು
ತಗಲ ಮಾತಾಡುವುದೇನಣ್ಣ
ಇದರ ಬಗಿಯ ತಿಳಿಯದೆ ಬಗೆದು ಮಾತಾಡಿದರೆ
ನಗಿಗೇಡಿ ಕಾಣುತಾದಣ್ಣ

ಎಲವಿನಾಲಯೊದೊಳು ಒಳಗ್ಹೊಕ್ಕು ನೀ ಕುಂತು
ಓಡ್ಯಾಡ ಬೇಡ । ನೀ ಕೇಳಣ್ಣ
ಎಲವು ತೊಗಲ ಮಲಮೂತ್ರ ಮಾಂಸವು
ನಿನ್ನಲ್ಲಿ ಕಾಣುತಾದಣ್ಣ

ಊರ ನರಕವ ತಿಂದು ಬೋರ್ಯಾಡ್ಹಿಂಡುವ ಎಮ್ಮಿ
ಹಾಲಿನ ಸವಿ ನೋಡಣ್ಣ
ಅದರ ಸ್ವಾದ್ಹತ್ತಿ ನೀ ಉಂಡು ಗಾಡಾಗಿ ಕುಂತೀರಿ
ಶೀಲ ಎಲ್ಲಿ ಉಳಿತ್ಹೇಳಣ್ಣ

ಊರ ಬಾವಿಯ ನೀರ ದಾರುದರು ತರುವರು
ನಿಮ್ಮ ನೀರ ಬ್ಯಾರ್ಯಾವೇನಣ್ಣ ?
ಲಂಡೇನ್ಹಳ್ಳ ಹೋಗಿ ನದಿಯ ಕೂಡಿದ ಮೇಲೆ
ನೈವೇದ್ಯ ಹೇಗಾದವು ಹೇಳಣ್ಣ ?

ಸೂಸಲಾಡುವ ದೇಹ ಸೋಸಿ ನೀರವ ಮಾಡಿ
ಮಡಿ ಮಾಡಿಕೊಳ್ಳಬೇಕಣ್ಣ
ನಮ್ಮ ಧೀರ **ಮಹಾಂತೇಶ**ನ ಬಿಡದೆ ಕೊಂಡಾಡಿದರೆ
ಕಡಿತನಕ ಮಡಿಯಾಗುವುದಣ್ಣ

❍

## ಸಾಧು ಸಂತರು

ಎಂಥಾ ಕಂಡಾಬಟ್ಟೆ ಸೂಳೆಮಕ್ಕಳಿವರೋ । ಸಾಧು
ಸಂತರ ಕಂಡರೆ ನಿಂದೆನಾಡ್ತಿಹರೋ
ಅಂಥ ಇಂಥ ಮಾತಿಗೆ ಹಾಯ ಹಾಯ ಎಂಬುವರೋ । ಇದರ
ಅಂತು ತಿಳಿಯದೆ ಸುಳ್ಳೆ ಸತ್ತು ಹೋಗುವರೋ

ಪುಣ್ಯದಿಚ್ಛೆಗಾಗಿ ಯಾತ್ರಿ ಕ್ಷೇತ್ರಿ ಮಾಡುವರೋ। ನದಿಯೊಳು
ಕಣ್ಣು ಮೂಗು ಬಾಯಿ ಮುಕಳಿ ತೊಳೆದುಕೊಂಬುವರೋ
ಅನ್ಯಾಯದ ಮಾತು ಒಂದು ಅರಿಯವಲ್ಲರೊ । ಇಂಥ
ಟೊಣ್ಣೆ ಸೂಳೆಮಕ್ಕಳಿಗಿನ್ನ ಮೂರು ಹೇಳುವರೋ

ಕಲ್ಲು ಮಣ್ಣು ದೇವರೆಂದು ಪೂಜೆ ಮಾಡುವರೋ । ಬಹಳ
ಬಲ್ಲಿದರನ್ನು ಕಂಡು ದೂರ ದೂರ ಹಾಯುವರೋ
ಇಲ್ಲದವರನಾಡಿಕೊಂಬುದು ಏನು ಬಡಿವಾರೋ । ಅವರು
ಒಳ್ಳೆ ಪದವಿ ಕೊಡ್ತಾರೆಂಬುದೇನು ಕಾತರೋ

ದೊಡ್ಡ ಕಾಮಧೇನು ಸ್ನೇಹ ಮಾಡವಲ್ಲರೋ । ಕಾಲಿ
ಗೊಡ್ಡಾಕಳ ಹಿಂಡಿ ಕೈಯ ಮುರಿದುಕೊಂಬುವರೋ
ಗುಡ್ಡದ **ಮಹಾಂತ**ನ ಗುರ್ತು ಅರಿಯವಲ್ಲರೋ । ಇಂಥ
ದಡ್ಡ ಸೂಳೆಮಕ್ಕಳಿಗಿನ್ನು ಯಾರು ಹೇಳುವರೋ ?

❍

## ಮಾತಿನ ನೀತಿ ತಿಳಿಯಬೇಕು

ಮೂಕನಾಗಬೇಕೊ ಈ ಜಗದೊಳು ಜ್ವಾಕ್ಯಾಗಿರಬೇಕು
ಕಾಕಬುದ್ಧಿ ಕಡಿಗಿ ಹಾಯಿಸಲಾರದ
ಲೋಕದ ಗೊಡವಿ ನಿನಗ್ಯಾತಕ ಬೇಕು

ಮಾತು ಕಲಿಯಬೇಕು
ಮಾತಿನ ನೀತಿ ತಿಳಿಯಬೇಕು
ಮಾತುಬಲ್ಲ ಮಹಾಜ್ಞಾನಿಯ ಕೂಡ
ಕೋತಿ ಹಂಗ ಬೆನ್ನು ಹತ್ತಿರಬೇಕು

ತತ್ವ ಕಲಿಯಬೇಕು
ತತ್ವದ ಅರ್ಥ ತಿಳಿಯಬೇಕು
ಮಾತು ಬಲ್ಲ ಮಹಾಜ್ಞಾನಿಯ ಕೂಡ
ಕತ್ತಿ ಹಾಂಗ ಬೆನ್ನಹತ್ತಿರ ಬೇಕು

ಆಸಿ ಅಳಿಯ ಬೇಕು ಮನಸಿನ
ಹೇಸಿಗೆ ತೊಳಿಯಬೇಕು
ಆಸಿ ತಿಳಿದು ಹೇಸಿಗೆ ತೊಳೆದು
ಈಶ **ಮಹಾಂತ**ನ ಪಾದ ಹಿಡಿಯಬೇಕು

❍

## ಸುಳ್ಳೇ ಶೀಲ ಮಾಡ್ತೀರಿ

ಬಾಯಿಲೊಂದು ಆಡ್ತೀರಿ । ಮನಸಿನೊಳಗೊಂದ ಮಾಡ್ತೀರಿ
ಬರೆದಿಟ್ಟದೋದಿಕೊಂಡು
ಭ್ರಾಂತಿಗೆಟ್ಟು ಹೋಗುತೀರಿ

ಶೀಲವಂತರಂತೀರಿ। ಸುಳ್ಳೆ ಶೀಲ ಮಾಡ್ತೀರಿ
ಸಂತೆ ಸಂಗ ಕಟ್ಟಿಕೊಂಡು
ಸತ್ಯನಾಶಾಗಿ ಹೋಗುತೀರಿ

ಮುಸಲ್ಮಾನರಂತೀರಿ । ತುರ್ತ ಸುಂತೀ ಮಾಡ್ತೀರಿ
ಉಸಲ ಬಿಟ್ಟು ಫಾತ್ಯಾ ಕೊಟ್ಟು
ಬಿಸ್ಮಿಲ್ಲಾ ಅಂತೀರಿ

ಬ್ರಾಹ್ಮಣರಂತೇಳ್ತೀರಿ । ನೀರಾಗ ಮುಣಮುಣಿಗೇಳ್ತೀರಿ
ಬೋಳ್‌ನೆತ್ತಿಗೆ ಗಂಟ್ಹಾಕಿ
ದೀಪ ಬಡಕೊಂಡು ಹೋಗ್ತೀರಿ

ಸಾಧುರಂತ ಹೇಳ್ತೀರಿ। ಸೋಹಂ ಭಜನಿ ಮಾಡ್ತೀರಿ
ಅಟ್ಟೆ ದುಡ್ಡಿಗೆ ಆಶಾ ಮಾಡಿ
ದಡ್ಡರಾಗಿ ಹೋಗ್ತೀರಿ

ಪಟ್ಟಚರಮೂರ್ತಿ ಅಂತೀರಿ । ಪಾರಮಾರ್ಥ ಹೇಳ್ತೀರಿ
ಪರನಾರಿ ಸ್ನೇಹವ ಮಾಡಿ
ಗುಡ್ಡದ **ಮಹಂತ**ಗ ಹಾಕ್ತೀರಿ

# ಕೂಡಲೂರ ಬಸವಲಿಂಗ ಶರಣರು

## ಅಳುತಿದ್ಯಾ ಕಂದ

ಅಳುತಿದ್ಯಾ ಕಂದ ಅಳುತಿದ್ಯಾ । ನೀನು
ತಿಳಿಯದೆ ಮರ್ತ್ಯಕೆ ಮರೆತು ಬಂದೇನೆಂದು

ಮಾಯದ ತೊಟ್ಟಿಲೊಳು ಕೈಕಾಲು ಒತ್ತುತ
ಮೋಹದ ಸಿಂಪಿಯೊಳು ಹೊರಳಾಡುತ
ಜೀವ ಮನಸು ಎಂಬ ತಗಣೆ ಗುಂಗಡ ಕಚ್ಚಿ
ದೇಹಕ್ಕೆ ಎಳ್ಳಷ್ಟು ಸುಖವಿಲ್ಲವೆಂದು

ತಂದೆ ತಾಯಿಗಳಿಂದ ಬಂಧನದೊಳು ಬಿದ್ದೆ
ಮುಂದಿನ ಗತಿಯೇನು ಕೆಡುತಿಹೆನೆಂದು
ಅಂದ ಚಂದದಿ ಬಂದು ಮೊಲೆಕೊಟ್ಟು ಹಾಲೆರದು
ಬಂಧಿಸಿ ವಿಷಯದ ಬಲೆಗೆ ದಬ್ಬುವರೆಂದು

ನಾವು ಮಗನಿಗೆ ಮದುವೆ ಮಾಡುವೆವೆಂದು
ತಾವು ಬಿದ್ದ ಕುಣಿಯಲ್ಲಿ ನನ್ನ ನೂಕುವರೆಂದು
ಜೀವ ಜೀವಕ್ಕೆ ಒಮ್ಮೆ ನೋಡಿ ಹಿಗ್ಗುತಲಿ
ದೇವ **ಕೂಡಲೂರೇಶ** ಕೂಡಿಕೊ ಎನುತಲಿ

❍

## ಗುರುವಿನಾಜ್ಞೆ

ಗುರುವಿನಾಜ್ಞೆ ಮೀರದೆ ನಡೆವವನ
ನರನೆನ್ನಬೇಡ ಅವನೆ ಪರಮಾತ್ಮ
ಅರಿಯದ ಅಜ್ಞಾನಿ ಜನರೇನು ಬಲ್ಲರು
ಪರಕ್ಕೆ ಪರತರವಸ್ತು ಅವನು

ಮುತ್ತು ನೀರೊಳು ಪುಟ್ಟಿ ಮತ್ತೆ ನೀರಾಗುವುದೇಕೆ ?
ಮುತ್ತು ಲಕ್ಷಾಂತರ ಬೆಲೆಯಾಯಿತು
ತತ್ವಜ್ಞಾನಿಯು ತಾನು ಸತ್ತು ಹುಟ್ಟುವನಲ್ಲ
ಅತ್ಯಂತ ಆನಂದ ಪರಿಪೂರ್ಣನವನು

ನದಿ ತಾನು ಹರಿದಿನ್ನು ಸಾಗರನ ಸೇರುವುದು
ನದಿ ತಿರುಗಿ ಹೋಗುವುದೆ ತಾ ಹುಟ್ಟಿದೆಡೆಗೆ ?
ಸದಮಲ ಸುಜ್ಞಾನಿ ಪ್ರಪಂಚ ಮಾಡಿದರೆ
ಅದರೊಳು ಕೂಡಿರುವ ಬಗೆ ಬೇರೆ ಇರುವುದು

ಗರುಡನ ಮಂತ್ರವ ಕಲಿತಿರುವಾತಂಗೆ
ಉರಗ ಕಚ್ಚಿದರೆ ವಿಷವೇರುವುದೆ ?
ಪರಿಪರಿ ವಿಷಯದಿ ಮುಳುಗಿದರು ಜ್ಞಾನಿಗೆ
ಧರ್ಮಕರ್ಮಗಳ ಲೇಪವಾಗುವುದೆ ?

ಹೆಪ್ಪು ಹಾಲಿಗೆ ಕೂಡಲು ತುಪ್ಪ ತಾನಾಗುವುದು
ತುಪ್ಪ ಕೂಡುವುದೆ ಮರಳಿ ಹಾಲಿನೊಳಗೆ ?
ನಿಷ್ಪತ್ತಿ ನಿಜರೂಪ ತಾನಾದ ಪುರುಷನು
ಒಪ್ಪಿ ಸಂಸಾರದಿ ಒಳಗಾಗದಿರುವನು

ಜಾತಿಯೊಳು ಪುಟ್ಟಿ ಅಜಾತನಾದವನಿಗೆ
ಜಾತಿ ಭೇದಂಗಳು ಆತನಿಗುಂಟೆ ?
ಜ್ಯೋತಿ ಪ್ರಕಾಶ **ಕೂಡಲೂರೇಶನೆ**
ದಾತ ಪ್ರಖ್ಯಾತ ಅವಧೂತನವನು

❍

## ಅಗಸರೋ ನಾವು

ಅಗಸರೋ ನಾವು ಅಗಸರೋ
ಮಾಸಿದ ಅರವಿಯ
ಸೋಸಿ ಗಂಜಿ ಮಾಡುವಂಥ
ಅಗಸರೋ ನಾವು ಅಗಸರೋ

ಬ್ರಹ್ಮಾಂಡವೆಂತೆಂಬ ಹರವಿಯ ಹೂಡಿ
ಪಿಂಡಾಂಡವೆಂತೆಂಬ ಬಟ್ಟೆಯ ಕುದಿಸಿ
ಕುರುಹು ಎಂಬೊ ಸವಳು ಸುಣ್ಣವ ಹಚ್ಚಿ
ಮುರುಕಿ ಮೈಲಿಗೆ ತೊಳೆದು ಮುಂದಕ್ಕೆ ಚಾಚುವಂಥ

ತಾರಕ ಬ್ರಹ್ಮನ ಬಂಡೆ ನೀರ್ದಂಡೆ ಮಾಡಿ
ಮೂರು ಮೂರುತಿ ಎಂಬ ಏಟನೆ ಹೊಡೆದು
ಬೇರೆ ಪನ್ನೀರಲ್ಲಿ ದೂರ ದೂರ ಸೆಳೆದು
ಭೇರಿನಾದದ ಬಿಸಿಲಿಗೆ ಒಣಗಿಸುವಂಥ

ಘಟ್ಟಿಸಿ ಗಳಿಗೆ ಮಾಡಿ ಮನೆಗೆ ತಂದು
ಮೂರು ಮುಂಡಾಸುಗಳ ಮೂಲಿಗೆ ಇಟ್ಟು
ಆರು ಪಚ್ಚಡವ ಹಾರಿಸಿ ಬಿಟ್ಟೆವು
ಧೀರ **ಕೂಡಲೂರೇಶನ** ಮೆಚ್ಚಿಸುವಂಥ


❍

## ಪಂಡಿತ

ಪಂಡಿತ ಪಂಡಿತರೆಂದು ಹೇಳಿಕೊಂಬರು ಜಗದಿ
ಪಂಡಿತರಿವರೆಂಥ ಪಂಡಿತರೇ ?
ಪಂಡಿತರಾದವರು ಪರಬ್ರಹ್ಮತಾವೆಂದು
ಖಂಡಿತ ತಿಳಿಯಬೇಕು ಪಂಡಿತರವರೇ


ವಾಸನೆ ಅಳಿಯದೆ ಕ್ಲೇಶವ ಕಳೆಯದೆ
ಪಾಶಬದ್ಧರೆಲ್ಲ ಪಂಡಿತರೆ ?
ಈಶನು ತಾನೆಂದು ತಿಳಿಯದ ಮೂರ್ಖರು
ಆಸೆಬುಡುಕರೆಲ್ಲ ಪಂಡಿತರೆ ?
ನಾಶವಾಗುವ ದೇಹ ಸ್ಥಿರವಾಗಿ ನಂಬಿದ
ಹೇಸಿ ಮನುಜರೆಲ್ಲ ಪಂಡಿತರೆ ?

ಅಮರ ಛಂದಸ್ಸು ನಿಘಂಟು ನಾನಾರ್ಥ
ಸಮನಿಸದೋದಲು ಪಂಡಿತರೆ ?
ಭೂಮಿಯಲಿ ಪರಿಪರಿ ಗ್ರಂಥವ ಬರೆದು
ಅಸಮರೆನಿಸಿದವರೆಲ್ಲ ಪಂಡಿತರೆ ?
ರಮಣಿಗೆ ಮನಸೋತು ನಾನಾ ಭಂಗಪಡುತಲಿ
ಯಮನ ವಶವಾದವರೆಲ್ಲ ಪಂಡಿತರೆ ?



ಕುಲಛಲಕೆ ಹೋರಾಡಿ ನೆಲಗತ್ತಲಾಗುವ
ಛಲಮಾರಿಗಳೆಲ್ಲ ಪಂಡಿತರೆ ?
ಹಲವು ದೇಶವ ತಿರುಗಿ ನಾನಾ ಭಾಷೆಯ ಕಲಿತು
ಬಲು ಶಾಣೆರಾದವರು ಪಂಡಿತರೆ ?
ಸುಲಭದಿ ಸೂಕ್ಷ್ಮದಿ ನಿಜವಸ್ತು ತಿಳಿಯದ
ಬಲು ಡಾಂಭಿಕರಿವರೆಲ್ಲ ಪಂಡಿತರೆ ?

ಅಕ್ಷರ ಕನ್ನಡ ಆರ್ಯ ಸಂಸ್ಕೃತ ತೆಲುಗು
ಶಿಕ್ಷಕರಿವರೆಲ್ಲ ಪಂಡಿತರೆ ?
ಲಕ್ಷ್ಯವ ಹಿಡಿದು ನಿರ್ಲಕ್ಷ್ಯಕ್ಕೆ ಬಾರದ
ಭಿಕ್ಷುಕರಿವರೆಲ್ಲ ಪಂಡಿತರೆ ?
ಸಾಕ್ಷಾತ್ ಕೂಡಲೂರೇಶನ ಹೊಂದದೆ ಇರುವ
ಮೋಕ್ಷಗೇಡಿಗಳೆಲ್ಲ ಪಂಡಿತರೆ ?




## ಒಕ್ಕಲುಮಗ

ಒಕ್ಕಲುಮಗ ಒಳ್ಳೆವನಮ್ಮಾ । ಈತ
ಮುಕ್ಕಣ್ಣ ಶಿವನೆಂದು ತಿಳಕೊಳ್ಳಿರಮ್ಮಾ

ನಾನೆಂಬಹಂಕಾರ ಬೀಳಾದ ಭೂಮಿಗೆ
ತಾನೊಂದು ನೇಗಿಲು ಹೂಡಿದನಮ್ಮಾ
ಅಜ್ಞಾನವೆಂಬಂಥ ವಿಷಯದ ಗಿಡಗಳ
ಜ್ಞಾನದ ಕೊಡಲೀಲಿ ಕಡಿದ ನೋಡಮ್ಮ

ಮೂಲಮಂತ್ರವನೆಂಬ ಕುಂಟೆಯನಮರಿಸಿ
ಆದಿ ಕುಂಡಲಿ ಹಗ್ಗ ಹೂತಿಟ್ಟನಮ್ಮಾ
ಸಾಧನ ಚತುಷ್ಟಯ ಸಾಕೆತ್ತುಗಳ ಕಟ್ಟಿ
ಸಾಧಿಸಿ ಹರಗ್ಯಾನ ಮರವೆಂಬ ಹುಲ್ಲ

ತಾರಕ ಬ್ರಹ್ಮನೆಂಬ ಕೂರಿಗೆ ದಿಂಡಿಗೆ
ಮೂರು ಮೂರುತಿ ತಾಳವ ಜಡಿದನಮ್ಮಾ
ಮೀರಿದ ಸುಷಮ್ನ ಈಡಾಪಿಂಗಳ ಕೊಳವಿ
ಅರಿವಿನುನ್ಮನಿ ಮಂಡಿ ಬಿಗಿದಿಟ್ಟನಮ್ಮಾ



ಉತ್ಪತ್ತಿ ಸ್ಥಿತಿಲಯದ ಸಾಲುಗಳು ಎತ್ತಿ
ತತ್ವಮಸಿ ವಾಕ್ಯದ ಬೀಜವ ಬಿತ್ಯಾನಮ್ಮಾ
ಮತ್ತೆ ಪೂರ್ವದಿಂದ ಪಶ್ಚಿಮದವರೆಗೆ
ಅತ್ಯಧಿಕ ಬೆಳೆಯನು ಬೆಳೆದ ನೋಡಮ್ಮಾ

ನಾಕು ಸ್ಥಿತಿಯೆಂಬೊ ಮಂಚಿಗೆ ಹಾಕಿ
ಆಕಾರ ನಿರಾಕಾರ ಕವಣೆಯ ಪಿಡಿದನಮ್ಮಾ
ಕಾಕಗುಣಗಳೆಂಬ ಹಕ್ಕಿಗಳ ಹೊಡೆದಟ್ಟಿ
ಓಂಕಾರನಾದದಿ ಹೊಲವ ಕಾಯುವನಮ್ಮಾ

ಬಾಲಚಂದ್ರನೆಂಬೊ ಕುಡಿಗೋಲು ಹಿಡಿದು
ಸ್ಥೂಲ ಸೂಕ್ಷ್ಮದ ದಂಟು ಕೊಯ್ದನಮ್ಮಾ
ಕಾಲಕರ್ಮಗಳೆಂಬ ಸೂಡುಗಳ ತಿರುವಿ
ಮೇಲ್ಮನೆ ಮಧ್ಯದಿ ಸಾಮಣಿ ಹಾಕ್ಯಾನಮ್ಮಾ

ಮುಕ್ತಿ ಮಂದಿರದಲ್ಲಿ ರಾಶಿಯ ಮಾಡಿ
ವಿದ್ಯ ಎಂಬೊ ಹೊಟ್ಟು ತೂರಿದನಮ್ಮಾ
ಭಕ್ತಿಯಿಂದ ಸತ್ಯದಡಿಗೆಯ ಮಾಡಿ
ನಿತ್ಯ **ಕೂಡಲೂರೇಶನಿಗುಣಿಸಿದನಮ್ಮಾ**

## ಶಿಶುನಾಳ ಶರೀಫ



### ಸಾವಿರ ಕೊಡಗಳ ಸುಟ್ಟು

ಕುಂಬಾರಕಿ ಈಕಿ ಕುಂಬಾರಕಿ ಈ
ಬ್ರಹ್ಮಾಂಡವೆಲ್ಲ ತುಂಬಿಕೊಂಡಿರುವಾಕಿ

ಚಿನ್ನ ಎಂಬುವ ಮಣ್ಣನು ತರಸಿ
ತನು ಎಂಬುವ ನೀರನು ಹಣಿಸಿ
ಮನ ಎಂಬುವ ಹುದಲನು ಕಲಸಿ
ಗುಣ ಎಂಬುವ ಸೂಸನು ಹಾಕಿ

ಭಕ್ತಿ ಎಂಬುವ ತಿಗರಿಯ ಮಾಡಿ
ಧ್ಯಾನ ಎಂಬುವ ಬಡಗಿಯ ಊರಿ
ಮುನ್ನೂರರವತ್ತು ಸುತ್ತನು ತಿರುಗಿ
ಗಡಗಿ ತಯಾರು ಮಾಡುವಾಕಿ

ಆಚಾರ ಎಂಬುವ ಆವಿಗೆ ಮುಚ್ಚಿ
ಅರಿವು ಎಂಬುವ ಬೆಂಕಿಯ ಹಚ್ಚಿ
ಸಾವಿರ ಕೊಡಗಳ ಸುಟ್ಟು ಇಂದು
ಸಂತಿಗೆ ಒಯ್ದು ಮಾರುವಾಕಿ

ಮೂರು ಕಾಸಿಗೊಂದು ಕುಡಕಿಯ ಮಾರಿ
ಆರು ಕಾಸಿಗೊಂದು ಗಡಿಗೆಯ ಮಾರಿ
ವಸುಧೆಯೊಳು ಶಿಶುನಾಳಧೀಶನ ಮುಂದೆ
ಧ್ಯಾನದ ಮಗಿಯೊಂದು ಇಡುವಾಕಿ



## ಕಬ್ಬಕ್ಕಿ

ಎಷ್ಟು ಕಾಡುತಾವ ಕಬ್ಬಕ್ಕಿ । ನಾ
ಹೊಲದೊಳಗಿರುವೆನು ಒಬ್ಬಾಕಿ

ಆ ಕಡೆಯಿಂದ ಬಂದಾವ ಮೂರು ಹಕ್ಕಿ
ಅವನ್ನ ಕಾದು ಕಾದು ನನಗೆ ಬೇಸರಕಿ


ಕಬ್ಬಕ್ಕಿ ಬರತಾವ ಸರಬೇರಕಿ
ಕವಣಿ ಬೀಸಿ ಬೀಸಿ ಬಂತೆನಗ ಬೇಸರಕಿ

ಆರು ಮೂರು ಒಂಬತ್ತು ಬಹಳ ಬೆರ್ಕಿ
ಅದರೊಳಗೊಂದೈತಿ ಮೂಬೆರ್ಕಿ

ತುದಿಕಾಳ್ತಿಂದು ಹೊಡಿತಾನು ಗುರಕಿ
ಶಿಶುನಾಳಧೀಶನ ಮುದಿಹಕ್ಕಿ

ಗುರುಗೋವಿಂದನ ಬಳಿ ತಾವು ದರಮುಕ್ತಿ
ಬೇಡುತ ಕಾಡ್ವವು ಆ ಹಕ್ಕಿ

❍



## ಮನೆಯ ಮಾಳಿಗೆ

ಸೋರುತಿಹುದು ಮನೆಯ ಮಾಳಿಗೆ ।
ಅಜ್ಞಾನದಿಂದ
ಸೋರುತಿಹುದು ಮಾನೆಯ ಮಾಳಿಗೆ

ಸೋರುತಿಹುದು ಮನೆಯ ಮಾಳಿಗೆ
ದಾರಿಗಟ್ಟಿ ಮಾಳ್ಪರಿಲ್ಲ
ಕಾಳಕತ್ತಲೆಯೊಳಗೆ ನಾನು
ಮೇಲಕೇರಿ ಮೆಟ್ಟಲಾರೆ

ಮುರುಕು ತೊಲೆಯ ಹುಳುಕು ಜಂತಿ
ಕೊರೆದು ಸರಿದು ಕೀಲ ಸಡಲಿ
ಹರಕು ಚಪ್ಪರ ಜೇರು ಗಿಂಡಿ
ಮೇಲಕೇರಿ ಮೆಟ್ಟಲಾರೆ

ಕರಕಿ ಹುಲ್ಲು ಕಸವು ಹತ್ತಿ
ದುರಿತ ಭವದಿ ಇರಬಿ ಮುತ್ತಿ
ಜಲದಿ ಭರದಿ ತಿಳಿಯ ಮಣ್ಣು
ಒಳಗೆ ಹೊರಗೆ ಏಕವಾಗಿ

ಕಾಂತೆ ಕೇಳೆ ಕರುಣದಿಂದ
ಬಂತು ಕಾಣೆ ಹುಬ್ಬಿ ಮಳೆಯು
ಈಗ **ಶಿಶುನಾಳ** ಗ್ರಾಮಕ
ಮೇಘ ರಾಜ ಒಲಿದು ಬಂದ

❍

## ಬುದ್ಧಿವಂತರು ತಿಳಿದು

ಏನ ಕೊಡ ಏನ ಕೊಡವ
ಹುಬ್ಬಳ್ಳಿ ಮಾಟ ಏನ ಚೆಂದುಳ್ಳ ಕೊಡವ ?

ತಿಕ್ಕಿಲ್ಲ ಬೆಳಗಿಲ್ಲ ತಳತಳ ಹೊಳಿತದ
ಕಂಚಿಂದಲ್ಲ ತಾಮ್ರದ್ದಲ್ಲ ಮೀರಿ ಮೀರಿ ಮಿಂಚುತದ

ಆರುಮಂದಿ ಅಕ್ಕತಂಗ್ಯಾರು ಮೀರಿ ಮಿಂಚಿದ ಕೊಡ
ಮೂರು ಮಂದಿ ಮತ್ತೈದಿಯರು ಲೋಲಾಡಿದ ಕೊಡ

ಶಿವರಾತ್ರಿ ಜಾತ್ರೆಗೆ ಹೋಗಿ ಸಿದ್ಧರಾಮನ ದರ್ಶನವಾಗಿ
ಮಳವ್ವ ಬಾಜಾರದಲ್ಲಿ ಬಾಳಿ ಹೋತವ್ವ ಕೊಡ

ಆರುಮಂದಿ ಅಕ್ಕತಂಗ್ಯಾರು ಜತ್ತಿಲೆ ನೀರಿಗೆಹೋಗಿ
ಜರ್‍ರನ ಜಾರಿಬಿದ್ದು ಸಿಗದ್ಹಂಗ ಹೋತವ್ವ ಕೊಡ

**ಶಿಶುನಾಳಧೀಶನು** ತಿದ್ದಿಮಾಡಿದ ಕೊಡ
ಬುದ್ಧಿವಂತರು ತಿಳಿದು ನೋಡಿರೀ ಈ ಕೊಡ



## ನಾಗಲಿಂಗಯೋಗಿ

ಒಂದು ಹೆಣಕೆ ಎರಡು ಹೆಣವು ಕುಣಿವುದೇತಕೇ ?
ಮುಂದುಗಾಣದಾಗಿ ತನ್ನೊಳು ದಣಿವುದೇತಕೇ ?

ನಾಗಲಿಂಗ ಯೋಗಿ ತಾನು ತಿರುಗಲ್ಯಾತಕೇ ?
ಭೋಗ ದುರಿತ ಭವದ ಬಲೆಗೆ ಶಿಲುಕದ್ಯಾತಕೇ ?

ಬಗಳಮುಖಿಯ ಮಗನಕೂಡ ರಗಳಿ ಯಾತಕೇ ?
ಶಿಗದೆ ಪೋದನೆಂದು ತನ್ನೊಳು ನಗುವುದ್ಯಾತಕೇ ?

ಹಸಿವು ನೀರಡಿಕೆಗಾಗಿ ವ್ಯಸನವ್ಯಾತಕೇ ?
ಶಿಶುನಾಳೇಶನ ಚರಣ ಮರೆದು ಕುಸಿವುದ್ಯಾತಕೇ ?

❍

## ಮಾಯದ ಸೂಜಿ

ಸೂಜಿಯೆ ನೀನು ಸೂಜಿಯೇ
ಈ ರಾಜ್ಯದೊಳಗೆಲ್ಲ ತೇಜ ಕಾಣಿಸುವಂಥ

ಹರಿಯ ಶಿರದಮ್ಯಾಲೆ ಸೂಜಿಯೇ
ಮೆರದಂಥ ಹರನ ಕಪಾಲದಿ ಬೆರದಂಥ ಸೂಜಿಯೇ
ಮರವಿಯ ಅರವಿಯ ಹೊಲಿವಂಥ ಸೂಜಿಯೇ
ಮರಮೋಸವಾಗಿ ಮಾಯದ ಸೂಜಿಯೇ

ತಂಪುಳ್ಳವುಕ್ಕಿನೋಳ್ ಹುಟ್ಟಿದ ಸೂಜಿಯೇ
ಶಿಂಪಿಗರಣ್ಣಗೆ ಬಲವಾದ ಸೂಜಿಯೇ
ಇಂಪುಳ್ಳ ದಾರಕ್ಕೆ ಸೊಂಪುಗೂಡಿಸುವಂಥ
ಕಂಪನಿ ಸರಕಾರ ವಶವಾದ ಸೂಜಿಯೇ

ಅಂಗಳ ಬೈಲೊಳು ಹೋದಂಥ ಸೂಜಿಯೇ
ಶಿಂಗಾರದಂಗಿಯ ಹೊಲಿವಂಥ ಸೂಜಿಯೇ
ತುಂಗಶಿಶುನಾಳಧೀಶನ ಸೇವಕ
ರಂಗಿಲಿ ಹುಡುಕಲು ಶಿಗದಂಥ ಸೂಜಿಯೇ

❍

## ಸದಾಶಿವಧ್ಯಾನ

ಸಾಲಿಯ ನೋಡಿದಿಯಾ ಸರಕಾರದ
ಸಾಲಿಯ ನೋಡಿದಿಯಾ ?


ಸಾಲಿ ಸದ್ಗುರುವಿನ ಮಾಲುಮಂಟಪವಿದು
ಮೇಲು ಕಾಣುಸುತದೆ ಭೂಲೋಕದೊಳು

ಕಂಬಾರು ಮಧ್ಯದಲಿ ತುಂಬಿರುತಿಹ ವಂಬತ್ತು ದ್ವಾರದಲಿ
ಸಾಂಬಸದಾಶಿವ ಧ್ಯಾನಕೆ ಇಂಬಾಗಿ
ನಂಬಿಕೊಂಡು ನಿಜ ಅಕ್ಷರ ಕಲಿಸುವ

ಪಶ್ಚಿಮ ಬಾಗಿಲಕೇಗಚ್ಚಿನ ಕೆಲಸ ಹೆಚ್ಚಿನ ದೇಗುಲಕೇ
ಸ್ವಚ್ಛಪೂರ್ವೋತ್ತರ ದಕ್ಷಿಣ ದ್ವಾರದಿ
ಉಚ್ಚರಿಸುವ ತತ್ವಾಂಕಿತ ಸಾರದ

ಮೋಜಿನಲ್ಲಿಹ ಮಾಸ್ತರಾ ರಾಜಿತಮಾದ ಸಾಜಶಿಕ್ಷಕ ವಿಸ್ತಾರ
ಸೋಜಿಗೆನಿಸುವ ಶ್ರೀಗುಡಿ ಪುರುಗ್ರಾಮದಿ
ರಾಜ ಶಿಶುನಾಳಧೀಶನ ದಯದಿಂದಹ

❍



## ಅವರಿವರರಿಯದೆ

ನಿಶ್ಚಿಂತನಾಗಬೇಕಂತೀ
ಬಹು ದುಶ್ಚಿಂತಿಯೊಳಗೇ ನೀಕುಂತಿ
ಯಾಕೊಯಲೋ ನಿನಗೀ ಭ್ರಾಂತಿ
ನಾಳಿಗಾಗುವದೀಗಾಗಂತೀ

ಆಶಾಪಾಶಗಳ ಬ್ಯಾಡಂತೀ
ವಳ್ಳೆ ಮೀಸಲನುಡಿ ಮಾತಾಡಂತೀ
ಭಾಷೆ ಕೊಟ್ಟು ತಪ್ಪಬ್ಯಾಡಂತೀ
ಹರಿದಾಸರೊಳು ಮನನೀಡಂತೀ

ಅವರನು ಕಂಡರೆ ಅವರಂತೀ
ಮತ್ತಿವರನು ಕಂಡರೆ ಇವರಂತೀ
ಅವರಿವರರಿಯದೆ ತನಗೂ ತಿಳಿಯದೆ
ಮೂಢನಾಗಿ ಸುಮ್ಮನೆ ಕುಂತೀ

ಪೊಡವಿಯೊಳಗೆ **ಶಿಶುನಾಳಾಂತೀ**
ಧೃಡಗೋವಿಂದ ಯೋಗಿಯ ಚಿಂತೀ
ಬಿಡದಾತನ ಸೇವೆ ಮಾಡಂತೀ
ಭಯವಿಲ್ಲದ ಗುರುವಿನ ಕೂಡಂತೀ

❍

## ಮಾರಿ ದೇವಿ ಕುಮಾರ


ಜಿಟ್ಟಿ ಹುಳುಗಳೆದ್ದವು ಇದು ನೋಡು
ಸೃಷ್ಟಿಪತಿಯರಸರಿಗೆಲ್ಲಾ ಕೇಡು

ಅಷ್ಟದಿಶಮಧ್ಯದಲಿ ಒಪ್ಪುವ
ನಟ್ಟಭೂಮಿಯನಾಭಿ ದಿಲ್ಲಿಗೆ
ಶ್ರೇಷ್ಠ ಕ್ರೀಸ್ತೀಮತದ ಬಾದಶ
ಪಟ್ಟವಾಗುವುದೆಂದು ಹರುಷದಿ

ಹೇ ಶೀಮತಿ ಮಾರಿದೇವಿ ಕುಮಾರಾ
ದೇಶದೇಶ ನುಂಗುವ ಕ್ರೂರಾ
ರೂಸಪಾರೀಸ ಇಂಗ್ಲೀಷ ದೇಶಾಧಿಪರು ಅವನೊಳು
ರೋಷದಿಂದಲಿ ಕಾದಿ ಗರ್ವವಿನಾಶಮಾಡುವರೆಂದು ತಿಳಿದೂ

ಧರ್ಮದಾತ ಶಿಶುವಿನಾಳಧೀಶ
ಪೂರ್ವಿಪಾಲಿಸುವನು ಬಹುದಿವಸಾ ಕರ್ಮಕಟ್ಟಳೆ ಮುಂದಿದಕೆ ತಿಳಿ
ಪೇರ್ಮೆ ನಾಲ್ವತ್ತೈದು ಸಂವತ್ಸರ ನಿರ್ಮಲಾಂತ
ಕರಣವರಿದು ಮರ್ಮಗೇಡಿಗಳೇನು ಬಲ್ಲರು ?

❍



## ಹೊರವಳಗೊಂದೇ ಪರಿ


ಮನಶಿನ ಹರಿದಾಟವನು ನಿಲ್ಲಿಸುವದೂ
ಘನ ಕಷ್ಟವಲ್ಲೇನೊ ಮನುಜಾ ?

ತನುತ್ರಯದೊಳು ಕುಳಿತಾಡುವ ಜೀವನ
ಗುಣವರಿಯುವ ಮಾರ್ಗಬ್ಯಾರೋ ಮನುಜಾ

ದಶದಿಕ್ಕಿಗೆ ಹಾರ್ಯಾಡು ಹಕ್ಕಿಗೆ
ಹೊಸಬಲೆ ಹಾಕುವ ಪರಿಬ್ಯಾರೋ
ಗುರುಗೋವಿಂದನ ಚರಣ ಕಮಲದೊಳು
ಸ್ವರಗೊಂಬ ಬೃಂಗದ ಪರಿಬ್ಯಾರೋ
ಮನುಜಾ

ವಿಷಯವರಿತು ಸುಖಬಯಸಿ ಬಯಸಿಬಲು
ಕಸವಿಶಿಗೊಂಬುವಿ ಸಂತತಮನಸೇ
ಧರಿಪತಿ ಶಿಶುನಾಳನರಮನಿ ತಿಳಿದರೆ
ಹೊರವಳಗೊಂದೇ ಪರಿಯಲ್ಲೊ ಮನಸೇ

❍



## ಸ್ನೇಹ

ಸ್ನೇಹ ಮಾಡಬೇಕಿಂಥವಳ ಒಳ್ಳೆ
ಮೋಹದಿಂದಲಿ ಬಂದು ಕೂಡುವಂಥವಳ

ಚಂದ್ರಗಾವಿ ಶೀರಿಯನುಟ್ಟು
ಕೆಂದಾವರಿಯ ಕುಪ್ಪಸತೊಟ್ಟು
ಬಂದಳೋ ಮಂದಿರ ಬಿಟ್ಟು । ನಾಲ್ಕು
ಮಂದಿಯೊಳಗ ಬಂದು ನಾಚುವಳೆಷ್ಟು ?

ಅರಗಿಳಿಗಳ ಸವಿನುಡಿಯು
ಚಲ್ವಸುಳಿನಾಭಿ ಕುಚ ಕುಂಭಗಳ ಹಂಸ ನಡೆಯು
ಥಳಥಳಿಸುವ ತೋಳ್ತೊಡೆಯು ಒಳ್ಳೆ
ಬಳಕುವ ನಡುವಿನ ತಳಿರಡಿಯು

ಕುಸುಮಲೋಚನೆಯವಳ ನೋಡಿ
ಕಾಮ ವಿಷಯ ಸರಸಸುಖ ದಯದಿಂದ ಬೇಡಿ
ವಿನಯ ವಚನದಿ ಮಾತಾಡಿ
ದೇವ ಶಿಶುನಾಳಧೀಶನ ದಯದಿಂದ ಕೂಡಿ

❍

## ಪ್ರೀತಿ ಗೆಳೆತನ

ಎಲ್ಲರಂಥವನಲ್ಲ ನನಗಂಡಾ
ಬಲ್ಲಿದನು ಪುಂಡಾ
ಎಲ್ಲರಂಥವನಲ್ಲ ನನಗಂಡಾ

ಎಲ್ಲರಂಥವನಲ್ಲ ಕೇಳೆ
ಸೊಲ್ಲು ಸೊಲ್ಲಿಗೆ ಬಯ್ದು ನನ್ನ
ಎಲ್ಲಿಗ್ಹೋಗದ್ಹಾಂಗ ಮಾಡಿಟ್ಟಾ
ಕಾಲ್ಮುರಿದು ಬಿಟ್ಟಾ

ಮಾತಾಪಿತರು ಮನೆಯೊಳಿರುತಿರಲು
ಮನಸೋತು ಮೂವರು
ಪ್ರೀತಿ ಗೆಳೆತನ ಮಾತಿನೊಳಿರಲು
ಮೈಮರೆತು ಮೈಯದಿ

ಘಾತವಾಯಿತು ಯೌವನವು ಬರಲು
ಹಿಂಗಾಗುತಿರಲು
ದೊತೆ ಕೇಳ್ನಮ್ಮವರು ಶೋಭನ
ರೀತಿ-ಚಾರವನೆಲ್ಲ ತೀರಿಸಿ
ಆತನೊಳು ಮೈಹೊಂದಿಕೆಯ ಮಾಡಿ
ಮಮತೆಯಲ್ಲಿ ಕೂಡಿ

❍

## ಬಾಳಬಲ್ಲವರಿಗೆ ತಂಬೂರೀ


ತರವಲ್ಲ ತಂಗಿ ನಿನ್ನ ತಂಬೂರೀ ಸ್ವರ
ಬರದೆ ಬಾರಿಸದಿರು ತಂಬೂರಿ
ಸರಸ ಸಂಗೀತದ ಕುರುಹುಗಳರಿಯದೆ
ಕರದೊಳ್ಹಿಡಿಯ ಬ್ಯಾಡೆ ತಂಬೂರಿ

ಮಧ್ಯದೊಳೇಳು ನಾದದ ತಂಬೂರಿ
ಅದು ತಿದ್ದಿ ನುಡಿಸಬೇಕು ತಂಬೂರಿ
ಸಿದ್ಧಿಸಾಧಕರ ಸುವಿದ್ಯಕ್ಕೆ ವದಗುವ
ಬುದ್ಧಿವಂತಗೆ ತಕ್ಕ ತಂಬೂರಿ

ಬಾಳಬಲ್ಲವರಿಗೆ ತಂಬೂರಿ
ದೇವ ಭಾಳಾಕ್ಷ ರಚಿಸಿದ ತಂಬೂರಿ
ಹೇಳಲೇನಿದರ ಹಂಚಿಕೆಯನರಿಯದಂಥ
ತಾಳಗೇಡಿಗೆ ಸಲ್ಲ ತಂಬೂರಿ

ಸತ್ಯಸುಗುಣರಿಗೆ ತಂಬೂರಿ । ಇದು
ನಿತ್ಯವುತ್ತಮರಾಡ್ವ ತಂಬೂರಿ
ಬತ್ತೀಸರಾಗದ ಬಗೆಯನು ತಿಳಿಯದ
ಕತ್ತಿಗಿನ್ಯಾತಕೆ ತಂಬೂರಿ ?

ಅಸಮ ಸುಮ್ಯಾಳಕ್ಕೆ ತಂಬೂರಿ ಇದು
ಹಸನಾಗಿ ಆಡುವ ತಂಬೂರಿ
**ಶಿಶುನಾಳಧೀಶನು** ಓದ್ವಪುರಾಣದಿ
ಹಸನಾಗಿ ಬಾರಿಸೊ ತಂಬೂರಿ



❍

## ಬಾಲಲೀಲಾ ಮಹಂತ ಶಿವಯೋಗಿ

### ಕಂಡು ಕಂಡದ ಬೀಡಿ

ಎಂತಪ್ಪ ಮಗನು ಪುಟ್ಟಿದನಯ್ಯ ಗುರುರಾಯ
ಚಿಂತೆಯಲಿ ತೊಳಲಿ ಬಳಲಿಸುವನೆನ್ನ

ಹೊನ್ನೆಂಬ ಕಡಲೆಯನು ಹೆಣ್ಣೆಂಬ ಬೆಲ್ಲವನು
ಮಣ್ಣೆಂಬ ಕುಂಚಿಗೆಯವೊಳಗೆ ಹಾಕಿ
ತಿನ್ನುವೆನು ಕೊಡುಯೆಂದು ಎನ್ನ ಬಲು ಕಾಡುವನು
ಸನ್ನತಿಯ ಪೇಳಿ ಸಲಹಯ್ಯ ಶಿವನೆ

ಕಂಡು ಕಂಡುದ ಬೇಡಿ ಬಂಡು ಮಾಡಿಯೆ ಯಮನ
ಕುಂಡದೊಳು ಹಾಕುವನು । ಮುಂದೆ ಹೃದಯ
ಪುಂಡರೀಕದೊಳಿರುವ ಮಂಡಲತ್ರಯವಾಸ
ಖಂಡಿಸೈ ಈ ಮಗನ ಸಿರವ ಬೇಗ

ಜಗದೊಳು **ಮಹಂತೇಶ** ನಗೆಗೇಡಾದರೆ ಏನು
ಮಗನ ಸಂಹರಿಸಿ ಮೋಕ್ಷವನೀಯೋ ಎನಗೆ

❍



## ಅರಸುವ ಜನರಿಗೆ

ಎಲ್ಲಾ ರೂಪವು ತಾನಂತೆ ಶಿವ
ಎಲ್ಲೆಲ್ಲಿಯೂ ತಾನಿಹನಂತೆ
ಅಲ್ಲಲ್ಲರಸುತ ಗುಡಿಗಳ ತಿರುಗವ
ಕಳ್ಳಜನರಿಗೆ ಕಲ್ಲಂತೆ ಶಿವ

ಕಣ್ಣೆಂಬುದು ತನಗಿಲ್ಲವಂತೆ ಶಿವ
ಕಣ್ಣಿಗೆ ಕಾಣಿಸದಿಹನಂತೆ
ಕಣ್ಣು ತೆರೆದು ತನ್ನರಸುವ ಜನರಿಗೆ
ಬಣ್ಣ ಬಣ್ಣಗಳಾಗಿಹನಂತೆ

ದೃಶ್ಯಾದೃಶ್ಯವು ತಾನಂತೆ ಶಿವ
ದೃಶ್ಯಾದ್ವೈತಗಳೆರಡಂತೆ
ದೃಶ್ಯಾದ್ವೈತಗಳೆರಡರ ನಡುವೆ
ಶಾಶ್ವತ ರೂಪವು ತಾನಂತೆ

ಶಂಕರಾನಂದವು ತಾನಂತೆ ಶಿವ
ಕಿಂಕರರೊಳು ಸಾರಿಹನಂತೆ
ಬಿಂಕನು ಮುರಿಸುವ ಕಿಂಕರರಿಗೆ ಗುರು
**ಮುರುಘೇಶ** ರೂಪವು ತಾನಂತೆ



## ಶಿವಯೋಗಿ

ಅವರವರ ಭಕ್ತಿಗೆ ಅವರವರ ಭಾವಕ್ಕೆ
ಅವರವರ ತೆರನಾಗಿ ಇರುತಿಹನು ಶಿವಯೋಗಿ

ಇರುವೊಂದು ಕನ್ನಡಿಯ ನೂರಾರು ಜನ ಪಿಡಿಯೆ
ಸರಳವಾಗಿ ಅವರವರ ರೂಪು ಕಾಣುವಂತೆ
ಹರಿಯ ಭಕ್ತರಿಗೆ ಹರಿ, ಹರನ ಭಕ್ತರಿಗೆ ಹರ
ನರರೇನು ಭಾವಿಸುವರದರಂತೆ ತೋರುವನು

ಮತಭೇದದವರು ದುರ್ಮತಿಯಿಂದ ಯತಿವರೆಗೆ
ಸ್ತುತಿನಿಂದೆ ಮಾಡಿದರೆ ಅವರಿಗೆ ತಿರುಗುವವು
ಯತಿವರನು ತಾ ತನ್ನ ಪಥದಲ್ಲಿ ಇರುವನು
ಕ್ಷತ್ರಿಯ ಜನರ ಪಾಪಪುಣ್ಯ ಫಲ ಪರೀಕ್ಷೆ

ಕುಲಛಲವ ಹಿಡಿದಿರುವ ಕಲಕು ಮನದವರಲ್ಲಿ
ತಿಳಿವಳಿಕೆ ಶಿವ ಚಂದ್ರನು ಕಾಣುವ ಪರಿಯೆಂತು
ಕುಲಛಲವನತಿಗಳೆದ ತಿಳಿಯ ಮನದವರಲ್ಲಿ
ಸಲೆ **ಮಹಂತಲಿಂಗ** ಚಿತ್ಸೂರ್ಯ ಕಾಣುವನು

❍

## ಒಳಗೇನು ಸುಖವಿಲ್ಲ !

ನೀನೆಲ್ಲಿ? ನಿನ್ನ ದೇಶೆಲ್ಲಿ? ಕೇಳಲೆ ರಾಜ
ನಾನೆಲ್ಲಿ ನಾನಿರುವ ಸುಡುಗಾಡ ಮಠವೆಲ್ಲಿ ?
ಏನಾಶಪಾಶದಲಿ ಬಿಗಿದೆನ್ನ ಕಟ್ಟಿದೆಯೊ ?
ಕಳ್ಳರನು ಕಟ್ಟುವರೂಡಿ


ಬಾಲ ಬ್ರಹ್ಮಯು ನಾನು ಬಳಸಿ ಬ್ರಹ್ಮಯು ನೀನು
ಬಹಳ ಹೇಳುವುದೇನು ತಿಳಿವಳಿಕೆ ರಾಜನಿಗೆ
ಮೇಲೆ ಚಂದದ ಸುಖವು ಒಳಗೇನು ಸುಖವಿಲ್ಲ
ಮೈಸೂರ ಮೈಚೂರವೋ

ನಮ್ಮ ಸುಖ ದುಃಖಗಳ ಕೇಳುವರು ಯಾರಿಲ್ಲ
ನಮ್ಮ ಸುಖ ಮೂಕ ಸಕ್ಕರೆ ಮೆದ್ದಪರಿಯಂತೆ
ನಮ್ಮ ದುಃಖವು ಕಣ್ಗೆ ಚೇಳೂರಿದಂತಿಹುದು
ಹುರುಳಿಲ್ಲವಲೆ ರಾಜನೆ

ಹಂದರದಿ ಬಳ್ಳಿ ಸುವರ್ಣದಿಂದಲಿ ರತ್ನ
ಗಂಧ ಪರಿಮಳ ಪುಷ್ಪ ಸುಗಂಧದಲಿ ಲಿಂಗ
ಚೆಂದವಾಗಿಹ ಭಾವ ಹ್ಯಾಗೋ ಹಾಗೆ ನೋಡು
ನಿಮ್ಮಿಂದ ನಮ ಚೆಂದವು

ಚೆಂದದಿಂ ಕೇಳ್ ರಾಜ ಕರದ ಕುಂಬಳ ಬುರುಡೆ
ಗುದದ ಲಂಗುಟವೆರಡು ಪೂರ್ವದಲ್ಲಿರುತಿಹವು
ಇದನಷ್ಟು ನಮ್ಮ ಮುದುಕವ್ವ ಮಾಡಿದಳು
ಸರಿಸರ್ವಾಲಂಕಾರಗಳನು

ಊರಿಗೊಂದಡಕೆಗೆ ಒಂದು ನ್ಯಾಯವೆಂಬ ಪರಿ
ದೂರ ಚಂದವು ನಮದು ಸರಿಬಾರದಾರಿಗೆಯು
ಮಾರಾರಿ ಶಿವ ಮಾಡಿದಾಟವಿದು ತಿಳಿಯದು
ಏನಂತ ಕರೆಸಿಕೊಂಡೆ ?



ಯಾರು ಹೇಳಿದರು ನಿನಗೇಕೆ ಕರೆಸಿದನಮ್ಮ
ಬೇರು ಬುನಾದಿ ಹಿಂಗ್ಯೆತಿ ನೋಡಲೆ ರಾಜ
ಸೋರು ಸುಂಬಳ ಮಗುವು
ತಂದೆ ತಾಯಿಗೆ ಹಿತವು ಜಗಕೆ ವ್ಯತ್ಯಾಸಲೀಲಾ

ವಸುಧಿಪನೆ ನಿನ್ನ ಮೈಸೂರೆಂಬ ಬೆಲ್ಲದ
ಮುಸುರಿ ಗಡಿಗೆಗೆ ಲಕ್ಷಗಟ್ಟಲೆ ಭಿಕ್ಷುಕರೆಂಬ
ಸಸಿನೆಮಕ್ಷಕ ದಂಡು ಮುಸುಕಿಹುದದೇನೆಂಬೆ
ಮುತ್ತಿಗೆಯ ಹಾಕಿದಂತೆ

ಶಶಿಧರನ ವಾಹನಂಶಿಕವಾದ ಕಾರಣಂ
ಬಿಸಜಭವ ಮುಖ್ಯರಿಗೆ ದೊರಕದಿಹ ಭಕ್ತಿಯ ವಾಸನೆಯು
ಪಸರಿಸಿತು ಜಗದಗಲ ನಿನ್ನಯ ಭಕ್ತರ ಬಂಧು ನೀನೆ

ಇರದೆ ನಂಜಾಖ್ಯ ವೆಂಕಟರಾಯ ಕೇಳಿರೈ
ಮೂರುವರೆ ಮೊಳಗೀಬು ನಾವಿರುವ ಸ್ಥಳ ನೋಡಿ
ದೊರೆಕೊಟ್ಟ ರಥ
ಮೇಣೆ ಛತ್ರ ಚಾಮರಗಳನೆಲ್ಲಿ ಮಡಗಿಕೊಳಲಿ ?

ತರಬೇಡೆಂದರೆ ತಂದಿರೂರರ್ಗೆ ಮೆರಸಿದಿರಿ
ತೀರೋಯ್ತು ಗುರುಕರುಣ ದೊರೆ ಭಕ್ತಿ ವೈಭವವು
ತಿರಿಗೊಯ್ಯಿರಿ ಚೆಂದಲ್ಲ
ದೊಡ್ಡ ಸ್ಥಳ ಸುಸರಿಗಳು ಸಣ್ಣಸ್ಥಲಕೇನು ಚಂದ ?

❍



## ಮನಗಿಳಿ

ವನಗಿಳಿಯು ಬಂದೆನ್ನ, ಮನಗಿಳಿಯ ಬುದ್ಧಿಯನು
ವಿನಯದಿಂ ಕೆಡಸಿ ಪೋಗಲು ಬಂದೆಯಾ ?

ಶಿವಶಿವವೆಂಬುದ ಮರೆಸಿ ಚಿವ್ ಚಿವ್‌ವೆಂಬುದು ಕಲಿಸಿ
ಭವಿಕಾಲಮಾರ್ಜಾಲನುಣಿಸ ಬಂದೆಯಾ ?
ಪವನವರ್ಗದ ಗಿಳಿಯೆ, ಧವಳ ವರ್ಣದ ಗಿಳಿಯೆ
ಭವವೃಕ್ಷಕ್ಕೆನ್ನ ಹಾರ ಕಲಿಸಬಂದೆಯಾ ?

ಹರಧ್ಯಾನವೆಂಬ ಮಹಾ ಪಂಜರದ ಗಿಳಿಯ
ಮರಪಂಜರದೊಳಗಾಡ ಕಲಿಸಬಂದೆಯಾ
ಮರಗಿಳೆಯೆ ಹೋಗಿನ್ನು, ಅರಸ ಗಿಳಿ ಬುದ್ಧಿ ಬಲು
ಬಿರುಸಾಯ್ತು ನಿನ್ನ ಕೊಂಡಾಡಿ

ಗುರು **ಮಹಂತಲಿಂಗ** ತಾನಿರದೆ ಸಾಕಿದ ಗಿಳಿಯು
ಸರಿಯೆ ನಿನ್ನೊಡನೆ ಕೂಡಾಡಲಿಕ್ಕೆ
ಮರಿದೇವರೆ ಇದನೊಯ್ದು, ಮರದೊಳಗೆ ಬಿಟ್ಟು ಬಾ
ತರವಲ್ಲ ಗಿಳಿಬುದ್ಧಿ ಹೋಯ್ತು ನಮ್ಮ

❍

## ದೊರೆ

ಕೆಟ್ಟ ದೊರೆಯೆನಿಸ ಬೇಡ । ಅದರಿಂದ
ನಷ್ಟ ಬಹಳಾಗುತಿಹುದು ಎಲೆರಾಯ

ನಷ್ಟ ಬಹಳಾಗುತಿಹುದು
ಸೃಷ್ಟಿ ಪ್ರಜೆಪರಿವಾರ
ಭ್ರಷ್ಟನಿವ ಸಾಯಲೆಂದು
ದುಷ್ಟರೂ ಮೊರೆಯಿಡುವರು ಶಿವಗೆ

ದಂಡ ದ್ರೋಹವನು ಮಾಡಿ ಜಗದೊಳಗೆ
ಭಂಡಾಗ ಬೇಡ ರಾಯ
ಮಡದಿ ಮಕ್ಕಳಿಗಿವಗೆ ಮುಂದೆ ಇಟ್ಟಿರಲೆಂದು
ಮಂಡಲದ ಜನರೆಂಬರು


ಸತ್ಯ ದೊರೆಯೆನಿಸಿಕೊಂಡು
ಮರ್ತ್ಯದೊಳು ಹತ್ತುದಿನ ಬಾಳು ಕಂಡ್ಯಾ
ಸತ್ಯೇಂದ್ರ ಕರವೀರ ದೊರೆಗಳೆಲ್ಲರ ಹಿಂದೆ
ಸತ್ತು ಹೊಗಳಿಸಿಕೊಂಬರು

ದುಷ್ಟದೊರೆ ಸತ್ತನೆನಲು ಸರ್ವಜನ–
ರಟ್ಟುಂಡು ನಗುತಲಿಹರು
ಶಿಷ್ಟದೊರೆ ಸತ್ತನೆಂಬುದ ಕೇಳಿ ಸರ್ವಜನ–
ರಟ್ಟುಣದೆಯಳುತಲಿಹರು

ಹಿಂದಿನ ದೊರೆಗಳೆಲ್ಲ ಗುರುಹಿರಿಯ
ರಿಂದ ಕಥೆ ಕಾವ್ಯದಲ್ಲಿ
ಬಂದು ಹೊಗಳಿಸಿಕೊಂಬರಿಂದಿನ ಪರಿಯಂತ
ಚೆಂದಾಗಿ ಕೇಳೋ ರಾಯ


ಕೊಂದ ಕೊಲೆ ದೋಷಂಗಳು ನಿನಗಿನ್ನು
ಮುಂದಾದೊಡಳಿಯವಯ್ಯ
ಬಂದು **ಗುರುಮಹಂತ**ನಡಿ ಪೊಂದಿ ಪಾಪವ ಕಳೆಯೊ
ಮಂದಮತಿ ಮನುಜರಾಯ

❍



## ಶಂಕರಾನಂದ ಯೋಗೀಶ್ವರ

### ತಿಂಗಳ ಬೆಳಕಿನ ತಿಳಿರಸ




ಮಂಗಲವಾಗಿಹುದು ಸದ್ಗುರುವಿಗೆ
ಕಂಗಳ ಕೊನೆಯಲಿ ಥಳಥಳ ಹೊಳೆಯುವ
ತಿಂಗಳ ಬೆಳಕಿನ ತಿಳಿರಸ ಉಕ್ಕುವ

ಆರುಚಕ್ರವ ಮೀರಿ । ಸೂಕ್ಷ್ಮ
ದ್ವಾರದೊಳಗೆ ಸೇರಿ
ಏರಿ ಸಾಸಿರದಳ ಪದ್ಮ ಸಿಂಹಾಸನದಿ
ಬೂರಿ ಬ್ರಹ್ಮಾನಂದ ಪದವಿಯ ಸೇರುವ

ವಿರತಿ ಎಂಬುವ ಬತ್ತಿ। ಭಕ್ತಿ
ಎರಕವಾಗಿಹ ಸುಘೃತ
ಎರಡು ಒಂದಾಗಲು ಅರಿವೆಂಬ ಜ್ಯೋತಿಯು
ಉರಿಯಲು ತಾಮಸ ಕತ್ತಲೆ ಕಳೆದು

ರವಿ ಶಶಿಗಳ ತೆರದಿ । ಬೆಳಗುವ
ಪುವಿಮಲ ಚಿತ್ಕಳೆಯ
ಒಳಹೊರಗೆರಡೆಂಬುದೇ ಅರಿಯದೆ
ಅವಿರಳ **ಗುರು ಮಹಾಲಿಂಗನ** ತೇಜವು

○



## ಬರುವ ಕಾಲದಿ ಬರಿಗೈಯಿ

ನಾಳೆಯೆಂಬನ ಮನೆ ಹಾಳು । ನೀನು
ನಾಳೆತನಕಿರುವುದು ನಿಜವೇನು ಹೇಳು ?
ನಾಳೆಯೆಂಬನ ಮನೆಹಾಳು !

ಕ್ಷಣಭಂಗುರವುಯೆನ್ನಿಸದೆ
ನಿನ್ನ ತನವು ಆಚಂದ್ರಾರ್ಕವಾಗಿ ನಿಲ್ಲುವುದೆ ?
ದಿನವು ರೋಗದಿ ಸಾಯುತ್ತೀಯೆ । ಯಿದನು
ಮನದೊಳಗರಿತು ಶೀಘ್ರದಿ ಮುಕ್ತನಾಗದೆ

ಹಾಳುವಾದ ಮಾಡಬಲ್ಲೆ
ನಿನ್ನ ಮೂಲತತ್ವ ಕಿವಿಯಲೊಲ್ಲೆ
ಖೂಳಕುಹಕ ವಿದ್ಯೆ ಬಲ್ಲೆ
ಎಷ್ಟು ಹೇಳಲು ಆಶೆಮೋಹವ ಬಿಡಲೊಲ್ಲೆ

ಕೊಡಬೇಕಾದರೆ ನಾಳೆಯೆಂಬೆ
ಕಟ್ಟಿ ಇಡಬೇಕಾದರೆಯೆನ್ನದೀಗಲೆಯೆಂಬೆ
ಮಡದಿ ಮಕ್ಕಳಿಗಿರಲೆಂಬೆ, ನಾಳೆ
ಜಡಿಯುವ ಯಮಭಟರುಗಳಿಗೇನೆಂಬೆ

ಬರುವ ಕಾಲದಿ ಬರಿಗೈಯಿ
ನೀನು ಹೊರಡುವ ಕಾಲದೊಳಗೆ ಬರಿಗೈಯಿ
ಪರರನ್ನು ಜರಿಯುವ ಬಾಯಿ, ಇಹವು
ಪರಕಾಣದಾಡುವ ತಲೆಹುಳಿತ ನಾಯಿ

ವಿರತಿ ಸದ್ಭಕ್ತಿಯ ತಾಳು
ಕೆಟ್ಟ ದುರತದಿ ಕುದಿಯುವದ್ಯಾತರ ಬಾಳು ?
ಸ್ಥಿರ ಮುಕ್ತಿ ಕಾಂತೆಯನಾಳು, ನಮ್ಮ
**ಗುರುಮಹಲಿಂಗ**ನ ವಚನವ ಕೇಳು

○



## ಮೂರು ನದಿಯ ನಡುವೆ ಮಿಂದು

ಓದಬಾರದೇ ತರಳೆ ಓದಬಾರದೆ ?
ಓದಿನೊಳಗಣೋದು ಶ್ರೀಗುರು
ಬೋಧಿಸಿರುವ ಅರ್ಥವರಿತು ಓದಬಾರದೆ ?

ಮೂರು ನದಿಯ ನಡುವೆ ಮಿಂದು
ಚಾರು ಬ್ರಹ್ಮಗಿರಿಯ ಮಠದ ಆರು ಮೆಟ್ಟಲೇರಿ
ಸಣ್ಣ ದ್ವಾರವನ್ನು ತೆರೆದು ನೋಡಿ

ಜಲಜವಾರು ಕಂಡು ಒಳಗೆ ಪೊಳೆವ ಕಾವಾದಿಯಾಗಿ
ಸಲೆ ಕ್ಷಕಾರದ್ಯಂತ ಅರಿತು
ದಳದೊಳು ಅಕ್ಷರೈವತ್ತನ್ನು

ಇಡಪಿಂಗಳ ಎಂಬುವಂಥ ನಾಡಿಯೆರಡು ತಡೆವ ಬ್ರಹ್ಮ
ನಾಡಿ ಮಧ್ಯ ಕುಳಿತು ಮುದದಿ
ನೋಡಿ ಸೋಹಂ ಸೋಹಮ್ಮೆನ್ನುತ

ಸಾರುಪಚ್ಚೆ ಹಲಿಗೆ ಮೇಲೆ
ಸಾರಬ್ರಹ್ಮ ಸೂತ್ರ ಪಿಡಿದು ಮೂರುಮುಖದ
ಕಂಠದಿಂದ ಸಾರಮಂತ್ರ ಪ್ರಣವ ಬರೆದು

ಚಟ್ರಲ **ಶ್ರೀಗುರುಮಹಲಿಂಗ** ಸ್ಫುಟದಿ ವರದೀ ಮಂತ್ರರಾಜ
ಕುಟಿಲವಳಿದು ಭಕ್ತಿಯಿಂದ
ಭಠವು ಎಂಬ ಮಠದಿ ನಿತ್ಯ

○

## ಜ್ಞಾನದ ಅರಮನೆ

ಕೋತಿಮನವ ನಂಬಬಹುದೆ ? ಇಂಥ
ಕೋತಿಮನದ ಚೇಷ್ಟೆಗೊಳಗಾಗಬಹುದೆ ?

ತನುವೆಂಬ ವೃಕ್ಷದೊಳಿಹುದು
ದುಷ್ಟ ಗುಣವೆಂಬ ಕೊಂಬೆಗಳಿಗೆ ಹಾರುತಿಹುದು
ಅನುಮಾನಗಳ ರೂಪವಾಗಿಹುದು
ಒಂದು ಕ್ಷಣದಿ ಈರೇಳು ಲೋಕವ ಸುತ್ತುತಿಹುದು

ದಶದಿಕ್ಕುಗಳ ನೋಡುತಿಹುದು ಒಮ್ಮೆ
ಬಿಸಜಾಕ್ಷಿಯರ ನೋಡಿ ಹಲ್ಕಿರಿಯುವುದು
ವ್ಯಸನವೇಳರ ಪಾಲಾಗಿಹುದು ಕೆಟ್ಟ
ವಿಷಯಗಳೆಂಬ ಹಣ್ಗಳ ಮೆಲ್ಲುತಿಹುದು

ವರಜ್ಞಾನದ ಅರಮನೆ ಸೇರದು । ನಿತ್ಯ
ದುರಿತ ಕರ್ಮದ ವನದೊಳಾಡುತಿಹುದು
ನರಕದಿ ಬಿದ್ದು ಹೋಗುವುದು, ನಮ್ಮ
**ಗುರುಮಹಲಿಂಗರಂಗ**ನ ಮರೆತುಕೊಂಡಿಹುದು

❍

## ಅಮೃತ ಕೊಳ

ಹಂಸನಾಗಲೋ, ಪರಮಹಂಸನಾಗಲೋ
ಹಂಸೋ ಹಂಸೋ ಹಂಸೋ ಎನುತ
ಧ್ವನಿಗೈದು ದ್ವೈತಭಾವ
ಹಂಸನಾಗಲೋ ಪರಮಹಂಸನಾಗಲೋ

ಮಾಯೆ ಮೂಲವನ್ನು ತಿಳಿದು
ಮಾಯೆ ಮೂಲಗಳನ್ನು ಅಳಿದು, ಮಾಯೆ
ಕಳೆಯೆ ಸಳದು ಮುದದಿ
ಮಾಯೆಕಳೆಗತೀತನಾಗಿ

ನೀರನುಳಿದು ರಾಜಹಂಸ
ಕ್ಷೀರ ಸವಿಯುವಂತೆ ಜಗದಿ
ಮೂರು ದೇಶವುಳಿದು ಪೊಳೆವ
ಸಾರ ತತ್ತ್ವಸಾರ ಸವಿವ

ನಿರುತ ಬ್ರಹ್ಮಚರ್ಯ ಶಾಂತಿ
ಕರವೆನ್ನಿಪ್ಪ ಬ್ರಹ್ಮಪುರದೊಳಿರುವ
ಅಮೃತ ಕೊಳದಿ ಮುಳಗಿ
ಪರಮ ಅಮೃತ ಸವಿವ

ನಿರುತ ಪಾಪಪುಣ್ಯವೆಂದು
ಮೆರೆವ ಕಮಲವನದ ಮೆಲುತ
ಸ್ಫುರಿವ ಜ್ಞಾನವೆಂಬ ಬನದಿ
ಪರಮ ಸುಖದಿ ಚರಿಸುವಂಥ

ಪೂರ್ಣಬ್ರಹ್ಮದಲ್ಲಿ ಆಡಿ
ಪೂರ್ಣ ಬೋಧನಾಗಿ ಉಂಡು
ಅನ್ನ ಅಮೃತ ಮಾಡಿ ಸವಿದ
ಚನ್ನ ಶ್ರೀ **ಗುರುಮಹಲಿಂಗ**ನೆಂಬ ಹಂಸನಾಗಲೊ

❍

## ರತ್ನ ಪರೀಕ್ಷೆ

ರತ್ನ ಬಂದಿದೆ ನೋಡಿರೋ । ಉನ್ನತ ಜೀವಾ
ರತ್ನ ಬಂದಿದೆ ನೋಡಿರೋ
ಪೃಥ್ವಿಗಧಿಕ ಬ್ರಹ್ಮಪುರದಿಂದ ಬಂದಿದೆ
ರತ್ನಪರೀಕ್ಷೆಯ ಬಲ್ಲ ಸತ್ಪುರುಷರೆ

ಶಿರದೊಳು ಅಡಗಿದೆ । ಯಾವಾಗಲೂ
ಕರದಲ್ಲಿ ಕಾಣುತಿದೆ
ಪರಚಂದ್ರಸೂರ್ಯ । ಬೀದಿಗಳೊಳಗಿಟ್ಟಿದೆ
ದುರಿತ ಕರ್ಮಗಳಳಿದವಗೆ ಕಾಣುತಿದೆ

ಅಷ್ಟದಳಗಳಿಂದೆ । ಆ ರತ್ನವು
ದಿಟವಾಗಿಹುದದರಿಂದೆ
ದೃಷ್ಟಿಯನಗಲದೆ ನೋಡಿದ ಪುರುಷನು
ನಷ್ಟಪಾತಕನಾಗಿ ಶ್ರೇಷ್ಠನಾಗುವನಂತೆ

ಕಳ್ಳರ ಭಯವಿಲ್ಲವೊ । ಆ ರತ್ನಕ್ಕೆ
ಸುಳ್ಳರ ಸುಳಿವಿಲ್ಲವೊ
ಎಲ್ಲೆಲ್ಲಿ ನೋಡಲು ಅಲ್ಲೆ ಕಾಂಬುದು ತಾನು
ಒಲ್ಲೆನೆಂದರೆ ಬಿಡದೆದುರಿಗೆ ನಿಲ್ಲುವುದು

ಶಿರದೊಳು ರತ್ನವನ್ನು । ಧರಿಸಿದಂಥಾ
ಉರಗನ ಹೃದಯವನ್ನು
ಉರಗಭೂಷಣ ಪಕ್ಷಿ-ಹಂಸವಾಹನ ಮುಖ್ಯ
ಸುರಮುನಿ ಹೃದಯದಿ ನಿತ್ಯ ಬೆಳುಗುವಂಥಾ

ದೊರೆ ದೇಸಾಯಿಗಳಲ್ಲಿಯೂ । ನವಕೋಟಿ
ನರನಾರಾಯಣನಲ್ಲಿಯೂ
ನೆರೆ ಚಕ್ರವರ್ತಿ ಬೊಕ್ಕಸದೊಳಗಿಲ್ಲ
ಶ್ರೀ **ಗುರುಮಹಾಲಿಂಗ ರಂಗ**ನ ಭಾಂಡಾರದೊಳಿಹ

❍

# ಶಿವಲಿಂಗವ್ವ(ಜತ್ತಿ)

## ಸೂರ್ಯ ಹುಟ್ಟಿದನವ್ವ

ಮಗ ಹುಟ್ಟಿತವ್ವ ಎನಗೊಬ್ಬ ಮಗ ಹುಟ್ಟಿತವ್ವ
ಮಗ ಹುಟ್ಟಿ ಎನ್ನ ಮಾಯವನಳಿಸಿ
ಜಗ ಬಿಡಿಸಿ ಎನ್ನ ಜನ್ಮವ ಕಡಿಸಿದಾ

ನವ್ವ ತಿಂಗಳವ್ವ ಮೈಯೆಲ್ಲ ನೋವ ತಿಂದೆನವ್ವ
ದೇಹಕೆ ಸತ್ತುದ ಮಾಯೆಗೆ ನಿಲುಕದ
ಮೋಹಗಾರನವ್ವ

ಮಗ ಹುಟ್ಟಿದಾಗ ಮನೆಯೆಲ್ಲ ಬೆಳಕು ಕಂಡೆನವ್ವಾ
ರಾಳ ಜ್ಯೋತಿಗಳ ಹೂವ ಬಾಣಗಳು
ಬಹಳ ಕಂಡೆನವ್ವ

ಆಸೆ ಅಳಿಸಿತವ್ವ ಆರು ಮೂರು ಸುಡಿಸಿದವ್ವಾ
ಘೋರ ಬಿಟ್ಟ ಎನ್ನ ಪೂರದೊಳಗೆ
ಸೂರ್ಯ ಹುಟ್ಟಿದನವ್ವ

ಘಟ್ಟಿ ತೊಟ್ಟಿಲವ್ವ ಆತಗಾಗಿ ಕಟ್ಟೀನವ್ವಾ
ಪಂಚವರ್ಣದವ್ವ ಪ್ರಭುವಿನ
ತೂಗು ತೊಟ್ಟಿಲವ್ವ

ತೊಟ್ಟಿಲದೊಳಗೆ ದಿಟ್ಟನೆ ಮಲಗಿಸಿ
ಮುಟ್ಟಿ ತೂಗಿನವ್ವಾ
ಹೆಸರೆ ಇಟ್ಟೆನವ್ವಾ ಕುಶಲದ ವಸ್ತು ರಂಗನವ್ವಾ

ಆ ಗಂಧ ಗುರುವಿನ ತೂಗುತ ನಾನು
ಜೋಗುಳ ಹಾಡಿದೆನವ್ವಾ
ಯಾರ ಪುಣ್ಯನವ್ವಾ **ನಿಂಬರಗಿ ಗುರುವ** ತಂದಿದವ್ವಾ
ಚಂದಾಗಿ ಆತನ ಪಾದಕ ಹೊಂದಿ
ಕಂದನ ಹಡೆದೆನವ್ವಾ

❍

## ಆತ್ಮನ ಅನುಭವ ಬಲ್ಲವರು

ಸೈ ಸೈ ಸೈ ಕುಂತಿದನೆ, ಕುಂತ ಜಾಗದಾಗೆಲ್ಲರನೆ
ಎಲ್ಲರ ಮುಖವ ಕಂಡೆನೆ । ಅಲ್ಲಿ
ಸಭೆಯೊಳಗೆ ಶಿವನ ನೋಡಿದನೆ

ಸಾಧುಸಂತರ ಸಭಾ ಕಂಡೆನೆ
ಯೋಗಿ ಜೋಗಿಯಿರುವುದು ನೋಡಿದೆನೆ
ಸಾಗ್ರದಲ್ಲಿ ಸಾಂಬನ ಕಂಡೆನೆ, ಈ
ಯೋಗ ಮಾಡಿಕೊಂಡವ ಧನ್ಯನೆ

ಸಭಾದೊಳಗಿನ ಅರ್ಥೇನ ಹೇಳಲಿ ?
ಗುಲಾಲ ಝುಮ್ಮರ ಹಾರಿತರೀ
ಸುತ್ತೆಲ್ಲ ತಾರಕ ವರ್ಣದರೀ, ಇದು
ತಿಳಿದವರಿಗೆ ವೈಕುಂಠದರೀ

ಹಸುರು ಹಳದಿ ಕುಶಾಲದೊಂದು
ಶೇಷನ ವರ್ಣ ತೋರುವುದು
ಈನ ರೂಪವು ಒಂದೊಂದು, ಏನು
ಹೇಳಲಿ ನಾನು ಈ ಛಂದು ?

ಎಂಥ ಸುಲಭ ಇದ್ದಾನೊ ದೇವ ?
ಅಲ್ಲಿ ಏರಿ ಮಾಡಿ ಆತನ ಧಾವಾ
ದ್ವಾರ ತೆರೆದು ನೋಡುವೆ ಅವನ, ಪರ
ನಾದ ದಿಮ್ಮದೊಳು ಮುಳುಗುವೆ ನಾ

ಇಷ್ಟು ಅರ್ಥವು ಎಲ್ಲಿ ಅದ ?
ಫಣಿನೇತ್ರ ಮಧ್ಯದ ನಡುವದ
ಮೂರು ಮೀರಿದವಗ ತೋರೇದ, ಗುರು
ಸಾರಿ ಹೇಳಿದರ ತಿಳಿದದ

ಆತ್ಮನ ಅನುಭವ ಬಲ್ಲವರು
ಗುರು **ನಿಂಬರಗಿ ಮಹರಾಜ ಸಾಧುರ**
ಯೋಗದ ಮಾರ್ಗ ತಿಳಿದವರು, ಗುರು
ಲಿಂಗ ಜಂಗಜಂಗಮ ಕೂಡಿದವರು

❍

# ಖೇಮಣ್ಣ (ಬಂಡೆಗುರು)

## ಗಿಣಿ

ಗಿಣಿಯೆ ಮನದಣಿಯೆ
ಕಿನ್ನರಿ ಸ್ವರದಿಂದ ಛಿಣಿ ಛಿಣಿ ನುಡಿವಂಥ । ಗಿಣಿಯೆ

ಮೇಲು ಮಾಲಿನೊಳು
ಸಾಲು ಮಂಟಪದಲ್ಲಿ
ಕೀಲು ಮುದ್ರೆಯ ತಗೆದು
ಕಿಲಿಕಿಲಿ ನುಡಿವಂಥ ಗಿಣಿಯೆ

ಅಂಜನಗಿರಿಯೊಳು
ಮಂಜಿನ ಮನೆಯೊಳು
ಪಂಜರದೊಳಗೆ
ಫಳ ಫಳ ನುಡಿವಂಥ ಗಿಣಿಯೆ

ಕೆಂಪು ಕರಿದು ಬಿಳಿದು
ಇಂಪು ಬಹು ಸೊಂಪಾದಿಂ
ಪಂಪಾಕ್ಷೇತ್ರದ ಮಧ್ಯ
ಝಂಪಿಸಿ ನುಡಿವಂಥ ಗಿಣಿಯೆ

ಅಂಗದೊಳಗೆ ಶಿವ
ಲಿಂಗಸ್ಥಾನದಲ್ಲಿ
ಗಂಗೆ ಯಮುನೆ ನಡುವೆ
ಗಣಗಣ ನುಡಿವಂಥ ಗಿಣಿಯೆ

ಮಂಡಲತ್ರಯ ದಾಂಟಿ
ಕುಂಡಲಿಪುರದೊಳು
ಖಂಡಿತ ನುಡಿವಂಥ
**ಬಂಡೆಗುರುವ** ನೀನೆ ಗಿಣಿಯೆ

❍



## ಹಾವನು ಹಿಡಿಯುವ ಗಾರುಡಿಗ

ಚಂದವಾದ ವೃಂದಾವನದಲಿ ನೋಡು ನೋಡು
ಅಲ್ಲಿ ಹೊಂದಿಕೊಂಡೊಂದು ಹಾವಿರುತಿಹುದು ನೋಡು
ನೋಡು

ದೇಹವೆಂಬ ಹುತ್ತದೊಳಗೆ ನೋಡು ನೋಡು
ಅಲ್ಲಿ ಮೋಹಮಾಯದಿ ಮಲಗಿರುತಿಹುದು ನೋಡು
ನೋಡು

ದೇಹ-ದೇಹಗಳೆರಡರ ನಡುವೆ ನೋಡು ನೋಡು
ಹಾವು ದೇಹನೆಬ್ಬಿಸಿ ನಟನಟಿಸುವುದು ನೋಡು ನೋಡು

ರಾಗಸ್ವರಗಳ ಎರಡರ ಮಧ್ಯ ನೋಡು ನೋಡು
ಹಾವು ದೇಹನೆಬ್ಬಿಸಿ ನಟನಟಿಸುವುದು ನೋಡು ನೋಡು

ಭಕ್ತಿಯೆಂಬ ಕಟ್ಟನುಕಟ್ಟಿ ನೋಡುನೋಡು
ಹಾವನು ಮುಕ್ತಿಯಿಂದಲಿ ವಿರಕ್ತಿ ನೆಲಸಿ ನೋಡು ನೋಡು

ಹಾವನು ಹಿಡಿಯುವ ಗಾರುಡಿಗಾ ನಮ್ಮ ನೋಡು ನೋಡು
ಹಾವನು ಯಾರಿಗೂ ಕಾಣಿಸದೆ ಹಿಡಿದು ನೋಡು ನೋಡು

ಒಂಬತ್ತು ಬಾಗಿಲನ್ನು ಮುಚ್ಚಿ ನೋಡು ನೋಡು
ಹಾವು ತೇಜಚಿತ್ಕಳೆಯಿಂದ ಇರುತಿಹುದು ನೋಡು ನೋಡು

ಜಪಮಂತ್ರ ಧ್ಯಾನದಿಂದ ನೋಡು ನೋಡು
ನಮ್ಮ **ವೀರಬಂಡೆ ಗುರು**ವನು ಭಜಿಸಿ ನೋಡು ನೋಡು

❍

## ಕಂಗಳೆರಡು ಕದಲದಂತೆ

ಬೆಳಕು ಕಂಡೆ ಕೇಳು ಮಾನಿನಿ
ಕಳಹಂಸದಾತ್ಮ ಬೆಳಕ ಕಂಡೆ ಕೇಳು ಮಾನಿನಿ


ಬೆಳಕು ಕಂಡೆನಮ್ಮ ನಾನು
ತಿಳಕೋ ನಿನಗೆ ಪೇಳುವೆನು
ಥಳಕು ಥಳಕು ಹೊಳೆವ ಹಸರು
ಹಳದಿ ಕೆಂಪು ಬಿಳಪು ಕಳೆಯು

ಅಂಗಭಾವ ಚಿನ್ನವಳಿದು ಊರ್ಧ್ವಾಂಗದಲ್ಲಿ
ಲಿಂಗ ಸಮರಸ ಸಂಗ ತಿಳಿದು ಸದ್ಭಕ್ತಿಯಿಂದ
ಕಂಗಳೆರಡು ಕದಲದಂತೆ ಗಂಗೆಯುಮುನೆ ಮಧ್ಯೆ ಇರುವೋ
ರಂಗ ಮಂಟಪವನ್ನು ಸೇರಿ ರಾಜಯೋಗ ಮಹಾತ್ಮೆಯಿಂದ

ಚಿತ್ತಮನವು ದೃಷ್ಟಿಕೂಡಿಸಿ । ಅತ್ತಿತ್ತದಗಲ
ದೆತ್ತ ಪೋಗದಂತೆ ನಿಲ್ಲಿಸಿ । ಅಚ್ಯೋತ್ತಿದಂತೆ
ಸುತ್ತ ಮುತ್ತ ಕತ್ತಲರಿದು। ಮುತ್ತು ಸಾಲು
ಎತ್ತ ನೋಡೆ ಚಿತ್ತು ಪ್ರಭೆಯು ಸುಖವು ತೋರಿ
ನಿತ್ಯ ನಿರುಪಮ ಮುಕ್ತನಾಗೋ ಬೆಳಕು ಕಂಡೆ

ಮಂಡಲಾಂತ್ಯ ನಿಳಯದಾಂಟಿಯು । ಅ
ಖಂಡ ತೇಜೋ ಕುಂಡಲೀಯ ಕುದುರುಮೀಂಟಿಯು
ಖಂಡಿತಮಾಗಿ ಕೆಂಡಕಿಡಿಯು ಕಿರಣ
ಬ್ರಹ್ಮಾಂಡ ಬೆಲೆ ತುಂಬಿ ಸೂಸಿ
ದುಂಡುಮಲ್ಲಿಗೆ ಸೂರ್ಯಾಡುತಿಹವೆ
**ಬಂಡೆಗುರುವು** ಕರುಣದಿಂದ ಬೆಳಕು ಕಂಡೆ

❍



## ಅಲಾಯಿ

ಅಲಾಯಿ ಆಡೋಣ ಬನ್ನಿರೋ । ಮನ
ಸವಾಲು ಮಾಡೋಣ ಬನ್ನಿರೋ

ಅಲಾಯಿ ಆಡೋಣ ಹಲಿಗೆಯ ಹಿಡಿದು
ಅರ್ತಿಯಿಂದಲಿ ಆತ್ಮದಿ ನಾವು

ಚಾ ಹುಸೇನೆಂದು ಚೌಕಮಧ್ಯದಲಿ
ಬಾ ಹುಸೇನೆಂದು ಭಾವನೆ ಹೂಡಿ
ಯಸೈ ಎನುತಲಿ ಎತ್ತಿ ಹಿಡಿದು ಕಿತ್ತಿ
ಯಾಯಿಮೋಂಯೆಂದು ವ್ಯಸನಗಳೊತ್ತಿ

ದೂಯ್ಲಾಯೆಂದು ಭವ ದೂರಮಾಡಿ
ದೀನ್ ದೀನ್‌ಯೆಂದು ದಿವರಾತ್ರಿಯಲ್ಲಿ
ಯಾಲಿ ಯಾಲಿಯೆಂದು ಕಾಲನು ಕುಣಿಸುತ
ಕೋಲು ಕೈಯೊಳು ಕೊಬ್ಬಿಯು ಹಿಡಿಯುತ
ಕೆಂಡ ಕುಣಿಯೊಳು ಕಿಡಿಕಿಡಿಯೆಬ್ಬಿಸಿ
**ಬಂಡೆಗುರು**ವಿನ ಭಜನೆಯ ಮಾಡುತ

❍

## ನಮಾಜು

ನಮಾಜು ಮಾಡಿದೆನೋ ದಿನದಿನ
ನಮಾಜು ಮಾಡಿದೆನೋ
ನಮಾಜು ಮನಸಿನ ಅವಾಜು ಕೇಳಿ
ಸಮನಸ ಚಿತ್ತವು ಗೊತ್ತಿಲಿಯಿಡಿಸಿ

ಮನವೆತ್ತ ಚದಲದಲೆ
ಜ್ಞಾನದ ಗರಾರು ಮಾಡಿದೆನು
ದೀನ್‌ಯೆಂಬುವ ಧ್ಯಾನವ ಮಾಡಿ
ಭಾನುಪ್ರಕಾಶನ ತನ್ನೊಳು ನೋಡಿ

ಎಚ್ಚರವಾಗೋದು ಜಳಕ
ನಿಶ್ಚಲ ತೋರಿದ್ದೆ ಬೆಳಕ
ಪಶ್ಚಿಮ ದಿಕ್ಕಿಗೆ ನಿಶ್ಚಯ ಮುಖವಾಗಿ
ಮುಚ್ಚುಮೋರಿಲ್ಲದೆ । ನಿಶ್ಚಲ ಜ್ಯೋತಿಯ ಬೆಳಕಲೆ

ಗರ್ವ ಗುಣಗಳೆಲ್ಲ ಅಳಿದು
ನಿರ್ಮಲ ಊರ್ಧ್ವಮುಖ ಬೆಳೆದು
ನಿರ್ಭಯಲಾದಿತು ನಿರ್ಮಿಸಿ ಕರುಣದಿ
ತಾರೆಚಂದ್ರ ಪರಂಜ್ಯೋತಿಯ ಬೆಳಕಲಿ

ಕರವ ಕರ್ಣಕೆ ಮುಟ್ಟಿ । ನಿರಂತರ
ಇರಲಿ ಉನ್ಮನಿ ದೃಷ್ಟಿ
ಕಹಕ್ಕಿಣ್ಣೆಂಬುವ ಮಂತ್ರಗೋಷ್ಠಿಯ
ಮರೆಯದೆ ಮನದಿ ನೆನವಿನೊಳಿಟ್ಟು

ಅಂತರಂಗದ ನಮಾಜು । ಸಹಜ
ನಿರಂತರ ಮಾಡೊವೊಳ್ಳೇದು
ಭ್ರಾಂತಿಗಳಿಗೆ ತೋರುವುದಲ್ಲ
ಅರಿತು ಗುರುವಿನ ಸೇವೆ ಮಾಡಿದವ ಬಲ್ಲ

ಯತಿಸಿದ್ಧ ಮುನಿಪ ಹೇಳಿದ ಗುರ್ತು
ನಿತ್ಯದಿ ಫಲವಾಗುವ ವಸ್ತು
ಸ್ವಸ್ಥದಿ ಮನನಿಲ್ಲಿಸೆ ಸದ್ವಸ್ತು
ಗುರು **ಬಂಡೇಶನು** ಹೇಳಿದ ಶಿಸ್ತು

❍

## ಆಶ್ಚರ್ಯ ಪಕ್ಷಿ

ರವಿಚಂದ್ರಪುರದಲ್ಲಿ ಶಾವಂತ್ಹೂವಿನ ಗಿಡ ಇರುವುದಣ್ಣಾ
ಮಹಾಶಿವಜೀವರಿಬ್ಬರು ಕಾವಲಿರುತಿಹರು ನೋಡಿರಣ್ಣಾ

ಕೊಂಬೆಗಳು ಗಿಡಕೆರೆಡು ಅಂಬಾರಪರಿಯಂತ ಬೆಳೆದವಣ್ಣಾ
ಮತ್ತೆ ಕೊಂಬೆ ಕೊಂಬೆಗೆ ಎಲೆಗಾಳಿಂಬಾಗೆರಡದಿನಾರು ಇರುವುದಣ್ಣಾ

ಥಳಥಳಿಸುತ ಪಂಚವರ್ಣದ ಗಿಳಿಗಳೈದು ಕುಳಿತವಣ್ಣಾ
ಇನ್ನು ಗಿಳಿಗಾಳ ಮಹಿಮಾವು ಹೇಳಲಿಕ್ಕಳವಲ್ಲಮಿಳಯೋಳಣ್ಣಾ

ಪಶ್ಚಿಮ ದೇಶದಲಿಂದ ಆಶ್ಚರ್ಯ ಪಕ್ಷಿಯೊಂದು ಬಂದಿತಣ್ಣಾ
ಯುದ್ಧ ಪಕ್ಷಿಗಳ್ಹಿಡಿದು ತಾ ಭಕ್ಷಿಸಿತೊ ಯಂಥದಣ್ಣಾ

ಕರ್ಪೂರ ಬಣ್ಣದ ಸರ್ಪಗಿಡದಡಿಯಲ್ಲಿ ಇರ್ಪುದಣ್ಣಾ
ಅದರ ದರ್ಪಕ್ಕೆ ಧರೆನಡುಗಿ ಧೈರ್ಯಸಾಲದೆ ತ್ರಿಪೂರಾಕೂರ್ಪಿತಣ್ಣಾ

ಅಂಗಗುಣಗಳ ಬಿಟ್ಟು ಜಂಗಾಮ ಸ್ಥಾನವು ತಿಳಿಯಿರಣ್ಣಾ
**ಗುರುಲಿಂಗ ಬಂಡೇಶನ** ಸಂಗಮವಾಯಿತು ಎನಗೆ ಕೇಳಿರಣ್ಣಾ

❍

# ಚನ್ನಾರೂಢ

## ಕಾಯದೊಳಗಿನ ಕೀಲ

ಎಲ್ಲರೊಳಗೋಡಾಡಿಕೊ
ನಿನ್ನೊಳಗೆ ನೀ ಹುಡುಕಾಡಿಕೊ
ಕಾಯದೊಳಗಿನ ಕೀಲ ತಿಳಿದು ಸಾಯದಂತೆ ಮಾಡಿಕೋ

ಆರುದಾರಿಯ ಅರಿತಿಕೋ
ಇವು ಮೂರುದಾರಿಯ ಮರೆತುಕೊ
ಆರುಮೂರು ಒಂದುಗೂಡಿ ಬೇರೆ ಮನೆಯ ಸೇರಿಕೋ

ಓಂ ಕಾಳರಾತ್ರಿಲಿ ಕನ್ನಇಕ್ಕೊಳಗಿದ್ದ ವಸ್ತುವ ಕದ್ದಿಕೋ
ಅಲ್ಲಿರುವ ಚಿನ್ಮಯನನ್ನು ಕಂಡು
ಚಿಕ್ಕಮನೆಯಲಿ ಸೇರಿಕೋ

ಗುಡ್ಡದಾ ಮೇಲಿದ್ದುಕೋ
ಭೂಮಂಡಲವನು ಹೊದ್ದುಕೋ
ಅಲ್ಲಿರುವ ಚಿನ್ಮಯನನ್ನು ಕಂಡು ಓರ್ವನಲ್ಲಿ ಬೆರೆತುಕೋ

ನಾಯಿ ಹಂದಿಯ ಮಿದ್ದಿಕೋ
ನಿನ್ನ ತಂದೆ-ತಾಯಿಯ ತಿದ್ದಿಕೋ
ಅಲ್ಲಿರುವ ತಾರಕ ಜ್ಯೋತಿ ಕಂಡು ಜ್ಯೋತಿಯಲ್ಲಿ ಬೆರೆತುಕೋ

ಮೂಗಿನ ಮೇಲಿದ್ದಿಕೋ
ಬೇಗ ಸ್ವಾಸವನ್ನು ಬಿಗಿದಿಕೋ
ಅಲ್ಲಿರುವ ತಾರಕ ಜ್ಯೋತಿ ಕಂಡು **ಚನ್ನಾರೂಢ**ನಲ್ಲಿ ಬೆರತುಕೋ

❍

## ಹುಣ್ಣಿಮೆ ಚಂದ್ರ

ಬಾಗಿಲು ತೆರೆದಿದೆ ನೋಡಣ್ಣಾ
ನಿಮ್ಮ ಮೂಗಿನ ತುದಿಯೊಳಗಿಹುದಣ್ಣಾ
ಇದು ಯೋಗಾನಂದದ ಕೀಲಣ್ಣ
ಭವರೋಗಿಗಳಿಗೆ ಕಾಣದಣ್ಣ

ಷಣ್ಮುಖ ಮುದ್ರೆ ಹಿಡಿಯಣ್ಣ
ನಿಮ್ಮ ಕಣ್ಮನ ಬಿಟ್ಟು ನೋಡಣ್ಣಾ
ಹುಣ್ಣಿಮೆ ಚಂದ್ರನಂತಿಹುದಣ್ಣ
ಇದು ತಾನೆ ತನ್ಮಯವಾಗಿಹುದಣ್ಣಾ

ಎಂಟು ಎಸಳಿನ ಕಮಲವಿದು
ನಡುದಂಟಿನೊಳಗೆ ಸುಳಿದಾಡುತಿದೆ
ಇದು ದೃಂಟಿಸಿ ನೋಡಲು ಕಾಣುತಿದೆ
ಅಲ್ಲೆ ಗಂಟೆನಾದವು ಕೇಳುತಿದೆ


ಮೂರು ಕಾಲಿನ ಪಕ್ಷಿ ಇದು
ನಡು ನೀರಿನ ಮಧ್ಯೆ ನಿಂತಿಹುದು
ಇದು ಧೀರ ಪುರುಷರ ವಶವಾಗಿಹುದು
ದುರಹಂಕಾರಿಗೆ ದೂರಿಹುದು

ಹತ್ತನೆ ಬಾಗಿಲು ತೆರೆದೈತೆ
ಅಲ್ಲೆ ಪುತ್ಥಳಿ ಬೊಂಬೆಯು ನಿಂತೈತೆ
ಅಲ್ಲೆ ಮುತ್ತುರತ್ನವೆ ಸುರಿದೈತೆ
ಬಹುಚಿತ್ರ ಪ್ರಕಾಶದಿ ಹೊಳೆದೈತೆ

ನಿಮ್ಮ ನೇತ್ರದೊಳಗೆ ಮನೆಮಾಡೈತೆ
ಪರಸೂತ್ರದ ಬೊಂಬೆ ನಿಂತೈತೆ
ನವಧಾತ್ರಿಯೆಲ್ಲ ಅಲ್ಲೆ ಅಡಗೈತೆ
ಇದು ಚಿತ್ತಪ್ರಕಾಶದಿ ಹೊಳೆದೈತೆ

ನಿಮ್ಮಂಗದೊಳಗೆ ಶಿವಲಿಂಗೈತೆ
ನಿಮ್ಮ ಕಣ್ಗಳ ಮಧ್ಯೆ ಕಾಣುತೈತೆ
ಇದು ಮಂಗಳಕರವಾಗಿರುತೈತೆ
ಗುರು **ಚನ್ನಾರೂಢ**ನೊಸವಾಗೈತೆ

❍



## ಸೂರ್ಯಚಂದ್ರ ಬೀದಿಗಳು

ಒಂಭತ್ತು ಬಾಗಿಲ ಮನೆಯಣ್ಣ
ಇದರಂಗಲಗಳು ಎಪ್ಪತ್ತೆರಡು ನಿಲವಣ್ಣ
ತುಂಬಿದ ರೋಮಗಳೆಂಟು ಕೋಟಿಯಣ್ಣ
ಇದ ನಂಬಿದರೆ ಬಲು ಮೋಸ ಕಾಣಣ್ಣ

ದಶವಿಧ ನಾದವ ಕೇಳಣ್ಣ
ನೀ ಶಶಿಕಳೆ ಪ್ರಭೆಯೊಳು ನಿಲ್ಲಣ್ಣ
ಹಸುಗೂಸಾಗಿ ಬೇಡುವನಣ್ಣ
ಹುಸಿಯಲ್ಲ ನಮ್ಮ **ಚನ್ನಾರೂಢರ**
ವಾಕ್ಯವಣ್ಣ

ಎಂಟು ಜನರು ತುಂಬಿಹರಣ್ಣ
ಕಂಟಕರಾರ್ವರು ಕಾದಿಹರಣ್ಣ
ನಂಟ ನೀನು ಒಳಹೊರಟರೆ ಅಣ್ಣ
ಒಣ ಹೆಂಟೆಯಲ್ಲಿ ಮುಚ್ಚುವರಣ್ಣ

ಸೂರ್ಯಚಂದ್ರರ ಬೀದಿಗಳಣ್ಣ
ಸಾಂದ್ರದಿ ನಿನ್ನೊಳು ನೋಡಣ್ಣ
ಇಂದ್ರನ ಭೋಗಕ್ಕೆ ಮಿಗಿಲಾದುದಣ್ಣ
ಚಂದದೊಳಿರ್ಪ ತಾರೆಗಳಣ್ಣ

ಬಿಡು ಬಂಧಕವೆನುತ ಬೇಡಿದೆನಣ್ಣ
ಕೊಡು ತಾರಕವೆನುತ ಕೈ ನೀಡಿದೆನಣ್ಣ
ಕಡೆಗೆ ಕರುಣದಿ ಸದ್ಗುರುವಣ್ಣ
ಧೃಡಪಡಿಸಿದ **ಚನ್ನಾರೂಢನು** ಅಣ್ಣ

❍

## ಗರುಡ - ಸರ್ಪನ ಸ್ನೇಹ

ತೆರೆದ ಬಾಗಿಲ ಸುಂಕವಿಲ್ಲದ ಪುರವುಂಟು । ಬಂದು ನೋಡಿ
ಹರಿಹರ ಬ್ರಹ್ಮಾದಿಗಳ ಕಾವಲದಕುಂಟು । ಬಂದು ನೋಡಿ

ಪುರಕ್ಕರಸರು ಮುವ್ವರೊಂಬತ್ತು ಬಾಗಿಲು । ಬಂದು ನೋಡಿ
ವರ ಚೌಕ ಮಧ್ಯದೊಳಿಹ ಓಂಕಾರೇಶ್ವರ । ಬಂದು ನೋಡಿ

ಏಳುಸುತ್ತಿನ ಕೋಟೆ ಮೇಲೊಂದು ಗವಿಯುಂಟು । ಬಂದು ನೋಡಿ
ಏಳು ಲೋಕಂಗಳನೊಳಗೊಂಡಿಹುದು ಯಿಲ್ಲಿ । ಬಂದು ನೋಡಿ

ಏಳೆಡೆ ಸರ್ಪದಲ್ಲಿ ಭೋರುಗುಟ್ಟುತಲಿದೆ । ಬಂದು ನೋಡಿ
ಏಳೆಡೆ ಸರ್ಪನ ತಲೆಯೊಳು ರತ್ನವುಂಟು । ಬಂದು ನೋಡಿ

ಯರಡು ಪಕ್ಷದೊಳೊಂದೆ ಪಕ್ಷಿಯಾಡುತಲಿದೆ । ಬಂದು ನೋಡಿ
ಯರಡು ರೆಕ್ಕೆಯು ಪುಕ್ಕ ಪಕ್ಷಿಗಿಲ್ಲವು । ಬಂದು ನೋಡಿ

ಧರಣೀ ಜೀವರ್ಕಳಿಗಾಧಾರವಾಗಿದೆ । ಬಂದು ನೋಡಿ
ಪುರಸ್ಥಳದೊಳಗಿದೆ ಕರಕೆ ಸಿಕ್ಕುವುದಿಲ್ಲ । ಬಂದು ನೋಡಿ

ಗರುಡು ಸರ್ಪಗೆ ಅತಿ ಸ್ನೇಹವುಂಟಾಗಿದೆ । ಬಂದು ನೋಡಿ
ಸುರರಸುರರು ಮಿತ್ರಭಾವದೊಳಿರ್ಪರು । ಬಂದು ನೋಡಿ

ಇರುವೆ ಸಿಂಹವ ನುಂಗಿ ತಾನೊಂದೆ ಕುಳಿತಿದೆ । ಬಂದು ನೋಡಿ
ಉರುವಿಷವಮೃತವು ಆಯಿತೇನೆಂಬೆನು । ಬಂದು ನೋಡಿ

ಪಾರು ಭೋಜನ ಶಾಲೆ ತೆರದಿದೆ ಎದುರಿಗೆ । ಬಂದು ನೋಡಿ
ಊರು ಜನರು ಉಂಡು ತಣಿಪರಾನಂದದಿ । ಬಂದು ನೋಡಿ

ದೂರದೊಳಿಲ್ಲವು ಜ್ಞಾನಭಂಡಾರವು । ಬಂದು ನೋಡಿ
ಧೀರ ಶ್ರೀ **ಗುರುಚನ್ನಾರೂಢ**ನೊಳಗಿದೆ । ಬಂದು ನೋಡಿ

## ರಾಗವಳಿದ ಯೋಗಿ

ಎಷ್ಟು ಮಾತ್ರ ಭವದ ಕಡಲಿದು ?
ಗುರುಕೃಪೆ ಇರಲು ದಾಟಲೊಂದೇ ಗೋಪ್ಯವೆನಿಪುದು
ಅಷ್ಟಭೋಗದಾಸೆ ಬಿಟ್ಟು । ಅಷ್ಟಪಾಶಗಳನು ಸುಟ್ಟು
ಅಷ್ಟದಳದ ಕಮಲ ಮಧ್ಯ । ದೃಷ್ಟಿ ಬಲಿದ ಯೋಗಿಗಳಿಗೆ

ಬಾಗಿಲಾರು ಬಾಗಿಲನ್ನು ಮುಚ್ಚಲು । ದ್ವಿದಳವೇರಿ
ಆರುಮೂರು ಕಮಲಾ ಬಿಚ್ಚಲು
ಮೂರು ಕೊಳದಾ ಮೂಲಕ್ಕಿಳಿದು । ಮೂರು ಕಾಲಿನಂತೆ ಸಣ್ಣ
ದ್ವಾರವನು ತೆರೆದು ಬಿಡುವ । ಭೇರಿನಾದವನ್ನು ಕೇಳ್ವಾಯತಿಗೆ

ಯೋಗ ಸೂತ್ರ ಎಂಟು ಸಾಧಿಸಿ
ಈ ಕಾಯದಲ್ಲಿ ಯೋಗಮಂಟಪವನ್ನು ಶೋಧಿಸಿ
ನಾಗಸರ್ಪನೆಡೆಯ ತುಳಿಯೆ । ನಾಗರತ್ನ ಕಾಂತಿ ಪೊಳೆಯೆ
ನಾಗಸ್ವರದಿ ಮನವು ಮುಳುಗಿ । ರಾಗವಳಿದ ಯೋಗಿಗಳಿಗೆ

ದುರುಳರ ಸಂತತಿ ದೂರಗೈಯುತ
ನಮ್ಮ ಶಿವನ ಶರಣರ ಸಂತತಿಯಲಿ ಸೇರುತ
ಧರೆಯೊಳಧಿಕವೆನಿಸಿ ಮೆರೆವ । ಪರಮ ಶ್ರೀ **ಚನ್ನಾರೂಢರ**
ಚರಣಕಮಲ ಬೆರೆತು । ಜಗವ ಮರೆತು ಮುಕ್ತನಾದ ಯತಿಗೆ

❍

# ಶೀಲವೇರಿ ಶಿವಪ್ಪ (ಶಿವಮೂರ್ತಿ ಸ್ವಾಮಿ)

## ಅರುವು-ಮರವು-ಕುರುಹು ಕೂಡಿ

ಕನಸು ಕಂಡೆನೆ ಮನಸುಯಿಟ್ಟೆನೆ
ದಿನಶಿನೊಳಗೆ ದಿನ ಸಾಗಿ ನಾ ಧೈರ್ಯತೊಟ್ಟೆನೇ

ವಂದೇ ಕನಸದು ಯೆಂದಿಗೋಗದು
ಮಂದಿಯಂತೆ ಮರವಿನೊಳಗೆ ಯೆಂದಿಗಾಗದೂ

ಬಿದ್ದ ಕನಸದೊ ಬೀಳತಲಿಹುದೊ
ಶುದ್ಧವಾದ ಸುದ್ದಿಯೊಳಗೆ ಯೆಂದಿಗಾಗದೊ

ಅರುವಿನೊಳು ಯಿಹುದೂ ಮರವು ಬಾರದು
ಅರುವು ಮರವು ಕುರುಹು ಕೂಡಿ ನಿರುತ ಕಾಣ್ಬದು

ಹಗಲೇ ಬೀಳ್ವದೂ ಸೊಗಸು ಕಾಣ್ವದೂ
ಜಗದ ಜನರ ಜಾಣತನವು ಕಾಣಬರದೂ

ಘಟದೊಳಿರುವುದೂ ಘಟವರಿಗಿಹದು
ಘಟ ಬೀಳಲು ಪ್ರಾಣ ಪಿಡಿದು ನಟನೆ ಮಾಳ್ಪದು

ಪ್ರಾಣ ಕನಸದೊ ಪರಕೇ ಸೇರ್ವುದೂ
ಪೂರ್ಣಭಾವದೊಳಗೇ ತಾ ಸಂಪೂರ್ಣ ಕಾಣ್ವದೂ

ಕಂಡ ಕನಸಿದೂ ಕರ್ಮ ಕಳಿವದೂ
ಮಂಡಲದೊಳು ಪುಣ್ಯವೆಂಬ ಮಾತು ತಿಳಿಪದೂ

ಪಾಪವೆಂಬುದೂ ಪ್ರತ್ಯೆಕ್ಷ ಕಾಣ್ವದೂ
ಪಾಪಪುಣ್ಯ ಭೀತಿ ಭ್ರಾಂತಿ ನಿಜವು ನಿಲುವುದೂ

ಪಾಪವೆಂಬುದೂ ಪುಣ್ಯಕಾಣ್ವದೂ
ಪಾಪಕಳಿವ **ಅಲ್ಲಿಸಾಹೇಬು** ಗುರುಸುಫಲವಿದೂ

❍

## ಬ್ರಹ್ಮ ಪ್ರಕಾಶ

ಸಾಧುಗಳಿರಾ ಸಾರಿ ಹೇಳುವೆ ಕೇಳಿರಿ
ಪ್ರಥಮ ನಿಮ್ಮಯ ಕುಲಹತ ಮಾಡಿರೀ
ಸತತ ಸ್ವಾಮಿಯ ಕುಲಸ್ಥಿರ ನೋಡಿರೀ
ಕ್ಷಿತಿಯೊಳು ಹಿರಿಯರೆಲ್ಲಾ ಮಧಿಸಬೇಕಾಯಿತಲ್ಲಾರೀ

ನಿಮ್ಮ ಪ್ರಕಾಶ ನಿರ್ಮೂಲ ಮಾಡಿರೀ
ಬ್ರಹ್ಮಪ್ರಕಾಶ ಭದ್ರದಿ ನೋಡಿರೀ
ಧರ್ಮಪದ್ಧತಿಯಿದೂ ಧಾತ್ರಿಯೊಳು ನಡೆವುದೂ

ಚೆರಿಯ ನಿಮ್ಮವು ಯಿಲ್ಲಿಥೇಧಿಶಿರೀ
ಪರಿಪೂರ್ಣ ಪ್ರಭುವಿನೊಳು ಬೆರೆದಾಡಿರೀ
ಅರಿತವರೆನ್ನುತ ನಿರುತ ನಿಮ್ಮನು ಕಾಯ್ವ

ಸ್ವಾಮಿಯೆಂಬೊ ನಾಮ ಸಾಕ್ಷಿ ತಿಳಿರೀ
ನಾಮ ನಿಮ್ಮವು ಯಿಲ್ಲಿನಿಷ್ಠೆಯೆನ್ನಿರೀ
ಗುಣಧಾಮನೆನ್ನುತ ತನ್ನ ಪ್ರೇಮದಿಂ ಪಾಲಿಪ

ಬಲ್ಲಂತ ಹಿರಿಯರು ಭೇದಿಸಿರೀ
ಅಲ್ಲಿಸಾಹೇಬ ಗುರುವು ಅಧಿಕೆನ್ನಿರೀ
ಯಿಲ್ಲದೋದರೆ ಮರ್ಮೆಯಲ್ಲೇಲ್ಲಿ ಕಾಣಿರೀ

❍

## ನಿಮ್ಮ ಬದಿ ಬಿದ್ದೆನಯ್ಯಾ

ಅಂಗ ಸಂಗವೆ ಯನಗೆ ಯಿಂಗಿಸ್ಯೆ ಗುರುವೇ
ಭಂಗಾವೆ ಯಿದರ ಪ್ರಸಂಗಾವಸಹ್ಯವೇ

ತೊಳೆಯಲಾರೆ ಅದನಿಲೀ ಕೊಳಲಾನೊಂಬತ್ತಾ
ಕೊಳುಕು ಗೂಡುಗಳಲ್ಲಿ ವುಳೆಗಾಳೆಸುತ್ತಾ

ಮ್ಯಾಲೆ ರೋಗದ ಸಾಲೆ ಲೀಲೆಯಿರುಳು ಹಗಲೆ
ತಾಳೆ ಸ್ಥಾಣುವಿನಂತೆ ಸ್ಥೂಲಾಯಾಸಗಳೇ

ಬರೆ ಬಿಟ್ಟೀ ಮೊಟ್ಟೇಯ ಹೊರಲಾರೆನಯ್ಯಾ
ಧರೆಯಲ್ಲಿ ಯಿಂತಾ ನ್ಯಾಯ ಪರಿಕಾಣೆನಯ್ಯಾ

ಕೂಲಿ ಕೊಡವರಿಲ್ಲಾ ಕಾಲ್ಯಾಯಿತಲ್ಲಾ
ಕೂಲಿಲ್ಲಾದೊಡತಾಯ್ತು ಕಂಡೆ ಯಿದನ್ನೆಲ್ಲಾ

ಬಾಲಾಮಾತೆಯ ಸ್ತನ್ಯ ಬಿಟ್ಟಂತೇ ಯನ್ನಾ
ಕಾಲಾದೀಶೂಲ ಭಾವಾ ಕರುಣಿಸ್ಯೆ ಮುನ್ನಾ

ವಲ್ಲೆಂದ್ವೇಳಿದ ವಾಕ್ಯಾ ಯಿಲ್ಲಿಗುರುವಿತ್ತೇ
ಯೆಲ್ಲಿಂದಿಲ್ಲಿಗೆ ಬಂದೇ ಅದನಿಲ್ಲಿ ಮರೆತೇ

ಯಿದ್ದೆನೆಲ್ಲಿರುವಂತಾ ಸುದ್ದೀಯ ಪರಿಯಾ
ಬದ್ದವಲ್ಲ ಅರುವೀಗೇ ಬರಗೊಡದು ಈ ಕಾಯ

ಅಧಿಕಾರಣ್ಯದಿ ಸೂರ್ಯಾ ತುದಿಗದ್ರಿ ಮೊರೆಯಾ
ವಿಧಿ ತೋರಿತ್ಯೆ ನಿಮ್ಮ ಬದಿಬಿದ್ದೆನಯ್ಯಾ

**ಗುರುದೇವ ಅಲ್ಲೀಷಮೂರ್ತಿ**
ಗುರುಪಯ್ಯಾ ವಾರ್ತಿಬೆರೆಸ್ಯೆ ಪರಮನಲ್ಲಿ ಮೆರೆಸ್ಯೆ ಸತ್ಕೀರ್ತಿ

❍

## ಗುರುಪುತ್ರ

ತೆರಳುವಾ ಜೀವ ದೇಹವ ತೊರೆದೂ । ತೆರಳೂವಾ ಜೀವ

ತೆರಳೂವಾ ಜೀವ ಬಲು ಬರಳೂವಾದಿಯ ಶಿಗದೇ
ದುರುಳ ಯಮನ ಭಟರು ಕರಖಡ್ಗಾಯುಧ ಕಂಡೂ
ಪೈತ್ಯಕಥ ವಿಷಜ್ವರಾ ಸೈತ್ಯ ಸಮುದಾಯಗಳೂ
ಥೈಥೈಯಾಡುತ ಬರಲು ತಡೆಯಲಾರದೆ ಜೀವಾ

ರೋಗಶಾಂತಿಗೆ ವೈದ್ಯಾಯೋಗಿ ತಾ ಬಂದೊಯ್ವಾ
ಭೋಗಿ ವಿಷ ಸಮವಾದಂತಾಗಗತಾ ತಡಿಯಾದೆ
ಬಿಂದೊಂದು ಜಲ ಕೊರಳೊಂದೊಂದಿಳಿವದಕ್ಕೇ
ಶಿಂಧೂತೋರುವ ಸಮಯಾ ಶಾರೇಶಾರೊಯ್ಯುವದಕೆ

ಶ್ವೇತವರ್ನದ ಪಾತ್ರೆ ನೂತಾನದುದಿಕೂ
ಘಾತಗೊಳಿಸುವ ವಿಧೀ ದೂತಾದ್ವಿತಿದ್ಯೆಯ್ವೆನುತಾ
ಗುರುಪುತ್ರನಾಗಿಲ್ಲಾ ಗುರುವಿನಂ ನುಡಿಯಲ್ಕೇ
ನರಪುತ್ರ ನಾನೆಂದೂ ನರಕಾತ್ಮನಾಗಲ್ಕೆ

**ಅಲ್ಲೀಷ ಗುರು**ವೀನಾ ಯಿಲ್ಲೀಬೆರಿಯದೆ ಮುನ್ನಾ
ಯೆಲ್ಲೀಹನಿಲ್ಲೆಂದು ಕುಲ್ಲಾತನುವ ನಂಬೀ

❍

# ಶ್ರೀ ಸತ್ ಉಪಾಸಿ ಮಲ್ಲಣ್ಣನವರು

## ಗುಟ್ಟನರಿತು ಗುರುವಿನಿಂದ

ಎಂಥ ಬಡಗಿ ನೋಡಮ್ಮ
ಬಲು ಮೋಜುಗಾರನೆಂಥಾ ಬಡಗಿ ನೋಡಮ್ಮ


ಎಂಟು ಗೇಣು ಆಯವಿಟ್ಟ
ಎರಡು ಕಂಬವ ಕೊಟ್ಟ
ಒಂದೇ ತೊಲೆಯನೆ ಹಾಸಿ
ತೀರು ಹದಿನಾರು ಇಟ್ಟಾ

ಸಪ್ಪಾಳಿಲ್ಲದೋಲು ಮಾಡಿ
ಅರವತ್ತೆಂಟು ಕೀಲು ಮಾಡಿ
ದ್ವಾರಿ ಹನ್ನೊಂದು ಮಾಡಿ
ಬಾಗಿಲೆರಡು ಮುಚ್ಚಿ ಬಿಟ್ಟ



ಮೆಟ್ಟಿಲಾರು ಕಡಿದನಮ್ಮ
ಏಕ ದಾರಿ ಮಾಡಿದನಮ್ಮ
ಗುಟ್ಟನರಿತು ಗುರುವಿನಿಂದ
ಹತ್ತಿ ಬನ್ನಿರೆಂದನಮ್ಮ

ಗರ್ಭಗುಡಿಯ ಮಾಡಿಬಿಟ್ಟ
ಪಂಚ ಕಳಸ ಹೂಡಿಬಿಟ್ಟ
ಮಧ್ಯ ತಾನೆ ಕುಳಿತುಬಿಟ್ಟ
ದೇವಸ್ಥಾನ ಮಾಡಿಬಿಟ್ಟ



ಪುರೋಹಿತರೈವರಣ್ಣ
ಸ್ವಚ್ಛ ಮಾಡಿಲಿಟ್ಟನಣ್ಣ
ಮೂರು ಮಂದಿ ಮುಖ್ಯರಣ್ಣ
ಗುಡಿಯು ನಮ್ಮದೆಂದರಣ್ಣ

ಬಾಗಿಲಲ್ಲೆ ನಿಂತರಣ್ಣ
ಗುಡಿಯ ಭಂಗ ಮಾಡಿದರಣ್ಣ
ಗುರುವು **ಕನ್ನೇಶ**ನೆಂಬ
ಬಡಗಿ ನೋಡುತ್ತಿದ್ದನಣ್ಣ

## ಯೋಗಿಯಾಗಣ್ಣ

ಸೇದಣ್ಣ ಬಂಗಿ ಸೇದಣ್ಣ
ಸೇದಿ ಸೇದಿ ಕಣ್ಣ ಮುಚ್ಚಣ್ಣ । ಮತ್ತನಾಗಣ್ಣ
ನಾನು ಎಂಬುವ ಬೀಜವ ತೆಗೆಯಣ್ಣ
ಕಾಮ ಎಂಬುವ ಸೊಪ್ಪು ಉಜ್ಜಣ್ಣ । ಯೋಗಿಯಾಗಣ್ಣ

ಆಸೆ ಎಂಬುವ ಚಿಲುಮೆ ತುಂಬಣ್ಣ
ಶಾಂತಿ ಎಂಬುವ ಬಟ್ಟೆ ಸುತ್ತಣ್ಣ
ಜ್ಞಾನ ಎಂಬುವ ಬೆಂಕಿ ಹಚ್ಚಣ್ಣ
ನಿಜಾ ತಿಳಿಯಣ್ಣ

ಯೋಗವೆಂಟನು ನೀನು ಸಾಧಿಸದೆ
ದೇಹಾಭಿಮಾನವ ತೊರೆಯದೆ
ಹುಟ್ಟುಟ್ಟಿ ಜನ್ಮತಾಳಿದೆ
ಸತ್ ಚಿತ್ತಾನಂದನರಿಯದೆ
ಮರ್ಮ ತಿಳಿಯದೆ

ಬ್ರಹ್ಮಾನಂದದ ಬಂಗಿ ಸೇದಬೇಕು
ಅಲ್ಪಾನಂದದ ಬಂಗಿ ತೊರೆಯಬೇಕು
ಸರ್ವಸಂಕಲ್ಪಗಳಳಿಯ ಬೇಕು
ಗುರುವು ಕನ್ನೇಶನೊಳು ಬೆರೆಯಬೇಕು

❍

## ಮರ್ಮದ ಕಣ್ಣು

ಮುಚ್ಚೋ ಬಾಯಿ ತುಟಿ ಬಿಚ್ಚಬೇಡ । ಒಳಗಿನ ಧ್ವನಿ ಕೇಳೋ
ಇಂದ್ರಿಯಗಳ ಹೊರಗ್ಹರಿದಾಡಲು ಬಿಡಬೇಡೋ

ಮುಂಭಾಗದ ಕಣ್ಗಳ ಹಿಂಭಾಗಕೆ ತಿರುಗಿಸಿ
ಅಂತರಂಗದೊಳಗೆ ನೋಡೋ
ಪರದಾಡುವ ಮನಸರಿದಾಡದೆ ತಡೆದಿರಿಸೊ

ಸಾಧನೆ ಮಾಡದೆ ಸಾರವ ತಿಳಿಯದೆ
ಸತ್ಯವನರಿತೇನೊ । ಜ್ಞಾನಿಗಳಾಡಿದ ತತ್ತ್ವವನರಿತು
ತನ್ಮಯನಾದೇನೋ ?

ಅನುಭವಿಗಳ ಪದ ಕಲಿತ್ಹಾಡಿ ಬಿಟ್ಟರೆ
ಸಾರ್ಥಕವಾಯ್ತೇನೋ । ಶ್ರವಣ ಮನನವಿಲ್ಲದೆ
ಡಕ್ಕಿಯ ಬಡಿದರೆ ಬಂತೇನೊ

ದೇಹವೇ ಅಂತರಾತ್ಮನ ದೇಗುಲ
ಶೋಧಿಸಿ ನೀನೋಡೋ । ಬೂಟಾಟಿಕೆ ಬಿಟ್ಟು
ಗುರುಚರಣಕೆ ಶಿರಬಾಗೋ

ನಯನಗಳೆರಡರ ಮಧ್ಯದಲೊಂದು
ಮರ್ಮದ ಕಣ್ಣುಂಟೋ । ಅರಿಯದೆ ಸುಮ್ಮನೆ
ಕುಣಿಯದೆ ಭಜನೆಯ ಮಾಡಿದರೇನುಂಟೋ

ಕಲಿತರೆ ಬಾರದು । ತಿಳಿಯುವುದಲ್ಲದು
ಗುರುಕೃಪೆಯಿಂದಾಗುವುದೋ
ಗುರುಕನ್ನೇಶ್ವರನೊಲಿದರೆ ಜನ್ಮವು ಪಾವನವಾಗುವುದೋ

❍

## ಹೋಗೋಣ ನಡೆಯಮ್ಮ

ಹೋಗೋಣ ನಡೆಯಮ್ಮ ಈಗ
ಹಿಂತಿರುಗಿ ನೋಡದೆ ಮುಂದೆ ಬೇಗ

ಮಳೆ ಇಲ್ಲ ಬೆಳೆ ಇಲ್ಲದಾ ಊರು
ಹಸಿವೆ ತೃಷೆಗಳಿಲ್ಲದಾ ಊರು
ಅಲ್ಲಿ ಹುಟ್ಟಿ ಸಾಯದೆ । ನಿತ್ಯ ಬೆಳಗುವ ಊರು

ಧರೆ ಗಗನವು ಮೊದಲಿಲ್ಲ
ಅಲ್ಲಿ ರವಿಶಶಿಗಳು ಯಾರೂ ಇಲ್ಲ
ಸೂರ್ಯನಿಲ್ಲದೆ ಜ್ಯೋತಿ ಬೆಳಗುವುದಮ್ಮಾ

ಬಿಸಿಲು ಗಾಳಿಯ ಸುಳಿವಿಲ್ಲ
ಅಲ್ಲಿ ನೀರು ನೆರಳೆಂಬೋದೆ ಇಲ್ಲ
ಬೇಕು ಬೇಡದ ವಸ್ತುವು ಇಲ್ಲ
ನಾನು ನನ್ನದೆಂಬ ಮಮಕಾರ ಇಲ್ಲ

ಭವ ಬಾಧೆ ಬಿಡಿಸಿಕೊಳ್ಳಮ್ಮಾ ಬೇಗ
ಪತಿಸುತರೆಲ್ಲ ಸುಳ್ಳಮ್ಮಾ
ಜಗವು ಶಾಶ್ವತವಲ್ಲಮ್ಮ
ನಿನ್ನ ಚೆಲುವು ರೂಪದ ದೇಹ । ಹೊಲಸು ಕಾಣಮ್ಮ

ಉಂಡು ಉಟ್ಟರು ಸಹಿಸದ ಊರು
ಇದು ಜರೆ ಮರಣಾದಿಗಳ ಬೀಡು
ಮೋಹ ಭ್ರಾಂತಿಯ ತವರೂರು
ಗುರುವು ಕನ್ನೇಶನ ನಿಜಪದ ಸೇರು

❍

## ಸೂರ್ಯ ಚಂದ್ರಾಯುಧವ ಹಿಡಿದು

ಮುಂದೆ ನೋಡುತ ಹಾದಿ ನಡೆಯಮ್ಮ
ಹಿಂತಿರುಗ ಬೇಡ ಕಳ್ಳಕಾಕರ ಕಾಟ ಬಹಳಮ್ಮ

ಹೊಂಚು ಹಾಕುವರಾರು ಜನರು
ಸಂಚು ಮಾಡುತಲಿರುವರವರು
ಮುಂದೆ ಹೋದರೆ ಹಿಂದೆ ಬರುವರು
ದಿಕ್ಕು ದಿಕ್ಕಿಗೂ ಕಾಯುತಿರುವರು

ಅಡ್ಡಗಟ್ಟುವರೇಳು ಮಂದಿ
ಮಾನ ಕಳೆವರೆಂಟು ಮಂದಿ
ಪ್ರಾಣ ಹಿಡಿದು ಪಯಣ ಮಾಡುತ
ಸೂರ್ಯ ಚಂದ್ರಾಯುಧವ ಹಿಡಿದು

ಆರುಗಾವುದ ಹಾದಿಯಮ್ಮ
ದಾರಿ ತುಂಬ ಚಿಕ್ಕದಮ್ಮ
ಭಕ್ತಿಯಿಂದ ಮುಂದೆ ನಡೆದರೆ
ದಶಮ ದ್ವಾರವು ಸಿಗುವುದಮ್ಮ

ಅಂತರಂಗದಿ ಧ್ಯಾನ ಮಾಡಲು
ಕದವು ತನಗೆ ತಾನೆ ತೆರೆವುದು
ನಿಂತು ನೋಡಲು ಆತ್ಮಲಿಂಗವು
ಭೇದವಿಲ್ಲದೆ ಒಳಗೆ ಹೊರಗೆ

ಅಂದು ಇಂದು ಎನ್ನಬೇಡ
ದೇಹ ನೆಚ್ಚಿಕೊಳ್ಳಬೇಡ
ಕಾಕು ಜನರ ಸಂಗ ಮಾಡದೆ
**ಕನ್ನೇಶ** ಗುರುವಿನ ಧ್ಯಾನ ಬಿಡದೆ

❍

## ತುಂಬಿದ ಕೊಡನಮ್ಮ

ತಿಳಿ ನೀ ತಂಗ್ಯಮ್ಮ । ಇದು ಬರಿ ಮಣ್ಣಿನ ಕೊಡನಮ್ಮ
ಎಚ್ಚರವಿಲ್ಲಮ್ಮ । ಇದರೊಳು ಇರುವಳು ಗಂಗಮ್ಮ

ಹುಷಾರಿಲೋಗಮ್ಮ । ಇರುವರು ಆರು ಜನರಮ್ಮ
ಜೋಕಿಲಿ ನಡೆಯಮ್ಮ । ದೃಷ್ಟಿಯು ಮೇಲ್ಗಡೆ ಇರಲಮ್ಮ
ಚಂಚಲ ಬೇಡಮ್ಮ । ತಂಗಿ ನಿಶ್ಚಲಳಾಗಮ್ಮ

ಮಾಡಿದ ಕುಂಬಾರ । ಕೊಡದೊಳು ತುಂಬಿದ ಜಲಧಾರ
ಹೊರಿಸಿದ ಬಲುಭಾರ । ಬೇಗನೆ ನೀ ಕುಡಿ ಸಿಹಿನೀರ
ಅಡ್ಡಿಪಡಿಸ್ಯಾರ ಏಳುಮಂದಿ । ಬಾವಿ ತೆಗಿಸ್ಯಾರ

ಎಂಟು ಮಂದ್ಯಮ್ಮ । ತುಂಬ ತುಂಟರವರಮ್ಮ
ಮೆಟ್ಟಿಲಾರಮ್ಮ । ಮೇಲಕೆ ಹತ್ತಿ ನೋಡಮ್ಮ
ತುಂಬಿದ ಕೊಡನಮ್ಮ । ಒಡೆದರೆ ನೀನೆ ಮಂಗಮ್ಮ

ಕಂಡಿಗಳೊಂಬತ್ತಾ ಇದ್ದರು ಕೂಡ ತಾ ತುಂಬಿತ್ತಾ
ದಿನ ತಾ ಕಳೆದಿತ್ತಾ । ಕೊಡವದು ನಿಲ್ಲದೆ ಒಡೆದಿತ್ತಾ
ನೀರ ಹರಿದಿತ್ತಾ । ಶ್ರೀ **ಕನ್ನೇಶನ** ಪಾದ ಸೇರದೆ ಹೋಗಿತ್ತಾ

# ಕೊಳ್ಳೂರ ಹುಸೇನ ಸಾಹೇಬ

## ಅರಮನೆ

ಗುರುವಿನ ಮನೆಯಲಿ ಅರಮನೆ ಇರುವುದು
ಅರುವಿಲಿ ಸೇರು ಒಳಗೆ
ಹತ್ತಿರ ಹೋಗಿ ಜ್ಯೋತಿ ನೋಡಿಕೋ ಹುಳ್ಳಗ
ಮರವಿನೊಳು ಬಾಯಿ ಮಾಡಬ್ಯಾಡ ಬೆಳ್ಳಗ

ಸುಷಮ್ನ ದಾರಿ ಬಿಟ್ಟು ಸೀಮಿಸುತ್ತ ತಿರುಗ್ಯಾಡಬೇಡ
ಸಿಕ್ಕಿ ಕೆಂಚಗ್ಯಾನ ಪೆಳ್ಯಾಗ
ಕೆಟ್ಟನಾದ ತಟ್ಟಿ ನೀ ಕಾಡುಮುಳ್ಳಾಗ
ಲಾಗ ಆಗತಾದ ಗುರುವಿನ ಕಳ್ಳಗ

ಜ್ವಾಕಿಲಿಂದೆ ನೋಡಿದರ ಏಕರೂಪ ತೋರತದ
ಮೂಕನಾಗಿ ಸೇರು ಒಳಗ
ಧಾಕಬಿಟ್ಟು ತೂಕ ತಿಳಿ ಮನದೊಳಗ
ಲೋಕದಾಟ ಸಾಕು ಸುಡು ಕಾರಕುಳ್ಳಾಗ

ಜ್ಯೋತಿ ನೋಡಿಕೊಂಡು ತಮ್ಮ ಜಾತನಾಗಿ ಜಾಗರಿರು
ತಿರುಗಿ ತಿರುಗಿ ಹೊರಳಿ ನೋಡಾಗ
ಹಾರಿ ಹೋಗಿ ಜಾರಿಬಿದ್ದಿ ಕಾರಿಮುಳ್ಳಾಗ
ಉಳಿದುಕೊ **ಕೊಳ್ಳೂರ ಈ**ಶನ ನೆರಳಾಗ

❍

## ಕಾಯಾಪೂರ

ಬಡತನದ ಬಡಿವ್ಯಾರ ನಮ್ಮೂರ
ಈ ಊರ ಹೆಸರ ಕಾಯಾಪೂರ
ಒಳಗ ಹಾರ ಐದು ಮಂದಿ ಗೌಡರ
ಪ್ರರಬ್ರಹ್ಮ ವಸ್ತು ಒಬ್ಬನೆ ಸರಕಾರ


ಈ ಊರ ಹೆಸರು ಕಾಯಾಪೂರ
ಹತ್ತು ಮಂದಿ ಸುತ್ತ ಸುಳಿವವರ
ಸಪ್ತವ್ಯಸನ ಜತ್ತಾಗಿ ಇರುವವರ

ಈ ಊರ ಹೆಸರು ಕಾಯಾಪೂರ
ಊರ ಅವಾರ ಪೋಣೆಂದೋನವಾರ
ಒಂಬತ್ತು ಕಿಡಕಿಗಳು ಕಟ್ಟಿ ನವದ್ವಾರ

ಈ ಊರ ಹೆಸರು ಕಾಯಾಪೂರ
ಏಕವೀಸ ಸ್ವರ್ಗ ಒಳಗ ಭರಪೂರ
ಎಂಟುಮಂದಿ ಕಾವಲುದಾರ ಅದಾರ

ಈ ಊರ ಹೆಸರು ಕಾಯಾಪೂರ
ಪಾಡ **ಕೊಳ್ಳೂರ** ಪಶ್ಚಿಮಕ ಜಿಂದಾಮದಾರ
ಕೂಡಲೂರ ಸೀಮಿಧಾಟಿ ನಡೀರಿ ಭರದಾರ

❍



## ಸಿಗತಾನ ಮುಕ್ಕಣ್ಣ

ಹಕ್ಕಿ ಹೊಡಿಯೊ ತೆಕ್ಕಿ ಸೋಮಣ್ಣ
ಸಿಗತಾನ ಮುಕ್ಕಣ್ಣ


ಅವಗುಣವೆಂಬೊ ಹಕ್ಕಿ
ದಂಟಿಗ ಬಂದು ಹೊಡಿತದ ಧಕ್ಕಿ
ಫರಾಳಕ್ಕೆ ಇಡಲಿಲ್ಲ ಫಕ್ಕಿ
ನೀನಾದರೂ ಹ್ಯಾಂಗ ಬದುಕಿ

ಕರ್ಮವೆಂಬೊ ಕರ‍್ರನ ಕಾಗಿ
ಕದ್ದು ತಿಂದು ಒಳ್ಳೆತಾದೊ ಗೂಗಿ
ಹಲ್ಯಾ ಅವನೋಡೊ ಹದಿನೆಂಟೀ ನೀಚ
ಹಾಕತಾವ ನೋಡೋ ಪೇಚ

ಚಂಚಲವೆಂಬ ಚಿಟಗುಬ್ಬಿ
ನಟ್ಟನಡು ಇರುತಾದೊ ಹುಬ್ಬಿ
ಹೊಡೆದಾರೇನೂ ಹೋಗಲ್ಲ ಗೊಬ್ಬಿ
ಭಾರಿಸಬೇಕಾಗತದ ಡೆಬ್ಬಿ

ಮಾಡಿದ ಒಂದೇ ಹೊಲ
ಆಳಿದ ಒಂದೇ ಅಬಲ
ಜ್ಞಾನ ಬರಲ್ದೆ ಖೂನಾ ಆಗೋದಿಲ್ಲ
**ಕೊಳ್ಳೂರ ಹುಸೇನಾ** ಹೇಳಿದನಲ್ಲ





# ಕರಿಬಸವೇಶ್ವರ

## ಚಿತ್ತದಂಗನೆ

ಬಟ್ಟ ಕುಚದ ಭಾವೆ ನಿನ್ನಿಂದ
ಅಷ್ಟದಿಕ್ಕಾಳ್ವುದು ನಾನು ನಿನ್ನಿಂದ
ಸೃಷ್ಟಿಗೊಡೆಯನಾದೆ ನಿನ್ನಿಂದ
ರಾಯ ಪಟ್ಟಕಟ್ಟಿತು ಕಾಣೆ ನಿನ್ನಿಂದ

ಆತ್ಮಲಿಂಗವು ನಾನು ನಿನ್ನಿಂದ
ಬಂದು ನಾ ತನುವಿಡಿದುದೆ ನಿನ್ನಿಂದ
ಆತ್ಮ ತಪವ ಮಾಡಿ ನಿನ್ನಿಂದ
ನಿಜಾತ್ಮನಾದೆನು ನೋಡೆ ನಿನ್ನಿಂದ



ಅಂಗ ಪ್ರಾಣಿಗಳಿಗೆ ನಿನ್ನಿಂದ
ನಿಜಲಿಂಗ ಘಟಿಸಿದುದೆ ನಿನ್ನಿಂದ
ಭಂಗಿಸಿ ಭಜನೆಯು ನಿನ್ನಿಂದ
ಉಲ್ಲಂಘನೆ ಒದಗಿದುದೆ ನಿನ್ನಿಂದ

ಸತ್ವ ಸ್ತ್ರೀಯರುಗಳು ನಿನ್ನಿಂದ
ಸವಿಯಿತ್ತು ನಾ ಸವಿದುದೆ ನಿನ್ನಿಂದ
ಚಿತ್ತದಂಗನೆ ಕೇಳು ನಿನ್ನಿಂದ
ಪಾಲಿಪಂತೆ ನೀನಿಹೆ ನಿನ್ನಿಂದ

ಸಿದ್ಧಿಯಾಯಿತು ಕಾಣೆ ನಿನ್ನಿಂದ
ನಾನು ಸಿದ್ಧಬಸವನಾದೆ ನಿನ್ನಿಂದ
ಸಿದ್ಧನಂಜಿಯೆ ಕೇಳು ನಿನ್ನಿಂದ
ಬಲು ಭದ್ರವಾಯಿತು ನಿನ್ನಿಂದ

## ಮಹದಾರ ಚನ್ನಯ್ಯ ಬಂದ

ಕುರುಬ ದೊಣ್ಣೆಯ ಪಿಡಿದ ಕುರುಹ ಪೇಳುವೆ ನಾನು
ಮರವೆಂಬ ಮಬ್ಬು ಮುಸುಕಿತು ಕಾಣಿರೊ
ಅರುವ ತೋರುವ ನಮ್ಮ ಆದಿಬೀರಯ್ಯನ
ಚರಣವ ಭಜಿಸಿ ಮುಕ್ತಿಯ ಪಡೆಯಿರೊ

ಕುಹಕವೆಂದೆಂಬ ಕುರಿಗಳ ತಡೆದು ಮೇಯಿಸುತ
ಅರಸಿ ಹಬ್ಬಕ್ಕೆ ತಂದ ಆ ಕುರುಬನು
ಇವರರಿದರಿದು ಕೊಲ್ಲುತಿಹ ಆ ಸಮಯಂ ಕಂಡು
ಧರೆಗೆ ಸಾರುತ ಬಂದೆ ಕುರುಬನಾಳಾಗಿ

ಚಂಡಿ ಚಾಮುಂಡಿ ಮಾರಿ ಮಸಣಿ ಯಕನಾತಿ
ದುರಿತಹರದೇವಿಯರೆಲ್ಲ ಕೂಡಿ
ಧರೆಗಿಳಿದು ಹಬ್ಬವನು ಮಾಡುತಿಹ ಸಂಭ್ರಮದ
ಆ ಕುರುಹ ಪೇಳುತ ಬಂದೆ ಕುರುಬನಾಳಾಗಿ

ನಮ್ಮ ಗುರು ಕುರುಬ ನಮ್ಮ ಕುಲದೈವ ಬೀರಯ್ಯ
ಇನ್ನೊಂದು ಸುದ್ಧಿಯನು ಪೇಳುತಿಹೆನು
ಷಣ್ಮುಖನು ಚನ್ನಬಸವೇಶನವರಾಳಾಗಿ
ಮಹದಾರ ಚನ್ನಯ್ಯ ಬಂದ ಅರುಹಿನ ಕುರುಹಿದೆ

❍

# ಕೈವಾರ ನಾರೇಯಣಪ್ಪ

## ಜಾತಿಭೇದದ ಪಾತಕ


ಈ ದೇಹದೊಳಗಿರುವ ವಿಷ ಕಳೆಯಬೇಕು
ವಿಷ ಕಳೆದು ಸುಜ್ಞಾನ ಪಥದೊಳಿರು ಮನವೇ

ಮಾತಾಪಿತರೆಂಬೊ ಮೋಹ ಬಿಡಬೇಕು
ಮನ್ಮಥನ ಬಾಣಗಳಿಗಂಜದಿರಬೇಕು
ಅಜ್ಞಾನಿ ಜನರ ದುಸ್ಸಂಗ ಬಿಡಬೇಕು
ಆತ್ಮಾರ್ಥವರಿತು ಹರಿಯ ನೆನೆ ಮನವೇ

ಮೂರು ಆಯುದಾರೆಂಟು ಮೂರ್ಖರ ಬಿಡಬೇಕು
ಸತಿ ಸುತ ಹಿತ ಬಂಧುಜನರ ಬಿಡಬೇಕು
ಜಾತಿ ಭೇದವ ಮಾಡೊ ಪಾತಕರ ಬಿಡಬೇಕು
ಅನುದಿನವು ಗುರುಧ್ಯಾನ ಮಾಡುತಿರು ಮನವೇ

ನಡೆನುಡಿಗೆ ನರಹರಿಯ ನಾಮ ಭಜಿಸಲಿಬೇಕು
ಜಾತಿ ಜನ್ಮಗಳೊಂದು ಸಮಕೂಡಬೇಕು
ಕೈವಾರಾಧಿಪನ ದಾಸ ದಾಸನಾಗಿರಬೇಕು
**ಅಮರ ನಾರೇಯಣ** ಸ್ವಾಮಿಯ ಭಜಿಸು ಮನವೇ

❍



## ಆತ್ಮದ ಆನಂದ


ನಾಶವಾದರು ಬೇಗ ನೆಂಟರಿಷ್ಟರು
ಈ ದೇಹದ ಮನೆಯಲ್ಲಿದ್ದ ದುರ್ಜನರು

ಬಹಳ ಕೋಪಗಾರ ಗಂಡನು ಬಿಟ್ಟನು
ಮೂದೇವಿ ಮೈದುನನು ಮೃತನಾದನು
ಮಾಯೆಯು ಹೆಚ್ಚಿದ ಮಾವನು
ಹೋದನು
ಅತ್ತೆ ಘಾತುಕಿಮುಂಡೆ ಹತಳಾದಳು

ಆರಂಭಗಾರನವನೊಬ್ಬನಿದ್ದನು :
ಭಂಗಿಯೆಂಬೋ ಭಾವನೊಬ್ಬನು
ಏನ ಹೇಳಲಿ ಇವರೆಲ್ಲ ಕಾಡಿಸಿಯೆನ್ನನು
ಭ್ರಷ್ಟರಾಗಿ ಹೋದರು ಇಷ್ಟೂ ಮಂದಿ

ಅಂಜಲೇಕೆ ಇನ್ನು **ಅಮರ ನಾರೇಯಣ**
ದಾಸನ ದಾಸರಿಗೆ ದಾಸನಾಗಿ
ಸತ್ತು ಹುಟ್ಟುವಂಥ ಸಂಕಟವೇನಿಲ್ಲ
ಆನಂದವಾಯಿತೋ ಆತ್ಮದಲ್ಲಿ

❍



## ಕಣ್ಣುಗಳು ಕಪಟಿಗಳು

ಎಲ್ಲಿಂದ ನೀ ಬಂದೆ ದುಂಬಿಯೆ ?
ನಿನ್ನೂರು ಯಾವೂರು ದುಂಬಿಯೆ ?
ಈ ಊರಿನವರೆಲ್ಲ ದುಂಬಿಯೆ
ಬಹು ವಿಷಯ ವಿರೋಧಿಗಳು ದುಂಬಿಯೆ !

ವಕ್ಕಲಾಗಿ ನೀ ಬಂದೆ ದುಂಬಿಯೆ
ನೀನು ಯಾರನ್ನು ಸೇರುವೆ ದುಂಬಿಯೆ ?
ನಿನಗಾರು ಆಪ್ತರು ದುಂಬಿಯೆ ?
ಅವರೆಲ್ಲಿ ಇರುವರು ದುಂಬಿಯೆ ?

ಚಾಡಿಕೋರ ಕಿವಿಗಳು ದುಂಬಿಯೆ
ಚೇಷ್ಟೆಗಳ ಮಾಡುವರು ದುಂಬಿಯೆ
ವಾದಕ್ಕೆ ಇಳಿದರೆ ದುಂಬಿಯೆ
ಕಲಹವು ಬರುವುದು ದುಂಬಿಯೆ

ಕಣ್ಣುಗಳು ಕಪಟಿಗಳು ದುಂಬಿಯೆ
ಪರಕಾಂತೆಯ ಮೇಲೆ ದುಂಬಿಯೆ
ಬರುವುದು ದುರಿತವು ದುಂಬಿಯೆ
ತಪ್ಪಿಸಿಕೊ ಅವರಿಂದ ದುಂಬಿಯೆ

ಬಾಯಿ ವಿಕಾರವು ದುಂಬಿಯೆ
ಎಂದಿಗೂ ಬಿಡದು ದುಂಬಿಯೆ
ಮಾತು ಮಾತಿಗೆ ವಾದ ದುಂಬಿಯೆ
ನೀನು ಎಚ್ಚರದಿಂದಿರು ದುಂಬಿಯೆ

ಅರುಯಿಬ್ಬರು ಅವರು ದುಂಬಿಯೆ
ಅಧಿಕ ಬಲಾಢ್ಯರು ದುಂಬಿಯೆ
ಸುಜ್ಞಾನಿಯಾಗಿರು ದುಂಬಿಯೆ
ಅವರು ಮತಿಗೆಟ್ಟು ಹೋಗುವರು ದುಂಬಿಯೆ

ಮನೆಮನೆ ಅಲೆಯಬೇಡ ದುಂಬಿಯೆ
ಇದೋ ನೀನು ಈ ಮನೆಯಲ್ಲೇ ಇರು ದುಂಬಿಯೆ
ಶತ್ರು ನಾಶವು ದುಂಬಿಯೆ
ಅವರು ಹತ್ತಿರ ಸುಳಿಯರು ದುಂಬಿಯೆ

ಊರು ಬಿಟ್ಟಮೇಲೆ ದುಂಬಿಯೆ
ಯಾವ ಊರಿಗು ಹೋಗಬಾರದು ದುಂಬಿಯೆ
ತಿಳಿದುಕೊ ಈ ಕೀಲು ದುಂಬಿಯೆ
ತಾರಕವ ಸೇರು ನೀ ದುಂಬಿಯೆ.

❍

(ತೆಲುಗು ಮೂಲದ ಕನ್ನಡಾನುವಾದ)

## ಮೈಲಾರ ಬಸವಲಿಂಗ ಶರಣರು

### ಚಿತ್ತ ಬತ್ತಿಯ ಜ್ಯೋತಿ

ತಾನೆ ಬೆಳಗುತಿದೆ ಸ್ವಯಂ ಜ್ಯೋತಿ ತಾನೆ ಬೆಳಗುತಿದೆ
ಮಾನಸ ವಾಚಕ ಕಾಯಕದೊಳು ತನ್ನ ತಾನೆ ಬೆಳಗುತಿದೆ

ತನ್ನ ವಾಮಕರ ಪೀಠ ಪಾತ್ರೆಯೊಳು । ನಿರ್
ಭಿನ್ನ ಭಕ್ತಿಯ ರಸತೈಲ ತೀವಿ
ಸನ್ನುತ ನಡೆನುಡಿ ಬತ್ತಿವಿಡಿದು । ಸುಪ್ರ
ಸನ್ನ ಪ್ರಕಾಶ ಸತ್ಕ್ರಿಯಾ ಜೋಡಿ

ಪರತತ್ವ ಹೃದಯ ಪಣತೆಯೊಳು । ಷಣ್ಮಂತ್ರ
ದರುವೆಂಬ ಸುರಸ ತೈಲವ ಹೀರುತ
ವರದೃಢ ಚಿತ್ತಬತ್ತಿಯ ಕೊನೆಯೊಳು । ಲಿಂಗ
ಕಿರಣದೊಬ್ಬುಳಿಯ ಸುಜ್ಞಾನ ಜ್ಯೋತಿ

ಚಾರು ಸದ್ಭಾವ ಪಣತೆಯೊಳು ತತ್ತ್ವ ವಿ
ಚಾರ ಸುಸಾರ ಘೃತವನೀಂಟುತ
ಮೀರಿದಾಚರಣೆ ಬತ್ತಿಯ ಕೊನೆಯೊಳು । **ಚೆನ್ನ**
**ವೀರ ಮದ್ಗುರು** ಮಹಾಜ್ಞಾನ ಜ್ಯೋತಿ

❍

## ಮೈಲಾರ ಬಸವಲಿಂಗ ಶರಣರು

### ಚಿತ್ತ ಬತ್ತಿಯ ಜ್ಯೋತಿ

ತಾನೆ ಬೆಳಗುತಿದೆ ಸ್ವಯಂ ಜ್ಯೋತಿ ತಾನೆ ಬೆಳಗುತಿದೆ
ಮಾನಸ ವಾಚಕ ಕಾಯಕದೊಳು ತನ್ನ ತಾನೆ ಬೆಳಗುತಿದೆ

ತನ್ನ ವಾಮಕರ ಪೀಠ ಪಾತ್ರೆಯೊಳು । ನಿರ್
ಭಿನ್ನ ಭಕ್ತಿಯ ರಸತೈಲ ತೀವಿ
ಸನ್ನುತ ನಡೆನುಡಿ ಬತ್ತಿವಿಡಿದು । ಸುಪ್ರ
ಸನ್ನ ಪ್ರಕಾಶ ಸತ್‌ಕ್ರಿಯಾ ಜೋಡಿ

ಪರತತ್ವ ಹೃದಯ ಪಣತೆಯೊಳು । ಷಣ್ಮಂತ್ರ
ದರುವೆಂಬ ಸುರಸ ತೈಲವ ಹೀರುತ
ವರದೃಢ ಚಿತ್ತಬತ್ತಿಯ ಕೊನೆಯೊಳು । ಲಿಂಗ
ಕಿರಣದೊಬ್ಬುಳಿಯ ಸುಜ್ಞಾನ ಜ್ಯೋತಿ

ಚಾರು ಸದ್‌ಭಾವ ಪಣತೆಯೊಳು ತತ್ತ್ವ ವಿ
ಚಾರ ಸುಸಾರ ಘೃತವನೀಂಟುತ
ಮೀರಿದಾಚರಣೆ ಬತ್ತಿಯ ಕೊನೆಯೊಳು । **ಚೆನ್ನ
ವೀರ ಮದ್‌ಗುರು** ಮಹಾಜ್ಞಾನ ಜ್ಯೋತಿ

❍

## ನೀರು ಬೀಜವ ಬಿತ್ತಿ

ಪುಸಿಯನಾಡುವದಿಲ್ಲವಣ್ಣ । ನೀವು
ಹಸನಾಗಿ ಶೋಧಿಸಿ ತಿಳಕೊಳ್ಳಿರಣ್ಣ


ಬೇರು ಬಲಿದು ಸಾರವಳಿದ । ಅಣ್ಣ
ನೀರು ಬೀಜವ ಬಿತ್ತಿ ಭೂಮಿಯ ಬೆಳೆದು
ಮಾರುತನ ಹೊತ್ತು ಸುಳಿದವಕ್ಕಿ
ತೂರದ ಮುನ್ನ ಮೂಗಂಡುಗವಳೆದು

ತಾಳೆಯ ಮರದ ಮೇಲೊಂದು । ಬಾವಿ
ಆಳು ಪ್ರಮಾಣದರೊಳಗೇಳು ಸಿಂಧು
ಬಾಳುವ ಜನವೆಲ್ಲ ಬಂದು । ಮುಳಿ
ಗೇಳುತಿಹರು ತಡಿಗಾಣದೆಂದೆಂದೂ

ನೀರ ನಡುವೆ ಮೂರು ಬೆಂಕಿ । ಹುಟ್ಟಿ
ತೀರೆ ತೀರದು ಸುಟ್ಟು ಸುಡುತದೆ ಬೆಂಕಿ
ಆರಿಸಬೇಕೆಂಬ ಶಂಕೆ । ತಲೆ
ದೋರಲೊಲ್ಲದು ಮೂರು ಲೋಕಕ್ಕೆ ಸೋಂಕಿ

ಹುಲಿಯ ಹುಲ್ಲೆಯ ನಡುವೊಂದು । ಅದು
ತಲೆಯೆರಡಾಗಿ ಲೋಕವನ್ನೆಲ್ಲ ತಿಂದು
ಕೆಲದಲ್ಲಿ ಮತ್ತೊಂದು ಬಂದು । ಅಲ್ಲಿ
ಮೆಲುಕಿರಿವುದ ನಾ ನೋಡಿದೆ ನಿಂದು

ಕುಲವಂತ ಹೊಲೆಯನ ತಂಗಿ । ತಾನು
ಜಲಜಭವಾಂಡ ಮಂಡಲಕೆ ಮೂಲಂಗಿ
ಒಲವಿಂದ ಹಾಕಿದ ಭಂಗಿ । ಅದು
ತಲೆಗೇರಿ ಮೊಲ ಬೇಟೆಕಾರನ ನುಂಗಿ



ಕತ್ತಲೆಯೊಳು ಕಂಡ ಕುಣಿಯ । ತಾನು
ಹೊತ್ತಾರೆ ಕಣಗಂಡು ಬೀಳುವ ಗಣಿಯಾ
ಸತ್ತು ಹುಟ್ಟುವುದಕ್ಕೆ ದಣಿಯ । ನೆಂದು
ಸತ್ಯಲೋಕದ ಜನ ನಗುವಂತಹ ಖಣಿಯಾ

ಅಣ್ಣತಂಗಿಯರೊಂದುಗೂಡಿ । ಒಬ್ಬ
ರುಣ್ಣದೂಟವನುಂಡು ಚನ್ನಾಟವಾಡಿ
ಪುಣ್ಯ ಪಾಪವ ಹಿಂದುಮಾಡಿ । ಮೂರು
ಕಣ್ಣೊಳಗೆ ತಾವು ಬೆರೆದಾರು ನೋಡಿ

ಆಡಿನ ಕೊರಳೊಳಗಿರುವ । ಮೊಲೆ
ಜೋಡಿನಿಂದಲಿ ಹಾಲು ನಿತ್ಯದಿ ಕರೆವ
ಮಾಡುವ ಜಾತಿಸಂಕರವ । ಇಂತ
ಗಾಡಿಗತನವ ಬಲ್ಲವ ನಮ್ಮ ಗೊರವ

ಶರಧಿಯೊಳಗೆ ಬಂದು ಹಳ್ಳ । ತಾನು
ಹರಿದು ಹರಿಯುತಿದೆ ನಿಲಕಾಲವಿಲ್ಲ
ಮರೆಮಾಚಲೇತಕೀ ಸೊಲ್ಲ । ಮುಕ್ತಿ
ವರದಮದ್ದುಗುರು ಚೆನ್ನವೀರನ ಬಲ್ಲ

## ಕರಿಯೆಂಟು ನರಿ ನುಂಗಿತಲ್ಲಾ !

ಸಟೆಯನಾಡುವನೆ ಸುಜ್ಞಾನಿ । ಇದು
ದಿಟವೆಂದು ತಿಳಿಯಬಲ್ಲವನೆ ಅಜ್ಞಾನಿ

ಕೋಡಗನಿಗೆ ಕೋಡು ಮೂಡಿ । ತನ್ನ
ಕೋಡಿನಿಂದ ಮೂರುಜಗವನಲ್ಲಾಡಿಸಿ
ಆಡು ಕೋಡುಗ ತಲೆಗೂಡಿ । ನ್ಯಾಯ
ಮೂಡಿದಾಕ್ಷಣ ಮೋಕ್ಷವಾದೀತು ನೋಡಿ

ಒಂಟೆ ಮೂರೆಂಟೆಯಾಗಿಹುದು । ಹೃದ್
ಗಂಟು ಲಕ್ಷ್ಮಿಯೊಳೊಂಟಿಮನೆ ಮಾಡಿಹುದು
ಎಂಟಾರು ಲೋಕವಾಳುವುದು । ಇಂಥಾ
ಒಂಟೆಯ ಸೊಕ್ಕನು ಮಂಟ ಬೆಕ್ಕು ನುಂಗಿಹುದು

ಕರಿಯೆಂಟು ನರಿ ನುಂಗಿತಲ್ಲ । ಸಣ್ಣ
ಇರಿವೆ ನುಂಗಿತು ಮೂರು ಲೋಕವನ್ನೆಲ್ಲ
ಅರಿಯದವರಿಗಳವಲ್ಲ । ಎಮ್ಮ
ಗುರು ಚೆನ್ನವೀರೇಶ ಮಹೇಶ ಬಲ್ಲ

❍

# ಖೈನೂರು ಕೃಷ್ಣಪ್ಪ

## ಅತ್ತೇ ಹೋಗಣ್ಣ

ಗುರುವಿನ ಮಗನಾದರ ಗುರುತು ತಿಳೀಬೇಕು
ಗುರುವಿಲ್ಲದ ಕುರುಹದೆಲ್ಲಣ್ಣಾ
ತಾನೆ ಕಂಡು ತಾನೆ ಸತ್ಯಾಗಿದ್ದರೆ
ಸರ್ವಮಾತುಗಳೆಲ್ಲ ಸರಸಾದವಣ್ಣ

ಆಕಡಿಂದೊಬ್ಬ ಬಂದ ಈಕಡಿಂದೊಬ್ಬ ಬಂದ
ನಡುಹಾದಿ ಖಾಲಿ ಬಿತ್ತಣ್ಣ
ಇಬ್ಬರು ಒಂದಾಗಿ ನಡುಹಾದಿ ಹೊಕ್ಕರೆ
ಮುಂದೆ ಕಾಣಿಸುತದೆ ಬಯಲು ಬ್ರಹ್ಮಣ್ಣಾ

ಆತ್ಮನ ಗುಡಿಯಲಿ ಕಳಸ ಕಾಣಿಸುತದ
ಕಳಸದ ಮೇಲೆ ಚುಕ್ಕಿಯಣ್ಣ
ಚುಕ್ಕೀವೊಳಗೊಂದು ಕುಸುಮ ಕುಣಿದಾಡುತದ
ಅದರ ನಿಜರೂಪ ನೋಡಣ್ಣಾ
ನಿಜರೂಪದಾತ್ಮನ ನಿಲ್ಲಿಸಿ ನೋಡಿದರೆ
ಮುಂದೆ ಕಾಣಿಸುತದೆ ಬಯಲು ಬ್ರಹ್ಮಣ್ಣಾ

ಒಂದಿಂದೆ ಎರಡಾಗಿ ಎರಡಿಂದೆ ಮೂರಾಗಿ
ಮೂರಿಂದೆ ಮುಕ್ತಿ ಕಾಣಣ್ಣ
ಮೂರು ಮಂಟಪದೊಳು ದೃಷ್ಟಿ ಮೇಲುಮಂಟಪದೊಳು
ಮೂಲದ ಗುಟ್ಟು ತಿಳಿಯಬೇಕಣ್ಣಾ
ಗುಟ್ಟಿನ ಒಳಗಿರುವ **ಗುರುಮಡಿವಾಳಯ್ಯ**ನ
ಗೊತ್ತು ಮಾಡಿಕೊಂಡು ಅತ್ತೇ ಹೋಗಣ್ಣ

❍

## ಏಸು ದಿವಸ ಇಲ್ಲೇ ಇದ್ದೇನಂತಿ ?

ಬಂಗಾಲಿ ಸಂತಿ ಭಾಳ ಗಡಿಬಿಡಿ
ಸುಳ್ಳೇ ಭ್ರಾಂತಿಗೆಟ್ಟು ತಿರುಗಬ್ಯಾಡೆಲೊ ಖೋಡಿ
ನಾಲ್ಕು ಬಾಜಾರೆಲ್ಲ ಹುಡಕ್ಯಾಡಿ । ನೀ
ಬೇಕಾದ್ದು ಕೊಂಡುಕೊ ತಿಳಿದುನೋಡಿ

ಬಾಜಾರದೊಳಗ ಬಂದು ನೀ ಹೊಕ್ಕಿ
ಇಲ್ಲಿ ಇಲ್ಲೆನಬೇಡ ಯಾರದಂಜಿಕಿ
ಹತ್ತುಮಂದಿ ಬಣಜಿಗೇರು ಮೂಬೆರಕಿ
ಇಲ್ಲಿ ವ್ಯಾಪಾರ ಮಾಡಿಕೊ ಬಲು ಜೋಕಿ

ಒಂಭತ್ತು ಅಗಸಿ ಪ್ಯಾಟಿ ಬಾಜಾರ
ಇಲ್ಲಿ ಇರುವವರು ಆರುಮಂದಿ ದಲಾಲೇರ
ಪಟ್ಟಣಶೆಟ್ಟಿ ಎಂಬುವ ಸಾಹುಕಾರ
ಇವನ ಹಂತಿಲಿ ಮಾಡಿಕೊ ವ್ಯಾಪಾರ

ಸಂತಿಗಿ ಬರುವಾಗ ಬಹಳ ಪ್ರೀತಿ
ಸಂತಿ ಮಾಡಿಕೊಂಡು ಹೋಗುವಾಗ ಯಾಕ ಚಿಂತಿ ?
ಏಸು ದಿವಸ ಇಲ್ಲೇ ಇದ್ದೇನಂತಿ ?
ನಮ್ಮ ಜಕಾತಿ ರೊಕ್ಕಕ ಏನಂತಿ ?

ಪೊಡವಿಯೊಳಗ ಕಡಕೋಳದರಿ
ಅಲ್ಲಿ ಪಡೆದವರಿಗೆ ಕೈಲಾಸದರಿ
**ಗುರು ಮಡಿವಾ**ಳನ ಪಾದ ಹಸನದರಿ
ಅಲ್ಲಿ ತಿಳಿದವರಿಗೆ ಬಲು ಮಹತ್ವದರಿ

❍

## ಹಸ್ತರ ಕರೆವರು ಯಾರವ್ವ ?


ಎತ್ತಹೋದೆ ಎನ್ನ ಹಡೆದವ್ವಾ ?
ಮರ್ತ್ಯವು ಮುಳುಗಿತು ಎನಗವ್ವಾ
ಹಸ್ತರ ಕರೆವರು ಯಾರವ್ವ । ಮುಂದೆ
ದುಸ್ತರ ದಿನಗಳು ಕಳಿಯಲ್ಹ್ಯಾಂಗ ?

ಹಾಲುಸಕ್ಕರಿ ಎನಗುಣಿಸಿ
ಬಲು ಮೋಹದಿ ಮಾಡಿದಿ ಎನ್ನನು ಬೆಳಸಿ । ತೊ
ಟ್ಟಿಲ ಕಟ್ಟಿ ಜೋಗುಳ ಪಾಡಿ
ಏನು ಹಾನಿಯಾದಿ ಪುಣ್ಯಪತಿವರತಿ ?

ಏನು ಪರಿಮೂಡಿ ಎನಗುಣಿಸಿ
ಮೋಹಿತ ಮಾಡಿ ಎನಗುಣಿಸಿ
ದಾನಾ ಸವಿ ಸಂಗ್ರಹ ಬೆರಸಿ
ಏನು ಹಾನಿಯಾದಿ ಪುಣ್ಯಪತಿವರತಿ

ಆಶೆ ಕಡೆಯಿತು ಖೈನೂರವ್ವ
ಸೋಸಿದ ಬಳ್ಳಿತಾಯಿ ಖಾಸವ್ವ
**ಈಶ ಮಡಿವಾಳನ** ಖೂನವ್ವ । ಕೈ
ಲಾಸ ಪದವಿ ಕೊಟ್ಟಾನವ್ವ

❍



## ಸಿಕ್ಕರೆ ಸುಮ್ಮನೆ ಕೊಡರೆವ್ವ

ಅಯ್ಯೊಯ್ಯೋ ಮೂಗುತಿ ಕಳಕೊಂಡೆ
ಹೊಡಿತಾನೆ ಯವ್ವ ಎನಗಂಡ
ಒಂದೊಂದು ಬಯ್ಯುತಾನ ಹೊಲಭಂಡ
ಬಡಿತಾನ ಯವ್ವ ಹುಟ್ಟ ತೊಕ್ಕೊಂಡ

ನಾಸಿಕಕೊಪ್ಪುವ ನತ್ತವ್ವ । ಅದು
ಆತ್ಮದೊಳಗೆ ಇರುತಿತ್ತವ್ವ
ಬೆಲೆ ಇಲ್ಲದ ಪುರುಷ ಮಾಡಿದ ನತ್ತವ್ವ । ಅದು
ಇಲ್ಲೆ ಕಳದ್ಹೋತು ಗೆಳೆತವ್ವಾ

ಸಿಕ್ಕರೆ ಸುಮ್ಮನೆ ಕೊಡರೆವ್ವ
ಕೊಡದಿದ್ದರೆ ಸರಕಾರಕ ನಡಿರೆವ್ವ
ಕಡಕೊಳ ಠಾಣ್ಯಕ ನಡಿರೆವ್ವ । ಅಲ್ಲಿ
ಮಡಿವಾಳನ ಕೂಡಿ ಮುಕ್ತಿ ಪಡಿರೆವ್ವ

❍

## ಗಟ್ಟಿಹಳ್ಳಿ ಆಂಜನಪ್ಪ

### ಗಂಗೆದೇವರ ನಿಲಿಸಬೇಕಣ್ಣ

ಊರ ದೇವರ ಮಾಡಬೇಕಣ್ಣಾ
ಈ ಊರಿನೊಳಗೆ ಗಂಗೆದೇವರ ನಿಲಿಸಬೇಕಣ್ಣಾ

ಪಂಥವೆಂಬೊ ಪತ್ರೆ ತಂದು
ಗುಪ್ತವೆಂಬೊ ಗುಡಿಯಕಟ್ಟಿ
ಜ್ಞಪ್ತಿಯೆಂಬೊ ಗಂಗದೇವಿಗೆ
ಆತ್ಮವೆಂಬೊ ಪೂಜೆ ಮಾಡಿ

ಊರ ದೇವರ ಮಾಡಬೇಕು
ಗಂಗೆದೇವರ ನಿಲಿಸಬೇಕು
ಗಂಡ ದೀಪಗಳುರಿಯಬೇಕು
ಗಂಟೆ ನಾದವು ಕೇಳಬೇಕು

ಆತ್ಮಯೆಂಬೋ ಅಕ್ಕಿತಂದು
ಊರ್ಧ್ವಯೆಂಬೋ ಉರುಟು ತಂದು
ಭೇದವೆಂಬೋ ಬೆಲ್ಲತಂದು
ಬೆಟ್ಟ ದೀಪಗಳು ಮಾಡಲಿಬೇಕು

ಕೋಪವೆಂಬೋ ಕೋಣ ತಂದು
ಗೋರಿಗಂಬ ಮುಂದೆನಿಂದು
ಜ್ಞಾನವೆಂಬೋ ಖಡ್ಗದಿಂದ
ಅಲಿ ಅಲಿ ಬಲಿ ನರಕಬೇಕು

ತಾಮಸವೆಂಬೋ ಟಗರು ತಂದು
ಕಾಮಕ್ರೋಧ ನುಗ್ಗುಮಾಡಿ
ಎಮ್ಮ ಕಲ್ಪದ ಮದಗಳನ್ನು
ಸುಮ್ಮನಿಂದೆ ಚೂರುಮಾಡಿ

ತುಚ್ಛವೆಂಬೊ ತುಪ್ಪ ತಂದು
ಭಕ್ತಿಯೆಂಬೊ ಬತ್ತಿನಿಡಿದು
ಆತ್ಮಯೆಂಬೊ ಅಣಿತದಲ್ಲಿ
ಜ್ಞಪ್ತಿಯೆಂಬೊ ಜ್ಯೋತಿನ್ಹತ್ತಿಸಿ

ಒರ್ಪುಯೆಂಬೋ ದೀಪಮಾಡಿ
ಗಂಗೆದೇವಿ ಮುಂದೆ ನೀಡಿ
ಆತ್ಮದಲ್ಲಿ ಪೂಜೆ ಮಾಡಿ
ಆರು ಬೀದಿಗಳು ತಿರುಗಿ ನೋಡಿ

ಜ್ಞಾನ ದೀಪಗಳು ಮಾಡಬೇಕು
ಗಂಗೆದೇವಿಗೆ ಸಲ್ಲಿಸಬೇಕು
ಜ್ಞಪ್ತಿಯೊಳಗೆ ನಿಂತಿರಬೇಕು
ಗಂಟೆನಾದವು ಕೇಳಬೇಕು


ಭಕ್ತಿಯೆಂಬೋ ಬತ್ತಿನ್ಹಿಡಿದು
ತೂರ್ಯಯೆಂಬೋ ತುಪ್ಪ ಅಟ್ಟಿ
ಅಂಗದಿಂದ ಲಿಂಗ ಮಾಡಿ
ಗಂಗೆದೇವಿ ಪೂಜೆ ಮಾಡಿ


ಮೌನಯೆಂಬೋ ಮಲ್ಲಿಗೆ ತಂದು
ಮರುಲದಿಂದ ಮನಸಿನಿಂದು
ಕರುಣಯೆಂಬೋ ಕಮಲ ತಂದು
ಗಂಗೆದೇವಿ ಮುಂದೆ ನಿಂದು

ಏಳು ಅಂಕಣ ತೇರು ಮ್ಯಾಲೆ
ನಿಂತು ನೋಡೋ ಕಂತು ಇರುವಳು
ಮ್ಯಾಳತಳ ಮೃದಂಗ ಘನತರ
ವೇಣುನಾದ ವಿನೋದ ಘರ್ಜನ

ಆತ್ಮದಲ್ಲಿ ಗಂಗೆ ಜಾತುರೆ
ಮಾಡಿ ಮುಕ್ತಿನ್ಹೊಂದು ಬೇಕು
ಭಕ್ತಜನರು ಬನ್ನಿರಣ್ಣ
ಮುಕ್ತಿ ಮಾರ್ಗ ಸೇರಿರಣ್ಣ

ಧರೆಯೊಳು ನಂಬುಳ್ಳಿ ಪರವು
ಶ್ರೀ ರಾಮಕೃಷ್ಣರ್ಯಲು ಗುರುವು
**ಆಂಜನೇಯ ದಾಸು**
ಆತ್ಮಾನಂದವಾಯಿತು ಈ ದಿನವು





## ಆತ್ಮಕಾಂತೆ

ಕನ್ನೆಯೊಬ್ಬಳ ಕೂಡಿಕೊಳ್ಳೋಣ ।
ಅಕ್ಕರೆಯಿಂದಲಿ
ಮಾಳಿಗೆ ಮ್ಯೇಲೆ ಎಚ್ಚರವಾಗಿರೋಣ

ಕನ್ನೆಯೊಬ್ಬಳ ಕೂಡಿಕೊಂಡು
ಈಡು ನೋಡಿ ಜೋಡುಗೊಂಡು
ಈಡಪಿಂಗಳ ನಡುವೆ ಸುಳಿವ
ಸಖಿಯ ಸಂಗವ ಮಾಡಿ ನಾವು

ಮೇಟಿ ಶಿಖರವನೇರಿ ನೋಡೋಣ
ಉನ್ಮನಿಯೊಳು ತೂರಿ ಸುಮ್ಮನೆ ಸುಖಿಸೋಣ
ತಾರಮ್ಯವ ತಿಳಿದು ನಮ್ಮೊಳು ಬಾಯಿಮುಚ್ಚಿ
ಗುರುವ ಸ್ಮರಿಸಿ ಕರುಣೆ ಮೀರಲು ಸೇವೆಮಾಡಿ
ಕಾಮ ಕ್ರೋಧಗಳನೆಲ್ಲ ಕೊಯ್ದು

ಪವನ ಯೋಗವ ಹಿಡಿದುನೋಡೋಣ
ನವದ್ವಾರದಿ ನಾದ ಧ್ವನಿಗಳ ಕೇಳುತಲಿರೋಣ
ಪವನ ಯೋಗದ ಸಂಗವ ಮಾಡಿ
ನಿರ್ಮಲ ಭಾವದಿ ನಿಂತು ಮೆರೆದು
ರವಿಚಂದ್ರರ ಕಾಂತಿ ತೇಜವು
ಅವಿರಳದಿ ಮೆರೆಯುತಿಹುದು

ಹಣೆಯ ಕಣ್ಣಲ್ಲಿ ಪೂರಾ ನೋಡೋಣ
ಪರತತ್ವವೆಂಬ ತಲ್ಪದೊಳು ಪವ್ವಳಿಸೋಣ
ಸುದತಿ ಬಾರದೆಂದು ಸ್ನೇಹಮಾಡಿ
ಬಿಗಿದು ಭಾವನೆ ತೀರಿ ಆತ್ಮದೊಳು
ಪಾಪಕರ್ಮವೆಲ್ಲ ಭಸ್ಮವಾಗಲೆಂದು

ಈಡು ಇಲ್ಲದ ಕನ್ನೆಯೊಬ್ಬಳಿಹಳು
ಆ ಮಾಳಿಗೆ ಮೇಲೆ ಅಪ್ಪಿಕೊಳ್ಳುತಿಹಳು
ಕೋಳಿ ಕೂಗೋ ಜಾವಕೆ ಮುಂಚೆ
ಕೋರಿಕೆ ತೀರಿ ಆತ್ಮಯೋಗವ ಮಾಡಿಕೊಂಡೆ
ಆದಿ ಗುರುವನೆ ಸೇರಿಕೊಂಡೆ

ಹೊದ್ದ ಸೆರಗನು ಪೂರಾ ಸರಿಸೋಣಾ
ಕುಚಗಳ ಪಿಡಿದು ಕುಂಭಕಾಗ್ರವ ಹದವ ಮಾಡೋಣ
ನಿಕ್ಕಿ ನಿಕ್ಕಿ ಚೊಕ್ಕವಾಗಿ ಎತ್ತಿ ಎತ್ತಿ ನೂಕಿ ನೂಕಿ
ಮೂಗು ಪಿಡಿದು ಮುಕ್ತಿ ಕಂಡೆ
ಮೂಲಬ್ರಹ್ಮವ ಸೇರಿಕೊಂಡೆ

ಮೂಗು ಪಿಡಿದು ಮೇಲೇರಿ ನೋಡೋಣ
ಸೊಬಗು ಹೆಣ್ಣಿನ ಸಂಗ ಮಾಡಿ ಜೊತೆಯಾಗಿರೋಣ
ಎಲ್ಲೆಲ್ಲಿ ಅಲೆದರೂ ಸಿಕ್ಕಳಣ್ಣಾ ಮುಕ್ತಿಕಾಂತೆ
ನಿಕ್ಕಿ ಜಲದ ಕುಂಡಲಿ ನಡುವೆ
ಸಿಕ್ಕುವಳಣ್ಣಾ ಚುಕ್ಕೆಯಂದದಿ

ಧರಣಿಯೊಳು ನಾಗ್ದೇವ ಪುರವಣ್ಣ
ಶ್ರೀ ರಾಮಕೃಷ್ಣರ ಪಾದಪದ್ಮವ ನಂಬಿರಣ್ಣ
**ಆಂಜನೇಯ ದಾಸ** ನಿಂತು ಆತ್ಮಕಾಂತೆಯ ಹೊಂದಿ
ರಂಜಿತದಿ ರಾಮನಾಮವ ಸ್ಮರಿಸುತ ನಿಂದನು ಆತ್ಮದಲಿ

❍

(ತೆಲುಗು ಮೂಲದ ಕನ್ನಡಾನುವಾದ)

## ಚನ್ನೂರ ಜಲಾಲ ಸಾಹೇಬ

### ತೊಳೆಯಬೇಕರಿ ಒಳಗಿನ ಮೈಲಾ

ಸಬ್ ಕಹತೆ ಈಶ್ವರ ಅಲ್ಲಾ
ಇದರ ಭೇದ ಯಾರಿಗೆ ತಿಳಿದಿಲ್ಲಾ

ನಿರಾಕಾರಸೆ ಆಕಾರ ಹುವೆ
ವೇದ ಶಾಸ್ತ್ರಕೆ ನಿಲುಕಿಲ್ಲ
ಹಿಂದೂ ಮುಸ್ಲಮಾನ ಶಾಸ್ತ್ರ ಪಡತೇಹೈ
ಗುರುಮನಿ ಕೀಲ ಸಿಗಲಿಲ್ಲ

ಲಾಯಕೆ ಗುರುಕೋ ಜಬ್ ಢೂಂಡಲಾಕೆ
ಏನು ಬೇಡಿದ್ದು ಕೊಡಬೇಕಲ್ಲಾ
ತನು ಮನ ಧನ ಸಬ್ ಲೋಭ ಛೋಡಕರ್
ಆಗಬೇಕು ಗುರುವಿನ ಚೇಲಾ

ಹಮ್‌ಭೀ ಕಹತೆ ತುಮ್‌ಭೀ ಕಹತೆ
ಮಾಡಬ್ಯಾಡರಿ ಮ್ಯಾಲಿನ ಶೀಲಾ
**ಗುರು ಮಡಿವಾಳನ** ಹೋಕರ್
ಬೋಲೆ ತೊಳಿಯಬೇಕರಿ ಒಳಗಿನ ಮೈಲಾ

❍

## ಅಲ್ಲಾನ ಜಾತ್ರಿ

ಕಾಮಿಸಲೇನಿದು ಕೆಂವಸ್ಯೆಯಾ
ನಿಜ ಭಾವಿಸಿಕೊ ಇದು ಭಂವ್‌ಸ್ಯೆಯ್ಯೋ
ಜಾನಿಸಿ ತಿಳಿ ಮನ ದಿನಸಯ್ಯೋ
ಜಗ ಹುಟ್ಟುದು ಸಾವುದು ಹಿಂಗಸಯ್ಯೋ

ಅಜ್ಞಾನವೆಂಬುದು ಅಮವಾಸಿ
ಸುಜ್ಞಾನೆಂಬ ಚಂದ್ರನು ಉದಿಸಿ
ರಹಿಮಾಮ ರಹಿಮಾಮ ಉಚ್ಚರಿಸಿ
ಪರಬ್ರಹ್ಮಕ ದೋಸ್ತರ ಹೌದೆನಿಸಿ

ಅವಗುಣ ಅಳಿದರೆ ಅಯಿದೋಸೆಲಾ
ಶಿವಗುಣ ಹಿಡಿದು ದೇವರನೊಲಿಸೊ
ನಡೆ - ನುಡಿ ತಪ್ಪದೆ ಧುಯಿಲೆನಿಸೊ
ಬಹು ಸಡಗರದಿಂದಲಿ ಅವನನ್ನೊಲಿಸೊ

ಜೀವ ಪರಮರೆಂಬುವದಿತ್ರಿ
ಭಾವಿಸಿಕೊ ನಿಜ ಕತ್ತಲ್ ರಾತ್ರಿ
ಜೀವನ್ಹೋದ ಮೇಲೆ ದಫನೈತ್ರಿ
**ಗುರುದೇವ ಮಡಿವಾಳ** ಅಲ್ಲಾನ ಜಾತ್ರಿ

❍

## ಕರಿವೃಷಭೇಂದ್ರ

### ಹೊಕ್ಕುಳವ ಕೊಯ್ಸಿರವ್ವ

ಜೋ ಎನ್ನಿರವ್ವಗಳಿರಾ ನೀವೀಗ । ಜೋ ಎನ್ನಕ್ಕಗಳಿರಾ
ಜೋ ಎಂದು ಕೂಗಿರೆ ಜ್ಯೋತಿ ಸ್ವರೂಪನ
ಜ್ಞಾನಶಕ್ತಿಯರು ನೀವು !

ಆನಂದಮಯನು ನೀನು ಸರ್ವರೊಳು
ಓಲೈಸಿಕೊಳ್ಳಲೊಲ್ಲದೆ
ಹೀನ ನೆರೆಯೊಳು ನೀನು ಬರಬಹುದೆ ಎಂತೆಂದು
ಹೊಕ್ಕುಳುವ ಕೊಯ್ಯಿರವ್ವ

ಸಚ್ಚಿದಾನಂದ ನೀನು ಪ್ರಕೃತಿಯ
ಇಚ್ಛೆಗೋಸುಗವಾಗಿಯೆ
ಅಚ್ಯೋತ್ತಿ ಇಳೆಯೊಳು ಬಂದುದೆ ತಪ್ಪೆಂದು
ಬೆಚ್ಚಗೆಯ ಮಾಡಿರವ್ವ

ಹುಚ್ಚು ಮಾಯೆಯ ಸಂಗದಿ ಜಗವಿದುವೆ
ಹುಚ್ಚಾಗಿ ಮುಳುಗಿಹುದು
ಬೆಚ್ಚಿ ಬೆದರಲಿ ಬೇಡ ನಿನ್ನ ನೀ ತಿಳಿಯೆಂದು
ಬೆಚ್ಚು ನೀರ್ವಾಕಿರವ್ವ

ಶ್ರೇಷ್ಠವಿದು ಬಂಗಾವು ಟೆಂಕದಿಂ
ನಷ್ಟವಾಗಿರುವುದೆಂದು
ನೆಟ್ಟಗೆಯ ಮುರಿದು ತೂಪಿರಿದು ದೃಷ್ಟಿಯನಿಟ್ಟು
ತಟ್ಟಿ ಜೋ ಎನ್ನಿರವ್ವ

ಮಾತು ಮಾತ್ರದ ಶಿಶುವಿದು ಜಗಕೊಂದು
ರೀತಿಯಲಿ ತೋರಿತಲ್ಲಾ
ಪುನೀತ **ಸೋಮೆಕಟ್ಟೆ ಕರಿವೃಷಭಲಿಂಗೇಂದ್ರ**
ನೇತಿಗಳೆದಿಹ ಜಗವನು

❍

## ಕುಕಡೊಳ್ಳಿ ಚನ್ನಮಲ್ಲಯ್ಯ

### ಹುಟ್ಟಿದ ತಾವ ಅರಿಯಣ್ಣ

ನುಡಿನುಡಿ ನುಡಿಯಣ್ಣಾ
ಓಂ ಶಿವಶಿವ ಎನ್ನುತ ನಡಿಯಣ್ಣ
ಅಡಿಗಡಿಗೆ ಗುರುಮಂತ್ರವ ನುಡಿದರೆ
ಪರಮ ಪದವಿಯೆ ನಿನಗಣ್ಣ

ಪರ್ವತಕ್ಹೋದರೂ ಇಲ್ಲಣ್ಣಾ
ಸುಳ್ಳೇ ತಿರುಗಿ ತಿರುಗಿ ನೀ ನೊಂದೆಣ್ಣ
ಪಾದಪ್ರಸಾದವು ಮಹಿಮವು ತಿಳಿದರೆ
ಪಾರ್ವತಿ ಪತಿಯೆ ನೀನಣ್ಣ !

ತಿರುಪತಿಗ್ಹೋದರು ಇಲ್ಲಣ್ಣ
ಸುಳ್ಳೇ ತಿರುತಿರುಗಿ ನೀ ನೊಂದೆಣ್ಣ
ತೀರ್ಥಪ್ರಸಾದದ ಮಹಿಮವು ತಿಳಿದರೆ
ತಿರುಗಿ ಬಾರದವ ನೀನಣ್ಣ

ಖಂಡಿತ ಮಾಡೋದು ಬ್ಯಾಡಣ್ಣ
ಇದನ್ನ ಕಂಡವರ್‍ಯಾರಿಲ್ಲೇಳಣ್ಣ
ಖಂಡಿತ ಮಾಡುವ ಮೂಲವು ತಿಳಿದರೆ
ಅಖಂಡ ಮೂರುತಿ ನೀನಣ್ಣ

ಹುಟ್ಟಿದ ತಾವ ಅರಿಯಣ್ಣ
ಇದು ಮುಟ್ಟಿನ ಶರೀರ ಕಾಣಣ್ಣ
ಹುಟ್ಟು ಮುಟ್ಟಿನ ಮೂಲವ ತಿಳಿದರೆ
ಹುಟ್ಟಿ ಬಾರದವ ನೀನಣ್ಣ

ಗುರು ಮುಖದಿಂದಲಿ ಅರಿಯಣ್ಣ
ಇದು ಪರಶಿವನೊಲಿಸುವ ದಾರೆಣ್ಣ
ಕಾಯಾಪುರದೊಳು ಮೆರೆಯುವ
**ಕಲ್ಮೇಶ**ನೊಳ್ ಕೂಡಣ್ಣ

❍

## ಮದ್ದಾನಿ

ಸದ್ಗುರು ಸಾಕಿದ ಮದ್ದಾನಿ ಬರುತಲಿದೆ
ಎದ್ದು ಹೋಗಿರಿ ಇದ್ದ ನಿಂದಕರು
ಬಿದ್ದು ಈ ಭವದೊಳು ಹೊರಳ್ಯಾಡು ಜನರನ್ನು
ಉದ್ಧಾರ ಮಾಡುತ ಬರುತಲಿದೆ

ಆಕಾಶ ನೋಡುತ್ತ ವಾಯುವ ನುಂಗುತ್ತ
ಝೋಂಕರಿಸುತಲೆದ್ದು ಬರುತಲಿದೆ
ಓಂ ಕೀಲ ಹಿಡಿದ ಚಾಕ ಪೀಠದಿ ಬಂದು
ಆನಂದ ಭರಿತನಾಗಿ ಬರುತಲಿದೆ

ಅಷ್ಟಮದಗಳೆಂಬೊ ದುಷ್ಟ ನೀಚರ ನುಂಗಿ
ಸಿಟ್ಟಿಲ್ಲೇ ಸೀಳ್ಹಾಕಿ ಬರುತಲಿದೆ
ಹುಟ್ಟು ಸಾವುಗಳೆಂಬೊ ಹಾದಿ ಬಟ್ಟೆಯ ಕಟ್ಟಿ
ಸುಟ್ಟು ಕಾಮ ಕ್ರೋಧ ಬರುತಲಿದೆ

ಪ್ರಣವ ಸ್ವರೂಪ ಅನುದಿನ ನೋಡುತ
ಘನಸುಖದಲ್ಲೆದ್ದು ಬರುತಲಿದೆ
ಪ್ರಣಯಿ **ಕಲ್ಮೇಶನೊಳ್** ಮನ ಮಗ್ನವ ಮಾಡಿ
ಚಿನ್ಮಯಾತ್ಮನಾಗಿ ಬರುತಲಿದೆ

❍

# ಕರಿಗೂಳೇಶ್ವರ

## ಬತ್ತಲಿಯಾಗೆಂದ


ಪತ್ರವ ಬರೆದಿದ್ದನು ಸದ್ಗುರುರಾಯ
ಉತ್ತರವ ಬರೆದಿದ್ದನು
ಪತ್ರವ ಬರೆದಿದ್ದ ಇತ್ತ ನೀ ಬಾರೆಂದು
ಎತ್ತ ಹೋದರು ಮನ ಗೊತ್ತಿನೊಳಿರಲೆಂದು

ವಾಸನ ಅಳಿಯೆಂದನು ಸದ್ಗುರುರಾಯ
ಆಸನ ಹಾಕೆಂದನು ಗುರುರಾಯ
ಸೂಸದೆ ದೃಷ್ಟಿಯು ನಾಸಿಕಾಗ್ರದಿ ನಿಲ್ಲಿಸಿ
ಧ್ಯಾಸದಿ ದಶವಿಧ ನಾದವು ಕೇಳೆಂದು

ಆಡುತಲಿರು ಎಂದನು
ಸೋಹಂ ಜಪ ಮಾಡುತಲಿರು ಎಂದನು
ರೂಢಿಯೊಳಗೆ ನೀ ಜೋಡಿಲ್ಲದಿರ ಬೇಡ
ಜೋಡು ನಿನಗ ಬೇಡ ಕೇಡು ಬರುವುದೆಂದು

ಕತ್ತಲ ಕಳಿಯಂದನು
ಸದ್ಗುರುರಾಯ ಬತ್ತಲಿಯಾಗೆಂದನು
ಕತ್ತಲೊಳು ಬೆಳಕಾದ ಬೆಳಕಿನೊಳು । ಬಯಲಾದ
ಬಯಲೊಳು ನಿರ್ಭಯಲಾದ **ಗುರು ಕರಿಘೂಳೀಶ**

❍



## ಎಣ್ಣಿಲ್ಲದ ಜ್ಯೋತಿ

ಚಿತ್ರ ಎಂಥಾದ್ದು ಕಂಡೆ । ರಾತ್ರಿ ಮನಗಂಡೆ
ಉತ್ತರ ಬಾಗಿಲದಿ ಬಂದಿ । ಚಿತ್ರವು ಎಂಥಾದ್ದು ಕಂಡೆ
ಧಾತ್ರಿಯಲ್ಲಿ ತುಂಬ್ಯಾದ ಕಂಡೆ । ನೇತ್ರದ್ವಾರದಲ್ಲಿರುವ
ಸೂತ್ರಧಾರನ ಕೂಡಿದ್ದು ಕಂಡೆ

ಮೇಲು ಮಾಳಿನ ಒಳಗ, ಬಾಲೆಯೊಬ್ಬಳು
ನಲಿನಲಿದಾಡುವುದು ಕಂಡೆ, ಕಾಲ ನಿಲ್ಲದ ಹೆಳವನೊಬ್ಬ
ಮೇಲು ಮಾಲಿನೊಳಗೆ ಪೋಗಿ, ಬಾಲೆಯೊಳು ಕೂಡಿ
ಲೋಲದಿ ಬಾಲನೊಬ್ಬನ ಪಡೆದದ್ದು ಕಂಡೆ

ಕಣ್ಣು ಕುರುಡಾಗದ ಕಂಡೆ, ಆ ಕಣ್ಣಿನೊಳು
ಎಣ್ಣಿಲ್ಲದ ಜ್ಯೋತಿ ಉರಿವುದು ಕಂಡೆ
ಸಣ್ಣ ದ್ವಾರವ ತೆರೆದು ನೋಡಲು, ಬಣ್ಣವೈದು ಕಾಣ್ವದ ಕಂಡೆ
ಬಣ್ಣದೊಳಿರುವ **ಕರಿಘೂಳೀಶಗೆ**
ತನುಮನ ಧನ ಕೊಟ್ಟು ಕೂಡಿಕೊಂಡೆ

❍

## ಗುರುವೇ ಹರನು

ಯಾಕೆ ಸಂಸಾರ ಬಿಡಬೇಕೋ ?
ವೇಷ ಹಾಕಿ ಸನ್ಯಾಸಿಯಾಗುವುದ್ಯಾಕೋ ?
ಆಕಾರ ಉಕಾರ ಮಕಾರ ಸಾಕಾರ
ಓಂಕಾರ ಪ್ರಣಮ ಝೇಂಕಾರವು ತಿಳಿದರೆ

ಗುರುವಿನ ಮರ್ಮವು ಗುರುತು ಅರಿತವನಾಗಿ
ಗುರು ಎರಡಕ್ಷರ ಗುರಿ ಕಲಿಯುವನಾಗಿ
ಗುರುವರ ಸೇವೆಗೆ ಗುಲಾಮನಾಗಿ
ಗುರುವೇ ಹರನೆಂದು ಗುಟ್ಟು ತಿಳಿದರೆ

ಮದಮತ್ಸರಂಗಳು ಮುರಿದವನಾಗಿ
ಮತ ಭೇದಂಗಳು ಮರೆತವನಾಗಿ
ಮಂತ್ರವಿದ್ಯೆಗೆ ಮರಗದವನಾಗಿ
ಮಾಯದ ಸೃಷ್ಟಿಯ ಮೂಲವು ತಿಳಿದರೆ

ರಾಗ ದ್ವೇಷವು ನಿರಂಜನನಾಗಿ
ರಾಜಯೋಗದೊಳು ರಂಜಿಪನಾಗಿ
ರವಿ ಶಶಿ ರಚನೆ ನಿರಾಜಿಪನಾಗಿ
ರಾಮತಾರಕ ಬ್ರಹ್ಮರಮ್ಯದಿ ತಿಳಿದರೆ

ಹಂಸೋಹಂಗಳ ಹಸಿಯು ತಾನಾಗಿ ?
ಹಂಸವಾಹನ ರೂಢನಾಗಿ ತಾ
ಹರಿಹರ ಬ್ರಹ್ಮರ ಹಾದಿಯ ತಿಳಿದರೆ

ಉರಗ ಶಿರೋಮಣಿ ಗುರುತರನಾಗಿ
ಉರಿವ ಉನ್ಮನಿಗುಪಾಸಕನಾಗಿ
ಪೂರ್ವ ಪಶ್ಚಿಮಕ್ಕೆ ಸೇರಿದನಾಗಿ
ವರ **ಕರಿಘೂಳಿಯ** ಪರಿಪೂರ್ಣವ ತಿಳಿದರೆ

❍

## ಸಿರಗಾಪೂರ ಬಂಡೆಪ್ಪ

### ನೀಲಿ ತೇರಿಗೆ ಹಗ್ಗ ಬಿಗಿಸಿ

ತೇರು ಸಾಗಿತಮ್ಮ ನೋಡಿರೆ । ತೇರಿನ ಬಿಂಬವ
ಊರು ಸಾಗಿತಮ್ಮ ಪಾಡಿರೆ
ತೇರು ಸಾಗಿತು ತೆಂಕಣಕ್ಕ
ಊರು ಸಾಗಿತು ಕೊಂಕಣಕ್ಕ
ಬಡವಲ ದಿಕ್ಕಿನ ತೇರಿಗಿ ಪಡವಲಕ ಬಳಸ್ಯಾರಮ್ಮ

ಉದರದ್ಭುದ ಉದಿಪ ತೇರಮ್ಮ
ಉಡುರಾಜ ಒಡಿಯನ ಸಡಗರ ಹೇಳಲು ಸಾಧ್ಯವಿಲ್ಲಮ್ಮ
ಹಲವು ಜನರೊಳು ಗೆಲುವು ಎನಿಸಿ
ನೀಲಿಯ ತೇರಿಗೆ ಹಗ್ಗ ಬಿಗಿಸಿ
ಹರಹರ ಎಂದು ಹರಕೆ ಹಾರೈಸಿ
ಹಾದಿ ಬೀದಿಗಿ ಮೆರಸಿ ತೇರ

ಅಂಗತೇರಿಗೆ ಲಿಂಗದಾಕಾರ । ನಡುರಂಗ ಬಾಜಾರ
ಸಂಗ ಸರ್ವರ ಕೊಂಗದ್ವ್ಯಾಪಾರ
ದೇಶದೊಳು ಸಿರಗಾಪೂರ ಊರ
ಈಶ ವಿರೇಶ್ವರ ದೇವರ
ದಾಸನನ್ನು ಮಾಡೊ ಉದ್ಧಾರ ಉಡುರಾಜ ಧೀರ

❍

## ಹತ್ತು ದಿಕ್ಕಿನೊಳಗೆ ಹುಡುಕಣ್ಣಾ

ಹೊಂದಿಕಿಲಿಂದ ಹೊಲವನು ಮಾಡಣ್ಣ
ಹೊಲದಭಿಮಾನಿಟ್ಟು ಹೊಲಬನರಿತು ಹೊಲದೊಳು ದುಡಿಯಣ್ಣ
ಕಾಕು ಗುಣಗಳೆಂಬೊ ಕಾಗಿ ಹಿಂಡ ಬರತಾವಣ್ಣ
ಆರು ಹಾದಿಯ ಹೊಲ, ಮೂರು ಬೀದಿಯ ಹೊಲ

ಆರು ಮೂರುವ ನೀ ಮುಗಿಸಣ್ಣ
ಮೂರಕ್ಷರದ ಮೂಲಮಂತ್ರವ ನೀ ಬಲಿಸಣ್ಣ
ಮೂರು ಎಂಬೋ ಹೊಲದೊಳು ಆರು ಎಂಬೊ
ಕುಂಟೆಗಳ ಹೊಡಿಯಣ್ಣಾ
ಹದನುಗೊಳಿಸಿದ ಮ್ಯಾಲ, ಹೃದಯ ಶಿಖರದೊಳು ಕುಳಿತು
ಶೀಘ್ರದಿಂದ ಶಿವನೊಳು ಬೆರಿಯಣ್ಣ

ಅಷ್ಟವರ್ಣದ ಹೊಲದೊಳು, ನಿಷ್ಟಿಲಿಂದ ಕೂರಿಗಿನಿಟ್ಟು
ರಜ ತಮವೆಂಬೋ ಎತ್ತುಗಳ ಹೂಡಣ್ಣ
ಮಂಡಿ ಚಡ್ಡಿ ಕೋಲೆಂಬೊ ತ್ರಿಕೂಟದಲ್ಲಿ ಲಿಂಗದ ಪೀಠಣ್ಣ
ಮುಕ್ಕಣ್ಣ ಶಿವನೊಳು ಮುಕ್ತಿ ಪದವಿ ಬೀಜನೆ ಬೇಡಣ್ಣ
ಹತ್ತು ಬೀಜವ ನೀ ಬಿತ್ತು ಮುತ್ತು ರಾಶಿಯ ಮಾಡೊ
ಹನ್ನೊಂದಕ ಹರಕಿಯ ಮಾಡಣ್ಣ

ಹದಿನಾರೆಂಬೊ ಹಾಳಿನೊಳಗ ಬೀಳಲುಬೇಕಣ್ಣ
ಹತ್ತು ಹನ್ನೊಂದರ ಮ್ಯಾಲ ಮತ್ಯಾವ ರಾಶಿಗಳುಂಟು
ಹತ್ತು ದಿಕ್ಕಿನೊಳಗೆ ಹುಡುಕಣ್ಣಾ
ಹದಿನಾರೆಂಬೊ ಹಾಳಿನೊಳಗ ಬೀಳಲುಬೇಡಣ್ಣ
ದೇಶದೊಳಗ ನಮ್ಮ ವಾಸ ಸಿರಗಾಪೂರ ಗ್ರಾಮ
**ಈಶ** ವೀರೇಶನ ಭಜಿಸಣ್ಣ

❍

## ಇಹಪರವೆಂಬ ಖೂನ ತಿಳಿಯಣ್ಣ

ಎಚ್ಚರದಿಂದ ಯಾಪಾರ ಮಾಡಣ್ಣ
ಯಾಪಾರದೊಳು ಇಹಪರ ಎಂಬ ಖೂನ ನೀ ಹೇಳಣ್ಣ
ಯಾಪಾರವು ಮಾಡೆಮಾಡೊ
ಇಹಪರದೊಳು ಧೃಡವಿಟ್ಟು ನೋಡೋ
ಎಚ್ಚರದಿಂದ ಯಾಪಾರ ಮಾಡಣ್ಣ

ಲಾಭಾದರ ನಗದಿರೊ । ಲುಕ್ಸಾನಾದರೆ ನುಗ್ಗದಿರೊ
ತತ್ಸಮವೆಂಬ ತಕ್ಕಡಿ ಪಿಡಿಯಣ್ಣ
ಅಷ್ಟಮದ ಎಂಬೊ ಕಲ್ಲುತಕ್ಕಡಿಗೆ ಹಚ್ಚಿ । ತಾರಿಪ ನೋಡಣ್ಣ
ಮರುವೆಂಬೊ ಮಣಗಲ್ಲಿಗಿ । ಆರು ಎಂಬೊ ಅನಾಜ ಹಾಕಿ
ಜ್ಞಾಕಿಲಿಂದ ಜೋಕಾಲಿ ಹೊಡಿಯಣ್ಣ
ಯಾಪಾರದೊಳು ಇಹಪರವೆಂಬ ಖೂನ ತಿಳಿಯಣ್ಣ

ನಾಜುಕಲಿಂದ ಮಾಡಪ ಸಂತಿ
ನಾಸಿಕ ಕೊನಿಯೊಳು ಇಡು ಚಿಂತಿ
ತ್ರಿಕೂಟ ತಣಿಸಿ ಪಿಡಿಯಣ್ಣ । ಈ ತಕ್ಕಡಿಯೊಳು
ಧರ್ಮವೆಂಬೊ ಧಾನ್ಯವ ತೂಗಣ್ಣ
ಸುಳ್ಳೆಂಬುವದರಿತು ಸತ್ಯಕ ನೀ ಸಾಯಲು ಬೇಕಣ್ಣ
ಖರೆಯೆಂಬುದು ಬೂದ್ಯಾನ ಬೆಂಕಿ
ಎಚ್ಚರಲಿಂದ ಯಾಪಾರ ಮಾಡಣ್ಣ

ತಕ್ಕಡಿ ಎಂಬೊದೊಂದು ಹಾದಿ
ತತ್ಕಾಲ ತಿಳಕೊ ಗುರು ಬೋಧಿ
ಗುರುವಿನ ಹೊರತು ಗತಿ ನಿನಗಿಲ್ಲಣ್ಣಾ
ನಾನೋರರ್ವಧಿಕೆಂದು ಜಗದೊಳಗ ಜಾತುರಿ ಮಾಡಣ್ಣ
ದೇಶದೊಳಗ ನಮ್ಮ ವಾಸ ಸಿರಗಾಪೂರ ಗ್ರಾಮ
**ಈಶ ವೀರೇಶನ** ಭಜಿಸಣ್ಣ

❍

# ಹೇರೂರು ವಿರುಪನ ಗೌಡ

## ಬಡಮನವಾಗದೆ

ದೇಹದ ಮರ್ಮವ ತಿಳಿಯಬೇಕಾದರೆ
ಮಹದೇವನರಿವಿರಬೇಕು
ಗಾದೆ ಶಾಸ್ತ್ರವೋದಿ ವಾದಿ ಮಾಡುವವಗೆ
ಹಾದಿ ಇನ್ನೆಲ್ಲಿ ದೊರಿಬೇಕು ?

ಪಂಚಮುಖದ ಶಿವ ಅಂಚಿಲಿ ಇರುವಾ
ಚಿಂತಿಯಿಂದ ಯಾಕಿರಬೇಕು ?
ಪ್ರಪಂಚವ ಹಿಡಿದು ಕಂಚಿಪುರಕ್ಹೋಗಿ
ಪಂಚಾಮೃತವನುಣಬೇಕು

ಅಂದು ಇಂದು ಒಂದು ಸಂದೇಹವ್ಯಾತಕೆ ?
ಬಂದ ದಾರಿ ನೋಡಲಿ ಬೇಕು
ಚಂದುಳ್ಳ ಮೂರುತಿ ತಂದೆಯೊಳೊಡನಾಡಿ
ಕುಂದಿಲ್ಲದ ಔತಣ ಉಣಬೇಕು

ಪೊಡವಿಯೊಳ್ಳಟ್ಟು ಮೃಢಸಿದ್ಧೇಶನ
ಎಡಬಿಡದಾಂಗೆ ಇರಬೇಕು
ನಡೆನುಡಿ ಕೇಳದೆ ಬಡಮನವಾಗದೆ
ಮೃಡನ ಪಾದದಡಿಲಿರಬೇಕು

❍

## ಜಂಗಮನೊಳು ಜಗವೆಲ್ಲವ್ವ

ಜಂಗಮನಿಲ್ಲ ಜಗದೊಳಗವ್ವ
ಜಂಗಮನೊಳು ಜಗವೆಲ್ಲವ್ವ
ತಂಗಿ ಕೇಳೆ ಶಿವಗೆರಗವ್ವ
ಮಂಗಳ ಮೂರುತಿ ಲಿಂಗವ್ವ

ಆಕಾರ ಮಾಡಿಕೊಂಡು ಬಂದೆವ್ವ
ನಿರಾಕಾರ ನೋಡಿಕೊಂಡು ಕುಂತೆವ್ವ
ಕಾಡ್ಯಾಡಿ ಮನದೊಳು ನಿಂತೆವ್ವ
ಅದು ಏಕಮುಖವಾಯ್ತು ಶಾಂತವ್ವ

ಬಿಂದುವೆ ಬ್ರಹ್ಮವಾಯಿತವ್ವ
ಅದರೊಳು ಕಂದನ ಆಯಿತವ್ವ
ಚಂದುಳ್ಳ ಮನಿಗೆ ಹೋಯಿತವ್ವ
ಅಲ್ಲಿ ಛಂದಛಂದ ಧ್ವನಿ ಮಾಡಿತವ್ವ

ಆರು ಬಾಗಿ ತಾನಾಯಿತವ್ವ
ಆರಾರಲಿ ಆಡುತಲಿತ್ತವ್ವ
ಆರು ಮ್ಯಾಲಕ ಎತ್ತವ್ವ
ಅದು ಯಾರಿಗೆ ಸಿಗದಾಂಗೊಯ್ದಿತವ್ವ

ಶೂನ್ಯಸ್ಥಲ ಜಂಗಮನವ್ವ
ಸ್ಥಾನಕೆ ಬಂದನೆ ನೋಡವ್ವ
ಕಾನನದೊಳು ನಿಂತಾನವ್ವ
ಸ್ವಾನುಭಾವದಿ ಇಹನವ್ವ

ಧರೆಯೊಳು ಷಟ್ಪುರಗಳವ್ವ
ಅರವಿನೊಳರುವಿಡೆ ಬುಡ್ಡವ್ವ
ಪರಿಪರಿಯಲಾಡವ್ವ
ಪರಮ ಪುರುಷಗೆ ಕೈವಡ್ಡವ್ವ

❍

# ಹಾರಕೂಡ ಚನ್ನಬಸವ ಶಿವಯೋಗಿ

## ತಿಳಿದರೆ ನೀ ಉಳಕೊ

ತಿಳಕೊ ತಿಳಕೊ ತಿಳಕೊ ತಿಳಿದರೆ ನೀ ಉಳಕೊ

ಕೆಟ್ಟ ಕಲಿ ಕರ್ಮದ ಖಲಿ ತೊಳಕೊ
ಅಷ್ಟಮದ ಎಂಬ ಬಾಧೆಯೊಳುಳಕೊ
ನಷ್ಟಾಗ್ತದ ಈ ಅಟ್ಟದ ಗಡಿಗಿ ಪುನಾ
ಸುಟ್ಟು ನೀ ಶುದ್ಧಾಗಿ ನೀ ತೊಳಕೊ

ಮರು ಎಂಬು ಬಾಜಾರಾಕ ನೀ ಹೋಗೊ
ಆರಸೇರ ಅಕ್ಕಿ ಮಾಪಿಲೆ ಅಳಕೊ
ಗುರುಮುಖ ಎಂಬೊ ಪ್ರಸಾದ ಅನ್ನವುಂಡು
ಪರೋಪಕಾರ ಎಂಬ ಗಂಗಾಳ ತೊಳಕೊ

ಹೊರಗೆ ನೀರು ಹಾಕಿದರೆ ಏನಾಯ್ತು
ಒಳಗದ ಮಾಸಿದ ಮಲಿನ ಹುಳುಕು
ಹೊಲಸ ಹೊಲಿಯ ಹೋಗಬೇಕಾದ್ರೆ
ಶುಚಿರ್ಭೂತ ಎಂಬ ಸಾಬಣ ಹಚ್ಚಿ ತೊಳಕೊ

ಭಕ್ತಿ ಎಂಬ ಭಜನೀಯ ಮಾಡಿ
ಮುಕ್ತಿ ಸ್ಥಲ ಕಲಕೊ ಕಲಕೊ
ತಿರುಗಿ ಮುರುಗಿ ಯಾಕ ಬರ್ತೀ ಭವದೊಳು
ತಿಳಿಮಾಡಿ ಸೋಮಾರದಿನಾ ಅರೆ ತಿಳಕೊ

ಆರು ಮೂರು ಇದರರ್ಥವ ತಿಳಕೊ
ಸುಷುಪ್ತಿ ಕನಸಿನ ಗುರುವಿನ ಬೆಳಕೊ
ಆಕೃತಿಲಿಂದ ಹಾರ್ಕೂಡ ಮುತ್ತ್ಯಾ ಹೇಳ್ತಾರ
ತಕ್ರ್ಯಾಕ ಶುಕ್ರಾರದಿನಾ ಅರೆ ತಿಳಕೊ

❍

## ಹೊಲ ಹಸನ ಮಾಡಿದ

ಹೊಲ ಒಂದು ಮಾಡಿನಿ ಸರಿಬಟ್ಟೆ ಪಾಲೀಲಿ
ಹೊಲ ಒಂದು ಮಾಡಿನಿ ಕಾಲೀಲಿ

ಮುದ್ದತ ಪ್ರಕಾರ ಕಾಲ ಬರಸಿದ
ಗೌಡ ಕುಲಕರ್ಣಿ ಅವರಕಡಿಂದ
ಅದರಲ್ಲಿ ಪಂಚರದು ಸಾಕ್ಷಿ ಹಾಕಿದ
ಪಂಚಾಕ್ತೆ ಆಗಬಾರದೆಂದು ಮುಂಚೆ ಹೇಳಿದ

ಸಿಟ್ಟು ಶಾಂತಿ ಎರಡು ಎತ್ತು ಮಾಡಿದ
ಜ್ಞಾನ ಎಂಬೊ ಹಣೆಗೆ ಹಗ್ಗ ಹಚ್ಚಿದ
ಭಕ್ತಿ ಭಾವ ಬಾರಗೋಲ ಪಿಡಿದ
ಮುಕ್ತಿಲಿಂದೆ ನಾ ಕುಂಟಿ ಹೊಡೆದ

ಕರ್ಮವೆಂಬುವ ಕರಕಿಯ ಕಳೆದ
ಧರ್ಮವೆಂಬುವ ಪಲಗದಲಿಂದ
ಗರ್ವ ಅಹಂಕಾರಿ ಎರಡು ಈಸವ ಹಾಕಿದ
ನಾಮ ಇಲ್ಲದ ಒಂದು ನೊಗಕಟ್ಟಿದ

ನೇಮ ಇಲ್ಲದೆ ನೇಗಿಲ ಹೂಡಿದ
ಕಲ್ಪನ ಕಾಸಿಗೆ ತೆಗೆದು ಹಾಕಿದ
ಜಾತಿ ಭೇದ ಇಲ್ಲದ ಜತ್ತಿಗೆ ಕಟ್ಟಿದ
ನೀತಿ ಮಾರ್ಗಲಿಂದೇ ನೇಗಿಲ ಸಾಗ್ಯಾದ

ಆಸೀ ಇಲ್ಲದೇ ನಿರಾಸಿ ಹೇರಿದ
ಹಾರಕೂಡ ಈಶನ ಹೊಲಕ್ಕೆ ಹೋಗಿದ
ವ್ಯಸನವಿಲ್ಲದೆ ಹೊಲ ಹಸನ ಮಾಡಿದ
ಈಗ ಚನ್ನಬಸವನ ದಯದಿಂದ

❍

# ಗೊಬ್ಬೂರು ಹಂಪಂಣ

## ಪರಕೆ ಪರನಾಗು

ನಂಬಬ್ಯಾಡಲೊ ನೀನು ನಂಬದಿರು ದೇಹವನು
ನಂಬಿದರೆ ಹುರುಳಿಲ್ಲದೆಲೆ ಮರುಳು ಮನುಜ

ಎಲುಚರ್ಮ ನರಮಾಂಸ ಮಲಮೂತ್ರಯುಕ್ತಾದ
ಹೊಲೆ ದೇಹವನು ನೆಚ್ಚಿ ಹೊತ್ತುಗಳೆಯದಲೇ
ಬಲು ಶೀಲ ವ್ರತ ನೇಮ ಕುಲಮದದಿ ಸಿಲ್ಕಿದೆ
ಮಲಹರನ ಚರಣ ಸ್ಮರಣೆಯ ಮಾಡು ಮನುಜ

ಕಣ್ಣಿನೊಳಗಿನ ಕಳೆಯು ಸಣ್ಣದೆಂದೆನಬೇಡ
ಬಣ್ಣಿಸಿ ಕಾಂಬುವುದು ಮೂಜಗವನು
ರನ್ನ ರವಿ ಶಶಿಕೋಟಿ ಉನ್ನತದಿ ಪ್ರಜ್ವಲಿಸಿ
ನಿನ್ನೊಳಗಿರುತಿಹುದು ನಿನ್ನ ನೀ ತಿಳಿಯೋ

ಧರೆಯೊಳು ಮೆರೆವ ಮಣಿಪುರ ವನದೊಳಗಿರುವ
ಗುರುರಾಯನಾದ ಘನ ವೃಷಭೇಂದ್ರನ
ಚರಣ ಕಮಲವ ನೀನು ನಿರುತದಿಂದಲಿ ಸ್ಮರಿಸಿ
ಪರಮುಕ್ತಿಯನು ಪಡೆದು ಪರಕೆ ಪರನಾಗು

❍

# ಕೆಸ್ತೂರ ದೇವರು

## ಮೇಲು ಶಿಖರವ ಹತ್ತಿ

ಸುಳ್ಳಲ್ಲ ಈ ಮಾತು ಶೂಲಧರನಾಣೆ
ಒಂದೆಳ್ಳು ಗಿಡದಡಿ ಏಳ್ನೂರೊಂದು ಎತ್ತು

ಒಂದೆಳ್ಳು ಒಡೆಯಲು ಒಂಬತ್ತು ಪಾವೆಣ್ಣೆ
ಅದನ್ನು ತಂದೆಳೆಯಲು ಮೂರು ಮಣವಾಯ್ತು
ತಂದು ತುಂಬಿರಲು ಆರು ಬುರುಡೆ ವರ ಚೆಲ್ಲಿದವು
ತಂದಾತ ಬಳಸಲು ನೂರೊಂದು ಮಣವಾಯ್ತು

ಎರಡು ತಿಂಗಳ ಹೆಣ್ಣಿಗೊಂದುದಿವಸದ ಗಂಡು
ಋತುವಾದಳೈದು ತಿಂಗಳು ಬಲಿಯಲು
ಬರೆ ಯೆರೆಯಾದಳೆಮ್ಮ ಸಂದು ಸಂದುಗಳೊಳಗೆ
ಮರಿ ಹುಟ್ಟಿತಯ್ಯ ನವಮಾಸ ಬಲಿದುದು

ಕರ ನಾಲ್ಕು ಕಿವಿ ಆರು ಕಣ್ಣಾರು ಮೂಗೆರಡು
ಬಾಯಾರು ಬಹುವಿಧದ ದೇಹವದಕೆ
ಮೂರು ಬೀದಿಯನಳಿದು ಮುವತ್ತಾರನೆ ಅರಿದು
ಮೇಲು ಶಿಖರವ ಹತ್ತಿ **ಗುರು ಸಿದ್ಧಲಿಂಗ**ವಾಯ್ತು

❍

# ಘನಮಠದ ನಾಗಭೂಷಣ ಶಿವಯೋಗಿ

## ನೀನೇನಾದಿ ?

ಏನಾದಿ ಮನುಜ ? ಏನಾದಿ ಶಿವ ?
ಜ್ಞಾನವರಿಯದೆ ನೀನೇನಾದಿ ?

ಕಾಶಿ ಹಂಪೆ ಕೇದಾರ ಪರ್ವತ ನಿವಾಸಿಯೆನಿಸಿ ನೀನೇನಾದಿ ?
ಆಶೆಪಾಶದೊಳು ಸಿಲ್ಕಿ ಪೊರೆಗೆ ಸನ್ಯಾಸಿಯಾಗಿ ನೀನೇನಾದಿ ?

ವೇದವೇದಾಂತ ಶಾಸ್ತ್ರಾಗಮ ತರ್ಕವನೋದಿ ಬಳಲಿ ನೀನೇನಾದಿ ?
ಮೇದಿನಿಯೊಳು ಬರೆಬೋಧವಡೆದು ದಶನಾದವನಾಲಿಸಿ ನೀನೇನಾದಿ ?

ಚಪಲತನದಿ ಬಹು ಜಪನೆಣಿಸಿ ಘೋರ ತಪವ ಮಾಡಿ ನೀನೇನಾದಿ ?
ಕಪಟ ಲಾಂಛನವನು ತಾಳುತೆ ಮರ್ತ್ಯದೊಳು ನಿಪುಣನೆನಸಿ ನೀನೇನಾದಿ ?

ಸ್ನಾನ ಮೌನ ಪ್ರೇಮ ಧ್ಯಾನ ಕ್ರಿಯಾದನುಷ್ಠಾನ ಮಾಡಿ ನೀನೇನಾದಿ ?
ಪ್ರಾಣಪಾನಗಳು ಮಾಣದೆ ಬಂಧಿಸಿ ಮೌನವಿರ್ದು ನೀನೇನಾದಿ ?

ಸೃಷ್ಟಿಯೊಳಷ್ಟವಿಧಾರ್ಚನೆ ಕ್ರಿಯೆಗಳ ಮುಟ್ಟಿ ಮಾಡಿ ನೀನೇನಾದಿ ?
ಶ್ರೇಷ್ಠ ಶ್ರೀ **ಘನಮಠವಾಸನ**ನರಿಯದೆ ಕಷ್ಟಬಟ್ಟು ನೀನೇನಾದಿ ?

❍

# ಚಲವಾದಿ ಚಂದಪ್ಪ

## ನಿಜವೆ ನಿರ್ಗುಣ

ಮಾಡಿದೆ ಹೊಲ ಮಾಡಿದೆ
ಮಾಡಿದೆ ಹೊಲ ಮಾಡಿದೆ
ಹೊಲಸ ಹೊರಗ ದೂಡಿದೆ
ಮಾಡಿದೆ ಹೊಲ ಮಾಡಿದೆ

ನೆಲವಿಲ್ದ ಹೊಲ ನಾ ಮಾಡಿದೆ
ಬೀಜವಿಲ್ದ ಬರಿ ಬಿತ್ತ್ಯಾಡಿದೆ
ಜಲವಿಲ್ದ ಬೆಳೆ ಬೆಳದಾಡಿದೆ
ಫಲವಿಲ್ದ ಒಕ್ಕಲಾಡಿದೆ

ಗಾಳಿ ಇಲ್ದ ತೂರಿದೆ
ರಾಶಿ ಇಲ್ದ ಹೇರಿದೆ
ಹಸನಾಗಿ ಬೆಳೆ ಹದಾ ನಾ ಮಾಡಿದೆ
ನಿಜವೆ ನಿರ್ಗುಣದೊಳು ಸೇರಿದೆ
ನಿರಭಿಮಾನಿಯಾಗಿ ನೋಡಿದೆ

ಕರ್ತೃ ಕಾಯಕ ಮಾಡಿದೆ
ವರ ವಿವೇಕ ನೋಡಿದೆ
ವಿರತ ವಿಶ್ವದೊಳಾಡಿದೆ
ಬಯಕೆ ತೃಪ್ತಿ ಬೇಡಿದೆ
ಆನಂದದಾಟ ಆಡಿದೆ
ಶಿಶುನಾಳ ಶರೀಫಾಗಿ ಹಾಡಿದೆ
ಆತ್ಮಾನಾತ್ಮ ಅನುಭವ ಕೂಡಿದೆ

❍

## ಏಳು ಸಮುದ್ರಕಿಂತ ಹೊರಗ !

ಒಂದಿನಾ ಆಶ್ಚರ್ಯವಾಯಿತೊ ಎನಗ
ನಾ ಹೊಲಕ ಮನಿಗೆ ಹೋಗಿಬರುವ ದಾರ್‍ಯಾಗ
ಪಕ್ಷಿ ಒಂದು ಹಾರಿಹೋಗುತಿತ್ತೊ ಮ್ಯಾಗ
ಅದರ ವರ್ಣಾನೋಡಿ ಹೇಳತೇನಿ ನಿಮಗ

ಪಕ್ಕಾರೆಕ್ಕಿ ಇದ್ದಿಲ್ಲ ಹಕ್ಕಿಮೈಮ್ಯಾಗ
ಬೆಂಕಿಕೆಂಡದಂತೆ ಚೊಕ್ಕ ಕಾಣಿಸುತಿತ್ತೊ ಮ್ಯಾಗ
ಸಣ್ಣದಲ್ಲೊ ಶರಣಾ ಪಕ್ಷಿ ಜಗದಾಗ
ಬೆಂಕಿ ತಿಂದು ಬೆಂಕಿ ಕಾರುತಿತ್ತೋ ಒಳಗ ಹೊರಗ

ಎಂಬತ್ತನಾಲ್ಕು ಲಕ್ಷ ಜೀವರಾಶಿಯೊಳಗ
ಪಕ್ಷಿ ಬಾಳ ಶ್ರೇಷ್ಠ ಅಂತಾರ ಹತ್ತು ದಿಕ್ಕಿನೊಳಗ
ಗುರ್ತು ಇದ್ದರ ಗುಪ್ತ ಕೇಳತೇನಿ ನಿಮಗ
ಗುರುಪುತ್ರಗ ತೋರುತದ ಗುರುಮಾರ್ಗ

ಉದ್ದ ಅಗಲ ಆಕಾಶದಕಿಂತಲೂ ಮ್ಯಾಗ
ಅಗಲಿಗೆ ಏಳುಸಮುದ್ರಕಿಂತ ಎಷ್ಟೊ ಹೊರಗ
ಲಕ್ಷಗೊಟ್ಟು ಪಕ್ಷಿ ಹೆಸರ ಹೇಳೊ ನನಗ
ಶಿಶುನಾಳ ಶರೀಫರು ಸದ್ಯಕ್ಕ ಹಸ್ತಾ ಇಡತಾರೊ ನಿನಗ

❍

## ಮರಕುಂದಿಯ ಬಸವಣ್ಣಪ್ಪ

### ಕಣ್ಣಬೆಳಕಿನೊಳು ಇಹಪರವು

ಚಿಂದಿ ಭಿಕ್ಷುಕ ಬಂದೆವಮ್ಮಾ
ಎಣ್ಣೆ ತಂದು ದಿವಟಗಿ ಸುತ್ತಿ ಸುಡುವೆನು ಹಮ್ಮ
ಹಿಂದಿನ ದುಷ್ಟ ಕರ್ಮಗಳಮ್ಮ
ಹುಟ್ಟಿದು ಅಂದಿಂದು ಮಾಡಿದು ತಂದು ನೀಡಮ್ಮಾ

ಕೆಟ್ಟ ಕರ್ಮದ ಮಾಯಾ ಮರವಿ
ಮ್ಯಾಗಿನ ಉಟ್ಟುಟ್ಟು ಬಿಟ್ಟಂಥ ಅಜ್ಞಾನ ಅರವಿ
ಖೊಟ್ಟಿ ಗುಣಗಳೆಲ್ಲ ನೆರವಿ
ಮನ ಘಟ್ಟಿಮಾಡಿಕೊಡಿರಿ ಕೀರ್ತಿಗೆ ಬರಲಿ

ಆಶೆಯೆಂಬೊ ಗಂಟು ಬಿಡರಿ
ಮನ ಸೋಸಿ ಮಾಸಿದ ಅರವಿ ಹುಡಕಿ
ದಾಸಿ ಭಾವದ ಭಕ್ತಿ ತೊಡಿರಿ
ಪರದೇಶಿ ಬಸವಗ ಮೂರು ಒಪ್ಪಿಸಿಕೊಡಿರಿ

ಬೆಳಗು ಮೂಡಲಿ ಬಂದ ಗುರುವು
ನಿಮ್ಮ ಒಳಗಿನ ಕತ್ತಲು ಇಂದಿಗೆ ಹರವು
ತಿಳಿವಿಕೆ ಸಿದ್ಧನ ಎಚ್ಚರವು
ನಿಮ್ಮ ಕಣ್ಣಬೆಳಕಿನೊಳೆಲ್ಲ ಇಹಪರವು

❍

# ನೀರಲಕೇರಿ ಬಸವಲಿಂಗ ಶಿವಯೋಗಿ

## ಇನ್ನೇನಿನ್ನೇನು ?

ಮನವೆಂಬ ಕೋಣವಿದು ಮನೆಹೊಂದಿ ನಿಲ್ಲದು ಇನ್ನೇನಿನ್ನೇನು ?
ಬಿನುಗು ವಿಷಯಹತ್ತಿ ಬೆದಿಬಂದುವೋಡಿತು ಇನ್ನೇನಿನ್ನೇನು ?

ಕರಣೇಂದ್ರಿಯಗಳೆಂಬ ಕೈಹುರಿಯ ಹೊಸದಿಟ್ಟೆ ಇನ್ನೇನಿನ್ನೇನು ?
ವರಣಾತೀತವೆಂಬ ಹುರಿಯ ಮೂಗುದಾಣೆಯಿಟ್ಟೆ ಇನ್ನೇನಿನ್ನೇನು ?

ವ್ಯಸನಗಳೇಳೆಂಬ ಹಸುರ್ಹೊಲ ಹೊಕ್ಕೀತು ಇನ್ನೇನಿನ್ನೇನು ?
ತೃಷೆಯೆಂಬ ಬಿಸವೇರಿಲೆದ್ದು ಬಿದ್ದೀತು ಇನ್ನೇನಿನ್ನೇನು ?

ಎಂಟಾರು ಕೋಣೆಯೊಳ್ ತುಂಟಾಟ ಕಲಿತೀತು ಇನ್ನೇನಿನ್ನೇನು ?
ನಮ್ಮ ಬಂಟ ನೀರಲಕೇರಿ ಗುರುಮಂದಿರಕೆ ಕೊಟ್ಟೀತು ಇನ್ನೇನಿನ್ನೇನು ?

## ಅಗಣಿತ ರೂಪ

ಬಗಿ ಬಗಿ ಬಣ್ಣದ ಗಗನ ಮಾಲಿನೊಳು
ನಗಿಮುಖ ಚಲುವಿಕೆ ಜಗದೊಳಗಿಲ್ಲದ
ಅಗಣಿತ ರೂಪನ ನೋಡುನ ಬಾ ತಂಗಿ
ಸೊಗಸಿನ ಮುಂಡಾಸ ಸುತ್ತಲು ಜರತರ ತೊಟ್ಟನೆ ನಿಲುವಂಗಿ

ಕೋಟಿ ಚಂದ್ರಕಳೆ ಸಾಟಿಸದಾತಗೆ
ತಾಟಿನಸುರತ ನೀಟಗಾರನವ
ನಾಟಕಂಡು ಮನನೋಟಿಸಿತಾಕ್ಷಣ
ಬೂಟಕವಲ್ಲಿದು ಭುವನದೊಳಗೆ ಕಾಣೆ
ನೋಟಕೊಪ್ಪಿದ ಬಾ ಜಾಣೆ

ಆರು ವರ್ಷ ಮೂರುಸುತ್ತಿನ ಕೋಟೇಳು
ಬಾರಿ ನೀಲಗುದರೇರಿ ಕುಣಿಸುತಲಿ

ಸಾರಿ ಹೊರಟ ವೈಯ್ಯಾರದವನೆ ಚದುರಾ
ಧೀರ ಮಾರ ಸುಂದರ

ಸಾರಿ ಹೊರಟ ಸರದಾರ ಸುಖದ ಸವಿಗಾರ ರೂಪ ಬಂಗಾರ
ಹೊದ್ದ ಜರತಾರವುಟ್ಟಿದ್ದ ಮಂಜೂರ ಮೈಯಮೇಲೆ
ತಳತಳಿಸುವ ಜ್ವಾಲೆ ನೀರಲಕೇರಿ ಗಡಿಸೇರಿ
ರಾಜಿಸುವ ಧೀರಮಾರ ಸಂಸಾರ ಪಂಚಾಕ್ಷರ
ಶೂರಗೆ ಮನಸೋತೆ ನಾರೀ, ಹರಿದೆ ಭವದ ಭೀತಿ

❍

## ಅಂತರಂಗದ ಪೇಟೆ

ಗುರುವಿನ ನೆನೆದರೆ ಮರೆಯದೆ ಮನದೊಳು
ಅರುವಿನಾಲಯದ ಮಂಟಪದಿ
ಅರುವಿನಾಲಯವೆಂಬ ಮಂಟಪದ ಮನಿಯಲ್ಲಿ
ಪರಶಿವನ ಕಂಡು ಬದುಕಿದೆ

ಧರಣಿ ರಕ್ಷಣೆಗಾಗಿ ನರನ ರೂಪದಿ ಬಂದು
ಕರುಣೆ ತಾನೆಂದು ಕರೆಯುತ
ಕರುಣೆ ತಾನೆಂದು ಬಿರಿದು ಕಟ್ಟುತ ಬಂದ
ಧರಣಿಗುಪಕಾರಿ ಗುರುರಾಯ

ಗುರುವಿನ ಗುಪ್ತದಲಿರುವ ಶರೀರಕ್ಕೆ
ಮರಳುಟ್ಟ ಬಾಧೆ ಮುನ್ನಿಲ್ಲ
ಮರಳುಟ್ಟ ಬಾಧೆಯು ಮುನ್ನಿಲ್ಲ ಯಮರಾಯ
ಮರೆದೊಮ್ಮೆ ಮುಟ್ಟಲರಿಯನೇ

ಒಡಲ ಸಾಕ್ಷಿಕನಾದ ಒಡೆಯನ ತೋರಿದ
ಜಡದೇಹದಾಸೆ ಯೆನಗಿಲ್ಲಾ
ಜಡದೇಹದಾಸೆ ಯೆನಗಿಲ್ಲ ಗುರುಪಾದ
ಬಿಡದ್ಹೊಂದಿ ಸುಖವ ಪಡಕೊಂಡೆ

ಅಂತರಂಗದ ಪೇಟೆ-ಸಂತಿಗ್ಹೋದೆನು ತಂಗಿ
ಚಿಂತಿಸದೆ ಕೊಂಡೆ ರತುನವ
ರತುನದ ಬೆಳಕಿನಲಿ
ಕಾಂತೆ ಕೇಳವ್ವ ಕೌತುಕವ

ಕಂಗಳೂರನ ಕಂಡೆ ಮಂಗಳಾತ್ಮನ ಕಂಡೆ
ಗಂಗೆಯ ಕಂಡು ಗವಿಹೊಕ್ಕೆ
ಗಂಗೆಯ ಕಂಡು ಗವಿಹೊಕ್ಕು ಗುರುಪಾದ
ಅಂಗದೊಳು ಕಂಡು ಮೈಮರೆದೆ

ಸತ್ಯ ಸದ್ಗುರು ಹೊಂದಿ ಮತ್ತೆ ಸಾವದು ಲೇಸು
ನಿತ್ಯ ಸುಳ್ಳಾಡಿ ದಿನಗಳೆದೆ
ನಿತ್ಯ ಸುಳ್ಳಾಡಿ ದಿನಗಳೆದು ಸತ್ತರೆ
ಮತ್ತುಟ್ಟ ಬಾಧೆ ಬಿಡದವ್ವ

ಸಂಸಾರ ಸಂಗಡದ್ದುತ್ತಿ ಧ್ವಂಸವಾಗಲು ಕಂಡು
ಕಂಸಾರಿನಮಿತ ಗುರುಬಂದ
ಕಂಸಾರಿನಮಿತ ಗುರುಬಂದು ಕೈಹಿಡಿದು
ವಂಶವುದ್ಧಾರ ಮಾಡಿದನೆ

ಭಕ್ತಿ ಭಾವದಿ ನಾನು ಯುಕ್ತಿ ಸಂಗ್ರಹ ಮಾಡಿ
ಮುಕ್ತಿಯ ತವರು ಮನೆಗ್ಹೋದೆ
ಮುಕ್ತಿಯ ತವರು ಮನೆಗ್ಹೋಗಿ ಮರ್ತ್ಯದ
ತಕ್ತ ಮಾಡಿದೆನೆ ತಂಗೆಮ್ಮ

ಬಯಲು ಬಂಗಾರವೆಲ್ಲ ಕವಲೂರ ಕಡೆಯಾದ
ಭಯವಳಿದ ಯೆನ್ನ ಬಳಗಮ್ಮ
ಭಯವಳಿದ ಎನ್ನಯ ಬಳಗ ಸಾಧುರು ಕೂಡಿ
ಬಯಲಾಗಿ ಬಾರದಿರುವನೆ

ಗುಪ್ತದ ಗಡಿತಂಗಿ ಆಪ್ತ ನೀರಲಕೇರಿ
ಪ್ರಾಪ್ತನಹುದವ್ವ ಪರವಸ್ತು
ಪ್ರಾಪ್ತನಹುದವ್ವ ಪರವಸ್ತು ಪಂಚಾಕ್ಷರನೊಲಿಸಿ
ದೀಪ್ತಿನಾಲಯವನೇರಿದೆ

❍

## ಆದಿ ಅಮಾತೆಪ್ಪ

### ಬೆಳಗು ನೋಡನು ಬಾರೆ

ಯೇ ನಾರಿಮಣಿಯೆ ನೋಡನುಬಾರೆ
ಕುಂಭಕೋಣೆಯೊಳಗಿರುವ ಸಂಭ್ರಮದಿಂದ
ಬೆಳಗೊಲಿಂಗನ ನೋಡನು ಬಾರೆ

ಗಂಗ ಯಮುನ ಮಧ್ಯದಲ್ಲಿ
ತುಂಗ ವಿಶ್ವನಾಥನೆಂಬೊ ಶೃಂಗಾರದಿಂದಿರುವಂತ
ಇಷ್ಟಲಿಂಗದ ಬೆಳಗು ನೋಡನು ಬಾರೆ

ತ್ರಿಕೋಣಿ ಸ್ಥಲದಲ್ಲಿರುವ ಸಂಗಮನಾಥನೆಂಬೊ ಲಿಂಗ
ಕೋಟಿ ಪ್ರಕಾಶವಳಿವಂತ
ಪ್ರಾಣಲಿಂಗದ ಬೆಳಗು ನೋಡನು ಬಾರೆ

ದೇಶಕಧಿಕವಾದ ವಾಸ ದೇಹದುರ್ಗಾಧೀಶನ
ಚಂದ್ರಕಾಂತಿವುಳ್ಳಂತ
ಭಾವಲಿಂಗದ ಬೆಳಗು ನೋಡನು ಬಾರೆ

❍

# ಅಯ್ಯಪ್ಪಜ್ಜನವರು

## ಸೊಡರಿನ ಎಡಬಲದಿ

ತೋರುತಿದೆ ಪರವಸ್ತು ನೀರೆ ನೋಡೆ
ತೋರುತಿದೆ ಪರವಸ್ತು

ತೋರುತಿದೆ ಪರವಸ್ತು ಭುವನಾ
ಧಾರ ಬ್ರಹ್ಮವೆಯಾಗಿ ಶಾಂಭವಿ
ದ್ವಾರದೊಳ್ ರವಿಸೋಮವಹ್ನಿಯ
ಮೂರು ಮುಂದುಮೀರಿ ಬೆಳಗುವ

ಆಲಿ ಮಿಸುಕಗೊಡದೆ ಸಮೀರನೊಳ್
ಕೀಲಿಸಿ ಮಾನಸವ
ನೀಲ ಶೈಲದ ಮೇಲಗಡಿಯ ವಿಶಾಲ
ಮೂಲ ಪ್ರಣವ ಪೀಠದಿ
ಮೇಲೆ ಲೀಲದಿ ಬಾಲರವಿ ರುಚಿ
ಜಾಲ ಝುಗಝುಗಿಪದರ ಮಧ್ಯದಿ

ಪಡುವಣ ದಿಕ್ಕಿನೊಳು ಪ್ರಜ್ವಲಿಸುವ
ಸೊಡರಿನ ಎಡಬಲದಿ
ಗುಡುಗು ಗರ್ಜನೆಯಿಂದಮೋಘ ಗಡಣ
ಚಿಹ್ನದ ದೃಷ್ಟಿಗರಿಯಲು
ಒಡನೆ ಮಿಂಚಿನ ಮೂಲೆದೋರುತ
ತಡಿಯು ಕಾಣದೆ ಕಡಲಿನೊಳಗೆ

ನದಿಗಳ ಸಂಗಮದಿ ಉರ್ಧ್ವಾಂಬಕ
ಕದವ ತೆರೆದು ನೋಡಲು
ಪದುಮದಳ ಮಧ್ಯದಲಿ ಹಂಸನ
ಸದೆಬಡಿದು ವಿಧವಿಧದಿ ಚಿತ್ಕಳೆ
ಪದವಿ ಸ್ಫುರಿಸುವ ಮುದವ ಬೀರುವ
ಮದನ ಹರಗುರು **ಪಂಪಾವರನಾಗಿ**

❍

## ಗೂಗಲ್ಲು ಪರಪ್ಪಯ್ಯ

### ಮಾಂಗಲ್ಯನಾಗೊ ಎನಗೆ

ಮಾತನಾಡೊ ಮಹಾದೇವ
ಮಾಯಾ ಕೋಲಾಹಲ ಅಲ್ಲಮಪ್ರಭು
ಜಾತಿವಿರಹಿತ ಈರೇಳುಜಗದ ಜೀವಾಳ

ಮರೆಹೊಕ್ಕರ ಕಾಯುವಂಥ
ಮನಸಿಜಾರಿ ನಿನ್ನ ಪಂಥ
ಬಿರುದುಳ್ಳ ಬಿಸುಗಣ್ಣಿನ ಭೀಮ
ಬಿಂಕದ ನಿಸ್ಸೀಮ

ಮನಸೋತೆನಯ್ಯಾ ನಿನಗೆ
ಮಾಂಗಲ್ಯನಾಗಿರೊ ಎನಗೆ
ಘನ ಶಿಖಾಮಣಿ ಗಂಭೀರ
ಗೌರೀ ಮನೋಹರ

ಗೂಗಲ್ಲ ಗುಡಿಯೊಳಗಿರುವ
ಗುರುರಾಯ ಅಲ್ಲಮಪ್ರಭುವೆ
ನಗರ ಪರುವಗ ಮೈಬೆರೆತ
ನಂದೀಶನ ಕುವರ

❍

## ತಿಪ್ಪಣ್ಣ

### ನವಣೆಯ ಹೊಲ

ಕೇಳೊ ಕೇಳೋ ಕೇಳಿರಣ್ಣಾ
ಬಂಡಿಗೆ ನಾಲ್ಕು ಗಾಲಿಗಳಣ್ಣಾ
ನಾಲ್ಕು ಗಾಲಿನ ಬಂಡಿಯದು
ತ್ರೈಲೋಕ್ಯ ಹೊತ್ತು ನಿಂತಾದಣ್ಣಾ

ಬಂಡಿಯೊಳಗೆ ಆನೆ ಬಂದೈತಣ್ಣಾ
ಬಲ್ಲ ಜ್ಞಾನಿಗೆ ಅದು ಒಲಿದಾದಣ್ಣಾ
ಆತ್ಮದ ವಿಚಾರ ಬಲ್ಲವರಣ್ಣಾ

ಆನೆಯ ಮರಿಯೊಂದು ಐತೆ ನೋಡಣ್ಣಾ
ಕಾಡಿನೊಳಗೆ ಅದು ತಳೆದಾದಣ್ಣಾ
ಮರಿಯನು ಹುಡುಕಲು ಹೋದವರಣ್ಣಾ
ಹುಡುಕ್ಹುಡುಕಿ ದಣಿದು ಮಡಿದಾರಣ್ಣಾ

ಕಾಡಿಗೆ ಮೂರು ಹಾದಿಗಳಣ್ಣಾ
ಹಾದಿಯೊಳಗೆ ಐದು ಭಾವಿಗಳಣ್ಣಾ
ಬಂಡಿಗೆ ಎರಡು ಎತ್ತುಗಳಣ್ಣಾ
ಜತ್ತಿಗೆ ಬಿಗಿದು ಕಟ್ಟ್ಯಾರಣ್ಣಾ

ಬಂಡಿಯಲ್ಲಿ ಕುಳಿತು ಹೋದೆವಣ್ಣಾ
ಖಾನಾಪುರವೆಂಬ ಊರಿಗಣ್ಣಾ
ಊರೆಲ್ಲಾ ತಿರುಗಾಡಿ ನೋಡಿದೆವಣ್ಣಾ
ಕಳೆದಂಥ ಮರಿಯು ಸಿಗಲಿಲ್ಲವಣ್ಣಾ

ಖಾನಾಪುರದಿಂದ ಎಂಟು ಗಾವುದಣ್ಣಾ
ಅಲ್ಲಿ ಹರಿವವು ನದಿಗಳೆರಡಣ್ಣಾ
ನದಿಯಲ್ಲಿ ಮುಳುಗಿ ನೋಡಿದೆವಣ್ಣಾ
ಕಳೆದೋದ ಮರಿಯು ದೊರೆಯಲಿಲ್ಲಣ್ಣಾ

ನದಿಯ ಬದಿಯಲ್ಲಿ ಕದಳಿಯ ಬಸವಣ್ಣ
ಇರುವುದು ಕಂಡು ಹೋದೆವಣ್ಣ
ವನದೊಳು ಸುಳಿದು ನೋಡಿದೆವಣ್ಣ
ಮರೆಯಾದ ಮರಿಯು ಕಾಣಲಿಲ್ಲವಣ್ಣ

ನದಿಯಿಂದ ಮುಂದೆ ಮೂರು ಗಾವುದಣ್ಣ
ಅಲ್ಲಿರುವುದು ಖನಿಜ ಬೆಟ್ಟಣ್ಣ
ಬೆಟ್ಟೆಲ್ಲಾ ಶೋಧನ ಮಾಡಿದೆವಣ್ಣ
ಕಂಡಂಥ ಮರಿಯು ಸಿಗದೋಯಿತಣ್ಣಾ

ಖನಿಜ ಬೆಟ್ಟದಿಂದ ಹತ್ತು ಗಾವುದಣ್ಣ
ನವಣೆಯ ಹೊಲವೊಂದು ಬೆಳೆದೈತಣ್ಣ
ಸಾಲು ಸಾಲು ಹಿಡಿದು ನೋಡಿದೆವಣ್ಣ
ಎತ್ತ ನೋಡಿದರೂ ಮರಿಯ ಸುಳಿವಿಲ್ಲಣ್ಣಾ

ಹೊಲದಂಡೆ ಆಚೆಗೆ ಒಬ್ಬನಿದ್ದಾಣ್ಣ
ಅಲ್ಲಿತ್ತು ಒಂದು ಬಂಡಿದಾರಣ್ಯ
ಮರಿಹೋದ ದಾರಿಗೆ ತಳಹುವ ಜಾಣ
ಕಳೆದಂಥ ಮರಿಯನು ಹಿಡಿದು ಕೊಟ್ಟ್ಯಾನಣ್ಣ

ಅಲ್ಲಿದ್ದ ಮರಿಯು ತಾಯಾಗಿತ್ತಣ್ಣ
ಅಲ್ಲಿದ್ದ ತಾಯಿಯು ಮರಿಯಾಯಿತಣ್ಣ
ಆತ್ಮದ ಅಂತ್ಯವ ಬಲ್ಲವರಣ್ಣ
ಮರಿ ತೋರಿಸಿದ ಮಹಾತ್ಮನಾರಣ್ಣ

ವಾಸುಳ್ಳ ಮರೆಯಬಾರದು ತಿಪ್ಪಣ್ಣ
ಪ್ರಭುವಿನ ಪಾದಕ್ಕೆ ಎರಗ್ಯಾನಣ್ಣ
ಮರಿಯಡಗಿದ ಸ್ಥಾನ ಕಂಡಾನಣ್ಣ
**ಗುರುಹನುಮೇಶ**ನ ಕರುಣದಿಂದಣ್ಣ

## ಮೋಟ್ನಳ್ಳಿ ಹಸನ ಸಾಹೇಬ

### ಶಿವನೆಲ್ಲಿಲ್ಲಾ ?

ಅಲ್ಲಲ್ಲಾ ಇಲ್ಲಿಲ್ಲಾ ಶಿವನಲ್ಲಿಲ್ಲ ಶಿವನೆಲ್ಲಿಲ್ಲಾ ?
ನಿನ್ನ ನೀ ತಿಳಿ ನೀನೆ ಪರಬ್ರಹ್ಮನಲ್ಲಾ

ಆರು ಶಾಸ್ತ್ರವ ಓದಿದರಿಲ್ಲ
ಮೂರಾರು ಪುರಾಣ ಮುಗಿಸಿದರಿಲ್ಲ
ಘೋರ ಸಂಸಾರ ಸತಿಯಳ ಬಿಟ್ಟು
ಯಾರೂ ಇರದ ಅಡವಿ ಸೇರಿದರಿಲ್ಲ

ಗುಡ್ಡಗಂವ್ಹಾರ ಸೇರಿದರಿಲ್ಲ
ಗಡ್ಡ ಜಡೆಯ ಬಹಳ ಬೆಳಸಿದರಿಲ್ಲ
ದೊಡ್ಡವರೆಂದು ಕರ ಮುಗಿದರೂ ಇಲ್ಲ
ಗೊಡ್ಡಾಕಳಿನಂತೆ ಚರಿಸ್ಯಾಡಿದರಿಲ್ಲ

ಕರ್ಣಕೆ ನಖ ಊರಿ ಕೂಗಿದರಿಲ್ಲ
ಧರ್ಮಶಾಸ್ತ್ರ ಅಂವ ಪಠಿಸಿದರಿಲ್ಲ
ನಿರ್ಮಲ ಮನದೊಳು **ಇಟಪುರೀಶ**ನನರಿಯದೆ
ಬೆರಳೊಳು ಜಪಮಣಿ ಎಣಿಸಿದರಿಲ್ಲ

❍

## ಶೂನ್ಯಕೆ ಶೂನ್ಯ

ಆಟ ಆಡಲೊ ಬೈಲಾಟ ಹೂಡೆಲೊ
ಆಟ ಆಡಲೊ ತ್ರಿಕೂಟ ಸ್ಥಾನದಲಿ
ನೋಟ ಬಲಿದು ಕೋಟಿ ಭಾನು ಪ್ರಕಾಶದ

ಮೇಲುಭಾವಣಿಗೊಂಡು
ಮೇಲ್ಗಿರಿಯ ಮೂಲ ತಿಳಕೊಂಡು
ಘಾಲು ಮೇಲಾಗದೆ ಭವ ಬಂಧನದಿ
ಲೋಲನಾಗದೆ ಭವ ನಿವಾರಣದ

ನಾನತ್ವವ ಬಿಟ್ಟು ಸಕಲ
ಮಾನವತ್ವವ ತೊಟ್ಟು
ಅನುಪಮ ಮಹಾಂತನ
ಘನಕೆ ಘನ ಅರಿಯುವ

ಶೂನ್ಯಕೆ ಶೂನ್ಯ ನಿಶ್ಶೂನ್ಯ
ನಿರಾಲಂಬ ಶಾಂತಿಯೊಳಗೊಂಡು
ಮನಚಿದ್ರೂಪ **ಇಟಪುರೀಶನ** ಕೃಪದಿ
ಚಿಂತೆಯಳಿದು ನಿಶ್ಚಿಂತನಾಗುವ

❍

## ತನುಮನ ಬಾಗುತ

ನೋಡು ನೋಡೆಲೊ ಕಾಣುತಾದೋ
ನಿನ್ನಯ ಕರಸ್ಥಳದೊಳಾಡುತಾದೋ
ನೋಡುತ ಎಡಬಲ ಹಾಡುತ ಆಡುತ
ಕೂಡಲೊ ಕೂಡಲಸಂಗಮ ದೇವತ

ಏಳುತ ಮೇಲೇಳುತ ನಡೆಯೊ
ಏಳುಸುತ್ತಿನ ಕ್ವಾಟಿ ದಾರಿಹಿಡಿಯೋ
ತಾಳುತ ಬಾಳುತ ತನುಮನ ಬಾಗುತ
ಮೇಲಗಿರಿಯ ಮನೆಸೇರಿ ನೀ ಮೆರಿಯೊ

ಜೀವ ಶಿವಗ ಭೇದ ಇಲ್ಲ । ನೀ
ಜೀವಭಾವವಳಿದರೆ ಬ್ಯಾರೆ ಇಲ್ಲ
ಸಾಯುವ ಹುಟ್ಟುವ ಯಾವ ಭಯಗಳಿಲ್ಲ
ಸಾವಧಾನದಿ ನೀ ಸಾಧಿಸಿಕೊಳ್ಳಲೊ

ಬಯಲಿಗೆ ಬಯಲಾಕಾರಾ । ನಿ
ರ್ಬಯಲೊಳು **ಇಟಪುರ ಧೀರ**
ಬಯಲನೆ ಹಿಡಿಯುತ ಬಯಲನೆ ಪಡೆಯುತ
ಬಯಲ ಬ್ರಹ್ಮನೊಳು ಬಯಲಾಗಿ ಭಜಿಸುತ

❍

## ಅರಿವಿನ ಅಂಗಿ

ತುರುಕರೋ ನಾವು ತುರುಕರು । ಇಂಥ
ಕಿರಿಕಿರಿ ಸಂಸಾರ ಶರಧಿ ದಾಟಿರುವಂಥ

ಮರೆವು ಮಾಯಾಯೆಂಬ ಮನದ ಮೈಲಿಗೆ ಬಿಟ್ಟು
ಗುರುಭಕ್ತಿಯೆಂಬಂಥ ಗುಡಗಿ ಚಣ್ಣಾ ಉಟ್ಟು
ಅರಿವಿನ ಅಂಗಿ ಬಂಧುರ ಮುಂಡಾಸ ತೊಟ್ಟು
ಮುರುಗಿ ಹೊಡೆದು ಮೂರು ಜಗವ ಸುತ್ತಿರುವಂಥ

ಮುರುಕು ಮನೆಯಬಿಟ್ಟು ಮೂರು ಹಣವ ಕೊಟ್ಟು
ಸರ್ಕಾರಕ ಮನ ಒಪ್ಪಿ ಸೈಯೆನಿಸಿ ಗುರುಕೊಟ್ಟ
ಬಿರುದಾವಳಿ ಸಹಿತ ಕರಕೆ ಕಂಕಣಕಟ್ಟಿ
ಅರಕೇರಿ ಠಾಣೆಯಿಂದ ಮೆರಕೋತ ಬಂದಂಥ

ಧೈರಿಯದ ಡಾಲು, ವೈರಾಗ್ಯದ ಸುರಾಯಿ
ವೈರಿಗಳನ್ನೆಲ್ಲಾ ಒಡನೆಯೇ ಒರಗಿಸಿ
ಈ ರಣವ ಗೆದ್ದು **ಇಟಪುರೀಶನೊ**ಳು
ಸ್ಮರಣೇಲಿ ಮನಸಂಪನ್ನಾಗಿರುವಂಥ

❍

# ಹೊಸೂರು ತಿಪ್ಪಣ್ಣ

## ಸೆರಗನು ಬೀಸಿ ಸೇತುವೆ ಕಟ್ಟಿ

ಗಂಡನು ದೊರಕಿದ ಯೆನಗಮ್ಮ
ಮಂಡಲತ್ರಯ ಇರುವಂಥ
ಗಂಡನೆಂದರೆ ಅವಾ ಪುಂಡನವ್ವ ತಂಗಿ
ಅಖಂಡ ಮೂರುತಿಯಾಗಿರುವ

ಪ್ರಾಯದ ತರುಣಿಯು ನಾನಮ್ಮ
ಹೇಯದ ಜೀವನ ಸಾಕಮ್ಮ
ಪ್ರಿಯತಮನೊಂದಿಗೆ ಸರಸವಾಡಮ್ಮ
ಹೋಯಿತು ನರಜನ್ಮದ ಚಿಂತೆಮ್ಮ

ಕತ್ತಲ ಮನೆಯಲ್ಲಿ ಮೈಮರೆತು ತಂಗಿ
ಸತ್ತವಳಂತೆ ನಾ ಮಲಗಿದ್ದೆ
ಜ್ಯೋತಿ ಪ್ರಕಾಶ ಒಡಮೂಡಿತ ತಂಗಿ
ದತ್ತಾತ್ರಯ ರೂಪ ತೋರಿಸಿದ

ಭಾರಿ ಸಾಗರದಾಚೆಗೆ ಕುಳಿತು
ನಾರಿ ಬಾರೆಂದು ಕರೆಯುವನು
ಸೆರಗನು ಬೀಸಿ ಸೇತುವೆ ಕಟ್ಟಿ
ಸೇರಿದೆ ಆತನ ಸನ್ನಿಧಿಗೆ

ಕ್ಷಿತಿಯೊಳು ರಾಜೂರ ಪ್ರಭು ಹನುಮೇಶನ
ಸತಿಯಾಗಿ ನವಪುರಜಾತನು
ಪತಿಸೇವೆ ಮಾಡಿ ಬಯಸಿದೆ
ಮುಂದಿನ ಗತಿಯನು ತೋರೆಂದು ಬೇಡಿದೆನು

❍

## ಮಲ್ಲಿಗೆ ಹೂವಿನ ಪ್ಯಾಟಿ

ಕೋಲು ಕೋಲೆನ್ನ ಕೋಲೆ
ಕೋಲು ಹೂವಿನ ಕೋಲೆ
ಕೈಲಾಸದಿಂದ ಬಂದು ಭೂಮೆಲ್ಲ ತುಂಬಿಕೊಂಡು
ಕೋಲು ಕೋಲೆಂಬುತಾದೆ

ಏಳುಸುತ್ತಿನ ಕ್ವಾಟಿ
ಅಲ್ಲಿ ಮಲ್ಲಿಗೆ ಹೂವಿನ ಪ್ಯಾಟಿ
ವ್ಯಾಳ್ಯಾ ವ್ಯಾಳ್ಯಾದಲ್ಲಿ ತಾಳಮದ್ದಲಿ ಶಬ್ದ
ಮೊಳಗಿಸುವಂತಹ ಕೋಲೆ

ಅಂಬುಜಮುಖಿಯವಳ
ಡಿಂಬದೊಳಿರುವ ಕೋಲೆ
ಅಂಬರದಿಂದ ನೇರಸ್ತಂಭವನು ಊರಿ
ಸಂಭ್ರಮದೇರಿಳಿಯೋ ಕೋಲೆ

ಹಣೆಯ ಮಧ್ಯದಲ್ಲಿರುವ
ಮಾಣಿಕ್ಯದಂತೆ ಹೊಳೆವ
ಭಾನುಕೋಟಿ ತೇಜ ಜ್ಯೋತಿಯಿಂ ಬೆಳಗುವ
ರನ್ನದಂತಹ ಕೋಲೆ

ಹತ್ತು ಹನ್ನೆರಡು ದಾಟಿ
ಹತ್ತಿ ಮೇಲ್ಹೋದ ಕೋಲೆ
ಮತ್ತೆ ಬಾರದಂಥ ಸತ್ಯಲೋಕವ ಸೇರಿ
ಮುಕ್ತಿ ಹೊಂದಿದ ಕೋಲೆ

ಶಿವಶರಣ **ಹನುಮೇಶ**
ತವಚರಣ ಸೇವಿಪ ದಾಸ
ನವಪುರಜಾತನ ಭವರೋಗನಾಶನ–
ಗೈವ ಸದ್ಗುರುವಿನ ಕೋಲೆ

❍

# ಯರಮಾರೆಪ್ಪ

## ಕಾನನದೊಳಗಿದ್ದ ಮಾತು

ಹೀನ ಜನರಿಗೆ ತಿಳಿಯದೀ ಮಾತು
ಸುಜ್ಞಾನದ ಗುರುತು
ಹೀನ ಜನರಿಗೇನು ತಿಳಿದೀತು
ಕಾನನದೊಳಗಿದ್ದ ಮಾತು ?

ಶ್ವಾನನಂತೆ ಮನೆಮನೆ ತಿರುಗಿದ
ಮಾನಗೇಡಿಗಿದೇನು ಗೊತ್ತು :
ಧರಣಿಯಿಲ್ಲದೆ ಮರಹುಟ್ಟಿತ್ತು ಆ
ಮರದ ಮ್ಯಾಲ ಮೂರು ಕಾಲಿನ ಪಕ್ಷಿ ಕುಂತಿತ್ತು

ಕಣ್ಣು ಇಲ್ಲದೆ ನೋಡುತ್ತಿತ್ತು,
ರೆಕ್ಕೆಯಿಲ್ಲದೆ ಹಾರುತ್ತಿತ್ತು ;
ಕೈಯಿಲ್ಲದವನ ಏಟಿಗೆ
ಕತ್ತರಿಸಿ ಭೂಮಿಗೆ ಬಿತ್ತು

ಒಳಗೆ ಹೊರಗೆ ತುಂಬುತ್ತಿತ್ತು
ಕೆಳಗೆ ಮ್ಯಾಲೆ ಏರುತ್ತಿತ್ತು
ಸ್ಥಾನವಿಲ್ಲದೆ ಮನೆಯ ಹೊಕ್ಕಿತ್ತು :
ಮನಮೋಹದಿಂದ ಕೂಡಿ ಒಂದೇಯಾಗಿತ್ತು

ಕೆಳಗೆ ಮ್ಯಾಲೆ ಏರುತ್ತಿತ್ತು
ಮಲೆಯಬಾದಿಗಂಜಿ ಬಂತು
ರಾಯಚೂರಿನ ಹೆಸರಾಯಿತು
ಜಹಿರಾಬಾದಿಗೆ ಸೇರಿಕೊಂಡಿತು

ಕಾಲು ಇಲ್ಲದೆ ನಡೆದುಬಂತು
ನಾಲಿಗಿಲ್ಲದೆ ನುಡಿಯುತ್ತಿತ್ತು
ಯೋಗಿ ತಿಪ್ಪಣ್ಣಯ್ಯಗೆ ಗೊತ್ತು
ತ್ಯಾಗಿ **ಹನುಮೇಶ**ಗೆ ಗೊತ್ತು

❍

## ಸತ್ಯ ಶರಣರ ಕೂಟ

ನಾರಿ ಹೋಗೂನು ರಾಯಚೂರಿಗೀಗ
ಜಹಿರಾಬಾದಿಗೆ ಹೋಗೂನು ಬೇಗ
ಸತ್ಯ ಶರಣರೆಲ್ಲರೂ ಒಡನೆ ಕೂಡಿ
ಮಠವ ಕಟ್ಟ್ಯಾರ ದಿಟವೊಂದೆ ಮಾಡಿ

ಐದು ವರ್ಣದ ಕುಪ್ಪಸ ತೊಟ್ಟು
ಆರು ವರ್ಣದ ಸೀರೆಯನುಟ್ಟು
ಹಣೆಯ ಮ್ಯಾಲೊಂದು ಕುಂಕುಮದ ಬೊಟ್ಟು
ರನ್ನದ ಮೂಗುತಿ ಮೂಗಿನೊಳು ಇಟ್ಟು

ಸುತ್ತಮುತ್ತ ಹಳ್ಳಿಗಳಿಂದ
ಬಂದು ನಿಂತಾರ ಸದ್ದಿಲ್ಲದಂಗ
ಪರಿಪರಿ ತತ್ವಗಳ ತಿಳಿವಿನಿಂದ
ಭಜನಿ ಹಾಡುವರು ಏನು ಚಂದ

ನಾಲ್ಕು ಕಂಬದ ಮಂಟಪದಲ್ಲಿ
ಅಷ್ಟಮಧ್ಯದಳ ಕಮಲದಲ್ಲಿ
ವಾದದ ಭೇದವ ತಿಳಿಯುವಲ್ಲಿ
ಸತ್ಯ ಶರಣರು ನಿಂತಿರುವಲ್ಲಿ

ಧರಣಿಯೊಳಗೆ ರಾಯಚೂರದಲ್ಲಿ
ಶರಣ ತಿಪ್ಪಣ್ಣನಿರುವಲ್ಲಿ
ಕರುಣ ಪಡೆಯಿರಿ **ಹನುಮೇಶ**ನಲ್ಲಿ
ಮುಕ್ತಿಯಾಗುವುದು ನಿಮಗಿಲ್ಲಿ

❍

## ಸತ್ಯ ಕತ್ತಿಯ ಪಿಡಿದು

ಹೀನ ಮಾನವನಾದೆನೊ ಈ ಜಗದೊಳು
ಹೀನ ಮಾನವನಾದೆ ಗ್ನಾನವ ತಿಳಿಯದೆ
ನಿಮ್ಮನು ನಾವು ಮನದೊಳು ನೆನೆಯದೆ

ಹತ್ತಿಯಾ ಹೊಲದಾಗ ಎತ್ತು ಸತ್ತಾದ ಒಂದು
ಸತ್ಯ ಕತ್ತಿಯ ಪಿಡಿದು ಚರ್ಮವ ಸುಲಿತಂದು
ಸುಲಿದ ಚರ್ಮಕೆ ನಾನು ಸುಣ್ಣವ ಧರಿಸಿದೆನು

ತನುವೆಂಬೊ ಭಾಂಡದೊಳು ಮನವೆಂಬೊ ನೀರುತುಂಬಿ
ಘನವೆಂಬೊ ಅಡವಿಗ್ಹೋಗಿ ಅವರೆಚಕ್ಕೆಯ ತಂದು
ಸುಣ್ಣದ ತೊಗಲನು ಬಣ್ಣ ಮಾಡಿದೆ ನಾನು

ಬಣ್ಣ ಮಾಡಿದ ತೊಗಲ ಬಯಲಿಗೆ ನೆನೆಯಿಟ್ಟು
ಕುಟ್ಟಿಕುಟ್ಟಿ ಹದಮಾಡಿ ಹೊಲಿದೆ ನಿಮ್ಮ ಮೆಟ್ಟು
ಯೋಗಿ ತಿಪ್ಪಯ್ಯಗೆ ಗೊತ್ತು ಏರಿದ ಏಳುಮೆಟ್ಟು

ರಾಯಚೂರ ಪುರವಾಸ ದ್ವಾರನವರಂಗಧೀಶ
**ಶ್ರೀಗುರು ಹನುಮೇಶನ** ನೆನೆದರೆ ಭವನಾಶ
ಜಹಿರಾಬಾದಲಿ ನೋಡು ಕುಂತಾನ ಜಗದೀಶ

❍

# ಸಾವಳಗಿ ಮಹಮ್ಮದ ಸಾಹೇಬ

## ಹಚ್ಚಿದ ಹಸರ ಜಂಡಾ

ನತ್ತು ತರಲು ಹೋಗಿ ನಾನು ಮುತ್ತು ಒಂದು ಕಂಡೆ
ಸಾವಿರ್ದೆಂಟ ತೂತ ಅದಕ ಒಂದೆ ಬ್ರಹ್ಮಾಂಡ

ಒಂದಕ ಬಿಟ್ಟು ಇನ್ನೊಂದಿಲ್ಲ : ಮೂರು ಅಖಂಡ
ಮೂರು ಮೂರು ಆರುಮೂರು ಒಂಬತ್ತು ತುಂಡ
ಆರು ಮುವತ್ತಾರಿನ್ನೂರದ ಹದಿನಾರು ಕೋದಂಡ

ಒಂದನ್ನೊಂದು ಹನ್ನೊಂದಾದವು ಹರನಲ್ಲಿ ಹರಕೊಂಡ
ಮುನ್ನೂರದರವತ್ತೈದು ಒಂದಕ್ಕೆ ಹತಗೊಂಡ
ಒಂದರಲ್ಲಿ ಮತ್ತೊಂದಿಲ್ಲ ಹನಿಸಿತದುವೆ ಗಂಡ

ಎಪ್ಪತ್ತೆರಡ ಸಾವಿರ ತಪ್ಪಿಲ್ಲ ಗಂಡಿನ ಹಿಂಡ
ಇಪ್ಪತ್ತೆರಡು ಸಾವಿರರಾರುನೂರು ಹಿಂಡಿನ ರೂಡ
ಎಂಟುಕೋಟಿ ದಾಟಿ ಹಿಡಿತು ನಾಟಿತು ಬೀಜಾಂಡ

ಏಕ ನಾಕು ಸಾಕು ಅಂದಿತು ಎಲ್ಲರದಾಗ ಪುಂಡ
ಐದು ಐದು ಇಪ್ಪತ್ತೈದು ಎಲ್ಲದರಾಗ ಮೊಂಡ
ಮೊಂಡನಿಂದೆ ಗುಂಡಹಾರಿತು ಬಿಚ್ಚಿತು ಪಿಂಡಾಂಡ

ಚಾರ್ಸೈಸ್ಸಿ ಗಾಬರಿಬಿದ್ದವು ಕೆಡಲಿಲ್ಲ ಅಂಡ
ಹುಟ್ಟಿಕೆಟ್ಟು ಸುಟ್ಟಿಹೋಯಿತು ಮುಟ್ಟಾದ ಪಿಂಡ
ಗಂಡ ಪುಂಡ ಪುಂಡೆ ಗಂಡ ಅನಿಸಿತು ಬ್ರಹ್ಮಾಂಡ

ಧರೆಯೊಳು ಹಿರೇ ಸಾವಳಗಿ ಧರಿಗಿರಿ ಪ್ರಚಂಡ
ಜಗದ್ಗುರು ಶ್ರೀ ಶಿವಯೋಗಿ ಅಲ್ಲಿ ನೆನಸಿದ ನಂಜುಂಡ
**ವರಕವಿ ಹರದಾಸ ಮಹ್ಮದ** ಹಚ್ಚಿದ ಹಸರ ಜಂಡಾ

❍

## ಸದಾ ದೀವಳಗಿ

ನಡಿಗೆಳದಿ ತಿಳಿದು ಹಾಜರಾಕ
ಇಳದೇಳು ಭವ ಎಂಬ ಬಾಜರಾಕ

ನಮ್ಮ ತಲಿಮೇಲ ತನುವಿನ ಹೆಡಗಿ
ಅದರೊಳು ಘನ ಎಂಬುವ ಗಡಗಿ
ಮನ ಎಂಬ ಮಾಪಿಡಿದು ಮಾರುದಕ

ಹರನಾಮ ಎಂಬ ಹಾಲು ಹಿಂಡು ಹುಡುಗಿ
ನೆಪ್ಪೆಂಬ ಹೆಪ್ಪಾಕು ಮೊಸರಾಗುವುದು ಅಡಗಿ
ಮಥನೆಂಬುವ ಮಜ್ಜಿಗಿ ಕುಡಿಯುವದಕ

ಭಕ್ತಿ ಎಂಬ ಬೆಣ್ಣೆ ಕಾಸು ಕರಗಿ
ಮುಕ್ತಿ ತುಪ್ಪ ಸೋಸು ಸರಿಯಾಗಿ
ಮಥನೆಂಬುವ ಮಜ್ಜಿಗಿ ಕುಡಿಯುವುದಕ

ತತ್ವ ದೇಹದ ತಕ್ಕಡಿ ಅಂಡಿಂಗಿ
ದೃಢವೆಂಬುವುದು ಮೇಲು ದಂಡಿಂಗಿ
ಆಶಪಾಶ ಪಾಸಂಗ ಇಡಬೇಡ ಅದಕ

ಅರಿ ಎಂಬುವ ಆರು ಓಣಿ ತಿರುಗಿ
ಗುರು ಹಿರಿಯರ ಚರಣಕ ಎರಗಿ
ಯಾಪಾರ ಮಾಡಿಕೊಂಡ ಸೇರೋನ ಶಿವಲೋಕ

ಧರಿಯೊಳು ಮರೆಯುವ ಹಿರೇಸಾವಳಗಿ
ಶ್ರೀ ಸಿದ್ಧನಲ್ಲಿ ಸದಾ ದೀವಳಗಿ
**ಕವಿ ಮಹ್ಮದ** ಕೊಟ್ಟಿದ ಈ ಬದುಕ

❍

## ಜ್ಞಾನದ ಹಾದಿ

ಹಾದಿ ಹಸನ ಮಾಡೋ
ಹರ ಲೋಕದ ರೋಡೋ

ಸಾಧಿಸಿ ಹಾದಿ ಹಸನ ಮಾಡೋ
ಬೀದಿ ಊದಿ ನೀ ಪಾದ ನೀಡೋ
ಬುದ್ಧಿ ಹೇಳುವರಿಗೆ ವಾದಿಸಬೇಡೋ
ಬೂದಿ ಬಡಕನ ಸದಾ ಕೊಂಡಾಡೋ

ಸಿಟ್ಟೆಂಬ ನಟ್ಟಿದ ಕಲ್ಲದ ಅಗಡೋ
ಬಿಟ್ಟಿದರಿದು ಪೆಟ್ಟ ಮಾಡತಾದ ರಗಡೋ
ಜಟ್ಟನೆ ಜ್ಞಾನದ ಹಾದಿ ಮಾಡೋ
ನಿಷ್ಟಿಯಿಂದ ಅದು ಕಿತ್ತಿ ಈಡ್ಯಾಡೋ

ಭೋಗಿ ಆಗಿನೆಂದು ಹಿಗ್ಗಿಲಿ ಬೇಡೋ
ಹಗ್ಗೆಂಬ ನೆಗ್ಗಿನ ಮುಳ್ಳವ ನೋಡೋ
ಮುಗ್ಗಿದರ ಮುರಿತಾವ ಬಡೋ ಬಡೋ
ಭವಯೋಗಿಯಾಗಿ ನೀ ಬಳಲಲಿ ಬೇಡೋ

ಮಾಯಿ ಮೋಹಿನ ಮೋಹಿಸ ಬೇಡೋ
ಮಾನುಳ್ಳವನೆ ನಿನಗ ಮಾಡದು ಕೇಡೋ
ಉನ್ಮನಿ ಮಾರ್ಗ ಹಿಡಿದುರುಳಾಡೋ
ಸನ್ಮದಿ ಚಿನ್ಮಯನ ಕೂಡೋ

ಧರೆಯೊಳಧಿಕ ಹಿರೇ ಸಾವಳಗಿ ಚಡೋ
ಕಮರಿ ಮಠದೊಳು ಹಾನ ಸಿದ್ಧಾರೂಡೋ
ಚರಣಕ ಎರಗಿ ನೀ ಮುಕ್ತಿ ಬೇಡೋ
**ಮಹ್ಮದ** ಹೇಳಿದ ಜ್ಞಾನದ ತೋಡೋ

❍

## ಹಾವು ಹರಿದ ಜಾಗದಲ್ಲಿ

ಹರ ಹರ ಶಿವ ಶಿವ ಹಾವೂ ಎನಗ ಹರಿತು
ಹರಿದಾಗಲೆ ಹರದೇಶಿ ಹಣಿಬಾರ ತೆರಿತು

ಹಿಡಿದು ಕಡಿದ ಜಾಗಿಲೆ ಬುಗುಬುಗು ಉರಿತು
ಒಡಲೊಳು ಕಾಲಕೂಟ ಧಗಧಗ ಮಿರಿತು
ಎನ್ನ ಕಾಲೂ ಮೃತ್ಯುವಿನಿಂದ ಎನಗ ಕರಿತು

ಹಾವೂ ಯಾವದಿತ್ತೆನೋ ಹರಣ ಹಾರಿತ್ತು
ಹಾಃ ಹಾಃ ಎನ್ನದೊರಳಗ ಹುತ್ತ ಸೇರಿತ್ತು
ಎನ್ನ ಹೃತ್ಕಮಲದಿಂದ ವಿಷಕಾರಿತ್ತು

ಕಾಲಾ ಕಪ್ಪ ತಲಿಯ ಮೇಲೆ ಕೆಂಪು ಘೋರಿತ್ತು
ಸರದ್ದಿನ ಮುಪಾವರಿ ಎನಗ ಪೂರಾ ತೋರಿತ್ತು
ಎಗರಿ ಉಗರಕಣ್ಣಿಗೆ ಹರಿದು ಜಾರಿತ್ತು

ಹಳದಿ ಹಸಿರು ನೀಲಿ ಬಿಳಿದು ಇಂಪಾಗಿ ಹೊಳದಿತ್ತು
ಹಂಪಿತನ ಹುಡಕ್ಯಾಡಿ ನೋಡಿದೆ ಸೊಪ್ಪಿನೊಳು ಕಳದಿತ್ತು
ನೆಪ್ಪಿಲೆ ಪಂಪಾನಲ್ಲಿ ನೋಡಿದೆ ತಂಪಾಗಿ ಸಂಶ ಉಳಿದಿತ್ತು

ಸೌಮಾಸಿಲೆ ಎನ ಜೀವ ಉಳಿತು
ಹಾವು ಹರಿದ ಜಾಗದಲ್ಲಿ ತುಸನೆ ಕೊಳಿತು
ಅದು ಎನ್ನ ಸದ್ಗುರುನಾಥರ ಸರ್ವೇಶನಾಮ ತಿಳೀತು

ಧರೆಯೊಳು ಹಿರೇ ಸಾವಳಗಿ ಗಿರಿ ಹೊತ್ತ ಬೆಳಿತು
ಜಗದ್ಗುರು ಶಿವಯೋಗಿಜಾತ ಹಾವೂ ಹೇಳಿತು
**ಕವಿ ಮಹ್ಮದನಿಂದ** ಹಾವಿನ ಇಷ ಇಳೀತು

❍

# ಯೋಗಿ ಬಲಭೀಮ

## ಗೊಲ್ಲನ ಮಂತ್ರಕೆ ಅಂಜಿತು ಹಾವಾ

ಹಾವು ಕಚ್ಚಿತಮ್ಮಾ ಯಾರಿಗೆ ತಿಳಿಯದಿದರ ಮಹಿಮಾ
ಹಾವಿನ ವಿಷವು ಎನಗೇರಿತಮ್ಮಾ
ದೇವರ ಕರುಣೆಯಿಂದ ನಾನುಳಿದೆನಮ್ಮಾ

ಮೀರಿದ ಹಾವಮ್ಮಾ ಮೂರು ಲೋಕ ನುಂಗಿತಮ್ಮಾ
ಬೇಸರಿಲ್ಲದೆ ಮಾಡ್ಯಾನ ಬ್ರಹ್ಮ
ನೆನಪಾದರೆ ಮೈ ಅಂಬುದು ಜುಮ್ಮಾ

ಮೂರು ಮೊಳದ ಹತ್ತು ಒಂಬತ್ತು ರಂಧ್ರಗಳದಕಿತ್ತು
ಯಾವ ರಂಧ್ರದಿಂದ ಹಾವು ಸೇರಿತು
ಒಳಗಿನ ಗೊರಲಿ ಎತ್ತಹೋಯಿತು

ಬಾಲ ಮೇಲಕೆತ್ತಿ ಭೋರೆಂಬ ಶಬ್ದ ನುಡಿತೈತಿ
ಮಣಿಪುರ ಕಮಲದಲಿ ಮಲಗಿಕೊಂಡೈತಿ
ಬೆಲೆಯಿಲ್ಲದ ರತ್ನ ಅದರ ಹೆಡೆಯೊಳಗೈತಿ

ಗೊಲ್ಲನ ಹುಡುಕಿದೆನಮ್ಮಾ ಗೊಲ್ಲನು ಮಂತ್ರ ಹೇಳಿದ ಪ್ರಣಮ
ಗೊಲ್ಲನ ಮಂತ್ರಕೆ ಅಂಜಿತು ಹಾವಾ
ವಿಷದ ಕೊಳವಿ ತೊಳೆದುಹೋದೀತೋ ಕರ್ಮಾ

ಸಣ್ಣಗೊರಲಿ ಬಂತು ಹಾವಿನ ಹುತ್ತ ಸಹಿತ ನುಂಗಿತು
ಯಾವ ಸ್ಥಾನದಲಿ ಆ ಗೊರಲಿ ಇತ್ತು
ಮೂಲಪ್ರಣವ ಬಲ್ಲವಗೇ ಗೊತ್ತು

ಗೊರಲ ಹಾವಿಗೆ ನುಂಗಿ ಧರೆಯೊಳು ಮೆರೆಯುವ ಶಿರಸಂಗಿ
ದೊರೆ ಶ್ರೀಗುರು **ಬಲಭೀಮಯೋಗಿ**
ಆತನ ಚರಣಕೆರಗಿದರೆ ಸ್ವರ್ಗಕೆ ಸಾಗಿ

❍

## ಸುಜ್ಞಾನವೆಂಬೊ ಕಿಡಕಿ

ಏನು ಛಂದದಿದು ಮಾಯಾ ಮಂದಿರ
ಈ ಮಂದಿರ ಕಟ್ಟಿದ ಬ್ರಹ್ಮದೇವರ

ಪಂಚತತ್ವದ ಪಾಯ ಹಾಕ್ಯಾನ ಈ
ಪಾಯಹಾಕಿ ಕಲ್ಪನೆಂಬೊ ಗುಡಿ ಕಟಿಶ್ಯಾನ

ಕಾಮ ಕ್ರೋಧದ ಕಟಗಿ ಕೊರೆಸ್ಯಾನ ಈ
ಕಟಗಿ ಕೊರೆಸಿ ಅಜ್ಞಾನೆಂಬೊ ತೊಲಿಯ ಹೇರ್‍ಯಾನ

ಚಿಂತಿ ಎಂಬೊ ಜಂತಿ ಹರಿವ್ಯಾನ ಈ
ಜಂತಿ ಹರವಿ ಮನಸೆಂಬೊ ಮಧ್ಧಿ ಮಾಡ್ಯಾನ

ದಶಾವತಾರದ ಗಜ್ಜ ಮಾಡ್ಯಾನ ಈ
ಗಜ್ಜ ಮಾಡಿ ಸುಜ್ಞಾನವೆಂಬೊ ಕಿಡಕಿ ಹಾಕಿಶ್ಯಾನ

ದೇಶದೊಳು ಹತ್ತಳ್ಳಿ ಈ
ಊರ ಗುರು ಬಲಭೀಮಾ ಪದಾ ಮಾಡಿ ಹೇಳ್ಯಾನ

❍

## ಹಾವ ಹಿಡಿದು ಒಳಗೆ ಹಾಕಿ

ಗೊಲ್ಲರೋ ನಾವು ಗೊಲ್ಲರೋ
ಈ ಘಟವೆಂಬ ಹುತ್ತಿನೊಳು । ದಿಟವಾಗಿ ಹಾವ ಹಿಡಿದು
ಕಟಬಾಯೊಳಗಿನ । ಕಡಿಹಲ್ಲು ಮುರಿವಂಥ

ನಡು ನಾಡಿಗೆ ಹೆಡೆ ಇಟ್ಟಿಹುದು
ಸರ್ಪದ ಬಾಲಾ ಕಡಿಚಕ್ರ ಮುಟ್ಟಿಹುದು
ಒಡೆಯ ಶ್ರೀಗುರು ಮಂತ್ರ । ಅಡಿಗಡಿಗೆ ಜಪಿಸುತ್ತ
ಕಡಿದೀತೆಂಬುವ ಅಂಜಿಕೆ । ಇಲ್ಲದೆ ಹಿಡಿಯುವಂಥ

ಹೆಡಿಯ ಮೇಲಕ್ಕೇರಿಸಿ
ಮ್ಯಾಗಿನಾ ಬಾಲಾ ಕೆಳಭಾಗಕ್ಕಿಳಿಸಿ
ಒಳಗಿರುವ ತ್ರಿಕೋಣ । ಗಳಿಗಿಯೊಳಗೆ ಪೊಕ್ಕು
ಕಳೆನಾದ ಸರ್ಪದ । ಫಣಿರತ್ನ ಪಡೆದಂಥ

ಸದ್ಭಾವವೆಂಬೊ ಬುಟ್ಟಿಯಲಿ
ಈ ಹಾವ ಹಿಡಿದು ಒಳಗೆ ಹಾಕಿದೆವಿಲ್ಲಿ
ದೇವ ದೇವರಿಗೆಲ್ಲಾ । ದೇವ ಶಿಖಾಮಣಿ
ದೇವ ಬಲಭೀಮನ । ಮೂಲವ ತಿಳಿದಂಥ

❍

# ಬೆನೂರ ಹಜರತ್ ಕಾಕಿ ಪೀರ

## ಅಪರೂಪದ ಪಕ್ಷಿ

ಚಂದದಿಂದ ಕಂದ ಕಟ್ಟಿ ಬಂದೀನಿ ಮೇಲ
ಇಂದ ಬರತೊಂದು ಪಕ್ಷಿ ಕಂಡೇನು ಭೂಮಿ ಮೇಲ

ಪಕ್ಷಿ ಅಪರೂಪ ಹೇಳಲೇನ ತಾರೀಪ
ತಾಯಿ ತಂದಿ ಹೊಟ್ಟೀಲಿ ಹುಟ್ಟಿಲ್ಲ
ಬೇಗು ಬೆಳಗ ತಿರುಗತದ ಲೋಕದಾಗೆಲ್ಲ
ಪಂಕ ಕಾಲಿಗಳು ಅದಕ ಮೊದಲೇಯಿಲ್ಲ

ದಂಡ ಎಪ್ಪತ್ತು ಮ್ಯಾಲ ತಲಿ ಎಂಬತ್ತು
ಹಿಂದ ಇದ್ದು ಇನ್ನೂರದ ಹದಿನಾರು ಬಾಲ
ಪಕ್ಷಿ ವರಣ ಇಲ್ಲ ಅದಕ ಒಂದು ಬಣ್ಣ
ಬಲ್ಲವನೆ ಬಹಳ ಜಾಣ ಕಣ್ಣೀಲಿ ಕಂಡೆನು ಸುಳ್ಳಲ್ಲ

ಪಾತಾಳದಲ್ಲಿ ಹೋಗಿ ನೋಡೋಣಂದರೆ ದೊರೆಯೋಣಿಲ್ಲ
ಸ್ವರ್ಗಲೋಕದಲ್ಲಿ ನಿಜ ಅದು ಮೊದಲೇಯಿಲ್ಲ
ಕಣ್ಣೀಗಿ ಕಾಣದು ದೇಶ ಎಲ್ಲ ತಿರಗದು
ಅದರ ಹೊರತು ಜಾಗ ಇಲ್ಲ ಶೋಧ ಮಾಡಾಕ

ಸಾಧು ಮಂದಿ ನೋಡ್ಯಾರ ಪಕ್ಷಿ ಹೆಣ್ಣು ಗಂಡಲ್ಲ
ಮರ್ತ್ಯದಾಗ ಬಂದಾಗ ಒಮ್ಮಿ ಹುಟ್ಟಿ ಇಲ್ಲಿ
ಎಂದೆಂದಿಗೂ ಅದಕ ಸಾವೇ ಇಲ್ಲ
ಈ ಕೋಡಿ ಮಾನವಜನ್ಮಕ ಸಿಕ್ಕರೆ ಎಂದೂ ದಕ್ಕೋಣಿಲ್ಲ

ಮರ್ತ್ಯದಾಗ ಯಾರಿಗೆಂದು ಬಿಟ್ಟಿದ್ದಲ್ಲ
ಜಿಗಿದು ಹೋಗೂದು ಒಬ್ಬರ ಕೈಯ್ಯಾಗ ಸಿಕ್ಕೇಯಿಲ್ಲ
ಗುಪ್ತದಿಂದಲಿ ಗುಮಟ ಕಟ್ಟಿತು ಬಂದಿಲ್ಲಿ
ಬೇಗ ಬೆಳಗ ಮೇಯಿತದ ಕಾಳಗದಲ್ಲಿ

ಎಂಥ ಚಾತೂರ ಮೈಯಲ್ಲಿ ಎಚ್ಚರ ಸುಳಿದರೆ
ಸುಂಕ ಬಿಡೋಣಿಲ್ಲ ಬಹಳ ಪುಂಡ
ಬಲ್ಲವರಿಗೆ ಅದ ಗುಡ ಅನಲಿಕ್ಕೆ ಏನೂ ತಪ್ಪಿಲ್ಲ
ಇದರ ಮರ್ಮ ಬಲ್ಲವರು ಮಾಡಿರಿ ಶೋಧ

ದೊಡ್ಡ ಮಾತದ ಒಡೆದು ಆಡೋದಲ್ಲ
ಶಾಸ್ತ್ರಪುರಾಣ ಓದಿದವರಿಗೆಂದೂ ಹತ್ತೇಯಿಲ್ಲ
ಬಹಳ ಬಂಧನ ಕೇಳಿರಿ ಇದು ಬಯಾನ ಆತ್ಮದಲ್ಲಿ ಆಯಿತಲ್ಲ
ಇದು ಸೋಜಿಗ ನೋಡಿ ಬಂದೆ ಇಲ್ಲೀಗ

ಹೇಳಿಬಿಟ್ಟೇನಿ ಮಾಡಿ ಖಿಲ್ಲಾ
ಕಂಡ ಮಾತ ಆಡೀನಿ ನಗನಗತ
ನಿಮ್ಮಮೇಲಿ ಬಂತು ಸವಾಲ ಜಿತಾವಲಿ
ಬೇನೂರ ಮೌಲಾಲಿ **ಗುರು ಕಾಕೀ** ಪದ ಬರದಾನ ಸಭಾದಲಿ

❍

## ಅರಿವಿನ ಕಲ್ಲಿಟ್ಟು ಹೊಡೆದೆನಲ್ಲ

ಶರೀರ ಎಂದೆಂಬುವ ಈ ಹೊಲ ಗುರುತೀರ್ಥ ಸಲಿಲ
ಪಂಚಭೂತದಿ ಪಡೆದೆ ನಾ ಫಲ

ಶರೀರವೆಂಬೋ ಈ ಭೂಮಿಯೊಳು
ಪರತತ್ವದ ಬೆಳೆಯು ಬೆಳೆಸಿ
ನಿರಾಳ ನಿರ್ಗುಣ ಮನದ ಮಂಚಿಕಿ ಮಾಡಿದೆನಲ್ಲ

ಮೂರು ಮಲವು ಏರಿ ಸಿಡಿಗಳು
ಏರಿ ಮೇಲೆ ಕುಳಿತು
ಹರಿದು ಆಡುವ ಚಿತ್ತವೆಂಬೋ ಹಕ್ಕಿ ಹಿಂಡು ತೋಲು
ಧೈರ್ಯದ ಕವಣೆಯೊಳು ಅರಿವಿನ ಕಲ್ಲಿಟ್ಟು ಹೊಡೆದೆನಲ್ಲ

ಸೊಕ್ಕಿನ ಬಳುಹಕ್ಕಿ ಮೂವತ್ತಾರು
ಲೆಕ್ಕಿಲ್ಲದೆ ಅಲೆದು ಹಿಂಡು ಮಾಡತಾವ ಜೋರು
ಮಿಕ್ಕಿ ಮೀರಿದ ಕರಿಯ ಕಾಗಿ ಚಕ್ಕನೆ ತಲೆಯಮೇಲೆ ಕುಳಿತು
ಬುಕ್ಕು ಬುಕ್ಕತಾದ ನಾಲ್ಕುದಿಕ್ಕಿಗೆ ಹಾರುತಾವ ಇಲ್ಲ ಕಬರು

ಕೆಟ್ಟ ಕುಲದ ಚಿಟ್ಟಗುಬ್ಬಿಯು ಎಷ್ಟೊಂದು ಬರವವು
ದಂಟಿಗೆಂಟು ಕೊಡುತಾವ ಜೋರು ನಿಷ್ಟಿ ನಿಜಗುಣವೆಂಬೋ ಕಲ್ಲು
ಸಿಟ್ಟಿಲೆ ಕವಣೆಯೊಳಿಟ್ಟು ಬಂಟ ಬಹುದ್ದೂರ
ಒಂಟಿಗೈಲಿ ಹೊಡಿದು ಹಾಕೀನಿ ಹಿಡಿದು ಶರೀಯ

ಜ್ಯೋತಿ ಒಂಭತ್ತು ಇಟ್ಟು ಎಚ್ಚರ
ಈ ಖ್ಯಾತಿಗಿ ಅಧಿಕ ಸುತ್ತ ಬಾಹಿರ ಬೇನೂರೀಶ್ವರ
ಹತ್ತು ಜಾತಿಯ ಹರಗ್ಯಾದ ಹಿಂಡಿಗೆ
ಖಾತ್ರಿಲಿಂದ ಅರಿತು ಮಾಡಿದ **ಗುರು ಕಾಕೀ** ಹೊಲ ಪೂರಾ

❍

# ಗೋನಾವರದ ರಾಮದಾಸ (ಬಡೇಸಾಬ)

## ಬೀಳುವ ಎಚ್ಚರ ಮರೆತಿದ್ದಿ

ಎಲ್ಲಿಂದ ಬಂದಿದ್ದೆಲೆ ಖೋಡಿ ನೀ –
ನೆಲ್ಲಿಗೆ ಹೋಗ್ತಿದ್ದಿ ತ್ವರಮಾಡಿ ?
ಕಲ್ಲು ಮುಳ್ಳೆನ್ನದೆ ಮುಂದೆನೋಡಿ । ಜರ
ನಿಲ್ಲದೆ ಹೋಗ್ತಿದ್ದಿ ಓಡೋಡಿ

ಏಳುಗೇಣಿನ ಕುದುರೇರಿದ್ದಿ। ಭವ
ಮಾಲೆ ಕೊರಳಿಗ ಹಾಕಿದ್ದಿ
ಮೂಲ ಲಗಾಮವೆ ತೆಗೆದಿದ್ದಿ । ನೀ
ಬೀಳುವ ಎಚ್ಚರ ಮರೆತಿದ್ದಿ


ಶೀಲ ಸನ್ಮಾರ್ಗವ ಬಿಟ್ಟಿದ್ದಿ । ಮಹ
ಕಾಳು ಕತ್ತಲೆ ಹಾದ್ಹಿಡಿದಿದ್ದಿ
ಕಾಲನಾಳಿನ ಕೈಗೆ ಸಿಗುತ್ತಿದ್ದಿ। ಬಹು
ಗೋಳಿನೊಳಗೆ ಹೋಗಿ ಬೀಳುತ್ತಿದ್ದಿ

ಅಸ್ಥಿರ ಕುದುರೆ ಹತ್ತಿದ್ದಿ। ಬಲು
ಮಸ್ತಿಲಿಂದ ಕಣ್ಣು ಮುಚ್ಚಿದ್ದಿ
ಪುಸ್ತಿಯಿಲ್ಲದ ದಾರ್‍ಹಿಡಿದಿದ್ದಿ । ಮುಂದೆ
ಸ್ವಸ್ಥತೆ ನೀ ಹ್ಯಾಂಗೆ ಪಡೀತಿದ್ದಿ ?

ಯಾರನ್ನ ಬೇಡಿ ಬಂದಿದ್ದಿ। ನೀ–
ನಾರಸೇವೆ ಕೈಕೊಂಡಿದ್ದಿ ?
ದಾರಿತಪ್ಪಿ ದಾರ್‍ಹಿಡಿದಿದ್ದಿ । ಸುವಿ
ಚಾರ ಪಥವ ಧಾರೆರದಿದ್ದಿ

ಬಂದ ಕಾರ್ಯವನು ತೊರೆದಿದ್ದಿ । ಮನ
ಬಂದಂತೆ ಕುಣಿಕುಣಿದಾಡುತಿದ್ದಿ
ತಂದೆ ಶ್ರೀರಾಮನ ಮರೆತಿದ್ದಿ । ಈ
ಬಂಧುರ ಸಮಯ ವ್ಯರ್ಥ ಕಳಿತಿದ್ದಿ

❍




## ಷೇಕ್ ಅಬ್ದುಲ್ ಬಾಬಾ

### ಮೌನದಿಂ ಮಾತಾಡುತ

ಕೂಗುತಾಲಿದೆ ಪಕ್ಷಿ ಕೂಗುತಾಲಿದೆ
ಕೊಂಚಿಯಿಲ್ಲದ ಮರದ ಮ್ಯಾಲೆ
ಗುಂಬವಾಗಿ ಕುಳಿತುಕೊಂಡು

ಒಂದು ಎರಡು ಮೂರು ನಾಲ್ಕು
ಐದು ಆರು ಇಪ್ಪತ್ತೊಂದು
ನಿತ್ಯ ಪ್ರಕಾಶದ ಜ್ಯೋತಿ ಕಾಣುತ
ಜನನ ಮರಣಗಳಿಲ್ಲವೆಂದು

ಏಳು ಎಂಟು ಒಂಬತ್ತು ಮತ್ತು
ಒಂದು ಇಪ್ಪತ್ತೈದು ನಿತ್ಯ
ಸುಶಮ್ನ ಸತ್ಯವ ನೋಡುತ
ಮತ್ತೆ ಭುವನಕೆ ಬಾರೆಂದು



ರೆಕ್ಕೆಪಕ್ಕ ಇಲ್ಲದಾ ಪಕ್ಷಿ
ರಹಸ್ಯವಾಗಿ ರಾತ್ರಿಹಗಲು
ಸಾದೃಶ್ಯದಿಂದ ಸರ್ವಜನರಿಗೆ
ಸಾಕ್ಷಿಯಾಗಿ ದೀಕ್ಷೆಯಾಡುತ

ಎಂಟು ದಿಕ್ಕಗ್ಹದಿನೆಂಟು ಬಣ್ಣದ
ನಾಲ್ಕುಮಾರ್ಗದ ಮೂರು ಮೂಲೆಗೆ
ಹತ್ತು ಎರಡು ಗೊತ್ತು ತಿಳಿದು
ಗುರುವು ನಾಮಸ್ಮರಣೆ ಮಾಡುತ

ಕಣ್ಣು ಇಲ್ಲದ ದೂರದೃಷ್ಟಿಗೆ
ಕಿವಿಯಿಲ್ಲದೆ ಕೇಳಲಾಗಿ
ಬಾಯಿ ಇಲ್ಲದೆ ಬ್ರಹ್ಮಜ್ಞಾನವು
ಮೌನದಿಂ ಮಾತಾಡುತ

ಪಂಚ ನೇತ್ರದ ಮೂರು ದೇಹಗಳು
ಎರಡು ಬಾಯ್ಗಳು ಇರುವುದು ಕಂಡು
ಸಂಚಿತಾ ಪ್ರಾರಬ್ಧ ಕಳೆದು
ಎರಡು ಬಾಯಿಲೆ ಸೋಹಂ ಎನ್ನುವ

ಧರೆಯೊಳು ಚಿಪ್ಪಗಿರಿ ಭಂ ಭಂ ಗುರುವಿನ
ಪಾದಸೇವೆ ಮಾಡಿದರೋ
ಪಕ್ಷಿ ಕೂನದ ಗುರ್ತು ತಿಳಿವುದು
ಸಾಕ್ಷಾತ್ ಶಿಷ್ಯ **ಷೇಕ್** ಅಬ್ದುಲ್ಲಾದಂತೆ

○

## ಮಂಚಕೆ ಸಾವಿರ ಕಾಲಿತ್ತು

ಏನಾಯ್ತೆನಾಯ್ತು । ಹಿಂದಿನ ಲೆಕ್ಕಕೆ ಸರಿಹೋಯ್ತು
ಮುಂದಿನ ಗತಿಗೆ ಚಂದಾಯ್ತು

ನದೀ ತೀರದಲಿ ಮರವಿತ್ತು
ಮರದ ಮ್ಯಾಲೆ ನಾರಿ ನಿಂತಿತ್ತು
ನಾರಿ ನೆತ್ತಿಮ್ಯಾಲೆ ಅರವಿಯಿತ್ತು
ಅರವಿಯ ತುಂಬಾ ನೀರಿತ್ತು
ಕಾಲು ಜಾರಿತು ಕೊಡ ಒಡೆಯಿತು
ನೀರು ಚೆಲ್ಲಿತು ನಿರ್ಮಲವಾಯಿತು

ಮೂಲೆ ಮನೆಯೊಳು ಸ್ಥಂಬಿತ್ತು
ಸ್ಥಂಭದ ಮ್ಯಾಲೆ ಪಣತಿತ್ತು
ಪಣತಿ ತುಂಬಾ ಎಣ್ಣಿತ್ತು
ಎಣ್ಣೆ ಬತ್ತಿಲಿ ಉರಿತಿತ್ತು
ಗಾಳಿ ಬೀಸಲು ಬತ್ತಿ ಆಯಿತು
ಎಣ್ಣೆ ಚೆಲ್ಲಿತು ಏನಿಲ್ಲದಾಯ್ತು

ಮನೆ ಮ್ಯಾಲೆ ಮನೆ
ಏಳಂತಸ್ತು ಶಯನ ಗೃಹದೊಳು ಮಂಚಿತ್ತು
ಮಂಚಕೆ ಸಾವಿರ ಕಾಲಿತ್ತು
ಸುಖದಲಿ ಹೆಂಡತಿ ಮಲಗಿತ್ತು
ಮನೆ ಬಿದ್ದಿತು ಮಂಚ ಮುರಿಯಿತು
ಹೆಂಡತಿ ಸತ್ತಿತು ರಂಡಿಲ್ಲದಾಯ್ತು

❍

## ಮೂಲಭಾವವು ತಿಳಿದ ಮೇಲೆ

ಲಿಂಗ ಪೂಜೆಯ ಮಾಡಬೇಕಣ್ಣಾ
ನಿಜಾತ್ಮದೊಳಗೆ ಲಿಂಗಪೂಜೆಯ ಮಾಡಬೇಕಣ್ಣಾ

ಲಿಂಗಪೂಜೆಯ ಮಾಡಬೇಕೊ
ಅಂಗ ಲಿಂಗವು ತಿಳಿಯಬೇಕೊ
ಗಂಗೆ ಯಮುನೆ ಮಧ್ಯದಲ್ಲಿ
ಜಂಗಮಾಗುವ ಪರಿಯಂತವು

ಪಂಚ ತತ್ವದ ಭಾಂಡ ತೊಳಿಯಣ್ಣಾ
ಪ್ರಪಂಚ ವಾಸನೆಯಿಲ್ಲದೆ ಮೂರು ಜೈಸಣ್ಣಾ
ಮೋಸಹೋದಿರಿ ಮಾಯಾ ಪಾಶಾಕೆ ಗೊತ್ತುತಪ್ಪಿ ಸತ್ತ ಮೇಲೆ
ಮತ್ತು ಜನ್ಮವು ಎತ್ತಲರಿಯದು ಮೃತ್ಯುವಿಗೆ ತುತ್ತಾಗಬೇಡಣ್ಣ

ಆರುವರ್ಣದ ದಾರಿಯೇರಣ್ಣ
ಐಕ್ಯನಾಗಿ ಆತ್ಮದರ್ಶನ ಆಸನಾಕಣ್ಣ
ಮೀರಿದುನ್ಮನಿ ದಾರಿಸೇರಿ ಜ್ಯೋತಿರ್ಲಿಂಗವು ಬೆಳಕು ನೋಡಿ
ಮೂರು ಶಿಖರದ ಮ್ಯಾಲೆ ಇರುವ ಯುಕ್ತಿಕಾಂತನ ಪಡೆಯಬೇಕಣ್ಣ

ಏಳು ಸ್ಥಾನದ ಪೀಠ ಏರಣ್ಣಾ
ಮೂರೇಳು ಕೂಡಿ ಹತ್ತು ವಿಧಿ ದಶನಾದ ಕೇಳಣ್ಣ
ಮೂಗು ತುದಿಯಾ ಯುಕ್ತಿಪಡೆದು ಮುನಿಗಳೆಲ್ಲವರು ಋಷಿಗಳವರು
ಮೂಲಭಾವವು ತಿಳಿದಮೇಲೆ ಸಾವು ಹುಟ್ಟು ಎರಡೂ ಇಲ್ಲಣ್ಣಾ

ಎಂಟುಗೇಣಿನ ಕೋಟಿ ಬುರುಜಣ್ಣಾ
ತುಂಟಾರು ಕೂಡಿದ ಕುಂಟ ಕುರುಡರು ಎಂಟು ಮಂದ್ಯಣ್ಣ
ಗಂಟು ಬಿದ್ದರು ಗಂಡಿ ಕೋಟೆಗೆ ದಂಡು ದಳವುದ್ದಂಡ ಮಾಡಿ
ಗಂಡನಾಗಿ ತುಂಡು ಮಾಡಿ ಧೀರನಾಗಿ ದಾರಿ ಸೇರಣ್ಣ

ಒಂಬತ್ತು ದ್ವಾರದ ಮನೆಯಣ್ಣಾ
ತುಂಬಿದ ತೊಂಬತ್ತಾರು ವಿವರದ ಘಟವ ಕೇಳಣ್ಣಾ
ಸ್ಥೂಲ ಸೂಕ್ಷ್ಮವು ಸುಳಿವು ತಿಳಿದು ಕಾರಣ ಮಹ
ಕಾರಣೆಂಬೋ ನಿರ್ವಿಕಾರ ನಿಜವು ತಾನಾಗಿ ಗುರುಬೋಧ ತಿಳಿಯಬೇಕು.

ಹತ್ತು ಸುತ್ತಲೂ ಕೋಟೆಮನೆಯಣ್ಣಾ
ಕತ್ತಾಲು ಮಾಡಿ ಚಿತ್ತವಿಟ್ಟು ನಾದ ತಿಳಿಯಣ್ಣಾ
ಯೋಗದಿಂದಲೆ ಜ್ವಾಕೆನಾಗಿ ಮೂಗನಾಗಿ ಮರೆಯಬೇಕಣ್ಣಾ

ನಡೆ ನುಡಿಯ ಒಂದುಮಾಡಣ್ಣಾ
ನುಡಿಲಿಂದ ಕೇಳಿ ನುಡಿಯಲಾರದೆ ನುಡಿದರೇನಣ್ಣಾ
ನುಡಿಯು ಶಾಸ್ತ್ರದ ವೇದ ಪುರಾಣವು ಅರಿಯದವರು
ಅಡಿಗಡಿಗೆ ಕೇಳಿ ದುಡುಕು ಮಾಡದೆ ಧೃಡ ಮತಿಂದಲಿ
ನಡೆಯದಿದ್ದರೆ ನ್ಯಾಯವಲ್ಲಣ್ಣಾ.

ತನ್ನ ತಾನು ತಿಳಿಯಬೇಕಣ್ಣ । ತಾನ್ಯಾರು ತಿಳಿದು
ತನುವು ಲಯ ಮಾಡಿ ಮರೆಯಬೇಕಣ್ಣಾ
ಸಾಧನ ಸಾಂಖ್ಯವು ಮಾಡಿ ತಾರಕ ತತ್ವದೊಳು ಕೂಡಿ
ಅಲ್ಲಿ ಮರೆಯಬೇಕು ಮನಸ್ಸು ಅಲ್ಲಮಪ್ರಭುವೆ ತಾನಣ್ಣ

ಆತ್ಮಲಿಂಗವು ಶುದ್ಧಿ ಮಾಡಣ್ಣಾ
ಆಚಾರದಿಂದಲಿ ಭಾಂಡ ತೊಳೆದು ಪಾಕ ಮಾಡಣ್ಣ
ಚಿತ್ತ ಶುದ್ಧಿಲಿ ಶಿವನ ಪೂಜೆ ಮಾಡಿ । ಮಂಗಳ
ಸೂತ್ರವ ಪಿಡಿದು ರಂಗಮಂಟಪದೊಳಗೆ ಸೇರಿ
ಶೀಲ ಜಂಗಮನಾಗಬೇಕಣ್ಣಾ

❍

# ಮಹಾಗಾಂವ ಮೀರಾಸಾಹೇಬ

## ನಮ್ಮತ್ತಿ

ಎಂಥಾ ಬೆರಕಿದಾಳ ಅವ್ವಾ ನಮ್ಮತ್ತಿ
ಅತ್ತೆ ಮುಚ್ಚಿಇಟ್ಟಾಳ ಬುತ್ತಿ

ಕನಸೆಂಬೊ ಸೊಸಿಗಿ ಅಂತಾಳ ಸರಿ ಸೌಂತಿ
ಮನಸೆಂಬೊ ಮಗನಿಗಿ ಅಂತಾಳ ಕತ್ತಿ
ಅಜ್ಞಾನಿ ಮಾವನ ಮಾಡ್ಯಾಳ ಕೋತಿ
ಧ್ಯಾನ ಎಂಬೋ ಪ್ರಪಂಚಕ ಹಾಕ್ಯಾಳ ಲತ್ತಿ

ಬುಟ್ಯಾಗ ಇಟ್ಟಾಳ ಆರುಮೂರು ತತ್ತಿ
ಕತ್ತರಿಸಿ ಹೊಡದಾಳ ಬಿಡಸಲಿಕ ಹೋದಾಗ ಹತ್ತಿ
ಹತ್ಯಾಗ ಹೊಸದಾಳ ನೂರೆಂಟು ಬತ್ತಿ
ಸತ್‌ಚಿದಾನಂದನ ಗುಡ್ಯಾಗ ಹಚ್ಯಾಳ ಜ್ಯೋತಿ

ಗುರುಮಂತ್ರ ಎಂಬೋದೆ ಗೋದಿ ಚಪಾತಿ
ಮರುವೆಂಬೊ ಮಮ್ಮಕ್ಕಳಗಿ ಬಡದಾಳ ನೆತ್ತಿ
ಆರು ಎಂಬೋ ಅಣತಮ್ಮಗ ಕೊಟ್ಟಾಳ ಎತ್ತಿ
ಕಿರಿಕಿರಿ ತಾಳದೆ ಶಿವಪುರಕ ಹೋದಾಳು ಗರ್ತಿ

ಮಹಗಾಯಿ ಊರಿನಲ್ಲಿ ಇದ್ದಂಗ ದೇವತಿ
ಮಹಾದೇವಿ ಅಂತಾಳ ಇರಲಿ ನನ್ನ ಜತಿ
ಮಹಾಪಂಚಾಕ್ಷರಿಯ ಸರಳ ಕವಿತೆ
ಮಾನ್ಯರಿಗೆ ಕಾಣ್ವದು ಉಂಚಿ ಊದುಬತ್ತಿ

❍

## ಸೂಕ್ಷ್ಮ ಗಡಗಿ

ಗಡಗಿ ತೊಳದು ಅಡಗಿ ಮಾಡ್ಯಾಳಪ್ಪಾ
ಗಂಡಗ ನೀಡ್ಯಾಳಪ್ಪ

ಮುಟ್ಟಾದ ಗಡಗಿ ಮುಡಚಟವ್ವಾ
ಸುಟ್ಟಿದ ಗಡಗಿ ಇಡಬಾರದವ್ವಾ
ಪೆಟ್ಟ ಹಾಕಿದರ ಒಡಿಬಾರದವ್ವಾ
ಇಟ್ಟ ಗಡಗಿ ಹಿಟ್ಟಲಿ ಇಟ್ರು ಕೂಡಬಾರದವ್ವಾ

ತೊಗಲ ಗಡಗಿ ಒಂಬತ್ತ ಹುಗಲವ್ವಾ
ಸ್ಥೂಲಗಡಗಿದು ತಗಲ್ಯಾದವ್ವಾ
ಸೂಕ್ಷ್ಮ ಗಡಗಿ ಮಿಗಲಾದವ್ವಾ
ಕಾರಣ ಗಡಗಿ ಕರಗಿತವ್ವಾ

ಗಡಗಿ ಇಡು ತ್ರಿಗುಣವೆಂಬೋ ವಲಿಮ್ಯಾಲವ್ವಾ
ನಿರ್ಗುಣವೆಂಬೋ ನೀರಹಾಕವ್ವ
ಧರ್ಮವೆಂಬೊ ಧ್ಯಾನದಿ ಗಂಜಿ ಕಾಸವ್ವಾ
ಪರಮ ಪೂಜ್ಯರಿಗಿ ಉಣಶ್ಯಾಳ ಮಲ್ಲವ್ವಾ

ತೊಳೆದ ಗಡಗಿ ತಳದಾಗ ಹೋಯಿತವ್ವಾ
ಉಳಿದ ಗಡಗಿ ಉಳಿಬಿತ್ತವ್ವಾ
ಕಳದ ಗಡಗಿ ಕರಮಸಿ ಆಯಿತವ್ವಾ
ಬೆಳದ ಗಡಗಿ ಬೆಳಕಿಗಿ ಬಂತವ್ವಾ

ಆವಗಿ ಇದ್ದಲೇ ಬರಬೇಕು ಗಡಗವ್ವಾ
ಅಗ್ನಿಪುಟು ಇಲ್ಲದೇ ಆಹಾರ ಸುಡಬೇಕವ್ವಾ
ಅಡಗ್ಯಾಗ ಗಡಗಿಹಾಕಿ ಹಾಡಬೇಕವ್ವಾ
ಗುರು ಮುಟ್ಟಲದಂವಗ ಒಯ್ದು ಕೊಡಬೇಕವ್ವಾ

ಅಕ್ಕಮಹಾದೇವಿ ಗಡಗ್ಯಾಗ ಅಮೃತವ್ವಾ
ಅಕ್ಕರತಿಲಿ ನೀಡ್ಯಾಳ ನಮ್ಮವ್ವಾ
ಚಿಕ್ಕ ಪಂಚಾಕ್ಷರಿಗಿ ಸಕ್ಕರಿ ಹಾಲಾ
ಅಕ್ಕಿಬಾನಾ ಮಾಡಿ ಉಣಶ್ಯಾಳವ್ವಾ

❍

# ಮಂಜಲರ್ಾ ಖಾದರ ಸಾಹೇಬ

## ಶಾಂತಿಯ ಸ್ಥಾನ

ಸಾಕಪ್ಪ ಸಾಕೋ ಸಂಸಾರ
ಯಾಕಪ್ಪ ಇದರ ಗೊಡವಿ ಬಹುಭಾರ
ಬೇಕಾದ್ದು ಮಾಡುಸ್ತಾದ ವ್ಯಾಪಾರ ಇದು
ಸಾಕಷ್ಟು ಪೀಡುಸ್ತಾದರೀ ಸಾರ

ಶಾಂತಿಯ ಸ್ಥಾನವು ಗೊತ್ತಿಲ್ಲ । ವಿ
ಶ್ರಾಂತಿ ತಗೊಳ್ರಿ ಅಂತಾರ ಸುಳ್ಳಾ
ಭ್ರಾಂತಿಯೆಂಬ ಬಲೆಯೊಳು
ಬಿದ್ದು ಬಹಳ ಮಂದಿ ಸತ್ತಾರಪ್ಪ

ಜಡದೇಹವನು ನನ್ನದೆಂದು
ಮಡದಿ ಮಕ್ಕಳ ನಂಬಿಕೊಂಡು
ಕಡು ಬಂಧನದಲಿ ಬಳಲುತ । ಈ
ಭವ ಕಡಲೊಳು ಹೊಡಕೊಂಡ್ಹೋಗುತಾರಪ್ಪ

ಆಚಾರದಿಂದ ಬಿಡೋದು ಗ್ರಹಚಾರ
ಹುಚ್ಚರಾಗಿ ಮಾಡಬೇಕ್ರಿ ವಿಚಾರ
ಸಚ್ಚಿದಾನಂದನ ಪಾದಗಳಲ್ಲಿ
ಹುಚ್ಚನಾಗಿ ಪ್ರಾಣ ಬಿಡಬೇಕಪ್ಪಾ

ಪೊಡವಿಯೊಳು ಪೂರ್ತಿಪಲಿ ಪುರ
ಧೃಡವಾಗಿ ಕಾಯುವ ಜಗದಧಿಕಾರ
ಮೃಡಶ್ರೀ **ಸಿದ್ಧರಾಮಾನಂದರ** ಅಡಿಗಳಿಗ್ಹೋಗಿ ಬಿದ್ದಾರ.

❍

## ಅರಿವ ಹಾದಿ

ಹಾದಿ ನೋಡಿಕೊಳ್ಳಿರೆ ಓ ಅಮ್ಮಗಳಿರಾ
ಹಾದಿ ನೋಡಿಕೊಳ್ಳಿರೆ

ಕೋಟಿ ವರಹಕೊಟ್ಟು । ಕೋರಿದ್ರು ಸಿಗದದು
ಸಾಟಿಯಿಲ್ಲದ ಹಾದಿಯಲ್ಲ । ತುತ್ತು ಕೂಳಿಗಾಗಿ ಮಾತ್ರ

ಸತ್ಪುರುಷರು ನಡೆವ ಹಾದಿ । ನಿತ್ಯವಾಗಿರುವಂಥ ಹಾದಿ
ಸತ್ಯವಾದ ಸದ್ಗುರು ಹಾದಿ। ಸತ್‌ಚಿತ್‌ಗಳ ಅರಿವ ಹಾದಿ.

ಮನಸ ತಿಳಿವಂಥ ಹಾದಿ । ಕನಸುಗಳ ಬಿಡುವಾ ಹಾದಿ
ತನ್ನ ತಾನು ಅರಿವ ಹಾದಿ। ಘನವಾದ ನಿಜಗುರುವ ಹಾದಿ

ಘೋರ ಪಾಪಗಳನ್ನೆಲ್ಲಾ । ಪಾರುಮಾಡುವ ಹಾದಿ
ಶ್ರೀಗುರು ಚರಣ ಕಮಲದಲ್ಲಿ । ಅಮೃತವನು ಸವಿಯೋ ಹಾದಿ

ಪಂಚಭೂತಗಳ ಮರ್ಮಬಿಡಿಸಿ । ಹೇಳುವ ಹಾದಿ
ಸಂಚಿತ ಕರ್ಮರಾಶಿ । ಸುಟ್ಟು ಬಿಟ್ಟುಕೊಡುವ ಹಾದಿ

ಸದ್ದುಮಾಡದೆ ಭವ । ರೋಗವನು ಕಳೆವ ಹಾದಿ
ಶುದ್ಧವಾದ ನಿಜಗುರು । **ಸಿದ್ಧರಾಮಾನಂದರ** ಹಾದಿ

❍

# ಗುರುಗೋವಿಂದ ಭಟ್ಟ

## ಕತ್ತಲೆ ಬೆಳಕು ಮೀರಿ

ನೋಡಿ ನೋಡಿರೋ ಶ್ರೀ ಗುರುರಾಯನ
ಆರು ಬೆಟ್ಟವನೇರಿ ಮೂರುಕೊಳ್ಳ ಸೇರಿ
ಮೀರಿದುನ್ಮನಿ ಮೇಲೆ ಪರಾತ್ಪರ ಗುರುವಿನ

ಒಂಭತ್ತು ಬಾಗಿಲ ದಾಟಿ ಇಂಬಾದ ದ್ವಾರಹೊಕ್ಕು
ಶಂಭು ಶಂಕರನಾ ಒಲಿದು ಸಂಭ್ರಮದಿ
ಸಡಗರದಿಂದಲಿ ತಿರುಗುವ ಗುರುವಿನ

ಕತ್ತಲೆ ಬೆಳಕು ಮೀರಿ ಉತ್ತಮ ಪುರುಷನಾಗಿ
ಸಚ್ಚಿದಾನಂದ ನಿತ್ಯದತ್ತ ಶ್ರೀ ಗುರುವರನ
ಇತ್ತಿಂದತ್ತಲೊಯ್ಯುವ ಸೀಡಿಯಾದವನ **ಗುರುಕಲ್ಮೇಶ್ವರನ**

❍

## ಶ್ರೀರಾಂಪುರ ಪರಪ್ಪಸ್ವಾಮಿ

### ಬಿದಿರುಕಂಟಿನ ಗುಡ್ಡ

ಹಂಗೆ ನೀ ಹೆಂಗ್ಹೋತಿ ಹೆಡ್ಡ ?
ಅಲ್ಲಿ ಭಾರಿ ಭಾರಿ ಬೇರು ಬೆಳೆದ ಬಿದಿರುಕಂಟಿನ ಗುಡ್ಡ

ಕಲ್ಲು ಕಲ್ಲಿಗೆ ಕಣಿವೆ ಕಲ್ಲು । ಗುರುವೆ
ಅಲ್ಲಿ ಕಾಡುತಾವೆ ಕಾಡಭೂತ ಹಗಲೂ ಇರುಳೂ ಮುಳ್ಳು

ಬ್ರಹ್ಮ ವಿಷ್ಣು ಮಹೇಶ್ವರಗೆ ಸಾಧ್ಯವಾಗಲಿಲ್ಲ ಗುರುವೆ
ನೀವು ಬಲ್ಲಂಥರಾದಮೇಲೆ ತಿರುಗಿ ನೋಡಲಿಲ್ಲ

ಹಂಗೆ ನೀ ಹೆಂಗ್ಹೋತಿ ಹೆಡ್ಡ
ಅಲ್ಲಿ ಭಾರಿ ಭಾರಿ ಬೇರುಬೆಳೆದ ಬಿದಿರುಕಂಟಿನ ಗುಡ್ಡ

❍

## ಅಂದೇವಾಡಿ ಗೈಬಿಸ್ಯಾ

### ಆಚಿಕಡಿ ಯಾರೂ ಇಲ್ಲ

ಬ್ರಹ್ಮ ಮಾಯ ಜಗವೆಲ್ಲ
ಸುಮ್ನೆ ಮಾಡಬ್ಯಾಡ ತಗಲ

ನಾನು ಇಲ್ಲ ನೀನು ಇಲ್ಲ
ನೀನು ಇಲ್ಲ ನಾನು ಇಲ್ಲ
ಶೂನ್ಯ ವಿಶೂನ್ಯ : ಆಚಿಕಡಿ ಯಾರೂ ಇಲ್ಲ !

ಹೆಣ್ಣು ಇಲ್ಲ ಗಂಡು ಇಲ್ಲ
ಗಂಡು ಇಲ್ಲ ಹೆಣ್ಣು ಇಲ್ಲ
ಹೆಣ್ಣುಗಂಡಿನ ಸಾಕ್ಷಿ ಅವನೇ ತ್ರಿಕಾಲ

ಪಿಂಡ ಇಲ್ಲ ಬ್ರಹ್ಮಾಂಡ ಇಲ್ಲ
ಬ್ರಹ್ಮಾಂಡ ಇಲ್ಲ ಪಿಂಡಾಂಡ ಇಲ್ಲ
ಪಿಂಡ ಬ್ರಹ್ಮಾಂಡಕ್ಕೆ ಸಾಕ್ಷಿ ಅಖಂಡವನೇ ಸಾಧುಕಾಲ

ಜೀವ ಇಲ್ಲ ದೇಹ ಇಲ್ಲ
ಶಿವ ಜೀವ ಭಾವವಿಲ್ಲ
**ಅಂದೇವಾಡಿ ಗೈಬಿಸ್ಯಾ**ನ ಬ್ರಹ್ಮ ಚೈತನ್ಯವಲ್ಲ

❍

# ಹಸನ್ ಮಾತಾಜಿ

## ನಿತ್ಯಾನಂದನು ಬಂದನು

ಬೆಡಗಿನ ಮಾಯ ಜಗದೊಳಗೊಂದು
ಕಂಡೆನು ಕನಸೊಂದಾ

ಕನಸಿನೊಳಗೆ ಕನ್ನೆಯು ಬಂದು
ಏನೇನು ಕಥೆಯ ಹೇಳುತ ನಿಂತಳು
ಕೆನ್ನೆಗೆ ಕೆನ್ನೆಯನಿಟ್ಟು ನಲ್ಲ ನೀನಾಗೆಂದಳು
ಮಾತನು ನಂಬಿ ಕಣ್ಣನುಬಿಟ್ಟು ನೋಡಲು ಅವಳೇ ಇಲ್ಲ.

ಕಾಡಿನೊಳಗೆ ನಡೆಯುತ ಹೋಗಲು
ಕಂಡೆನು ಅರಮನೆಯೊಂದಾ
ಅಡಿಯನು ಇಟ್ಟು ಒಳಗೆ ಹೋಗಲು
ನೋಡಿದೆ ಹೊನ್ನಿನ ರಾಶಿಯನು
ಸಡಗರದಿಂದಲಿ ಕಣ್ಣನು ಬಿಟ್ಟು
ನೋಡಲು ಹೊನ್ನೇ ಇಲ್ಲ

ಸಂಸಾರವೆಂಬೋ ಸಾಗರದೊಳಗಡೆ
ಈಜಲು ಹೋದೆನಲ್ಲಾ
ಈಷಣ ತ್ರಯದ ಅಲೆಗಳೇಳಲು
ದಡವನು ಸೇರಲೇ ಇಲ್ಲ
ಭಯದೊಳಗೆ ಕಣ್ಣನು ಬಿಟ್ಟು
ನೋಡಲು ಯಾರೂ ಇಲ್ಲ

ದೂರದ ಬೆಟ್ಟವನೇರುತ ಹೋಗಲು
ಕಂಡೆನು ನಾನು ಗುಡಿಯೊಂದು
ಹರುಷದಿ ಒಳಗೆ ಹೋಗಲು ಆಗ
ಗಂಟೆಯ ಬಡಿದರು ಗುಡಿಯಲ್ಲಿ
ಆರತಿ ಬೆಳಗಲು ಕಣ್ಣನು ಬಿಟ್ಟು
ನೋಡಲು ದೇವರೇ ಇಲ್ಲ

ಇಂಥ ಬೆಡಗಿನ ಜಗವನು ನಂಬುತ
ಮೋಸವು ಹೋದೆನಲ್ಲಾ
ಸತತವೂ ಈ ಥರ ಚಿಂತೆಯ ಮಾಡಲು
ಬಂದನು ನಿತ್ಯಾನಂದನು
ಭ್ರಾಂತಿಯ ಬಿಡಿಸಿ **ಕರೀಂ ಪೀರನಿಗೆ**
ಸತ್ಯವನ್ನೆಲ್ಲಾ ತೋರಿದನಲ್ಲಾ

❍

## ರಸ್ತಾಪುರದ ಭೀಮಕವಿ

### ಭಕ್ತಿಯೆಂಬ ಕೊಳಲು


ಕುರುಬರೋ ನಾವು ಕುರುಬರೋ ನಮ್ಮ
ಕರಣೇಂದ್ರಿಯಗಳೆಂಬ ಕುರಿಗಳ ಕಾಯುವ
ಕುರುಬರೋ ನಾವು ಕುರುಬರೋ

ವರಶ್ರುತಿ ದಂಡವ ಕರದೊಳು ಹಿಡಿದು
ಸದ್ಗುರು ಕೃಪೆಯೆಂಬ ಕಂಬಳಿಯ ಹೊದ್ದು
ಪರಮ ವಿವೇಕೆಂಬ ಶುನಕನ ಸಾಕಿ
ಈಶ್ವರ ಭಕ್ತಿಯೆಂಬ ಕೊಳಲನೂದುತಿರುವಂಥ

ಸುವಿಚಾರ ಮಾರ್ಗವ ಪತ್ತಿ
ಕರ್ಮವೆಂಬುವ ಮನದೊಳು ಕುರಿಗಳನು ಬಿಟ್ಟು
ಶ್ರವಣವೆಂಬೊಡೆ ಹುಲ್ಲು ಉತ್ಸಾಹದಿಂದ ತಿನಿಸುತೆ
ತವೆ ಶಾಂತಿಯೆಂಬ ನೀರ್ಗುಡಿಸಿ ಸುಖಿಸುವಂಥ

ಅರಿವರ್ಗವೆಂಬ ಕೊಬ್ಬಿರುವ ತೋಳಗಳಿಗೆ
ವರನಾಯಿಯನು ಕಾವಲನಿಟ್ಟು
ಪರಿತಪಿಸಿ ತಿರುಗುವ ಕುರಿಯನು ದಂಡದಿ
ಪರಿಪರಿ ಬಡಿದು ಎಚ್ಚರಗೊಳಿಸುವಂಥ

❍



# ಅರವಲಿ ಬಿಜಲಿವಸ್ತಾದಿ

## ಸ್ನೇಹವ ಮಾಡು

ಜ್ಞಾನದಿಂದ ಶಿವಧ್ಯಾನ ಮಾಡಣ್ಣಾ । ಹೇ ಜಾಣ
ಜ್ಞಾನದಿಂದ ಶಿವಧ್ಯಾನ ಮಾಡಣ್ಣಾ

ಕಾಮ ಕ್ರೋಧ ಕಡೆಯಂ ಮಾಡು
ಮದಮತ್ಸರ ಮಾಯವ ಮಾಡು
ನಿಂದೆ ಬಂದರೆ ನೀ ಖಾಲಿಮಾಡು
ನಾನೆಂಬುದಕೆ ಬೀಗವ ಮಾಡಣ್ಣಾ


ಕತ್ತಲಾದರೆ ಬೆಳಕ ಮಾಡು
ಬುದ್ಧಿವಂತಿಕೆ ನೋಡಿ ಹೆಂಡತಿ ಮಾಡು
ರಾತ್ರಿ ಆರು ತಾಸಿಗೆ ಭೋಗವ ಮಾಡು

ಸಿಟ್ಟು ಬಂದರೆ ನಿಧಾನ ಮಾಡು
ಹಸಿದು ಬಂದವರಿಗೆ ಅನ್ನವ ನೀಡು
ಪರದೇಶಿಯರಿಗೆ ಪ್ರೀತಿಯ ನೀಡು
ರೊಕ್ಕ ಇದ್ದರೆ ಖರ್ಚು ಮಾಡು
ಎಂಟೆಂಟು ದಿನಕೆ ಲೆಕ್ಕವ ಮಾಡು

ಊರಿಗೊಂದು ಸ್ನೇಹವ ಮಾಡು
ತಾಸೊತ್ತಿರಲಿಕ್ಕೆ ವಸ್ತಿಯ ಮಾಡು
ವೈರಿಯು ಬಂದರೆ ಧೈರ್ಯವ ಮಾಡಣ್ಣಾ

ರಾಮರಹೀಮರ ಸ್ಮರಣೆಯ ಮಾಡು
ಪ್ರಾಸವಿಟ್ಟು ಪದವ ಮಾಡು
ಧರೆಯೊಳು ಅರವಲಿ ಮುಕ್ಕಾಂ ಮಾಡು
ಅಲ್ಲಿ ಬಿಜಲಿಯ ಆಶ್ರಯ ಮಾಡಣ್ಣಾ

❍



# ಅರವಲಿ ಬಿಜಲಿವಸ್ತಾದಿ

## ಸ್ನೇಹವ ಮಾಡು

ಜ್ಞಾನದಿಂದ ಶಿವಧ್ಯಾನ ಮಾಡಣ್ಣಾ । ಹೇ ಜಾಣ
ಜ್ಞಾನದಿಂದ ಶಿವಧ್ಯಾನ ಮಾಡಣ್ಣಾ

ಕಾಮ ಕ್ರೋಧ ಕಡೆಯಂ ಮಾಡು
ಮದಮತ್ಸರ ಮಾಯವ ಮಾಡು
ನಿಂದೆ ಬಂದರೆ ನೀ ಖಾಲಿಮಾಡು
ನಾನೆಂಬುದಕೆ ಬೀಗವ ಮಾಡಣ್ಣಾ

ಕತ್ತಲಾದರೆ ಬೆಳಕ ಮಾಡು
ಬುದ್ಧಿವಂತಿಕೆ ನೋಡಿ ಹೆಂಡತಿ ಮಾಡು
ರಾತ್ರಿ ಆರು ತಾಸಿಗೆ ಭೋಗವ ಮಾಡು

ಸಿಟ್ಟು ಬಂದರೆ ನಿಧಾನ ಮಾಡು
ಹಸಿದು ಬಂದವರಿಗೆ ಅನ್ನವ ನೀಡು
ಪರದೇಶಿಯರಿಗೆ ಪ್ರೀತಿಯ ನೀಡು
ರೊಕ್ಕ ಇದ್ದರೆ ಖರ್ಚು ಮಾಡು
ಎಂಟೆಂಟು ದಿನಕೆ ಲೆಕ್ಕವ ಮಾಡು

ಊರಿಗೊಂದು ಸ್ನೇಹವ ಮಾಡು
ತಾಸೊತ್ತಿರಲಿಕ್ಕೆ ವಸ್ತಿಯ ಮಾಡು
ವೈರಿಯು ಬಂದರೆ ಧೈರ್ಯವ ಮಾಡಣ್ಣಾ

ರಾಮರಹೀಮರ ಸ್ಮರಣೆಯ ಮಾಡು
ಪ್ರಾಸವಿಟ್ಟು ಪದವ ಮಾಡು
ಧರೆಯೊಳು ಅರವಲಿ ಮುಕ್ಕಾಂ ಮಾಡು
ಅಲ್ಲಿ ಬಿಜಲಿಯ ಆಶ್ರಯ ಮಾಡಣ್ಣಾ

❍

# ರೇವಗಿಪುರದ ಸಿದ್ಧಲಿಂಗೇಶ

## ಬಯಲಿಗೆ ಬಯಲು

ಬಹು ದೊಡ್ಡದೀ ಜನ್ಮ ಜಂಬುದ್ವೀಪಾಂತರದಿ
ಬಹು ದೊಡ್ಡದೀ ಜನ್ಮವು
ಭಾಳಾಕ್ಷಹರನ ಸ್ತುತಿಬಿಡದೆ ಕೊಂಡಾಡಿದರೆ
ಬಹುದೊಡ್ಡದೀ ಜನ್ಮವು

ಮೂಡಲ ದಿಕ್ಕಿನೊಳು ಮೂಡಿತ್ತು ಈ ಚಿಕ್ಕಿ
ನಾಡೆಲ್ಲಾ ಬೆಳಕಾದಿತೊ ತಮ್ಮಾ
ಎಡಬಲ ಮಧ್ಯದಿ ಶೋಭಿಸಿ ಕಂಡಿತಿದು
ಪಡೆದು ಬಂದವರಿಗೊ ತಮ್ಮಾ

ಐದರೊಳಗೈದು ಹುದುಗಿಕೊಂಡಿಹುದು
ಐದರೊಳಗೈದು ಕಲಸೊ ತಮ್ಮಾ
ಕಾಯವಿರಹಿತನಾಗಿ ಪ್ರಭುಮಹಿಮೆಯೊಳಗೆ ಸಿಲುಕಿ
ಲಯವಾಗಬೇಕೊ ತಮ್ಮಾ

ಪಶ್ಚಿಮ ದಿಕ್ಕಿನಲಿ ಮಿಂಚಿ ಕೆಂಡವ ಕರೆದು
ಕಿಚ್ಚೆದ್ದು ಅಡಗಿತಲ್ಲೊ ತಮ್ಮಾ
ಸಚ್ಚಿದಾನಂದನ ಧ್ಯಾನದೊಳು ಇರಲಿಕ್ಕೆ
ನಿಶ್ಚಿಂತನಾಗಬೇಕೊ ತಮ್ಮಾ

ಹಸುರು ಹಳದಿ ಕೆಂಪು ಹಸನಾಗಿ ತೋರುತ
ಋಷಿಗಿರಿಯಿಂದ ಉದುರಿತಲ್ಲೊ ತಮ್ಮಾ
ಸೂಸುವ ಮನ ಒಬ್ಬುಳಿಯಾಗಿ ಗುರು
ಘೋಷದೊಳಗೆ ಲಯವಾಗೊ ತಮ್ಮಾ

ಬೈಲಿಗೆ ಬೈಲು ನಿರ್ಬೈಲು ತೋರುತಲಿದೆ
ಅದು ಮೂಲಬ್ರಹ್ಮ ತಿಳಿಯಬೇಕೊ ತಮ್ಮಾ
**ರೇವಗಿಪುರದ ಶ್ರೀ ಸಿದ್ಧಲಿಂಗೇಶನ**
ಶರಣೆನಿಸಬೇಕೊ ತಮ್ಮಾ

❍

# ಐನೂಲಿ ಕರಿಬಸವಾರ್ಯ

## ಚಂಡಿ ಮನವೆ

ಸ್ಥಿರವಾಗಿರುವುದನ್ನು ಎಂದಿಗೂ ದು
ಶ್ಚರಿತದಿ ಚರಿಸುವ ದುರುಳ ಮನವೆ

ಕುಲವಂತನೆಂದು ಮಾರ್ಮಲೆವುತೆ ಬಹು
ನಿರ್ಮಲ ಶೀಲವಂತನೆಂದುಕೊಂಬುವೆ
ನೆಲೆಗಟ್ಟು ತಿರುಗಿ ಅಕುಲಜರೈಶ್ವರ್ಯಕ್ಕೆ
ತಲೆದೂಗಿ ಬಯಸುವ ಹೊಲಸು ಮನವೆ

ಹಿಂಡು ಮಂದಿಯೊಳಿರ್ದ ಮಿಂಡಿವೆಣ್ಣುಗಳನು
ಕಂಡಾಕ್ಷಣಕೆ ತಾಯಿ ತಂಗಿಯೆಂಬುವೆ
ತಂಡವ ಬಿಟ್ಟು ಮುಂಕಂಡಿರ್ಪ ತರುಣಿಯ
ದುಂಡು ಮೊಲೆಗಳಿಗೆಳಸುವ ಚಂಡಿ ಮನವೆ

ಕಳವು ಹಾದರ ಮುಳೀಸು ಪಳಿಯುಮ್ಮಳಿಕೆಯು
ಹಿಂಸೆಗಳ ಮಾಡಬಾರದೆಂಬೆ ಪರರಿಗೆ
ಮುಳುಮುಳುಗಿಸುವ ಗುಣಗಳ ತಾಳ್ದು ಭವದೊಳು
ಮುಳು ಮುಳಗೇಳುವ ಕೊಳಕು ಮನವೆ

ನಡೆನುಡಿವೊಂದಾಗಿ ನಡೆದಾದರೂ
ಬಿಡದೆ ಜಾನಿಸಿಕೊಂಡಿರಂತೆ ಬಳಿಕ
ದೃಢತರೈನೆಲೆ ಪುರದೊಡೆಯ **ಚೆನ್ನ**ವೀರೇಶ
ನಡಿಗಳ ಸೇವೆಯ ಪಡಿಯೊ ಮನವೆ

❍

# ತಿಂಥಣಿ ಮೋನಪ್ಪಯ್ಯ

## ಅಮೃತದ ಹೊಂಡ

ಗುರು ಮುಟ್ಟಿದ ಗೂಳಿ ಬರದಿಂದ ಬರುತಾದೆ
ಸರಿಸಿ ಹೋಯಲಿ ಬೇಡಿ ದುರ್ಜನರು
ಸರಿಸಿ ಹೋದರೆ ನಿಮ್ಮ ಶರೀರಕೆ ಉಳಿವಿಲ್ಲ
ವಿವರಿಸಿ ನೋಡಿರಣ್ಣ ಸರ್ವಲೋಕಾ ಮುಟ್ಟಿದ ಗೂಳಿ

ಎಂಟುಗಜವ ಮೆಟ್ಟಿ ಒಂಟಿಲಿ ಬರುತಾದೆ
ಸುಂಟರಗಾಳಿ ಬಲ್ಮೆಯ ಮುರಿದು
ಉಂಟಾದೋವಾರು ಬೀದಿಯ ಸವರೂತ
ಹೊಂಟು ಹೋಗತಲದೆ ಮೂರು ಮಾಳಿಗೆ ಕಿತ್ತು

ಏಳು ಕೋಣೆಯ ಮುಚ್ಚಿ ಆಳ್ವೇರಿ ಬೀಳ್ಗೆಡಹಿ
ಜಾಳು ಮೂಡಿ ನಾಲ್ವರಸಹಿತ
ಬಾಳುವೆ ಬದುಕೆಲ್ಲ ಹಾಳಾಗಿ ಹೋಯಿತು
ಹೇಳೋದಕೆಡೆಯಿಲ್ಲ ಕೇಳೋರ ಕಾಣೆ

ಒಂಬತ್ತು ಬಾಗಿಲ ಕಂಭಗಳ ಕಿತ್ತಿಟ್ಟು
ಸಂಭ್ರಮದಿಂದಲಿ ಬರುತಿದಕೊ
ತುಂಬಿದ ಅಮೃತದ ಹೊಂಡದೊಳು ಮುಳಿಗ್ಯಾಡಿ
ಕಂಡು ಏರಿತು ಮೇಗಿನರಮನೆಯ

ಓಂಕಾರವೆಂಬ ನಾದವ ಕೇಳಿ ಒಳಹೊಕ್ಕು
ಓಂಕಾರವೆಂಬ ಮಂಚದ ಬಳಿಯ
ಶಂಕರನೆಂದೆಂಬ ಶಿವರೂಪನೆ ಕಂಡು
ಅಹಂಕಾರವಳಿದು ಅಮಳೈಕ್ಯವಾದಂತ

ಅರುವಿದ್ದ ಗೂಳಿಯ ಮುರಿದೋಡುವ ಜನಕೆ
ನರಗುರಿಗಳು ಸಮವೇನದಕೆ
**ವರವಿಯ ಮೋನಣ್ಣ** ಹಿರಿದು ಕಿರಿದುಯೆಲ್ಲ
ವರದು ನೋಡುವವರಿಗೆ ಪರಿಪರಿ ತೋರ್ಪುದು

❍

# ಸೋಮೆಕಟ್ಟೆ ಚನ್ನವೀರಸ್ವಾಮಿ

## ಸದಾಶಿವನತ್ತಲು

ಅಂಬರದೊಳಗೊಂದು ಅಮೃತದ ಶಿಶುಹುಟ್ಟಿ ರಾಮಿತಮ್ಮ
ರಸದುಂಬಿ ಹಣ್ಣಾಯಿತು ಸವಿ ಹೇಗೋ ಎನ್ನಯ ರಾಮಿತಮ್ಮ

ಸೊಕ್ಕು ಜವ್ವನೆಯ ಐಯ್ಯನ ನುಡಿಗೇಳಿ ರಾಮಿತಮ್ಮ ನಾನು
ಹೊಕ್ಕು ಸೇವೆಸೆನದ ಅಕ್ಕ ದಾರಿಯ ಹೇಳು ರಾಮಿತಮ್ಮ
ಮಿಕ್ಕವರಿಗೆ ಕೇಳು ಎಕ್ಕಳಾರಳವಲ್ಲ ರಾಮಿತಮ್ಮ
ಹೊಕ್ಕು ಹೊಗಲು ಭಯ ಇಕ್ಕೆಲದಲಿಯಲ್ಲಿ ರಾಮಿತಮ್ಮ

ಹೊಳೆಮೂಱು ಹರಿವುತಾ ಹೊಳೆಯಿಲ್ಲ ವಾಯಸರಾ ಮುಂದೆ
ಬಲುಗಳ್ಳನುಂಟೊಬ್ಬ ಕಳೆಯಲವನಲತ್ತ ರಾಮಿತಮ್ಮ
ಸುಳಿದಾಡುತಿಹರೇಳು ಬಲುಮನ್ನೆಯರೆಲ್ಲ ರಾಮಿತಮ್ಮ ಅವ
ರುಳಿದು ಮುಂದಕೆ ಹೋದೆ ಚಲುವ ಕೇಳ್ಪ್ರಿಯದ ರಾಮಿತಮ್ಮ

ಕರಿಯೆಂಟೀಗಳು ಸೊಕ್ಕಿ ಇರುತಿರೆ ಅವ ತಪ್ಪಿ ರಾಮಿತಮ್ಮ ದೊಡ್ಡ
ಕರಡಿ ಮಹಿಷನು ಹಲ್ಲುಗಿರಿವ ಪಂಚಾಸ್ಯನು ರಾಮಿತಮ್ಮ
ಮೊರನಂಥ ಘಟಸರ್ಪವಿರುವವೈಸು ವೀರ ರಾಮಿತಮ್ಮ ಅವ
ನೆರೆಗಂಡು ಅಂಜದೆ ಬರೆ ಮುಂದೆ ಭಯವಿಲ್ಲ ರಾಮಿತಮ್ಮ

ಪುರವಾಱುಂಟು ಮುಂಜಿರುವುದೊಂದಜಪುರ ಮುಂದೆ ರಾಮಿತಮ್ಮ
ಅರಸು ಶಿವನ ಪುರ ಮೇಲೆ ರಾಮಿತಮ್ಮ ಕೇಳು
ನೆರೆ ಸದಾಶಿವನತ್ತಲಿರುವಲ್ಲಿಗೆ ದಾರಿ ರಾಮಿತಮ್ಮ

ಎಣಿಕೆಗೆ ಕಾಣದ ಗುಣಿತಕ್ಕೆ ನಿಲುಕದ ರಾಮಿತಮ್ಮ ಪ್ರಾಣ
ಪ್ರಣವದು ಹೊಳೆವುದು ಕೇಳೆನ್ನಯ ರಾಮಿತಮ್ಮ
ಗುಣಿ ಚನ್ನಬಸವನೆಂಬಿನಿವಣ್ಣುವಿಹುದದ ರಾಮಿತಮ್ಮ ಬೇಡಿ
ದಣಿದಾಂಡು ಸುಖಿಯಾಗು ಮಣಿ ಎನ್ನ ಮುದ್ದಿನ ರಾಮಿತಮ್ಮ

❍

# ಹಾಗಲವಾಡಿ ಮುದ್ವೀರಸ್ವಾಮಿ

## ಬೆಳಗ ಕಂಡ ಕಂಗಳು

ಅರಿಯಬಾರದೊಂದು ಘನವನರಿದು ಮನದೊಳು । ನಾನು
ಬೆರೆದು ಭೇದವಿಲ್ಲದಮಲ ಸುಖದೊಳಾಳಿದೆ

ಸ್ಥೂಲದೇಹವೆನಿಪ ಗಿರಿಯ ಕೊನೆಯ ಮೊನೆಯೊಳು । ಎಸೆವ
ಮೇಲುಮನೆಯ ಮಧ್ಯದೊಳಗೆ ಥಳಥಳಿಸುತಿಹ
ಬಾಲಜ್ಯೋತಿ ಕಳೆಯ ಬೆಳಗ ಕಂಡ ಕಂಗಳು । ತುಂಬಿ
ಕಾಲ ಕಾಮ ಕರ್ಮಗಳನು ಮೆಟ್ಟಿನಿಂದೆನೆ

ಸೂಕ್ಷ್ಮದೇಹವೆನಿಪ ಶುದ್ಧ ರಾಜಧಾನಿಯೊಳ್ಮಿಸುಪ
ಸೂಕ್ಷ್ಮದ್ವಾರದವನರಿದು ಪರೀಕ್ಷೆ ಮಾಡಲು
ಪ್ರೇಕ್ಷಿಸುವಡಸಖ್ಯವಾದುದೊಂದು ಚೋದ್ಯವ । ನೋಡಿ
ಮೋಕ್ಷ ಕಾಂತೆಯೊಡನೆ ಸರಸವಾಡುತಿರ್ದೆನು

ರಮಣೀಯವಾದ ಕಾರಣಾಂಗವೆನಿಸುವ । ಪರಮ
ವ್ಯೋಮ ಮಂಡಲದೊಳು ಮನವು ಲೀನವಾಗಲು
ನಾಮರೂಪು ಕ್ರಿಯೆಗಳಳಿದು **ಸಂಗಮೇಶ**ನೊಳ್ಬೇಗ
ಸಾಮರಸ್ಯವಾಗಿ ಬಯಲ ಸೇರಿ ಬದುಕಿದೆ

❍

## ಶಂಕರದೇವ

### ಒಂದಲ್ಲ ಎರಡಲ್ಲ


ಹುಸಿಯೊ ಹುಸಿಯೊ ಹುಸಿಮನವೆ
ಹುಸಿದು ಹುಸಿದು ನೀನು ಮಣ್ಣಾದೆಲೊ

ಗುರುಹಿರಿಯರ ಕೂಡೆ ಸಾಧು ಸತ್ಯರ ಕೂಡೆ
ಪರಮ ಪತಿವ್ರತೆಯರ ಕೂಡೆ
ಶರಣರ ಕೂಡೆ ಸುಧರ್ಮಶೀಲರ ಕೂಡೆ
ಸ್ವರಹಿ ಸ್ವರಹಿ ನೀನು ಸೋರೆಯೊಡಲಾದಲೊ

ನಿನಗೇಕೆ ಗುರುಸೇವೆ ನಿನಗೇಕೆ ಲಿಂಗಪೂಜೆ ?
ನಿನಗೇಕೆ ಜಂಗಮ ದಾಸೋಹ ?
ನಿನಗೇಕೆ ತ್ರಿವಿಧ ತೀರ್ಥ ಪ್ರಸಾದವು ?
ನಿನಗೇಕೆ ಸತ್ಯ ಸದಾಚಾರವು ?

ಒಂದಲ್ಲ ಎರಡಲ್ಲ ಎಂಬತ್ತುನಾಲ್ಕು ಲಕ್ಷ
ವೆಂದು ಜನಿಸಿದೆ ಯೋನಿಮುಖದೊಳಗೆ
ಬಂದುದೆ ಸಾಲದೆ ? ಮತ್ತಿನೇಕೆ ಮರೆದೆಯೊ
ತಂದೆ **ಶಂಕರಲಿಂಗ**ನವತಾರದ

❍



# ನಿಂಬರಗಿ ಮಹಾರಾಜ

## ಕುಂಡಲ ಮಧ್ಯದ ಜ್ಯೋತಿ

ಗುರುತಾ ತೋರಿದ ಗುರುವಿನ
ಮರೆತು ನಾನಿರಲಿ ಹ್ಯಾಂಗ ?
ಗುರುವಿನಿಂದ ಅಧಿಕ ಉಂಟೆ ?
ಪರಕೆ ಪರವಾದ ವಸ್ತು

ಆಧಾರ ಅಗ್ನಿಯ ಸ್ಥಳದ
ಭೇದ ಅರುಹಿ ಕೊಟ್ಟಾ
ನಾದ- ಬಿಂದು- ಕಳೆಯ
ಹಾದಿ ತೋರಿಸಿ ಬಿಟ್ಟಾ
ಸಾಧಿಸಿ ಮೂಲ ಮಂತ್ರ
ಕರ್ಣದೊಳು ಊದಿಬಿಟ್ಟಾ

ನಾಸಿಕ ಕೊನೆಯೊಳು
ಸೂಸುವ ವಾಯುಗಳೈದು
ಭಾಸ್ಕರ- ಕೋಟಿ
ಪ್ರಕಾಶದಿ ಮೆರೆವುದು
ಸಾಸಿರ ದಳದೊಳು
ಸುಳಿ ಸುಳಿದಾಡುವುದು

ಅಂಗ- ಲಿಂಗದ ಸಂ-
ಯೋಗವ ಹೇಳಿದನು
ಹಿಂಗದಿರೆಂದು ಎ-
ಚ್ಚರಕೊಟ್ಟು ಹೋದನು
ಕಂಗಳಾಗ್ರದಿ ಶಿವ-
ಲಿಂಗ ತೋರಿಸಿಕೊಟ್ಟನು

ಕುಂಡಲ ಮಧ್ಯದಿ
ಜ್ಯೋತಿ ಕುಣಿದಾಡುವುದು
ಅಣುರೇಣು ತೃಣಕಾಷ್ಠದಿ
ಸಮನಾಗಿ ನಿಲ್ಲುವುದು
ಪ್ರಣವ ಸ್ವರೂಪ ಪರ-
ಬ್ರಹ್ಮ ತಾನಾದ ಮೇಲೆ

ಭವ ತೊಲಗಿಹೋಯಿತು
ಬಹು ಪುಣ್ಯ ದೊರಕಿತು
ಭುವನ ಕಂದರವಾಯಿತು
ಗವ್ಹರವ ತೋರಿತು
ಅವಿರಲಾತ್ಮಕ **ಗುರು-**
**ಲಿಂಗ ಜಂಗಮನಲ್ಲಿ**

## ವಿವೇಕವೆಂಬ ಅಕ್ಕಿ

ನೆಲ್ಲು ಕುಟ್ಟುಣು ಬಾರಮ್ಮ । ಇಬ್ಬರು ಕೂಡಿ
ನೆಲ್ಲು ಕುಟ್ಟುಣು ಬಾರೆ । ನಿಲ್ಲದೆ ಬೆನ್ನುಹತ್ತಿ
ಹನ್ನೆರಡು ಹದಿನಾರು ನಲ್ಲೆಯರು ಕೂಡಿಕೊಂಡು

ತನುವೆಂಬ ಒಳ್ಳುಮಾಡಿ । ಪ್ರಾಣವೆಂಬ
ಒನಕಿಲೆ ಹೇರಿಹಾಕಿ
ವಿವೇಕವೆಂಬ ಅಕ್ಕಿ ಹಸನಮಾಡಿ
ಹಳ್ಳ ತಗಿಯಮ್ಮಾ ಜ್ಞಾನದೃಷ್ಟಿಲೆ ನೋಡಿ

ವಾಸನತ್ರಯಗಳೆಂಬ । ಒಲೆಗುಂಡು ಮಾಡಿ
ಪ್ರಾರಬ್ಧ ಗಡಿಗೆ ಹೇರಿ
ಕಾಮಕ್ರೋಧವೆಂಬ ಕಟ್ಟಿಗೆ ಉರಿಮಾಡಿ
ಪ್ರಪಂಚ ಪರಮಾರ್ಥ ಒಳಹೊರಗೆ ನೋಡಿ

ಕುದಿಯುವ ಸಮಯದಲ್ಲಿ । ಮದದ ಉಕ್ಕು
ಮೀರಿ ಬರುತಲದಮ್ಮಾ
ಸತ್ವಧೀರ ಎಂಬ ಹುಟ್ಟಿಲೆ ಹೊಡೆದು
ನೆಟ್ಟಗೆ ಅಡಿಗೆಯ ದಿಟ್ಟಾಗಿ ಮಾಡಮ್ಮಾ

ಪರಮಾನ್ನ ಪಾಯಸವು । ಪ್ರಾರಬ್ಧದಿ
ಪ್ರಾಪ್ತವಾದೀತು ಏಳಮ್ಮಾ
**ಗುರುಲಿಂಗ ಜಂಗಮ** ಬೀಗರ ಕೂಡಿಕೊಂಡು
ಸ್ವಾನಂದ ಎಡಿಮಾಡಿ ಸವಿಯ ನೋಡಮ್ಮಾ

❍



# ಅನುಬಂಧ

ಕೆಲವು ಅಭಿಪ್ರಾಯಗಳು
ತತ್ತ್ವಪದಕಾರರ ಪರಿಚಯ
ಪಾರಿಭಾಷಿಕ ಶಬ್ದಕೋಶ
ಅರ್ಥಕೋಶ
ತತ್ತ್ವಪದಗಳ ಅಕ್ಷರಾನುಕ್ರಮ
ಸಹಾಯಕ ಗ್ರಂಥಗಳು
ಸಂಪಾದಕರ ಪರಿಚಯ

....ಒಂದೆಡೆ ಪಂಡಿತರಿಗೆ ರುಚಿಸುವಂತಹ ಚಂಪೂ ಗ್ರಂಥಗಳ ರಾಶಿ ಬೇಕಾದಷ್ಟು ದೊರೆಯುತ್ತಿದ್ದರೆ; ಇನ್ನೊಂದೆಡೆ ಜನಸಾಮಾನ್ಯರಿಗೆ ರಂಜಿಸುವಂತಹ ಕೇವಲ ಸ್ಫೂರ್ತಿಯಿಂದ ಹೊರ ಹೊಮ್ಮಿದ ಜನಪದ ಸಾಹಿತ್ಯವು ಹೇರಳವಾಗಿ ಸಿಕ್ಕುತ್ತದೆ. ಇವೆರಡರ ನಡುವೆ ಪದ-ವಚನ-ಹಾಡುಗಬ್ಬಗಳು. ವಿವಿಧ ರಾಗಗಳಲ್ಲಿ ರಚಿತವಾದ ನೀತಿ, ಭಕ್ತಿ ಹಾಗು ತತ್ತ್ವಪದ ಪದಗಳು..... ಕನ್ನಡ ಸಾಹಿತ್ಯದ ಆರಂಭ ಕಾಲದಿಂದ ವೀರಶೈವ ಸಾಹಿತ್ಯದುದಯದವರೆಗೆ ನಿಜವಾದ ಹಾಡುಗಬ್ಬಗಳು ನಮ್ಮ ಕಣ್ಣಿಗೆ ಬೀಳುವುದಿಲ್ಲವೆಂದೇ ಹೇಳಬಹುದು.... ಹಲವು ಹಾಡುಗಳು ಭಜನೆಯ ಪದಗಳಾಗಿ ಮಾರ್ಪಟ್ಟಿವೆ. ಸಾಮಾನ್ಯ ಜನರು ಹಬ್ಬ-ಹುಣ್ಣಿಮೆ ಮೊದಲಾದ ವಿಶೇಷ ಪ್ರಸಂಗಗಳಲ್ಲಿ ಉತ್ಸಾಹದಿಂದ ಹಾಡಿ ಹರ್ಷಿಸುವಂತೆ ಹೋಳಿ ಪದಗಳ ದಾಟಿಯಲ್ಲಿ ಜ್ಞಾನದ ಹೋಳಿ ಪದಗಳು ರಚಿತವಾಗಿರುವುದನ್ನು ಇಲ್ಲಿ ಕಾಣುತ್ತೇವೆ. ಈ ಪದಗಳೆಲ್ಲ ಮೊದಲಿನಿಂದಲೂ ಸಾಮಾನ್ಯ ಜನತೆಯ ಬಾಯಲ್ಲಿಯೇ ನಲಿದು ಬಂದುದರಿಂದ, ಅಕ್ಷರ ಜ್ಞಾನವಿಲ್ಲದ ಅವರು ತಮಗೆ ಬಗ್ಗುವಂತೆ ವಿದ್ರೂಪ ಉಚ್ಚಾರದಿಂದ ಹಾಡಿದಂತೆ.... ಪ್ರಚಾರಗೊಂಡಿವೆ.

**-ಶಿ ಶಿ ಬಸವನಾಳ**

....ಈ ಹಿರಿಯ ಕನ್ನಡ ಅನುಭಾವಿಗಳು-ಸಂತರು-ಶೈವ ಹಾಗು ವೈಷ್ಣವ ಎಂಬ ಎರಡು ಪಂಗಡಗಳಿಗೆ ಸೇರಿರುವರು. ಆದರೆ ನಿಜವಾದ ಅನುಭಾವಿಯು ಶೈವನೂ ಇರುವುದಿಲ್ಲ, ವೈಷ್ಣವನೂ ಇರುವುದಿಲ್ಲ..... ಕನ್ನಡ ಸಂತರು ಪರಮಾತ್ಮನನ್ನು ಸಾಕ್ಷಾತ್ಕರಿಸಿಕೊಳ್ಳಲು ಬಳಸಿದ ಧ್ಯಾನ ಪದ್ಧತಿಯು ತುಂಬ ಅಪೂರ್ವವಾದುದು... ಕನ್ನಡ ಸಂತರು ಬಳಸಿದ ಪದ್ಧತಿಯು ತುಂಬ ಅಪೂರ್ವವಾದುದು ಎಂಬುದನ್ನು ಗಮನಿಸಬೇಕು. ಹಿಂದಿ ಸಾಹಿತ್ಯದಲ್ಲಿ ಕಬೀರರು ಇದನ್ನೇ ಸಮರ್ಥಿಸಿರುವವರು ಎಂಬುದು ನಿಜ. ಆದರೆ ಸೂರದಾಸ, ತುಲಸೀದಾಸ ಇಲ್ಲವೇ ಮೀರಾಬಾಯಿಯವರು ಇದನ್ನು ಅಷ್ಟೊಂದು ಸಮರ್ಥಿಸುವುದಿಲ್ಲ. ...ಈರೀತಿ ಕನ್ನಡ ಅನುಭಾವಿಗಳು ಜಗತ್ತಿನ ಅನುಭಾವಿಗಳಲ್ಲಿ ಬಹು ಉನ್ನತವಾದ ಸ್ಥಾವನ್ನು ಪಡೆದಿರುವವರು. ಜಗತ್ತಿನ ಅನುಭಾವಕ್ಕೆ ಒಳ್ಳೆಯ ಬೆಲೆಯುಳ್ಳ ಕಾಣಿಕೆಯನ್ನು ಸಲ್ಲಿಸಿರುವರು.

**- ಡಾ. ಆರ್ ಡಿ ರಾನಡೆ**

.....ನವೋದಯದ ಆರಂಭದ ಕನ್ನಡ ಕವಿತೆಯ ಕೃಷಿಕಾರರು ಎಂದರೆ 18-19ನೆಯ ಶತಮಾನಗಳಲ್ಲಿ ಆಗಿಹೋದ ಅನುಭಾವಿ ಕವಿಗಳು. ಇವರನ್ನು ತತ್ತ್ವದ ಪದಕಾರರೆಂದು

ಕರೆದುಕೊಂಡು ಬರಲಾಗಿದೆ. ಕಾಲಾತೀತ ಪಾತ್ರಸೃಷ್ಟಿ, ಕಲ್ಪನಾಂಶ, ಮೋಹಕವಾದ ಗೇಯಾತ್ಮಕತೆ, ಮೂಲಭೂತ ಚಿಂತನೆ-ಈ ಕವಿಗಳ ಮೂಲಕ ಅಭಿವ್ಯಕ್ತಗೊಂಡಿರುವುದನ್ನು ನಾವು ಗಮನಿಸಬಹುದಾಗಿದೆ. ಈ ಕವಿಗಳು ಕನ್ನಡ ಕಾವ್ಯಪರಂಪರೆ ಮತ್ತು ಜನಪದ (ಜನಪ್ರಿಯ) ಪರಂಪರೆಯ ಸೃಜನಶೀಲ ಒಪ್ಪಂದ ಈ ಕವಿಗಳ ರಚನೆಗಳ ಸಂದರ್ಭದಲ್ಲಿ ಕಾಣುವ ಮುಖ್ಯ ಅಂಶ. **ಶಿಶುನಾಳ ಶರೀಫ, ನಾಗಲಿಂಗಯತಿ, ಸರ್ಪಭೂಷಣ ಶಿವಯೋಗಿ, ಬಂಡೆ ಗವಿಸಿದ್ದ, ಗೋವಿಂದ ಭಟ್ಟ**, ಮುಂತಾದ ಅಸಂಖ್ಯಾತ ಚಾರಣ ಕವಿಗಳು ಒಂದನೆಯ ಶತಮಾನದ ಕ್ಯಾಲೆಂಡರ್ ತೆರೆಯುವ ಮುನ್ನ ಆಗಿಹೋಗಿದ್ದಾರೆ. ಇವರ ರಚನೆಗಳು ನಮ್ಮ ಪ್ರಾದೇಶಿಕ ಸಂಸ್ಕೃತಿಯ ಆಂತರ್ಯದಲ್ಲಿ ಇಂದಿಗೂ ಜೀವಂತವಾಗಿ ಸೇರಿಕೊಂಡಿವೆ. ಅದನ್ನು ರಚನೆ ಮಾಡಿದವರ ಹೆಸರನ್ನೇ ತಿಳಿಯದೆ, ವಿವಿಧ ವಾಚನ ಸಂಪ್ರದಾಯಗಳಿಗೆ ಗುರಿಯಾಗಿ ಅವುಗಳನ್ನು ಹಾಡಿಕೊಂಡು ಬರಲಾಗಿದೆ. ಜನಪದ ಗಾಯಕರೆನಿಸಿಕೊಳ್ಳುವವರು ಈ ರಚನೆಗಳನ್ನು ಸಾಕಷ್ಟು ಸಂಖ್ಯೆಗಳಲ್ಲಿ ಹಾಡಿಕೊಂಡೇ ಬಂದಿದ್ದಾರೆ.

.....ಕನ್ನಡ ಭಾಷೆಯ ಸಹಜವಾದ ಶೈಲಿಕ ಸ್ತರಗಳನ್ನು ಈ ಅನುಭಾವಿ ಕವಿಗಳು ತಮ್ಮ ರಚನೆಗಳಲ್ಲಿ ತೋರಿದ್ದಾರೆ.... ಕಾವ್ಯದ ಸಂಪನ್ಮೂಲಗಳನ್ನು ಬಳಸಿಕೊಳ್ಳುವುದರಲ್ಲಿ ಶರೀಫ, ಸರ್ಪಣ್ಣನಂತಹ ಕವಿಗಳು ತೋರುವ ಎಚ್ಚರವನ್ನು ಮತ್ತು ಅವರು ಪ್ರತಿನಿಧೀಕರಣಗೊಳಿಸುವ ವಾಸ್ತವಿಕತೆಯನ್ನು ನಾವು ಇನ್ನೂ ಸೂಕ್ಷ್ಮವಾಗಿ ತಿಳಿಯಬೇಕಾಗಿದೆ.

.....ಈ ಅನುಭಾವಿ ಕವಿಗಳು ತಮ್ಮ ಅಂತರಂಗದ ಸೂಕ್ಷ್ಮ ಕಂಪನಗಳನ್ನು, ಆರೋಗ್ಯಕರ ಪ್ರೇಮವನ್ನು ಬ್ರಿಟಿಷರ ದಬ್ಬಾಳಿಕೆ ಮತ್ತು ಕ್ರೂರ 'ಯಂತ್ರ-ನಾಗರೀಕತೆ'ಯ ಸಂದರ್ಭದಲ್ಲಿ ಅಭಿವ್ಯಕ್ತಿಸಿದವರು. ತಮ್ಮ ಸುತ್ತಣ ಸಮುದಾಯದ ಸಂದರ್ಭಗಳಲ್ಲಿ ನಾಶಗೊಳ್ಳುತ್ತಿದ್ದ ಮನುಷ್ಯ ಸಂಬಂಧಗಳನ್ನು ಕುರಿತು ಅವರು ಬರೆದರು. ಅವರ ರಚನೆಗಳಲ್ಲಿ ರಾಜಕೀಯ ಕೋಲಾಹಲ, ಅಸ್ಥಿರ ಆರ್ಥಿಕ ಬದುಕು, ಗುಲಾಮಗಿರಿಗೆ ತಮಗೆ ಅರಿವಿಲ್ಲದಂತೆಯೇ ಒಳಗಾದ ಸ್ಥಿತಿ ಇವುಗಳ ಹಿನ್ನೆಲೆಯಲ್ಲಿ ತಮ್ಮ ಪ್ರಸ್ತುತವನ್ನು ಗುರುತಿಸಿಕೊಂಡಿರುವ ಸ್ವರೂಪವನ್ನು ಈ ರಚನೆಗಳಲ್ಲಿ ಕಾಣಬಹುದು.

**-ಕಿ ರಂ ನಾಗರಾಜ**

.....**ತ**ತ್ವಪದಕಾರರದು ಒಂದು ಜೀವಂತ ಪರಂಪರೆ. ಅದು ಈಗ, ಇಲ್ಲೂ ಇದೆ. ಅದಿರುವುದು ಗತದ ಪುಸ್ತಕಗಳ ಹಾಳೆಗಳಲಲ್ಲ.

ನಿಜವಾದ ಕಾಡುಗಳಂತೆ ಈ ರೂಪಾತ್ಮಕವಾದ ಕಾಡೂ ಒತ್ತಡಗಳ ಇಂದಿನ ಬದುಕಿನ ಅಂಚಿಗೆ ದೊಡಲ್ಪಟ್ಟಿದೆ-ಆದರೂ ಇನ್ನೂ ಇದೆ.

ತತ್ತ್ವಪದ ಗತದ ಕುತೂಹಲವಾದ ಒಂದು ಕಾವ್ಯ ಪ್ರಕಾರವಲ್ಲ. ಅದೊಂದು ಸಂಸ್ಕೃತಿ. ಆಚರಣೆ. ಯಾಕೆಂದರೆ ಅದಕ್ಕೆ ಒಂದು ಸಾಮೂಹಿಕ ಚಹರೆಯಿದೆ. ಸಂಗೀತ, ಹಾಡುಗಾರಿಕೆ, ತಾತ್ವಿಕತೆ, ಧೂಪದೀಪಗಳು ಎಲ್ಲವೂ ಅದರಲ್ಲಿ ಕೂಡಿಕೊಳ್ಳುತ್ತವೆ. ಜೊತೆಗೆ ಅದಕ್ಕೊಂದು ಪವಿತ್ರ ಭೂಗೋಳವಿದೆ. ಅದು ನಡೆಯುವುದು ಸಂತರ ಸನ್ನಿಧಿಯಲ್ಲಿ, ಗದ್ದುಗೆಯಲ್ಲಿ ದೇವಸ್ಥಾನದ ಹಜಾರದಲ್ಲಿ. ...ಮಠ, ದೇಗುಲ, ಶಾಸ್ತ್ರ, ಪುರಾಣ, ಪುರೋಹಿತ, ಜಗದ್ಗುರು - ಈ ಮುಂತಾದ ವರ್ತುಲಗಳಿಂದ ದೂರ ಉಳಿದ, ಬೇರೆ ಬೇರೆ ವೃತ್ತಿಗಳ ಸ್ತ್ರೀ-ಪುರುಷರು ಅಬಾಲವೃದ್ಧರಾಗಿ ಪಾಲುಗೊಳ್ಳುವ ಈ ಆಚರಣೆ. ಈ ವಾತಾವರಣ ಎಲ್ಲ ಭಾಗಿಗಳಿಗೆ ತಮ್ಮ ಬದುಕಿನ ವಿವರಗಳ ಮೂಲಕ ಬೇರೊಂದು ಬೆಳಕನ್ನು ಕಾಣುವ, ಬೇರೊಂದು ಬೆಳಕಿನ ಮೂಲಕ ತಮ್ಮ ದೈನಿಕ ವಿವರಗಳನ್ನು ನೋಡುವ,ಇಹ-ಪರದ ದ್ವಂದ್ವಗಳನ್ನು ದಾಟಿದ ಅವಕಾಶವನ್ನು ಒದಗಿಸಿಕೊಡುತ್ತದೆ.

...ತತ್ತ್ವಪದಗಳು ಒಂದು ಅನುಭವದ ಘಟನೆಯಿಂದ ಹುಟ್ಟುತ್ತವೆ. ಆ ಘಟನೆಗಳ ತತ್ತ್ವವನ್ನು ಬೇಧಿಸುವುದರ ಮೂಲಕ ಆ ಅನುಭವವನ್ನು ಅನುಭಾವಕ್ಕೆ ತಿರುಗಿಸುತ್ತವೆ.

....ಬೇರೆ ಬೇರೆ ಸಂಸ್ಕೃತಿ, ನಂಬಿಕೆಗಳ ಜನರ ನಡುವೆ ಒಂದಾಗಿ ಬಾಳುತ್ತಿದ್ದ ತತ್ತ್ವಪದಕಾರರು ಅವರ ನಂಬಿಕೆ, ಆಚರಣೆಗಳನ್ನು ಜರೆಯದೆ, ಅನುಭಾವದ ಮೂಲಕ ಅವೆಲ್ಲವನ್ನೂ ಏಕಸೂತ್ರದಲ್ಲಿ ಪೋಣಿಸುವ ಹಾದಿಯಲ್ಲಿದ್ದರು. ಅವರ ಲೋಕದಲ್ಲಿ ಎಲ್ಲ ಆಚರಣೆಗಳೂ, ವಿಧಿಗಳೂ ಸಣ್ಣಪುಟ್ಟ ಕೆಲಸ ಕಾರ್ಯಗಳು - ಎಲ್ಲವೂ ಆಧ್ಯಾತ್ಮಿಕ ಸಂಕೇತಗಳಾಗುತ್ತವೆ. ಜನಪದರ ಹಲವು ಮುಖಗಳ ಸಂಸ್ಕೃತಿಯನ್ನು ಅನುಭಾವದ ತಿರುಳಾದ ಅಧ್ವಯದ ಕೇಂದ್ರದ ಕಡೆಗೆ ತತ್ವಪದಕಾರರು ಸೆಳೆದದ್ದು ಹೀಗೆ.

ಜಗತ್ತು ಧರ್ಮದ್ವೇಷದ ಕೊಂಡ ಹಾಯುತ್ತಿರುವ ಇವತ್ತಿನ ಸಮಸ್ಯೆಗಳಿಂದ ತತ್ತ್ವಪದಕಾರರ ನಾನತ್ವವನ್ನು ಒಪ್ಪುವ ಏಕತ್ವದ ಕಲ್ಪನೆ ಒಂದು ಒಳದಾರಿಯನ್ನು ತೋರಬಲ್ಲದೆ ?

**- ಎಚ್ ಎಸ್ ಶಿವಪ್ರಕಾಶ**

....**ಸೂ**ಫಿ ಪಂಥದಲ್ಲಿರುವಂತೆ ತತ್ತ್ವಪದಕಾರರಲ್ಲಿಯೂ ಗುರುವನ್ನೇ ಸಾಕ್ಷಾತ್ ದೈವವೆಂದು ಭಾವಿಸುವ, ಗುರುವನ್ನು ತಂದೆಯಂತೆ, ಗಂಡನಂತೆ ಪರಿಭಾವಿಸುವ ಗುರುಪ್ರಾಧಾನ್ಯತೆಯೇ ಕಂಡುಬರುತ್ತದೆ. ಗುರುವಿಲ್ಲದೆ ಅನುಭಾವದ ಸಾಕ್ಷಾತ್ಕಾರವಿಲ್ಲವೆಂದೇ ತತ್ತ್ವಪದಕಾರರ ಆಳವಾದ ನಂಬಿಕೆಯಾಗಿತ್ತು. ಅದಕ್ಕಾಗಿ ಗುರು ಸ್ತುತಿಗಳೇ ಸೃಷ್ಟಿಯಾಗಿವೆ. ಬಹುಶಃ ಈ ಗುರು-ಶಿಷ್ಯ ಪರಂಪರೆ ಸೂಫಿಯಿಂದ ಪಡೆದ ಬಳುವಳಿಯಿದ್ದಂತಿದೆ....

ವೈಧಿಕ ಸಂಸ್ಕೃತಿಯ ತಾರತಮ್ಯವನ್ನು ಯಾವೊಬ್ಬ ತತ್ವಪದಕಾರನೂ ಪ್ರಭಟಿಸದೇ ಬಿಟ್ಟಿಲ್ಲವೆಂಬುದೇ ಅವು ಬಲವಂತ ಹೇರಿಕೆಯ ಸಂಸ್ಕೃತಿಯೆಂಬ ಅರಿವು ಈ ಎಲ್ಲಾ ತತ್ತ್ವಪದ ಕಾರರಿಗೂ ಇತ್ತೆಂಬ ಬಗ್ಗೆಯೂ ಮಾಹಿತಿ ಕೊಡುವಂತಿದೆ. ಶೋಷಿಸುವುದರ ಹೊರತಾದ

ಬೇರ್‍ಯಾವ ಘನಕಾರ್ಯವೂ ಇಲ್ಲದ ವರ್ಣಾಶ್ರಮವನ್ನು ಆಧ್ಯಾತ್ಮದ ಪರಿಧಿಯಿಂದ ಹೊರಗೆಳೆದು ತಂದು, ಅದರ ತರ್ಕ, ಕಾರಣ ಮತ್ತು ಪ್ರವೃತ್ತಿಗಳನೆಲ್ಲ ಜಾಲಾಡಿದ್ದಾರೆ. ವೈದಿಕ ಧರ್ಮದ ಬಳುವಳಿಯಾದ ಈ ವರ್ಣಾಶ್ರಮವನ್ನು ಆಧ್ಯಾತ್ಮದ ನೆಲೆಯಿಂದಲೇ ಪ್ರಶ್ನಿಸಿದ್ದಾರೆ. ಹೇರಿಕೆಯ ಈ ಸಂಬಂಧವನ್ನು ತಾವು ಮೀರುವುದಲ್ಲದೆ, ಜಾತಿ ಪದ್ಧತಿಯನ್ನು ಮೀರದೆ ಸಾಧಕನಿಗೆ ಅನ್ಯದಾರಿಗಳಿಲ್ಲವೆಂದು ಮನದಟ್ಟು ಮಾಡಿಸುವ ಪ್ರಯತ್ನಗಳನ್ನು ನಡೆಸಿದ್ದಾರೆ.

ವೈದಿಕ ವಸಾಹತುಶಾಹಿಯ ಮೇಲರಿಮೆಯನ್ನು ಹೀಗೆ ಶತ-ಶತಮಾನಗಳ ಕಾಲದಿಂದಲೂ ದೇಸೀಯವಾದ ಸೃಜನಶೀಲ ಶಕ್ತಿ ವಿರೋಧಿಸುತ್ತಲೇ ಬಂದಿರುವುದೂ ಮತ್ತು ಅದರಂಗವಾಗಿಯೇ ಇರವ ತತ್ತ್ವಪದಕಾರರೂ ಕೂಡ ವಿರೋಧಿಸಿರುವ ಅಂಶ ತುಂಬಾ ಮಹತ್ವದ್ದೆನಿಸುತ್ತದೆ.

ಸ್ವದೇಶಿ ವಸಾಹತುಶಾಹಿಯ ಈ ಅನಿಷ್ಟ ಸಾಂಸ್ಕೃತಿಕ ಹೇರಿಕೆಯನ್ನು ಆಧ್ಯಾತ್ಮದ ನೆಲೆಯಲ್ಲೇ ಪ್ರತಿಭಟಿಸುತ್ತ ಬಂದಿರುವ ವಚನಕಾರರ, ಅನುಭಾವಿಗಳ, ದಾಸರ, ಜನಪದರ ಮತ್ತು ತತ್ತ್ವಪದಕಾರರ ಬಹುದೊಡ್ಡ ಪರಂಪರೆಯೇ ಇರುವುದನ್ನು ಕೂಡ ನಾವಿಲ್ಲಿ ಗಮನಿಸಬಹುದಾಗಿದೆ.

**- ಲಕ್ಷ್ಮೀಪತಿ ಕೋಲಾರ**

....**ತ**ತ್ತ್ವಪದಗಳನ್ನು ವಚನ ಸಾಹಿತ್ಯದೊಡನೆ ತೌಲನಿಕ ದೃಷ್ಟಿಯಿಂದ ಪರಿಶೀಲಿಸಿದಾಗ ಭಾಷೆ ಮತ್ತು ಬಂಧಗಳ ನೆಲೆಯಲ್ಲಿ ಹಲವಾರು ವಿಶಿಷ್ಟ ಲಕ್ಷಣಗಳು ಕಂಡುಬರುತ್ತವೆ. ಇಂತಹ ವಿಶಿಷ್ಟ ಲಕ್ಷಣಗಳ ಹಿಂದೆ ತಾತ್ವಿಕ ದೃಷ್ಟಿ-ಧೋರಣೆಗಳ ಪ್ರಭಾವವನ್ನೂ ಗುರುತಿಸಬಹುದು. ವಚನಗಳ ಭಾಷೆ ಮತ್ತು ಬಂಧಗಳಿಗೂ ತತ್ವಪದಗಳ ಭಾಷೆ ಮತ್ತು ಬಂಧಗಳಿಗೂ ಇರುವ ವ್ಯತ್ಯಾಸ ಒಡೆದು ಕಾಣುವಂತಹುದು. ವಚನಗಳ ಭಾಷೆ ಮತ್ತು ಬಂಧಗಳಲ್ಲಿ ಏಕ ಶಿಲಾಕೃತಿಯ (monolothic) ಅಭಿವ್ಯಕ್ತಿಯಿದೆ. ಒಬ್ಬ ವಚನಕಾರ ಯಾವುದೇ ವೃತ್ತಿ-ಜಾತಿ ಅಥವಾ ಪ್ರಾಂತ್ಯಕ್ಕೆ ಸೇರಿರಲಿ ವಚನಗಳ ಭಾಷೆ ಏಕರೂಪಿಯಾಗಿ ಕಾಣುತ್ತದೆ. ಪ್ರಾದೇಶಿಕವಾದ ಪ್ರಾಂತ ಭೇದಗಳು ವಚನಗಳಲ್ಲಿ ಕಂಡುಬರುವುದಿಲ್ಲ. ಇದಕ್ಕೆ ವ್ಯತಿರಿಕ್ತವಾಗಿ ತತ್ತ್ವಪದಗಳ ಭಾಷೆ ಮತ್ತು ಬಂಧಗಳು ಬಹುಮುಖವಾಗಿ ಪ್ರಕಟಗೊಂಡಿದೆ. ಪ್ರಾದೇಶಿಕವಾದ ಪ್ರಾಂತಭೇದಗನುಗುಣವಾಗಿ ತತ್ತ್ವಪದಗಳನ್ನು, ತತ್ತ್ವಪದಕಾರರನ್ನು ವಿಂಗಡಿಸಬಹುದಾಗಿದೆ. ಪದಕೋಶದಿಂದ ಹಿಡಿದು ರೂಪಕ, ಪ್ರತಿಮೆಗಳವರೆಗೆ ಪ್ರತಿಯೊಂದು ನೆಲೆಯಲ್ಲೂ ಇಂತಹ ವ್ಯತ್ಯಾಸಗಳನ್ನು ತತ್ವಪದಗಳಲ್ಲಿ ಸ್ಪಷ್ಟವಾಗಿ ಗುರುತಿಸಬಹುದು.

**- ವಿ ಚಂದ್ರಶೇಖರ ನಂಗಲಿ**

# ತತ್ತ್ವಪದಕಾರರ ಪರಿಚಯ

## ಅಲ್ಲಮ ಪ್ರಭು

೧೨ ನೇ ಶತಮಾನದ ವಚನಕಾರ, ಕನ್ನಡ ಕಾವ್ಯಪ್ರತಿಭೆಯ ಶಿಖರ ಅಲ್ಲಮ ಪ್ರಭು. **ಗುಹೇಶ್ವರ** ನೆಂಬ ಮುದ್ರಿಕೆಯಲ್ಲಿ ಈತನ ವಚನಗಳು ಪ್ರಕಟವಾಗಿವೆ.

## ಅಕ್ಕಾಮಹಾದೇವಿ

೧೨ನೇ ಶತಮಾನದ ವಚನಕಾರ್ತಿ. **ಚನ್ನಮಲ್ಲಿಕಾರ್ಜುನ** ಎಂಬ ಮುದ್ರಿಕೆಯೊಂದಿಗೆ ಈಕೆಯ ವಚನಗಳು ಕನ್ನಡ ಕಾವ್ಯ ಸಂಸ್ಕೃತಿಯಲ್ಲಿ ಜನಪ್ರಿಯವಾಗಿವೆ.

## ಬಸವಣ್ಣ

೧೨ ನೇ ಶತಮಾನದ ವಚನಕಾರ. **ಕೂಡಲಸಂಗಮ** ಬಸವಣ್ಣನ ವಚನಗಳ ಮುದ್ರಿಕೆಯಾಗಿದೆ. ಕನ್ನಡ - ಕಾವ್ಯ ಸಮಾಜದಲ್ಲಿ ಜನಪ್ರಿಯ ಕವಿ ಬಸವಣ್ಣ.

## ನಿಜಗುಣಯೋಗ

ಈತನ ಕಾಲ - ದೇಶಗಳ ಕುರುಹು ದೊರೆತಿಲ್ಲ, ೧೨ ನೇ ಶತಮಾನದ ಕೆಲವು ವಚನಕಾರರು ಈತನನ್ನು ಸ್ಮರಿಸಿದ್ದಾರೆ.

## ನೀಲಾಂಬಿಕೆ

೧೨ನೇ ಶತಮಾನದಲ್ಲಿ ಮೈದೋರಿದ ವಚನಕಾರ್ತಿ. ಬಸವಣ್ಣನ ಪತ್ನಿ.

## ಪುರಂದರ ದಾಸ

(೧೪೮೪- ೧೫೬೪) ದಾಸಪರಂಪರೆಯ ಮುಖ್ಯಕವಿಗಳಲ್ಲೊಬ್ಬರು. **ಪುರಂದರ ವಿಠಲ** ಎಂಬ ಮುದ್ರಿಕೆಯಲ್ಲಿರುವ ಇವರ ಕೀರ್ತನೆಗಳು, ಕನ್ನಡ ಕಾವ್ಯ ಪರಂಪರೆಯಲ್ಲಿ ಜನಪ್ರಿಯವಾಗಿವೆ. ಕರ್ನಾಟಕ ಸಂಗೀತಕ್ಕೇ ಮತ್ತು ಕನ್ನಡ ಕಾವ್ಯಕ್ಕೆ ಪುರಂದರ ದಾಸರ ಕೊಡುಗೆ ಅನುಪಮವಾದದ್ದು.

**ಕನಕದಾಸ**

(೧೫೦೮-೧೬೦೬) ಕನ್ನಡ ಕಾವ್ಯಪರಂಪರೆಯ ಮಧ್ಯಕಾಲೀನ ಕಾಲಘಟ್ಟದಲ್ಲಿ ಬಂದ ಮುಖ್ಯಕವಿ. ಕನಕದಾಸರ ಹುಟ್ಟೂರು ಧಾರವಾಡ ಜಿಲ್ಲೆಯ ಬಾಡ ಗ್ರಾಮ. ನೂರಾರು ಕೀರ್ತನೆಗಳೊಂದಿಗೆ, **ನಳಚರಿತೆ, ಮೋಹನತರಂಗಿಣಿ, ರಾಮಧಾನ್ಯ ಚರಿತೆ, ಹರಿಭಕ್ತಸಾರ** ಮುಂತಾದ ಕೃತಿಗಳನ್ನು ರಚಿಸಿದ್ದಾರೆ. **ಕಾಗಿನೆಲೆಯ ಆದಿಕೇಶವ** ಕನಕದಾಸರ ರಚನೆಗಳ ಮುದ್ರಿಕೆಯಾಗಿದೆ. ಕನ್ನಡದ ಜನಪ್ರಿಯ ಕವಿಗಳಲ್ಲಿ ಕನಕದಾಸರೂ ಒಬ್ಬರು.

**ನಿಜಗುಣ ಶಿವಯೋಗಿ**

ಕ್ರಿ.ಶ. ಸು. ೧೫೦೦ ರಿಂದ ೧೭೦೦ ವರೆಗಿನ ಕಾಲಾವಧಿಯಲ್ಲಿ ಜೀವಿಸಿರಬೇಕೆಂದು ಕವಿಚರಿತೆಕಾರರು ಅಭಿಪ್ರಾಯಪಟ್ಟಿದ್ದಾರೆ. ಮೈಸೂರು ಜಿಲ್ಲೆ ಕೊಳ್ಳೇಗಾಲ ತಾಲ್ಲೂಕು ಚಿಲಕವಾಡಿ ಸುತ್ತಮುತ್ತಲಿನ ಪ್ರಾಂತ್ಯದ ಅರಸನಾಗಿದ್ದನೆಂದೂ, ಕಾಲಾಂತರದಲ್ಲಿ ಸಾಂಸಾರಿಕ ಜೀವನದಿಂದ ವಿರಕ್ತಿಹೊಂದಿ ತಪೋಜೀವನವನ್ನು ನಡೆಸಿದನೆಂದೂ ಐತಿಹ್ಯಗಳಿವೆ. ಆದರೂ ನಿಜಗುಣರ ಜೀವನದ ವಿವರಗಳು ಲಭ್ಯವಿಲ್ಲ. **ಅನುಭವಸಾರ, ಪರಮಾನುಭವ ಬೋಧೆ, ಪರಮಾರ್ಥ ಪ್ರಕಾಶಿಕೆ, ವಿವೇಕ ಚಿಂತಾಮಣಿ, ಕೈವಲ್ಯ ಪದ್ಧತಿ** ಇವು ನಿಜಗುಣರ ಕೃತಿಗಳು; ಮುದ್ರಿಕೆ: **ಶಂಭುಲಿಂಗ**. ನಿಜಗುಣಶಿವಯೋಗಿಯನ್ನು ಕನ್ನಡದ ಮೊದಲನೆ ತತ್ತ್ವಪದಕಾರನೆಂದೂ ಸಾಹಿತ್ಯ ಚರಿತ್ರೆಕಾರರು ಗುರುತಿಸಿದ್ದಾರೆ.

**ಚಿದಾನಂದ ಅವಧೂತರು**

ಅವಧೂತ ಪರಂಪರೆಯ ಅನುಭಾವಿ ಕವಿ ಚಿದಾನಂದರ ಕಾಲವನ್ನು ಕವಿಚರಿತೆಕಾರರು ೧೮ನೇ ಶತಮಾನದ ಮೊದಲ ಪಾದ ಎಂದು ಗುರುತಿಸಿದ್ದಾರೆ. ಈತನ ಪೂರ್ವನಾಮ ಝುಂಕಪ್ಪ. ಆಂಧ್ರಪ್ರದೇಶದ ಆದವಾನಿ ತಾಲೂಕಿನ ದೊಡ್ಡಹರಿವಾಣ ಗ್ರಾಮದವನು. ತಾಯಿ: ಅಣ್ಣಮ್ಮ, ತಂದೆ: ಲಕ್ಷ್ಮೀಪತಿ. ಇವನು ರಚಿಸಿದ **ಜ್ಞಾನಸಿಂಧು, ಕಾಮವಿಡಂಬನೆ,** ಬಗಳಾಂಬ **ಸ್ತೋತ್ರ, ಪಂಚೀಕರಣ, ತತ್ವಚಿಂತಾಮಣಿ, ನವಚಕ್ರ ಕುಲರೇಖಾ ಲಕ್ಷಣ, ದೇವೀ ಮಹಾತ್ಮೆ, ಚಿದಾನಂದ ಕೀರ್ತನೆ** ಕೃತಿಗಳು ಈಗ ಲಭ್ಯವಿದೆ. **ಚಿದಾನಂದ** ಎಂಬುದು ಇವನ ತತ್ತ್ವಪದಗಳ ಮುದ್ರಿಕೆಯಾಗಿದೆ.

**ಮುಪ್ಪಿನ ಷಡಕ್ಷರಿ**

ಕವಿಚರಿತೆಕಾರರ ಪ್ರಕಾರ ಇವನ ಕಾಲ ಕ್ರಿ.ಶ. ೧೭೫೦. ಮೈಸೂರು ಜಿಲ್ಲೆ ಯಳಂದೂರು ತಾಲ್ಲೂಕಿನ ಎರಗಂಬಳ್ಳಿಯ ಸಿದ್ಧಲಿಂಗನ ಶಿಷ್ಯನೆಂಬುದು ಲಭ್ಯ ವಿವರಗಳಿಂದ ತಿಳಿದುಬರುತ್ತದೆ. ಇವನ ಪೂರ್ವಾಶ್ರಮದ ವಿವರಗಳು ಮಸುಕಾಗಿವೆ. **ಷಡಕ್ಷರಿಲಿಂಗ** ಎನ್ನವುದು ಇವನ ರಚನೆಗಳ ಮುದ್ರಿಕೆ

**ಸರ್ಪಭೂಷಣ ಶಿವಯೋಗಿ**

ಕ್ರಿ.ಶ. ಸು. ೧೭೯೫. ಮುದ್ರಿಕೆ: **ಗುರುಸಿದ್ಧ**. ಬೆಂಗಳೂರಿಗೆ ಸಮೀಪದ ಚಿಕ್ಕಬಾಣಾವರ ಗ್ರಾಮ ಸರ್ಪಭೂಷಣ ಶಿವಯೋಗಿಗಳ ಸ್ಥಳ. **ಸಪ್ಪಣ್ಣ** ಇವರ ಇನ್ನೊಂದು ಜನಪ್ರಿಯ ಹೆಸರು. **ಕೈವಲ್ಯ ಕಲ್ಪವಲ್ಲರಿ** ಕೃತಿಯಿಂದ ಕನ್ನಡ ಅನುಭಾವಿ ಪರಂಪರೆಯಲ್ಲಿ ಮುಖ್ಯ ಕವಿಯಾಗಿದ್ದಾನೆ. **ಜ್ಞಾನಶತಕ** ಎಂಬ ಸಂಸ್ಕೃತ ಕೃತಿಯನ್ನೂ ರಚಿಸಿದ್ದಾನೆ. ಚನ್ನಮ್ಮ-ಮಲ್ಲಿಕಾರ್ಜುನ ಇವರ ತಂದೆ ತಾಯಿಗಳು ವ್ಯಾಪಾರಿ ಕುಟುಂಬದವರಾಗಿದ್ದರೆಂದು ಲಭ್ಯವಿರುವ ಮಾಹಿತಿಗಳು ತಿಳಿಸುತ್ತವೆ.

**ರಾಮಪುರ ಬಕ್ಕಪ್ಪ**

ಕಲಬುರ್ಗಿ ಜಿಲ್ಲೆಯ ಜೇವರ್ಗಿ ತಾಲ್ಲೂಕಿನ ರಾಮಾಪುರ ಗ್ರಾಮದವನು. **ರಾಮಾಪೂರ ಬಕ್ಕ** ಎನ್ನುವ ಮುದ್ರಿಕೆಯೊಂದಿಗೆ ಇವನ ತತ್ತ್ವಪದಗಳು ದೊರಕಿವೆ. ಬಕ್ಕಪ್ಪನ ಜೀವಿತದ ವಿವರಗಳ ಬಗ್ಗೆ ಖಚಿತ ಮಾಹಿತಿಗಳು ದೊರಕಿಲ್ಲ. ಕಡಕೋಳ ಮಡಿವಾಳಪ್ಪನಿಗಿಂತ ಬಕ್ಕಪ್ಪ ಹಿಂದಿನವನಾಗಿದ್ದುದರಿಂದ, ಈತನ ಕಾಲ ೧೭ನೇ ಶತಮಾನದ ಕೊನೆಯ ಭಾಗ ಮತ್ತು ೧೮ ನೇ ಶತಮಾನದ ಮೊದಲ ಭಾಗ ಎಂದು ಊಹಿಸಲಾಗಿದೆ

**ಕಡಕೋಳ ಮಡಿವಾಳಪ್ಪ**

ಕ್ರಿ.ಶ. ಸು. ೧೭೮೦ ರಿಂದ ೧೮೫೫ ವರೆಗಿನ ಕಾಲದಲ್ಲಿ ಆಗಿಹೋದ ಹೈದರಾಬಾದ್ ಕರ್ನಾಟಕ ಪ್ರಾಂತ್ಯದ ಮಹತ್ವದ ಅನುಭಾವಿ ಕವಿ. ಗಂಗಮ್ಮನೆಂಬ ವಿಧವೆಗೆ ಜನಿಸಿದವರು. ಮಡಿವಾಳಪ್ಪನವರ ಪೂರ್ವಜರು ಬಿಜಾಪುರ ಜಿಲ್ಲೆಯ ಇಂಡಿ ಪ್ರಾಂತ್ಯದಿಂದ ಗುಲಬರ್ಗಾ ಜಿಲ್ಲೆಯ ಬಿದನೂರಿಗೆ ಬಂದವರು. ಕಲಬುರ್ಗಿಯ ಶರಣ ಬಸವೇಶ್ವರರು ಮಡಿವಾಳಪ್ಪನವರ ಸಮಕಾಲೀನರು. **ಮಹಂತ, ಮಹಂತೇಶ** ಎನ್ನುವ ಮುದ್ರಿಕೆಯೊಂದಿಗೆ ತತ್ತ್ವಪದಗಳನ್ನು ಹಾಗೂ ವಚನಗಳನ್ನು ರಚಿಸಿದ್ದಾರೆ.

**ಕೂಡಲೂರ ಬಸವಲಿಂಗ ಶರಣರು**

೧೮ನೇ ಶತಮಾನದ ಕೊನೆಯಭಾಗದ ತತ್ವಪದಕಾರ. ಕಲಬುರ್ಗಿ ಜಿಲ್ಲೆಯ ಯಾದಗಿರಿ ತಾಲೂಕಿನ ಬಳಿಚಕ್ರ ಗ್ರಾಮದವರು. ಗಂಗಾಂಬೆ ಮತ್ತು ಮಹಾದೇವಪ್ಪ ಇವರ ತಂದೆ ತಾಯಿಗಳು. ಬಸವಲಿಂಗಪ್ಪ ತಮ್ಮ ಜೀವಿತದ ಕೊನೆಯ ಭಾಗವನ್ನು ರಾಯಚೂರು ಜಿಲ್ಲೆಯ ಗಬ್ಬೂರಿಗೆ ಸಮೀಪದ ಖಾನಾಪುರ ಗ್ರಾಮದಲ್ಲಿ ಕಳೆದರೆಂದು ತಿಳಿದುಬಂದಿದೆ. **ಕೂಡಲೂರೇಶ** ಎನ್ನುವುದು ಇವರ ತತ್ತ್ವಪದಗಳ ಮುದ್ರಿಕೆ.

**ಶಿಶುನಾಳ ಶರೀಫ**

೧೮೧೯-೧೮೮೯ರ ಕಾಲದಲ್ಲಿದ್ದ ಕನ್ನಡ ಅನುಭಾವಿ ಕವಿಗಳಲ್ಲಿ ಶಿಶುನಾಳ ಶರೀಫನದು ಬಹುದೊಡ್ಡ ಹೆಸರು. ಧಾರವಾಡ ಜಿಲ್ಲೆ ಶಿಗ್ಗಾವಿ ತಾಲೂಕಿನ ಶಿಶುನಾಳ ಗ್ರಾಮದವರು. ತಂದೆ

ಹಜರತ್ ಇಮಾಮ್ ಸಾಹೇಬರು. ಕಳಸದ ಗೋವಿಂದ ಭಟ್ಟರು ಶರೀಫರ ಗುರುಗಳಾಗಿದ್ದವರು. ಬಾಲಲೀಲ ಮಹಾಂತ ಶಿವಯೋಗಿ, ಗರಗದ ಮಡಿವಾಳಪ್ಪ, ನವಲುಗುಂದದ ನಾಗಲಿಂಗಪ್ಪ, ಹುಬ್ಬಳ್ಳಿ ಸಿದ್ಧಾರೂಢರು ಶರೀಫಸಾಹೇಬರ ಸಮಕಾಲೀನರಾಗಿದ್ದವರು. **ಶಿಶುನಾಳಧೀಶ** ಎನ್ನುವ ಮುದ್ರಿಕೆಯೊಂದಿಗೆ ರಚಿತವಾಗಿರುವ ಶರೀಫರ ತತ್ತ್ವಪದಗಳು ಕನ್ನಡ ಸಂಸ್ಕೃತಿಯಲ್ಲಿ ಜನಪ್ರಿಯವಾಗಿವೆ.

**ಬಾಲಲೀಲಾ ಮಹಾಂತ ಶಿವಯೋಗಿ**

ಬಿಜಾಪುರ ಜಿಲ್ಲೆಯ ಎರಿನಾಳ ಗ್ರಾಮದವರು. ಕಾಲ: ೧೮೨೩-೧೮೫೯. ಬಾಲ್ಯದಲ್ಲಿಯೇ ಶಿವಯೋಗಿಯಾಗಿ ಮುಳುಗುಂದದ ಮಠದಲ್ಲಿದ್ದವರು. ಮುಮ್ಮಡಿ ಕೃಷ್ಣರಾಜ ಒಡೆಯರು ಮತ್ತು ಸರ್ಪಭೂಷಣರ ಸಮಕಾಲೀನ. ವಸಾಹತುಶಾಹಿ ಮತ್ತು ಸ್ಥಳೀಯ ಪ್ರಭುತ್ವಗಳ ಕಡು ವಿರೋಧಿಯಾಗಿದ್ದ ಬಾಲಲೀಲಾ ಮಹಾಂತ ಶಿವಯೋಗಿಗಳ ರಚನೆಗಳು **ಮಹಂತಲಿಂಗ** ಎನ್ನುವ ಮುದ್ರಿಕೆಯೊಂದಿಗೆ **ಕೈವಲ್ಯ ದರ್ಪಣ** ಕೃತಿಯಲ್ಲಿ ಪ್ರಕಟವಾಗಿವೆ.

**ಶಂಕಾರನಂದ ಯೋಗೀಶ್ವರ**

ಸುಮಾರು ೧೮೩೩-೧೯೧೩ರಲ್ಲಿ ಬಾಳಿಬದುಕಿದ ತತ್ತ್ವಪದಕಾರ. ವಿಶೇಷವಾಗಿ ತುಮಕೂರು ಜಿಲ್ಲೆಯಾದ್ಯಂತ ಇವನ ತತ್ತ್ವಪದಗಳನ್ನು ಹಾಡುವುದರಿಂದ ಶಂಕರಾನಂದರನ್ನು ತುಮಕೂರು ಜಿಲ್ಲೆಯವನು ಎಂದು ಊಹಿಸಲಾಗಿದೆ. **ಮಹಲಿಂಗರಂಗ, ಗುರುಲಿಂಗ** ಎನ್ನುವ ಮುದ್ರಿಕೆಯೊಡನೆ ದೊರಕಿರುವ ಇವನ ರಚನೆಗಳು **ಕೈವಲ್ಯ ನವನೀತ** ಕೃತಿಯಲ್ಲಿ ಪ್ರಕಟವಾಗಿವೆ.

**ಶಿವಲಿಂಗವ್ವ ಜತ್ತಿ**

ಕನ್ನಡದ ಮೊದಲ ತತ್ತ್ವಪದಕಾರ್ತಿ. ಈಕೆಯ ಕಾಲ ಮತ್ತು ಜೀವಿತದ ವಿವರಗಳು ದೊರಕಿಲ್ಲ. ಶಿವಲಿಂಗವ್ವ ಜತ್ತಿ ನಿಂಬರಗಿ ಮಹಾರಾಜರರ ಶಿಷ್ಯೆ. ಈಕೆಯ ಎರಡು ರಚನೆಗಳು ಮಾತ್ರ ಈವರೆಗೆ ಲಭ್ಯವಾಗಿವೆ. **ನಿಂಬರಗಿ ಮಹಾರಾಜ** ಈಕೆಯ ರಚನೆಗಳ ಮುದ್ರಿಕೆಯಾಗಿದೆ.

**ಖೇಮಣ್ಣ**

ಕಾಲ ಸು.೧೯೦೦ ಎಂದು ಜನಪ್ರಿಯ ಆವೃತ್ತಿಯೊಂದು ತಿಳಿಸುತ್ತದೆ. **ಬಂಡೆಗುರು** ಖೇಮಣ್ಣನವರ ರಚನೆಗಳ ಮುದ್ರಿಕೆ. ಇವರ ಜೀವಿತದ ಇನ್ನಾವುದೇ ವಿವರಗಳು ಲಭ್ಯವಾಗಿಲ್ಲ.

**ಚನ್ನಾರೂಢ**

೧೯೪೦ರಲ್ಲಿ ದೇಹತ್ಯಾಗ ಮಾಡಿದರೆಂದು ತಿಳಿದುಬಂದಿದೆ. ಚನ್ನಾರೂಢರು ಬೆಂಗಳೂರು ಗ್ರಾಮಾಂತರ ಜಿಲ್ಲೆ ಸೊಂಡೇಕೊಪ್ಪ ಗ್ರಾಮದ ಅಸ್ಪೃಶ್ಯ ಕುಟುಂಬದಲ್ಲಿ ಹುಟ್ಟಿದವರು. ಮುನಿವೆಂಕಟದಾಸರಿಂದ ದೀಕ್ಷೆಯನ್ನು ಪಡೆದು **ಆರೂಢ** ಸಂಪ್ರಾದಾಯವನ್ನು ಒಪ್ಪಿಕೊಂಡಿದ್ದರು. **ಚನ್ನಾರೂಢ** ಮುದ್ರಿಕೆಯೊಂದಿಗೆ ಇರುವ ಇವರ ತತ್ತ್ವಪದಗಳನ್ನು ಅವರ ಅಸಂಖ್ಯಾತ ಶಿಷ್ಯರು ಇಂದಿಗೂ ಹಾಡುತ್ತಾರೆ.

**ಶೀಲವೇರಿ ಶಿವಪ್ಪ (ಶಿವಮೂರ್ತಿ ಸ್ವಾಮಿ)**

ಬಳ್ಳಾರಿ ಜಿಲ್ಲೆಯವರಾದ ಶೀಲವೇರಿ ಶಿವಪ್ಪ (ಶಿವಮೂರ್ತಿ ಸ್ವಾಮಿ) ೧೯೦೫ರಲ್ಲಿ ಇಹಲೋಕ ತ್ಯಜಿಸಿದರೆಂದು ಜನಪ್ರಿಯ ಆವೃತ್ತಿಯೊಂದರಿಂದ ತಿಳಿದು ಬರುತ್ತದೆ. ಅಲ್ಲಿಸಾಹೇಬುಸ್ವಾಮಿ ಇವರ ಗುರು. ಅಲ್ಲಿ **ಸಾಹೇಬು** ಮುದ್ರಿಕೆಯೊಂದಿಗೆ ಇವರ ತತ್ತ್ವಪದಗಳು ದೊರೆತಿವೆ.

**ಶ್ರೀಸತ್ ಉಪಾಸಿ ಮಲ್ಲಣ್ಣನವರು**

ಶ್ರೀಸತ್ ಉಪಾಸಿ ಮಲ್ಲಣ್ಣನವರು ತತ್ತ್ವಪದಗಳ ಮಹಾಪರಂಪರೆಯ ಸಾಧಕರಾಗಿ ಈಗಲೂ ತತ್ತ್ವಪದಗಳ ರಚನೆಯಲ್ಲಿ ತೊಡಗಿದ್ದಾರೆ. ಚಿತ್ರದುರ್ಗ ಜಿಲ್ಲೆಯ, ಚಳ್ಳಕೆರೆ ತಾಲೂಕಿನ ದೊಡ್ಡೇರಿ ಮಜಿರೆ ಉಪ್ಪಾರ ಹಟ್ಟಿಯವರು. ತಾಯಿ ಗಂಗಮ್ಮ, ತಂದೆ ಸಣ್ಣಸಿದ್ಧಪ್ಪ. **ಕನ್ನೇಶ** ನೆಂಬ ಮುದ್ರಿಕೆಯೊಂದಿಗಿರುವ ಮಲ್ಲಣ್ಣನವರ ತತ್ತ್ವಪದಗಳ ಸಂಕಲನ **ಘನಾನುಭವಸಾರ** ಈಗ ಪ್ರಕಟವಾಗಿದೆ (೧೯೯೯).

**ಕೊಳ್ಳೂರ ಹುಸೇನ ಸಾಹೇಬ**

೧೯೦೦-೧೯೬೪. ಹುಸೇನ ಸಾಹೇಬರು ಹೈದರಾಬಾದ್ ಕರ್ನಾಟಕ ಭಾಗದ ಕೊಳ್ಳೂರು ಗ್ರಾಮದವರು. ಉರ್ದು ಭಾಷಿಕ ಕುಟುಂಬದವರಾದ ಇವರು ಪ್ರೌಢಶಾಲೆಯ ವ್ಯಾಸಂಗವನ್ನು ಮುಗಿಸಿದವರು. ತಾಯಿ: ಇಮಾಮ್‌ಬಿ; ತಂದೆ ಲಾಲಸಾಹೇಬ. ಹುಸೇನ್ ಸಾಹೇಬರು ಕೊಳ್ಳೂರು ಭದ್ರಪ್ಪಗೌಡರ ಶಿಷ್ಯರಾಗಿದ್ದರೆಂದು ತಿಳಿದುಬಂದಿದೆ. ತತ್ತ್ವಪದಗಳೊಂದಿಗೆ, ನಾಟಕಕ್ಕೆ ಪದಗಳನ್ನು ಹಾಗೂ ಮೊಹರಂ ಪದಗಳನ್ನೂ ರಚಿಸಿದ್ದಾರೆ. **ಕೊಳ್ಳೂರ ಹುಸೇನ** ಇವರ ರಚನೆಗಳ ಮುದ್ರಿಕೆಯಾಗಿದೆ.

**ಕರಿಬಸವೇಶ್ವರ**

ಈತನ ಕಾಲ, ದೇಶ, ಜೀವಿತದ ವಿವರಗಳ ಬಗ್ಗೆ ಯಾವ ಮಾಹಿತಿಯೂ ದೊರಕಿಲ್ಲ. ಆದರೂ ಕರಿಬಸವೇಶ್ವರ ತೋಂಟದ ಸಿದ್ಧಲಿಂಗಯತಿಯ ನಂತರದವನು ಎಂದು ಊಹಿಸಲಾಗಿದೆ.

## ಕೈವಾರ ನಾರೇಯಣಪ್ಪ

೧೭೭೦-೧೮೮೦ರ ಅವಧಿಯಲ್ಲಿದ್ದ ಅನುಭಾವಿ ತತ್ತ್ವಪದಕಾರ. ಕೈವಾರ ತಾತಯ್ಯನೆಂದೇ ಪ್ರಸಿದ್ಧರಾಗಿರುವ ಕೈವಾರ ನಾರೇಯಣಪ್ಪ ಕೋಲಾರ ಜಿಲ್ಲೆಯವರು. ಬಳೆಗಾರ ವೃತ್ತಿಯವರಾದ ನಾರೇಯಣಪ್ಪನವರು **ಅಮರ ನಾರೇಯಣ** ಮುದ್ರಿಕೆಯೊಂದಿಗೆ ತೆಲುಗು ಮತ್ತು ಕನ್ನಡ ಭಾಷೆಯೆರಡರಲ್ಲೂ ತತ್ತ್ವಪದಗಳನ್ನು ರಚಿಸಿದ್ದಾರೆ. ಇವರ ತತ್ತ್ವಪದಗಳು ನಾಡಿನಲ್ಲಿ ಜನಪ್ರಿಯವಾಗಿವೆ.

## ಮೈಲಾರ ಬಸವಲಿಂಗ ಶರಣರು

ಬಸವಲಿಂಗ ಶರಣರು ೧೯ನೇ ಶತಮಾನದ ಮೊದಲಭಾಗದಲ್ಲಿದ್ದವರು. ಬಳ್ಳಾರಿ ಜಿಲ್ಲೆಯ ಹೂವಿನಹಡಗಲಿ ತಾಲ್ಲೂಕಿನ ಮೈಲಾರ ಗ್ರಾಮದವರು. **ಚೆನ್ನವೀರ, ಚೆನ್ನವೀರೇಶ** ಮುದ್ರಿಕೆಯೊಂದಿಗೆ ಇವರ ರಚನೆಗಳು ದೊರೆತಿವೆ. **ಗುರುಕರಣ ತ್ರಿವಿಧಿ** ಇವರ ಪ್ರಸಿದ್ಧ ಕೃತಿ.

## ಖೈನೂರು ಕೃಷ್ಣಪ್ಪ

ಕ್ರಿ.ಶ. ಸು. ೧೮೨೫-೧೮೭೫ರ ಅವಧಿಯಲ್ಲಿದ್ದ ಅನುಭಾವಿ ಕವಿ. ಹೈದರಾಬಾದ್ ಕರ್ನಾಟಕದ ಕಲಬುರ್ಗಿ ಜಿಲ್ಲೆಯ ಸುರಪುರ ತಾಲೂಕಿನ ಯಾಳಗಿ ಗ್ರಾಮದವರು. ತಾಯಿ ಕಾಶಿಬಾಯಿ, ತಂದೆ ಶಿವಭಟ್ಟ. ಖೈನೂರು ಬಿಜಾಪುರ ಜಿಲ್ಲೆ, ಸಿಂದಗಿ ತಾಲೂಕಿನಲ್ಲಿರುವ ಗ್ರಾಮ. ಕೃಷ್ಣಪ್ಪನವರ ಬಾಲ್ಯ-ಯೌವ್ವನಗಳು ಖೈನೂರಿನಲ್ಲಿ ಕಳೆದವು. ಆದ್ದರಿಂದ ಇವರು ಖೈನೂರು ಕೃಷ್ಣಪ್ಪನವರೆಂದೆ ಜನಪ್ರಿಯರಾದರು. ಕಡಕೋಳು ಮಡಿವಾಳಪ್ಪನವರ ಶಿಷ್ಯರಾದ ಕೃಷ್ಣಪ್ಪನವರ ತತ್ತ್ವಪದಗಳ ಮುದ್ರಿಕೆ **ಗುರುಮಡಿವಾಳ**.

## ಗಟ್ಟಿಹಳ್ಳಿ ಆಂಜನಪ್ಪ

ಇವರ ಕಾಲ ಮತ್ತು ಜೀವಿತದ ವಿವರಗಳು ಕಾಲಗರ್ಭದಲ್ಲಿ ಲೀನವಾಗಿವೆ. ಕೋಲಾರ ಜಿಲ್ಲೆಯ ಈ ತತ್ತ್ವಪದಕಾರ ಆ ಭಾಗದಲ್ಲಿ ಬಹು ಜನಪ್ರಿಯ. **ಆಂಜನೇಯ ದಾಸ** ಎಂಬ ಮುದ್ರಿಕೆಯೊಂದಿಗೆ ಇವರ ತತ್ತ್ವಪದಗಳು ತೆಲುಗು ಮತ್ತು ಕನ್ನಡ ಭಾಷೆಗಳೆರಡರಲ್ಲೂ ದೊರೆಯುತ್ತವೆ.

## ಚನ್ನೂರ ಜಲಾಲ ಸಾಹೇಬ

೧೭೭೦ ರಿಂದ ೧೮೫೦ರ ಭಾಗದಲ್ಲಿ ಬಾಳಿದ ಸಂತ ಕವಿ. ಕಲಬುರ್ಗಿ ಜಿಲ್ಲೆಯ ಚಿತ್ತಾಪುರ ತಾಲೂಕಿನ ಅಣಕಸೂಗರರ ಎಂಬ ಗ್ರಾಮದವರು. ತಂದೆ: ನಬಿಸಾಬ್; ತಾಯಿ: ನಬೂಮಾಬಿ. **ಗುರು ಮಡಿವಾಳ** ಮುದ್ರಿಕೆಯೊಂದಿಗೆ ಇವರ ತತ್ತ್ವಪದಗಳು ದೊರೆತಿವೆ. ಜಲಾಲ ಸಾಹೇಬರು ಕಡಕೋಳ ಮಡಿವಾಳಪ್ಪನವರ ಸಮಕಾಲೀನರು.

**ಕರಿವೃಷಭೇಂದ್ರ ಸ್ವಾಮಿ**

ಕಾಲ. ಸು. ೧೮ನೇ ಶತಮಾನ. ತುಮಕೂರು ಜಿಲ್ಲೆ ನೊಣವಿನಕೆರೆ ಗ್ರಾಮದವನು. ಈತನ ಜೀವಿತದ ವಿವರಗಳು ಹೆಚ್ಚು ಲಭ್ಯವಿಲ್ಲ. ಕರಿವೃಷಭೇಂದ್ರ ಸ್ವಾಮಿಯ ತತ್ತ್ವಪದಗಳು **ಕೈವಲ್ಯ ಪದಗಳು** ಎಂಬ ಕೃತಿಯಲ್ಲಿ ದೊರೆಯುತ್ತದೆ. **ಕರಿವೃಷಭಲಿಂಗೇಂದ್ರ** ಇವನ ತತ್ತ್ವಪದಗಳ ಮುದ್ರಿಕೆ.

**ಕುಕಡೊಳ್ಳಿ ಚನ್ನಮಲ್ಲಯ್ಯ**

ಕ್ರಿ.ಶ. ೧೮೮೫ರಲ್ಲಿ ಬೆಳಗಾವಿ ಜಿಲ್ಲೆ ಕುಕಡೊಳ್ಳಿ ಗ್ರಾಮದಲ್ಲಿ ಜನಿಸಿ, ಸುಮಾರು ೬೫ ವರ್ಷಗಳವರೆಗೂ ಬದುಕಿದ್ದು ಭಜನೆಪದ ಮತ್ತು ತತ್ತ್ವಪದಗಳನ್ನು ರಚಿಸಿದ್ದಾನೆ. ತಾಯಿ: ರುದ್ರಮ್ಮ; ತಂದೆ: ಚೆನ್ನಬಸಯ್ಯ.

**ಕರಿಗೋಳೇಶ್ವರ**

ಈತನ ಕಾಲ ಮತ್ತು ದೇಶಗಳು ಅಜ್ಞಾತವಾಗಿವೆ. **ಕರಿಗೂಳೇಶ್ವರ** ಎನ್ನುವ ಹೆಸರಿನಿಂದ ಜನಪ್ರಿಯರಾಗಿರುವ ಮುರುಗೇಂದ್ರಸ್ವಾಮಿಗಳು, **ಅಪರೋಕ್ಷ ಜ್ಞಾನ ಪ್ರದೀಪಿಕಾ** ಎನ್ನುವ ಕೃತಿ ರಚಿಸಿದ್ದಾರೆ. **ಕರಿಗೂಳೇಶ್ವರ** ಎನ್ನುವ ಮುದ್ರಿಕೆಯಲ್ಲಿ ಇವರ ತತ್ತ್ವಪದಗಳು ದೊರೆತಿವೆ.

**ಸಿರಗಾಪೂರ ಬಂಡೆಪ್ಪ**

ಕಾಲ ಸು. ೧೬೦೦-೧೬೫೪ ರ ಅವಧಿಯಲ್ಲಿ ಬಾಳಿಬದುಕಿದ ಹೈದರಾಬಾದ್ ಕರ್ನಾಟಕ ಭಾಗದ ತತ್ವಪದಕಾರ. ಕಲಬುರ್ಗಿ ಜಿಲ್ಲೆಯ ಸಿರಗಾಪೂರ ಈತನ ಸ್ಥಳ. ತಾಯಿ: ವೀರಮ್ಮ, ತಂದೆ: ಮಡೆಪ್ಪ. ಆ ಭಾಗದಲ್ಲಿದ್ದ ಚನ್ನವೀರ ಶಿವಯೋಗಿಗಳ ಪ್ರಭಾವದಲ್ಲಿ ಬೆಳೆದ ಸಿರಗಾಪೂರ ಬಂಡೆಪ್ಪನವರ ತತ್ವಪದಗಳ ಮುದ್ರಿಕೆ: **ವೀರೇಶ, ವೀರೇಶ್ವರ,** ಎಂಬುದಾಗಿದೆ.

**ಹೇರೂರು ವಿರುಪನಗೌಡ**

ಈ ಶತಮಾನದ ಮೊದಲಭಾಗದಲ್ಲಿದ್ದ ಅನುಭಾವಿ. ರಾಯಚೂರು ಜಿಲ್ಲೆಯ ಗಂಗಾವತಿ ತಾಲೂಕಿನ ಹೇರೂರು ಈತನ ಸ್ಥಳ. ಇದೇ ತಾಲ್ಲೂಕಿನ ಅರಹಾಳು ಗ್ರಾಮದ ಪಂಡಿತ ರುದ್ರಸ್ವಾಮಿಗಳು ಈತನ ಗುರುಗಳಾಗಿದ್ದರೆಂದು ತಿಳಿದುಬಂದಿದೆ. **ಕೈವಲ್ಯ** ಕೃತಿಯಲ್ಲಿ ಹೇರೂರು ವಿರುಪನಗೌಡರ ತತ್ತ್ವಪದಗಳು ಮುದ್ರಣಕಂಡಿವೆ. **ಸಿದ್ಧ, ಸಿದ್ಧೇಶ** ಈತನ ತತ್ತ್ವಪದಗಳ ಮುದ್ರಿಕೆ.

**ಹಾರಕೂಡ ಚನ್ನಬಸವ ಶಿವಯೋಗಿ**

ಬೀದರ ಜಿಲ್ಲೆಯ ಹಾರಕೂಡ ಗ್ರಾಮದಲ್ಲಿದ್ದ ಅನುಭಾವಿ ಕವಿ. ೧೮೫೨ರಲ್ಲಿ ಜನಿಸಿ ೧೯೫೨ರಲ್ಲಿ ಚಿಂಚೋಳಿಯಲ್ಲಿ ಇಹಲೋಕ ತ್ಯಜಿಸಿದರು. **ಹಾರ್ಕೂಡ, ಹಾರ್ಕೂಡಾಧೀಶ** ಇವರ ತತ್ತ್ವಪದಗಳ ಮುದ್ರಿಕೆ.

**ಗೊಬ್ಬೂರು ಹಂಪಂಣ**

ಈ ಶತಮಾನದ ಮೊದಲಭಾಗದಲ್ಲಿದ್ದ ತತ್ವಪದಕಾರ. ರಾಯಚೂರು ಜಿಲ್ಲೆ ದೇವದುರ್ಗ ತಾಲೂಕಿನ ಅರಕೇರಿ ಗ್ರಾಮದವನು. ಅರಕೇರಿ ಗ್ರಾಮದಿಂದ ಬಂದು ಗೊಬ್ಬೂರು ಗ್ರಾಮದಲ್ಲಿ ನೆಲೆಸಿದನೆಂದು ತಿಳಿದುಬಂದಿದೆ. **ಕೈವಲ್ಯ ದೀವಿಗೆ** ಕೃತಿಯಲ್ಲಿ ಹಂಪಂಣನ ತತ್ತ್ವಪದಗಳು **ಘನವೃಷಭೇಂದ್ರ** ಎನ್ನುವ ಮುದ್ರಿಕೆಯೊಂದಿಗೆ ಪ್ರಕಟವಾಗಿವೆ.

**ಕೆಸ್ತೂರ ದೇವರು**

ಕೆಸ್ತೂರ ದೇವರು ವಿರಕ್ತ ಸಂಪ್ರದಾಯದ ತತ್ತ್ವಪದಕಾರ. ಈತನ ಕಾಲ ಮತ್ತು ಸ್ಥಳಗಳು ಅಜ್ಞಾತವಾಗಿವೆ. ದೊರೆತಿರುವ ಕೆಲವು ಆಧಾರಗಳ ಮೇಲೆ ಈತನು ತೋಂಟದ ಸಿದ್ಧಲಿಂಗಯತಿಯ ನಂತರದವನು ಎಂದು ಊಹಿಸಬಹುದಾಗಿದೆ. **ಗುರುಸಿದ್ಧಲಿಂಗ** ಎನ್ನುವುದು ಇವನ ರಚನೆಗಳ ಮುದ್ರಿಕೆಯಾಗಿದೆ.

**ಘನಮಠದ ನಾಗಭೂಷಣ ಶಿವಯೋಗಿ**

೧೮೨೮ ರಲ್ಲಿ ಆಂಧ್ರಪ್ರದೇಶದ ರಂಗಾರೆಡ್ಡಿ ಜಿಲ್ಲೆಯಲ್ಲಿರುವ ದಾರೂರು ಗ್ರಾಮದಲ್ಲಿ ಜನಿಸಿ, ಕಲಬುರ್ಗಿ- ವಿಜಾಪುರ, ಧಾರವಾಡ, ರಾಯಚೂರು ಹಾಗೂ ಬಳ್ಳಾರಿ ಜಿಲ್ಲೆಗಳಲ್ಲಿ ಸಂಚರಿಸಿದ ಶಿವಯೋಗಿ. ೧೮೮೪ರಲ್ಲಿ ಲಿಂಗಸೂಗೂರು ತಾಲೂಕಿನ ಸಂತೆಕೆಲ್ಲೂರು ಗ್ರಾಮದಲ್ಲಿ ಇಹಲೋಕ ತ್ಯಜಿಸಿದರು. **ಘನಮಠೇಶ** ಮುದ್ರಿಕೆಯ ಇವರ ತತ್ವಪದಗಳು **ಭಕ್ತಿಸುಧಾಸಾರ** ಕೃತಿಯಲ್ಲಿ ಪ್ರಕಟವಾಗಿವೆ. ಕೃಷಿಯನ್ನು ಕುರಿತ ಕನ್ನಡದ ಮೊದಲ ಕೃತಿ **ಕೃಷಿ ಜ್ಞಾನ ಪ್ರದೀಪಿಕೆ** ಕನ್ನಡದ ಮಹತ್ವದ ಕೃತಿಗಳಲ್ಲಿ ಒಂದು.

**ಚಲವಾದಿ ಚಂದಪ್ಪ**

ಧಾರವಾಡ ಜಿಲ್ಲೆಯ ಹೆಬ್ಬಳ್ಳಿ ಈತನ ಸ್ಥಳ. ಸಾಂದರ್ಭಿಕ ಸ್ಫೂರ್ತಿಯಂತೆ ಹಾಡಿರುವ ಈತನ ರಚನೆಗಳಲ್ಲಿ ನಿರ್ದಿಷ್ಟವಾದ ಮುದ್ರಿಕೆ ಎಂಬುದಿಲ್ಲ. ಶರೀಫ್ ಸಾಹೇಬರಿಗಿಂತ ಈಚಿನವನೆಂದು ಆ ಭಾಗದ ಜನ ತಿಳಿಸುತ್ತಾರೆ.

**ಮರಕುಂದಿಯ ಬಸವಣ್ಣಪ್ಪ**

ಈತನ ಕಾಲ ನಿರ್ದಿಷ್ಟವಾಗಿ ತಿಳಿದಿಲ್ಲ. ಗುಲಬರ್ಗಾ ಜಿಲ್ಲೆಯ ಚಿತ್ತಾಪುರ ತಾಲೂಕಿನ ಬಾಗೋಡಿ ಗ್ರಾಮ ಈತನ ಸ್ಥಳ. ಮುಂದೆ ಬೀದರ್ ಜಿಲ್ಲೆಯ ಮರಕುಂದಿ ಗ್ರಾಮದಲ್ಲಿ ನೆಲೆನಿಂತರೆಂದು ಹಾಗೂ ಇಲ್ಲಿಯೇ ಬಸವಣ್ಣಪ್ಪ ಒಂಭತ್ತು ಅಧ್ಯಾಯಗಳನ್ನೊಳಗೊಂಡ **ನವಕಾಂತ ಭಜನೆ** ಬರೆದರೆಂದು ಪ್ರತೀತಿ ಇದೆ. ನಿರ್ದಿಷ್ಟ ಮುದ್ರಿಕೆಯಿಲ್ಲದ ಈತನ ರಚನೆಗಳಲ್ಲಿ **ಸಿದ್ಧ**, **ಕಾಡಸಿದ್ಧ**, **ಸಿದ್ಧಲಿಂಗ** ಎನ್ನುವುದು ತತ್ತ್ವಪದಗಳ ಮುದ್ರಿಕೆಯಾಗಿ ಬಳಕೆಯಾಗಿದೆ.

**ನೀರಲಕೇರಿ ಬಸವಲಿಂಗ ಶಿವಯೋಗಿ**

ಕ್ರಿ.ಶ. ಸು. ೧೭೬೪. ವಿಜಾಪುರ ಜಿಲ್ಲೆ ಹುನಗುಂದ ತಾಲೂಕಿನ ಗೂಡೂರು ಇವರ ಜನ್ಮಸ್ಥಳ. ಅಲ್ಲಿಂದ ರಾಯಚೂರು ಜಿಲ್ಲೆ ಲಿಂಗಸೂಗೂರು ತಾಲೂಕಿನ ಐದುನಾಳು ಗ್ರಾಮದಲ್ಲಿ ದೇಹತ್ಯಾಗ ಮಾಡಿದ ಗದ್ದುಗೆ ಈಗಲೂ ಇದೆ. **ನೀರಲಕೇರಿ** ಎನ್ನುವ ಮುದ್ರಿಕೆಯೊಂದಿಗೆ ಇವನ ತತ್ತ್ವಪದಗಳು ರಚಿತವಾಗಿವೆ. ಗುರುವಿನಾಣತಿಯಂತೆ ಲಿಂಗಸೂಗೂರಿನ ನೀರಲಕೇರಿಯೆ ಇವರ ಸಾಧನೆಯ ಕ್ಷೇತ್ರವಾಗಿತ್ತು.

**ಆದಿ ಅಮಾತೆಪ್ಪ**

ರಾಯಚೂರು ಜಿಲ್ಲೆ ದೇವದುರ್ಗ ತಾಲೂಕಿನಲ್ಲಿದ್ದ ತತ್ತ್ವಪದಕಾರ. ಕಾಲ ೧೮೪೫-೧೯೨೫. ಆದಿ ಅಮಾತೆಪ್ಪನವರ ತತ್ತ್ವಪದಗಳ ಮುದ್ರಿಕೆ: **ದೇಹದುರ್ಗದೀಶ**

**ಅಯ್ಯಪ್ಪಜ್ಜನವರು**

ಈ ಶತಮಾನದ ಮೊದಲ ಭಾಗದಲ್ಲಿ ರಾಯಚೂರಿನಲ್ಲಿ ಬದುಕಿದ್ದ ತತ್ತ್ವಪದಕಾರ. ಜೀವಿತದ ಇನ್ನಿತರ ವಿವರಗಳು ಅಲಭ್ಯ. ಒಂದು ಅಪ್ರಕಟಿತ ದಾಖಲೆಯ ಪ್ರಕಾರ, ಅಯ್ಯಪ್ಪಜ್ಜನವರು ಸಂಸಾರದಿಂದ ವಿರಕ್ತಿಹೊಂದಿ ಹಂಪಂಣನವರಿಂದ ದೀಕ್ಷೆಪಡೆದರೆಂದು ನಮೂದಿಸಲಾಗಿದೆ. ರಾಯಚೂರಿನಲ್ಲಿ ಕಿರಾಣಿ ದುಖಾನವೊಂದರಲ್ಲಿ ಲೆಕ್ಕ ಬರೆಯುತ್ತಿದ್ದರೆಂದು ದಾಖಲೆಯಿದೆ. **ಗುರುಪಂಪಾಪತಿ ಪಂಪಾವರ** ಇವರ ತತ್ತ್ವಪದಗಳ ಮುದ್ರಿಕೆಯಾಗಿದೆ.

**ಗೂಗಲ್ಲು ಪರಪ್ಪಯ್ಯ**

ಕಾಲ ಸು. ೧೭೮೦-೧೮೫೦ಎಂದು ತಿಳಿದು ಬಂದಿದೆ. ಪರಪ್ಪಯ್ಯ ರಾಯಚೂರು ಜಿಲ್ಲೆ ದೇವದುರ್ಗ ತಾಲೂಕಿನ ಗೂಗಲ್ಲು ಗ್ರಾಮದವರು. ಅಲ್ಲಮಪ್ರಭುವಿನ ಉಲ್ಲೇಖ ಈತನ ತತ್ತ್ವಪದಗಳಲ್ಲಿ ಕಂಡುಬರುತ್ತದೆ.

**ತಿಪ್ಪಣ್ಣ**

ರಾಯಚೂರು ಜಿಲ್ಲೆಯ ಮಲಿಯಾಬಾದ ಗ್ರಾಮದಲ್ಲಿ ೧೯೪೦ ರಲ್ಲಿ ಜನಿಸಿದ ತತ್ತ್ವಪದಕಾರ ತಿಪ್ಪಣ್ಣ ಈಗಲೂ ಸಾಧಕರಾಗಿ ಮುಂದುವರೆದಿದ್ದಾರೆ. ಅಸ್ಪೃಶ್ಯ ಜನಾಂಗದ ಮಾದಿಗ ಕುಟುಂಬದವರಾದ ಇವರ ತಾಯಿ ಲಕ್ಷ್ಮಮ್ಮ, ತಂದೆ: ಫಕೀರಪ್ಪ. ತಿಪ್ಪಣ್ಣನ ದೀಕ್ಷಾಗುರು ರಾಜೂರು ಹನುಮೇಶಪ್ಪ. ಈತನ ತತ್ತ್ವಪದಗಳ ಮುದ್ರಿಕೆ: **ಗುರುಹನುಮೇಶ** ಎಂಬುದಾಗಿದೆ.

**ಮೋಟ್ನಳ್ಳಿ ಹಸನ ಸಾಹೇಬ**

ಹೈದರಾಬಾದ್ ಕರ್ನಾಟಕ ಭಾಗದ ಕಲಬುರ್ಗಿ ಜಿಲ್ಲೆಯ ಸೇಡಂ ತಾಲೂಕಿನ ಇಟ್ಕಾಲ ಗ್ರಾಮದವನೆಂದು ಊಹಿಸಲಾಗಿದೆ. ಈತನ ಕಾಲ ೧೮೮೯ ರಿಂದ ೧೯೧೪ ಎಂದು ಗುರುತಿಸಿದ್ದಾರೆ. ಈತನ ತಂದೆ ಬಯಲಾಟದ ಮಾಸ್ತರನಾಗಿದ್ದನೆಂದು ತಿಳಿದುಬಂದಿದೆ. ಕನ್ನಡ-ಉರ್ದು- ತೆಲುಗು ಭಾಷಿಕರು ಇವನ ಶಿಷ್ಯರಾಗಿದ್ದಾರೆ. **ಇಟಪುರೀಶ** ಎನ್ನುವ ಮುದ್ರಿಕೆಯಲ್ಲಿ ಇವನ ರಚನೆಗಳು ಪ್ರಕಟವಾಗಿವೆ.

**ಹೊಸೂರು ತಿಪ್ಪಣ್ಣ**

ಹೊಸೂರು ತಿಪ್ಪಣ್ಣ ರಾಯಚೂರು ಜಿಲ್ಲೆಯ ಹೊಸೂರು ಗ್ರಾಮದಲ್ಲಿ ೧೯೪೨ರಲ್ಲಿ ಅಸ್ಪೃಶ್ಯರ ಮಾದಿಗ ಕುಟುಂಬದಲ್ಲಿ ಜನಿಸಿದರು. ತಾಯಿ: ಮಲ್ಲಮ್ಮ, ತಂದೆ: ದುರ್ಗಪ್ಪ. ತನ್ನ ತತ್ತ್ವಪದಗಳಲ್ಲಿ ಗುರುಹನುಮೇಶನನ್ನು ಸ್ಮರಿಸಿ, **ನವಪುರಜಾತ** ಮುದ್ರಿಕೆಯೊಂದಿಗೆ ರಚಿಸಿದ್ದಾರೆ. ಈಗಲೂ ಸಾಧಕನಾಗಿ ಮುಂದುವರೆದಿದ್ದಾರೆ.

**ಯರಮಾರಪ್ಪ**

ರಾಯಚೂರು ನಗರದ ಗಾಜಗಾರ ಪೇಟೆಯ ನವಾಬಗಡ್ಡೆಯಲ್ಲಿ ೧೯೨೫ರಲ್ಲಿ ಜನಿಸಿದವನು ಯರಮಾರಪ್ಪ. ತಾಯಿ: ಸವರಮ್ಮ, ತಂದೆ: ತಿಕ್ಕಯ್ಯ. ಮಾದಿಗ ಜನಾಂಗದವರಾದ ಯಾರಮಾರಪ್ಪ ಮೋಚಿ ಕಾಯಕದಲ್ಲಿ ನಿರತರಾಗಿರುವ ತತ್ತ್ವಪದಕಾರ. ರಾಷ್ಟ್ರೀಯ ಚಳವಳಿ ಮತ್ತು ರಜಾಕಾರರ ವಿರುದ್ಧದ ಚಳವಳಿಯಲ್ಲಿ ಭಾಗವಹಿಸಿ ಜೈಲುವಾಸ ಕಂಡವರು. ಇವರ ತತ್ತ್ವಪದಗಳಲ್ಲಿ **ರಾಜೂರ ಹನುಮೇಶ**ನ ಸ್ಮರಣೆಯಿದೆ.

**ಸಾವಳಗಿ ಮಹಮ್ಮದ ಸಾಬ**

ಹೈದರಾಬಾದ್ ಕರ್ನಾಟಕ ಪ್ರಾಂತ್ಯದ ಕಲಬುರ್ಗಿ ಜಿಲ್ಲೆಯ ಹಿರೀಸಾವಳಗಿ ಈತನ ಗ್ರಾಮ. ತಾಯಿ: ಫಾತೀಮಾಬಿ, ತಂದೆ: ಮೋದಿನ ಸಾಬ. ಕಾಲ. ೧೯೧೭-೧೯೮೭. ಶಿವಯೋಗಿಯಾದ ಈ ತತ್ತ್ವಪದಕಾರನ ರಚನೆಗಳಲ್ಲಿ **ಕವಿ ಮಹಮ್ಮದ** ಎಂಬ ಮುದ್ರಿಕೆ ಕಂಡುಬರುತ್ತದೆ. ಆ ಭಾಗದ ಜನಪ್ರಿಯ ತತ್ತ್ವಪದಕಾರ ಮಹಮ್ಮದ ಸಾಬ.

### ಯೋಗಿ ಬಲಭೀಮ

ಈತನ ಕಾಲದೇಶಗಳು ಅಜ್ಞಾತವಾಗಿವೆ. **ಕನ್ನಡ ಪರಮಾರ್ಥ ಸೋಪಾನ** ಕೃತಿಯಿಂದ ಇವನ ತತ್ತ್ವಪದಗಳನ್ನು ಆರಿಸಿಕೊಳ್ಳಲಾಗಿದೆ. **ಗುರು ಬಲಭೀಮಾ** ಎಂಬುದು ಇವನ ರಚನೆಗಳ ಮುದ್ರಿಕೆಯಾಗಿದೆ.

### ಬೇನೂರ ಹಜರತ್ ಕಾಕಿ ಪೀರ

ಕ್ರಿ.ಶ. ೧೮೭೮. ಕಾಕಿಪೀರರು ಕಲಬುರ್ಗಿ ಜಿಲ್ಲೆಯ ಬೇನೂರಿನವರು. ಸಂತರೂ ಹಾಗೂ ನಾಟಕಕಾರರೂ ಆಗಿದ್ದ ಸಯ್ಯದ್ ಶಹ ಅಮೀರುಲ್ಲಾ ಹುಸೇನಿ ಇವರ ತಂದೆ. **ಕಾಕೀ** ಎಂಬುದು ಇವರ ತತ್ತ್ವಪದಗಳ ಮುದ್ರಿಕೆಯಾಗಿದೆ. ಕಾಕಿ ಎಂದರೆ ಪ್ರಸಾದ ಎಂದರ್ಥ. ಕಾಕೀಪೀರರು ತತ್ತ್ವಪದಗಳನ್ನಲ್ಲದೆ, ಜನಪದ ನಾಟಕಗಳನ್ನು ಮೊಹರಂ ಪದಗಳನ್ನು ರಚಿಸಿದ್ದಾರೆ.

### ಗೋನಾವರದ ರಾಮದಾಸ (ಬಡೇಸಾಬ)

ರಾಯಚೂರು ಜಿಲ್ಲೆಯ ದೇವದುರ್ಗ ತಾಲೂಕಿನ ಜೋಳದ ಹೆಡಿಗೆ ಈತನ ಸ್ಥಳ. ಕಾಲ ತಿಳಿದು ಬಂದಿಲ್ಲ. ಬಡೇಸಾಬ ಸಾಧುವೊಬ್ಬನಿಂದ ಪ್ರಭಾವಿತನಾಗಿ ತನ್ನ ಪೂರ್ವಾಶ್ರಮದ ಚಹರೆಗಳನ್ನು ತೊರೆದು ರಾಮದಾಸನಾದ. ಆದ್ದರಿಂದಲೇ **ಶ್ರೀರಾಮ** ಎಂಬುದು ಇವನ ರಚನೆಗಳ ಮುದ್ರಿಕೆಯಾಗಿ ಬಳಕೆಯಾಗಿದೆ. ಇಸ್ಲಾಂ ಧರ್ಮದ ಪಿಂಜಾರ ಪಂಗಡಕ್ಕೆ ಸೇರಿದ ರಾಮದಾಸರ ತಾಯಿ: ಪೀರಮ್ಮ, ತಂದೆ: ಖಾಜಾ ಸಾಹೇಬ. ತತ್ತ್ವಪದಗಳಲ್ಲದೆ ಅನೇಕ ಕೀರ್ತನೆಗಳೂ ಇವರಿಂದ ರಚಿತವಾಗಿವೆ.

### ಷೇಕ್ ಅಬ್ದುಲ್ಲಾ ಬಾಬಾ

ನಮ್ಮ ನೆರೆಯ ಆಂಧ್ರದ ಕರ್ನೂಲು ಜಿಲ್ಲೆಯ ಆಲೂರು ತಾಲೂಕಿನ ರಾಯದುರ್ಗ ಈ ಅನುಭಾವಿ ಕವಿಯ ಸ್ಥಳ. ಕಾಲ: ೧೮೮೬. ತಾಯಿ: ರಾಜುಬಿಯಮ್ಮ, ತಂದೆ: ಷೇಕ್ ಮಹಮದ್ ಹಾಜಿ ಅಲಿ ಸಾಹೇಬಾ. ಸರ್ಕಾರಿ ಸೇವೆಯಲ್ಲಿದ್ದ ಷೇಕ್‌ಅಬ್ದುಲ್ಲಾ ಬಾಬಾ ಅವರು ತೆಲುಗು ಮತ್ತು ಕನ್ನಡ ಭಾಷೆಗಳೆರಡರಲ್ಲೂ ತತ್ತ್ವಪದಗಳನ್ನು ರಚಿಸಿದ್ದಾರೆ. ಆಂಧ್ರ ಮತ್ತು ಕರ್ನಾಟಕದಾದ್ಯಂತ ಹಬ್ಬಿರುವ **ಭಂ ಭಂ** ಸಂಪ್ರದಾಯಕ್ಕೆ ಒಲಿದ ತತ್ತ್ವಪದಕಾರ ಈತ.

### ಮಹಾಗಾಂವ ಮೀರಾಸಾಹೇಬ

ಕ್ರಿ.ಶ. ೧೯೧೭-೧೯೫೦ರ ಅವಧಿಯಲ್ಲಿ ಬಾಳಿ ಬದುಕಿದ ಅನುಭಾವಿ ತತ್ತ್ವಪದಕಾರ. ಕಲಬುರ್ಗಿ ಜಿಲ್ಲೆಯ ಮಹಗಾವಂವಾಡಿ ಮೀರಾಸಾಹೇಬರ ಜನ್ಮಸ್ಥಳ. ತಾಯಿ: ಹುಸೇನಾಬಿ. ತಂದೆ: ಕಮಲಿಸಾಬ್. ನೀಲೂರು ಶೇಕ್ ಸೈಯದ್ ಶಹ ಇಸ್ಮಾಯಿಲ್ ಖಾದ್ರಿಯವರು ಮತ್ತು

ಬಸಣ್ಣ ಮಾಸ್ತರ ಎಂಬುವರಿಂದ ಗುರುದೀಕ್ಷೆ ಪಡೆದು ಶಿವಯೋಗಿಯಾದರು. ಕನ್ನಡ, ಉರ್ದು, ಅರೇಬಿಕ್ ಹಾಗೂ ಹಿಂದಿ ಭಾಷೆಗಳನ್ನು ಬಲ್ಲವರಾಗಿದ್ದ ಮೀರಾಸಾಹೇಬ **ಪಂಚಾಕ್ಷರಿ** ಮುದ್ರಿಕೆಯೊಂದಿಗೆ ತತ್ತ್ವಪದಗಳನ್ನು ರಚಿಸಿದ್ದಾರೆ.

**ಮಂಜರ್ಲಾ ಖಾದರ ಸಾಹೇಬ**

ಆಂಧ್ರ ಪ್ರದೇಶದ ಕಡಪಾ ಜಿಲ್ಲೆಯ ಪುದ್ದಟೂರ ತಾಲೂಕಿನ ಅಂಬಾವರ ಖಾದರ ಸಾಹೇಬರ ಸ್ಥಳ. ಕಾಲ: ೧೯೩೦-೧೯೭೫. ತಾಯಿ: ಖಾದರ್‌ಬಿ, ತಂದೆ: ಪೀರಸಾಬ್. ಕನ್ನಡ ಮತ್ತು ತೆಲುಗು ಭಾಷೆಗಳಲ್ಲಿ ತತ್ತ್ವಪದಗಳನ್ನು ರಚಸಿರುವ ಖಾದರ್ ಸಾಹೇಬರ ರಚನೆಗಳ ಮುದ್ರಿಕೆ **ಸಿದ್ಧರಾಮ.**

**ಗುರುಗೋವಿಂದ ಭಟ್ಟ**

ಕಳಸ ಗೋವಿಂದಭಟ್ಟರ ಸ್ಥಳ. ಶಿಶುನಾಳಶರೀಫರ ದೀಕ್ಷಾಗುರು. ಆದ್ದರಿಂದ ಶರೀಫ್‌ಸಾಹೇಬರ ಕಾಲದಲ್ಲಿದ್ದನೆಂದು ಊಹಿಸಲಾಗಿದೆ. **ಗುರುಕಲ್ಮೇಶ್ವರ** ಎನ್ನುವುದು ಇವರ ರಚನೆಗಳ ಮುದ್ರಿಕೆಯಾಗಿದೆ.

**ಶ್ರೀರಾಂಪುರ ಪರಪ್ಪಸ್ವಾಮಿ**

ಈ ಶತಮಾನದ ಮೊದಲಭಾಗದಲ್ಲಿದ್ದ ಅನುಭಾವಿ ಕವಿ. ಚಿತ್ರದುರ್ಗ ಜಿಲ್ಲೆಯ ಹೊಸದುರ್ಗ ತಾಲೂಕಿನ ಶ್ರೀರಾಂಪುರದಲ್ಲಿ ನೆಲೆನಿಂತು ಅಲ್ಲಿಯೇ ಇಹಲೋಕ ತ್ಯಜಿಸಿದವರು. ಇಂದಿಗೂ ಪ್ರತಿವರ್ಷ ಫಾಲ್ಗುಣ ಮಾಸದಲ್ಲಿ ಪರಪ್ಪಸ್ವಾಮಿಗಳ ಜಾತ್ರೆ ಶ್ರೀರಾಂಪುರದಲ್ಲಿ ನಡೆಯುತ್ತದೆ. ದೊರಕಿರುವ ಇವರ ಒಂದು ತತ್ತ್ವಪದವನ್ನು ಇಲ್ಲಿ ಪ್ರಕಟಿಸಲಾಗಿದೆ. ಮುದ್ರಿಕೆ ಯಾವುದೆಂಬುದು ತಿಳಿದಿಲ್ಲ.

**ಅಂದೇವಾಡಿ ಗೈಬಿಸ್ಯಾ**

ಇವರ ಕಾಲ ಮತ್ತು ಜೀವಿತದ ಯಾವ ವಿವರಗಳೂ ಲಭ್ಯವಿಲ್ಲ. ಇವರ ತತ್ತ್ವಪದಗಳ ಮುದ್ರಿಕೆ **ಅಂದೇವಾಡಿ ಗೈಬಿಸ್ಯಾ** ಎಂಬುದಾಗಿದೆ.

**ಹಸನ್ ಮಾತಾಜಿ**

ಮೈಸೂರಿನ ಚಾಮುಂಡಿ ಬೆಟ್ಟದ ತಪ್ಪಲಿನಲ್ಲಿ ಇವರ ಆಶ್ರಮವಿದೆ. ರಾಜಯೋಗಿ ಕರೀಂಪೀರರ, ಜೀವನ ಸಂಗಾತಿ, ಶಿಷ್ಯೆ ಹಸನ್ ಮಾತಾಜಿ. ನಿರ್ದಿಷ್ಟವಾದ ಮುದ್ರಿಕೆ ಇವರ ತತ್ತ್ವಪದಗಳಲ್ಲಿ ಬಳಕೆಯಾಗಿಲ್ಲ. **ಹಸನ್ ಮಾತಾಜಿ ವಿರಚಿತ ತತ್ತ್ವಪದಗಳು** ಕೃತಿಯಲ್ಲಿ ಇವರ ತತ್ತ್ವಪದಗಳು ಪ್ರಕಟವಾಗಿವೆ.

**ರಸ್ತಾಪುರದ ಭೀಮಕವಿ**

ಕಲುಬುರ್ಗಿ ಜಿಲ್ಲೆಯ ಸುರಪೂರ ತಾಲ್ಲೂಕಿನ ರಸ್ತಾಪುರ ಈತನ ಸ್ಥಳ. ಈತನ ತಂದೆ: ಕುರುಬರ ಜಂಬಣ್ಣ, ತಾಯಿ: ಭಾಗವ್ವ. ಈತನ ಕಾಲ ತಿಳಿದಿಲ್ಲ. ಬಯಲಾಟದ ಮಾಸ್ತರನೆಂದೇ ಪ್ರಖ್ಯಾತನಾದ ಭೀಮಕವಿ ತತ್ತ್ವಪದಗಳನ್ನೂ ರಚಿಸಿದ್ದಾನೆ. **ಗುರುಶಂಕರ** ಎನ್ನುವುದು ಈತನ ರಚನೆಗಳ ಮುದ್ರಿಕೆಯಾಗಿದೆ.

**ಅರವಲಿ ಬಿಜಲಿ ವಸ್ತಾದಿ**

ಈ ಅನುಭಾವಿಯ ಕಾಲ ಅಂದಾಜಿನಂತೆ ೧೮೬೦ ಮತ್ತು ಜೀವಿತದ ಬಹುಭಾಗವನ್ನು ರಾಯಚೂರು ಜಿಲ್ಲೆ ಮಾನ್ವಿ ತಾಲೂಕಿನ ಅರವಲಿಯಲ್ಲಿ ಕಳೆದಿದ್ದನಾದ್ದರಿಂದ, ಈತ ಅರವಲಿ ಗ್ರಾಮದವನೆಂದು ಊಹಿಸಲಾಗಿದೆ. ಇದುವರೆಗೂ ದೊರಕಿರುವ ಈತನ ತತ್ತ್ವಪದಗಳಲ್ಲಿ ಬಿಜಲಿ ಎಂಬ ಮುದ್ರಿಕೆ ಬಳಕೆಯಾಗಿದೆ.

**ಅಖಂಡೇಶ್ವರ**

ಈತನ ಜೀವಿತದ ವಿವರಗಳು, ಕಾಲ, ಹೆಸರು ಅಜ್ಞಾತವಾಗಿವೆ. ಇಲ್ಲಿ ಸೇರ್ಪಡೆಯಾಗಿರುವ ಒಂದು ತತ್ತ್ವಪದದಲ್ಲಿ **ಅಖಂಡೇಶ್ವರ** ಎನ್ನುವ ಮುದ್ರಿಕೆ ಬಳಕೆಯಾಗಿದೆ. **ಕನ್ನಡ ಪರಮಾರ್ಥ ಸೋಪಾನ** ಕೃತಿಯಿಂದ ಇದನ್ನ ಪಡೆಯಲಾಗಿದೆ.

**ರೇವಗಿಪುರದ ಸಿದ್ಧಲಿಂಗೇಶ**


ಈತನ ವಿವರಗಳು ಅಲಭ್ಯ. ರಾನಡೆ ಅವರ **ಕನ್ನಡ ಪರಮಾರ್ಥಸೋಪಾನ** ಕೃತಿಯಿಂದ, ಈ ತತ್ತ್ವಪದವನ್ನು ಆಯ್ದುಕೊಳ್ಳಲಾಗಿದೆ. **ರೇವಗಿಪುರದ ಶ್ರೀ ಸಿದ್ಧಲಿಂಗೇಶ** ಎನ್ನುವ ಮುದ್ರಿಕೆ ಈ ರಚನೆಗಿದೆ.

**ಐನೂಲಿ ಕರಿಬಸವಾರ್ಯ**

ಕ್ರಿ.ಶ. ಸು. ೧೭೪೫-೧೮೪೦. ಕಲಬುರ್ಗಿ ಜಿಲ್ಲೆಯ ಚಿಂಚೋಳಿ ತಾಲೂಕಿನ ಐನೂಲಿ ಗ್ರಾಮ ಈತನ ಸ್ಥಳ. ತಾಯಿ: ಗಿರಿಜಾದೇವಿ, ತಂದೆ: ನೂರೊಂದಯ್ಯ. ತತ್ತ್ವಪದಗಳೊಂದಿಗೆ **ಶ್ರೀ ಕುಮಾರ ವಿಜಯ ವಿಳಾಸಂ** ಎಂಬ ಕಾವ್ಯವನ್ನು ರಚಿಸಿದ್ದಾನೆ. ತನ್ನ ೯೫ನೇ ವಯಸ್ಸಿನಲ್ಲಿ ಚಿಂಚೋಳಿಯಲ್ಲಿಯೇ ಇಹಲೋಕ ತ್ಯಜಿಸಿದನೆಂದು ಹೇಳಲಾಗಿದೆ. **ಚನ್ನವೀರೇಶ** ಎನ್ನುವ ಮುದ್ರಿಕೆಯೊಂದಿಗೆ ಕರಿಬಸವಾರ್ಯನ ತತ್ತ್ವಪದಗಳು ಪ್ರಕಟವಾಗಿವೆ.

**ತಿಂಥಣಿ ಮೋನಪ್ಪಯ್ಯ**

೧೭ನೇ ಶತಮಾನದ ಮೊದಲಭಾಗದಲ್ಲಿದ್ದವನು. **ವರಕವಿ ಮೋನಣ್ಣ** ಎಂಬ ಮುದ್ರಿಕೆಯಿಂದ ಬರೆದವನು. ಈತನ ಬಗ್ಗೆ ಇನ್ನಾವುದೇ ವಿವರಗಳು ಅಲಭ್ಯ.



**ಸೋಮೆಕಟ್ಟೆ ಚನ್ನವೀರಸ್ವಾಮಿ**

ತುಮಕೂರು ಜಿಲ್ಲೆಯ ಅನುಭಾವಿ ಕವಿ. ಕಾಲ ಕ್ರಿ.ಶ. ಸು. ೭೪೦. ತತ್ತ್ವಪದಗಳೊಂದಿಗೆ ಒಟ್ಟು ಇಪ್ಪತ್ತನಾಲ್ಕು ಕೃತಿಗಳನ್ನೂ ರಚಿಸಿದ್ದಾನೆ. ಈತನ ರಚನೆಗಳ ಮುದ್ರಿಕೆ: **ಗುರು ಚನ್ನಬಸವ**

**ಹಾಗಲವಾಡಿ ಮುದ್ವೀರಸ್ವಾಮಿ**

ತುಮಕೂರು ಜಿಲ್ಲೆ ಗುಬ್ಬಿ ತಾಲೂಕಿನ ಹಾಗಲವಾಡಿ ಗ್ರಾಮದ ತತ್ತ್ವಪದಕಾರ. ನಾಯಕ ಜನಾಂಗದ ಈತ ತೋಂಟದ ಸಿದ್ಧಲಿಂಗ ಯತಿಗಳ ಕಾಲದಲ್ಲಿದ್ದವನೆಂದು ತಿಳಿದು ಬಂದಿದೆ. ಹಾಗಲವಾಡಿ ಗ್ರಾಮದಲ್ಲಿ ಈತನ ಸಮಾಧಿ ಈಗಲೂ ಇದೆ.

**ಶಂಕರದೇವ**

ಕ್ರಿ.ಶ. ಸು. ೧೫೮೦ರ ಅವಧಿಯಲ್ಲಿದ್ದ ತುಮಕೂರು ಜಿಲ್ಲೆಯ ಅನುಭಾವಿ ಕವಿ. **ಶಂಕರಲಿಂಗ** ಎನ್ನುವ ಮುದ್ರಿಕೆಯೊಂದಿಗೆ ಈತನ ೧೨೪ ರಚನೆಗಳು ಲಭ್ಯವಾಗಿವೆ.

**ನಿಂಬರಗಿ ಮಹಾರಾಜ**

ಕಾಲ. ಕ್ರಿ.ಶ. ಸು. ೧೭೮೯-೧೮೮೫ ಎಂದು ತಿಳುದುಬಂದಿದೆ. ತತ್ತ್ವಪದಕಾರ್ತಿ ಶಿವಲಿಂಗವ್ವ ಜತ್ತಿಯ ರಚನೆಗಳಲ್ಲಿ ಈತನ ಉಲ್ಲೇಖವಿದೆ. **ಗುರುಲಿಂಗ ಜಂಗಮ** ಎಂಬುದು ಇವನ ತತ್ತ್ವಪದಗಳ ಮುದ್ರಿಕೆಯಾಗಿದೆ. ಹೆಚ್ಚಿನ ವಿವರಗಳು ಲಭ್ಯವಾಗಿಲ್ಲ.

# ಪಾರಿಭಾಷಿಕ ಶಬ್ದಕೋಶ

| | | |
|---|---|---|
| **ಅರಿಷಡ್ವರ್ಗ** | : | ಕಾಮ, ಕ್ರೋಧ, ಲೋಭ, ಮೋಹ, ಮದ, ಮತ್ಸರ |
| **ಅವಸ್ಥಾತ್ರಯ** | : | ಜಾಗ್ರತ್, ಸ್ವಪ್ನ, ಸುಷಪ್ತಿ (ತನಿನಿದ್ರೆ) |
| **ಅಷ್ಟಮದ** | : | ಕುಲ, ಛಲ, ಧನ, ರೂಪು, ಯೌವನ, ವಿದ್ಯೆ, ರಾಜ್ಯ, ತಪ |
| **ಅಷ್ಟಾಂಗಯೋಗ** | : | ಯಮ, ನಿಯಮ, ಆಸನ, ಪ್ರಾಣಾಯಾಮ, ಪ್ರತ್ಯಹಾರ, ಧ್ಯಾನ, ಧಾರಣ, ಸಮಾಧಿ |
| **ಅಷ್ಟಾಂಗಭೋಗಗಳು** | : | ಅನ್ನ, ಉದಕ, ತಾಂಬೂಲ, ಪುಷ್ಪ, ಚಂದನ, ವಸನ, ಶಯ್ಯೆ, ಅಲಂಕಾರ |
| **ಆರುಚಕ್ರಗಳು** | : | ಮೂಲಾಧಾರ, ಸ್ವಾಧಿಷ್ಠಾನ, ಮಣಿಪೂರ, ಅನಾಹತ, ವಿಶುದ್ಧ, ಆಜ್ಞ |
| **ಆರು ಕರಣಗಳು** | : | ಚಿತ್ತ, ಬುದ್ಧಿ, ಅಹಂಕಾರ, ಮನ, ಜ್ಞಾನ, ಭಾವ |
| **ಆರು ಸ್ಥಲಗಳು** | : | ಭಕ್ತಿ, ಮಾಹೇಶ್ವರ, ಪ್ರಸಾದಿ, ಪ್ರಾಣಲಿಂಗಿ, ಶರಣ, ಐಕ್ಯ |
| **ಆರೂರ್ಮಿ (ಷಡೂರ್ಮಿ)** | : | ಹಸಿವು, ನೀರಡಿಕೆ, ಸುಖ, ದುಃಖ,ಹುಟ್ಟು, ಸಾವು |
| **ಗುರುತ್ರಯ** | : | ದೀಕ್ಷಾ, ಶಿಕ್ಷಾ, ಮೋಕ್ಷ |
| **ತನುತ್ರಯ** | : | ಸ್ಥೂಲ, ಸೂಕ್ಷ್ಮ, ಕಾರಣ |
| **ನವದ್ವಾರಗಳು** | : | ಕಣ್ಣುಗಳು, ಕಿವಿಗಳು, ಮೂಗಿನ ಹೊಳ್ಳೆಗಳು, ಬಾಯಿ, ಮೂತ್ರದ್ವಾರ, ಗುದದ್ವಾರ |
| **ನಾಲ್ಕು ಸ್ಥಿತಿ** | : | ಜಾಗ್ರತ್, ಸ್ವಪ್ನ, ಸುಷುಪ್ತಿ, ತೂರ್ಯ |
| **ನವಚಕ್ರ** | : | ಆಧಾರ, ಸ್ವಾಧಿಷ್ಠಾನ, ಮಣಿಪೂರಕ, ಅನಾಹತ, ವಿಶುದ್ಧಿ, ಆಜ್ಞಾ, ಬ್ರಹ್ಮ, ಶಿಖಾ, ಅಣು |
| **ಪಂಚಕಶ್ಲೇಷ** | : | ಅವಿದ್ಯಾ, ಅಸ್ಮಿತ, ರಾಗ, ದ್ವೇಷ, ಅಭಿನಿವೇಶ |
| **ಪಂಚಭೂತಗಳು** | : | ಪೃಥ್ವಿ, ಅಪ್ಪು, ತೇಜಸ್ಸು, ವಾಯು, ಆಕಾಶ |

**ಪಂಚಾಣುವ್ರತಗಳು** : ಅಹಿಂಸೆ, ಸತ್ಯ, ಆಸ್ತೇಯ, ಬ್ರಹ್ಮಚರ್ಯ, ಅಪರಿಗ್ರಹ

**ಪಂಚೇಂದ್ರಿಯಗಳು** : ಕಣ್ಣು, ಕಿವಿ, ಮೂಗು, ನಾಲಗೆ, ಚರ್ಮ

**ಬಯಲು** : ಬೌದ್ಧರ ಶೂನ್ಯವಾದ, ಕನ್ನಡದ ವಚನಕಾರರು ಮತ್ತು ತತ್ತ್ವಪದಕಾರರಲ್ಲಿ **ಬಯಲು** ಶಬ್ದದ ಮೂಲಕ ಪ್ರಕಟಗೊಂಡಿದೆ.

**ಭ್ರೂಮಧ್ಯ (ತ್ರಿವೇಣಿ)** : ಎಡಹೊಳ್ಳೆಯ ಇಡಾನಾಡಿಯೂ (ಚಂದ್ರನಾಡಿ, ಯಮುನೆ), ಬಲಹೊಳ್ಳೆಯ ಪಿಂಗಳನಾಡಿಯೂ (ಸೂರ್ಯನಾಡಿ, ಗಂಗೆ) ಸುಷಮ್ನ ಎಂಬ ಮಧ್ಯನಾಡಿಯೂ (ಅಗ್ನಿನಾಡಿ, ಸರಸ್ವತಿ) ಭ್ರೂಮಧ್ಯದಲ್ಲಿ ಸೇರಿ ತ್ರಿಕೂಟ ಅಥವಾ ತ್ರಿವೇಣಿ ಎನಿಸುವುದು.

**ಮಂಡಲತ್ರಯ** : ಅಧೋಮಂಡಲ-ಮಧ್ಯಮಂಡಲ-ಊರ್ಧ್ವಮಂಡಲ

**ಮೂರುಕರಣ** : ದೇಹ, ಮಾತು, ಮನಸ್ಸು

**ಮೂರು ಗುಣ** : ಸತ್ಯ, ರಜ, ತಮ

**ಮೂರುಮಲ** : ಆಣವ ಮಲ, ಕಾರ್ಮಿಕ ಮಲ, ಮಾಯಾಮಲ

**ಲಯಯೋಗ** : ನಿಃಶ್ವಾಸ-ಉಚ್ಛ್ವಾಸ ರೂಪವಾದ ರೇಚಕ-ಪೂರಕ ವಿಧಾನದಿಂದಾಗುವ ಹೃದಯ ಸ್ಥಾನದ ಪ್ರಾಕೃತ ಪ್ರಾಣಾಯಾಮವು 'ಹಂಸ' ಎಂದು ಮಂತ್ರಯೋಗವಾಗಿ ಮುಂದೆ ಮುಂದೆ ಹಂಸೋ>ಸೋಹಂ>ಹಂಸೋ>ಸೋಹಂ ಎಂಬಲ್ಲಿ ವರ್ಣದ್ವಯಾತ್ಮಕವಳಿದು ಉಳಿದ 'ಓಂ' ನಾದದಲ್ಲಿ ಪ್ರಾಣವಾಯು ಲಯವಾಗುವುದು.

# ಅರ್ಥಕೋಶ

| | | |
|---|---|---|
| ಅಜಾತ | = | ಹುಟ್ಟು ಇಲ್ಲದ |
| ಅದ್ವೈತ | = | ನಾನೇ ಬ್ರಹ್ಮ, ದೇವರು ಎಂಬ ಸೋಹಂಭಾವ |
| ಅಡಿಕೋಟ | = | ಅಡಿಕೆಯಷ್ಟು |
| ಉರಗ | = | ಸರ್ಪ |
| ಉರುಟು | = | ಗುಂಡಾದ, ಒರಟಾದ |
| ಎರವಿಲ್ಲದೆ | = | ನಿರಂತರವಾಗಿ |
| ಎಸಕ | = | ಕಾಂತಿ |
| ಒಗೆತನ | = | ಕೂಡಿ ಬಾಳುವೆ ಮಾಡುವುದು |
| ಕಂದುಪಡೆ | = | ಕಳಂಕಿತವಾಗು |
| ಕಂಜವದನೆ | = | ತಾವರೆಯಂಥ ಮುಖವುಳ್ಳ (ಲಕ್ಷ್ಮಿ) |
| ಕಂತು | = | ಮನ್ಮಥ, ಕಾಮ |
| ಕರ್ನಿಕೆ | = | ಕಮಲದ ಮಧ್ಯಭಾಗ |
| ಕುಂಚಿಗೆ | = | ಕುಲಾವಿ |
| ಕುಂಜರ | = | ಆನೆ |
| ಕುಕ್ಕುಟ | = | ಕೋಳಿ |
| ಕಿಸುಕುಳ | = | ಹೊಲಸು, ಪಾಪ |
| ಖಲಿ | = | ಕಲೆ (ಕೊಳೆಯ ಗುರುತು) |
| ಗರ್ದಿ | = | ಮೋಜು |
| ಗಡ್ಡಿತೇರ | = | ಅಚ್ಚಿನ ತೇರ |
| ಗುಂಗಡ | = | ಒಂದು ಜಾತಿಯ ಸೊಳ್ಳೆ |
| ಘುಟ | = | ಶರೀರ |
| ಚಕಮುಕಿ ಚೀಲ | = | ತಂಬಾಕಿನ ಚೀಲ |
| ಚಿತ್ | = | ಜ್ಞಾನ |
| ಚಿತ್ಸೂರ್ಯ | = | ಮನಸ್ಸಿನ ಸೂರ್ಯ, ಜ್ಞಾನ ಪ್ರಭೆ |
| ಚೌಕಮಧ್ಯ | = | ಭ್ರೂಮಧ್ಯ |
| ಚಿನ್ಮಯ | = | ಮನೋಮೂರ್ತಿ |
| ಜವ | = | ಯಮ |
| ಜಾಳಿಗೆ | = | ಒಲೆ, ಹಣದ ಚೀಲ |
| ಜಿಟ್ಟಿ | = | ಬೆಳೆಯನ್ನು ಹಾನಿಮಾಡುವ ಮಿಡತೆ |
| ಜೇರುಗಿಂಡಿ | = | ಗವಾಕ್ಷಿ |
| ಡಂಭಕ | = | ಮೋಸ |
| ಡಿಂಭ | = | ದೇಹ, ಶರೀರ |
| ತಾರೀಪ | = | ಹೊಗಳಿಕೆ |
| ತಿಗರಿ | = | ಕುಂಬಾರನ ಚಕ್ರ |
| ದಂಡಿಗೆ | = | ದೇಹ |
| ಧನದ ಮಿತ್ರ | = | ಕುಬೇರನ ಗೆಳೆಯ, ಶಿವ |

| | | |
|---|---|---|
| ದುರುಳ ಕಂತು | = | ದುಷ್ಟಕಾಮ |
| ದುರಿತ | = | ಪಾಪ |
| ನಸಿದು | = | ನಾಶವಾಗಿ |
| ನಿರಯ | = | ನರಕ |
| ಪರಂಜ್ಯೋತಿ | = | ಜ್ಞಾನಜ್ಯೋತಿ |
| ಪರತರ | = | ಶ್ರೇಷ್ಟ |
| ಪರಪುಟ್ಟ | = | ಪರದೇಶಿ |
| ಪಿಂಗಿ | = | ಬಿಟ್ಟು |
| ಪುಲ್ಲಶರ | = | ಹೂಬಾಣದ ಮನ್ಮಥ |
| ಪುಂಡರೀಕ | = | ಬಿಳಿಯ ತಾವರೆ |
| ಪೊರ್ದದೆ | = | ಉಂಟಾಗದೆ |
| ಪೊರೆ ಪೊರ್ದಿದರನು | = | ಆಶ್ರಯ ಬಂದವರನ್ನು ರಕ್ಷಿಸು |
| ಬನ್ನ | = | ತೊಂದರೆ, ಕಷ್ಟ |
| ಬಾಲೇಂದುಧರ | = | ಶಿವ |
| ಬಿನುಗು | = | ಕ್ಷುದ್ರ |
| ಬಿಸಜಭವ | = | ವಿಷ್ಣು |
| ಬಿಸುಗಣ್ಣಿನ ಭೀಮ | = | ಶಿವ |
| ಬೋಡಿನ ಮ್ಯಾಲ | = | ಕಂಬದ ಮೇಲೆ |
| ಭಂಗ | = | ಅವಮಾನ |
| ಭವ | = | ಹುಟ್ಟು, ಜನ್ಮ |
| ಭವಮಾಲೆ | = | ಜನ್ಮಾಂತರಗಳನ್ನು ಹೊಂದುತ್ತಿರುವುದು |
| ಭಾಂಡ | = | ಪಾತ್ರೆ |
| ಭಾಸುರ | = | ಹೊಳೆಯುವ |
| ಮರ್ಕಟ | = | ಮಂಗ |
| ಮುಡಚಟ್ಟು | = | ಮೈಲಿಗೆ |
| ಮೇದಿನಿ | = | ಭೂಮಿ |
| ಮಾಯಾಕಾಳಿಕೆ | = | ಮಾಯೆಯೆಂಬ ಕಿಟ್ಟ |
| ಲಂಡೇನ್ಹಳ್ಳ | = | ಕೊಳೆಯ ಹಳ್ಳ |
| ವೆಜ್ಜ | = | ರಂಧ್ರ, ಕಂಡಿ |
| ವಿಷಯ ಪತಂಗ | = | ವಿಷಯಾಸಕ್ತಿಯೆಂಬ ದೀಪದ ಹುಳು |
| ಸಸಿನೆ | = | ನೇರವಾಗಿ, ಸಮ್ಮನೆ |
| ಸುಂತಿ | = | ಮುಸ್ಲಿಂ ಧಾರ್ಮಿಕ ವಿಧಿ |
| ಸಿಂಪಿ | = | ಕಪ್ಪೆಚಿಪ್ಪು |
| ಸೂಡು | = | ಹೊರೆ, ಕಂತೆ |
| ಹರಗು | = | ಉಳುಮೆ |
| ಹಾವು | = | ವಿಷಯಾಸಕ್ತಿಗಳ ಕುರುಹು |
| ಹಿಡಿಕೋಟ | = | ಹಿಡಿಕೆಯಷ್ಟು (ಕೆಚ್ಚಲು) |
| ಹುದುಲ | = | ಕೆಸರು, ರಾಡಿ |

# ತತ್ತ್ವಪದಗಳ ಅಕ್ಷರಾನುಕ್ರಮ


ಅಂಕೆತಪ್ಪಿ ಆಮಿಷವೆಂಬುವ /೪೮
ಅಂಗಸಂಗಿಯಾಗಿ ಸಂಬಂಧಿಯಲ್ಲ /೧೦೭
ಅಂಗ ಸಂಗವೆ ಯನಗೆ ಯಿಂಗಿಸ್ಯೆ ಗುರುವೇ /೨೦೩
ಅಗಸರೋ ನಾವು ಅಗಸರೋ /೧೫೮
ಅಂತಃಕರಣೆ ನೋಡಮ್ಮ ಗುರುರಾಯ /೭೫
ಅಂದವಾದ ಶ್ರೀಗಂಧದ ಗುಡಿಯೊಳು /೮೧
ಅನುದಿನದಲಿ ತನುವ ಸೂರೆಗೊಂಡೆ /೧೯
ಅನುಭವದಡಿಗೆಯ ಮಾಡಿ ಅದ /೧೧೬
ಅನುಭಾವದಡಿಗೆಯ ಮಾಡಿ ಅದ /೧೪೩
ಅಂಬಿಗರಣ್ಣ ಹೊಳೆಯ ದಾಟಿಸೊ /೧೪೬
ಅಂಬರದೊಳಗೊಂದು ಅಮೃತದ ಶಿಶುಹುಟ್ಟಿ /೩೦೩
ಅಯ್ಯೊಯ್ಯೋ ಮೂಗುತಿ ಕಳಕೊಂಡೆ /೨೨೯
ಅಯ್ಯೋ ಮೋಹದ ಕಂದ ಕಯ್ಯೊಳು ಅಗಲಿದ /೭೪
ಅರಿವಿನ ದೀಪವೆಚ್ಚರಿಕೆ ಕಂಡ್ಯಾ /೭೭
ಅರಿಯಬಾರದೊಂದು ಘನವರಿದು ಮನದೊಳು /೩೦೪
ಅಲ್ಲಲ್ಲಾ ಇಲ್ಲಿಲ್ಲಾ ಶಿವನಲ್ಲಿಲ್ಲ ಶಿವನೆಲ್ಲಿಲ್ಲಾ? /೨೬೪
ಅಲಾಯಿ ಆಡೋಣ ಬನ್ನಿರೋ /೧೯೩
ಅವರವರ ಭಕ್ತಿಗೆ ಅವರವರ ಭಾವಕ್ಕೆ /೧೭೭
ಅಳುತಿದ್ಯಾ ಕಂದ ಅಳುತಿದ್ಯಾ /೧೫೬
ಅಂಬಿಗ ನಾ ನಿನ್ನ ನಂಬಿದೆ /೯೨
ಅಜ್ಞಾನದ ಮಡಕೆಯ ತೊಳೆದು /೯೩
ಆಚಾರ-ವಿಚಾರವ ನಾನರಿಯನು /೧೧೨

ಆಟ ಆಡಲೊ ಬೈಲಾಟ ಹೂಡಲೊ /೨೬೫
ಆನಂದವಾದ ಚಿದ್‌ಘನ ವಸ್ತು ನಾ ಕಂಡೆ /೯೧
ಆರಕ್ಷರದ ತೊಟ್ಟಿಲು ಆರಂಭವಾಯಿತು /೨೯
ಆರಿಗೆ ಕಾಣದೀ ಮುತ್ತು ಗುರುವಿನ ಕರುಣಾಗದೆ /೮೨
ಆರೂ ಅರಿಯರು ನಮ್ಮೂರು /೬೪

ಇದ್ದಿರಿಲೀ ದೇಹಾ ಹೋದರೆ ಹೋಗಲಿ /೮೭
ಈಗ ನೀ ಹ್ಯಾಂಗ ಹೋದಿ /೩೮
ಈ ದೇಹದೊಳಗಿರುವ ವಿಷ ಕಳೆಯಬೇಕಮ್ಮ /೨೧೮

ಊರ ದೇವರ ಮಾಡಬೇಕಣ್ಣಾ /೨೩೦
ಊರಿಗೆ ನಾ ಹೋಗಬೇಕಣ್ಣ /೭೬

ಎಂತಪ್ಪ ಮಗನು ಪುಟ್ಟಿದನಯ್ಯ ಗುರುರಾಯ /೧೭೫
ಎಂತವನೆಂತವನೆ ನಮ್ಮ ಗುರು /೬೨
ಎಂದಿದ್ದರೀ ಕೊಂಪೆಗೆ ಎನಗೆ ನಂಬಿಕೆಯಿಲ್ಲ /೧೨೨
ಎಂಥ ಬಡಗಿ ನೋಡಮ್ಮಾ /೨೦೫
ಎಂಥ ಆಕಳ ಕೊಟ್ಟ ಗುರು ಕಾಮಧೇನು /೧೫೧
ಎಂಥ ಶಿವಯೋಗಿ ಬಂದಿಹನೆ /೭
ಎಂಥ ಮೋಹ ಬಂಗಾರನಮ್ಮ /೨೩
ಎಂಥ ಔಷಧಿ ಕೊಟ್ಟು ಚಿಂತೆ ಹರಿಸಿದನೊ /೩೫
ಎಂಥ ಸೋಜಿಗವಾಯಿತಲೆ ಕಾಂತೆ
ಎಂಥ ಕಪ್ಪೆ ಹದಿನಾರು ಗಾವುದ /೫೫
ಎಂಥಾ ದಯಾವಂತರಿವರು ೬೦
ಎಂಥಾ ಕಂಡಾಬಟ್ಟೆ ಸೂಳೆಮಕ್ಕಳಿವರೋ /೩೭
ಎಂಥಾ ಗಾರುಡಿಗ ಸದ್ಗುರು /೧೫೩
ಎಂಥಾ ಬೆರಕಿದಾಳ ಅವ್ವ ನಮ್ಮತ್ತಿ /೨೮೯
ಎಚ್ಚರದಿಂದ ಯಾಪಾರ ಮಾಡಣ್ಣ /೨೪೪
ಎತ್ತ ಹೋದೆ ಎನ್ನ ಹಡೆದವ್ವಾ ? /228
ಎಲ್ಲ ನಮ್ಮಲ್ಲಿ ನಂಬುವಿರಲ್ಲ /೧೫
ಎಲ್ಲರಂಥವನಲ್ಲ ನನಗಂಡಾ /೧೭೩
ಎಲ್ಲರೊಳಗೋಡಾಡಿಕೊ /೧೯೬
ಎಲ್ಲಾ ರೂಪವು ತಾನಂತೆ ಶಿವ /೧೭೬
ಎಲ್ಲಿಂದ ನೀ ಬಂದೆ ದುಂಬಿಯೆ /೨೨೦
ಎಲ್ಲಿಂದ ಬಂದಿದ್ದೇಲೆ ಖೋಡಿ ನೀ /೨೮೩
ಎಷ್ಟು ತೊಳಿಯಲಮ್ಮ ಈ ದೇಹದ /೪೯
ಎಷ್ಟು ಕಾಡುತಾವ ಕಬ್ಬಕ್ಕಿ /೧೬೩

ಎಷ್ಟು ಬೇಡಿಕೊಂಡರೊಲಿಯುವಳಲ್ಲ /೫
ಎಷ್ಟು ವರ್ಣಿಸಲೆ ಅಗಾಧ ಗುರುವಿನ /೬೩
ಎಷ್ಟು ಮಾತ್ರ ಭವದ ಕಡಲಿದು /೨೦೦

ಏಕೆ ಬಯಲು ಭ್ರಾಂತು ನಿನಗೆ /೧೩೪
ಏನು ಛಂದದಿದು ಮಾಯಾ ಮಂದಿರ /೨೭೮
ಏನಂತಾ ಕರೆಯಬೇಕು ಶಿವನ /೧೩
ಏನಕೊಡ ಏನಕೊಡವ /೧೬೫
ಏನಾದಿ ಮನುಜ ? ಏನಾದಿ ಶಿವ ? /೨೫೧
ಏನಾಯ್ತೆನಾಯ್ತು ಹಿಂದಿನ ಲೆಕ್ಕಕ್ಕೆ ಸರಿಹೋಯ್ತು /೨೮೬
ಏನು ಹೇಳುವೆನಮ್ಮಾ ಸೊಬಗಾ ? /೪೧

ಒಂದಿನ ಆಶ್ಚರ್ಯವಾಯಿತೊ ಎನಗ /೨೫೩
ಒಂದು ಹೆಣಕೆ ಎರಡು ಹೆಣವು ಕುಣಿವುದೇತಕೆ ? /೧೬೬
ಒಂಭತ್ತು ಬಾಗಿಲ ಮನೆಯಣ್ಣ /೧೯೮
ಒಕ್ಕಲುಮಗ ಒಳ್ಳೆವನಮ್ಮಾ /೧೬೦
ಒಲ್ಲೆ ಗಂಡನ ಕೂಟ ಒಗತನವ /೧೧೧
ಒಲ್ಲೆನೊಕತನವ ಒಲ್ಲೆ, ನಾನಾರೆ /೧೧೦
ಓದ ಬಾರದೆ ತರಳೆ ಓದಬಾರದೆ ? /೧೮೪
ಔಷದಿ ತಿನಬೇಕು /೪೪

ಕಂಗಳ ನೋಟವು, ಕಾಯಿದ ಕರದಲಿ /೧೦೬
ಕನಸೊಂದ ಕಂಡೆನಮ್ಮ /೯೪
ಕಂಡಿರಿಯಕ್ಕ, ವಿಪರೀತವ ? /೧೦೩
ಕನಸು ಕಂಡೆನೆ ಮನಸುಯಿಟ್ಟೆನೆ /೨೦೧
ಕಣ್ಣಿನೊಳು ಕಣ್ಣುಕಂಡೆ ಕಾಣಬಾರದನು ಕಂಡೆ /೨೮
ಕನ್ಯೆಯೊಬ್ಬಳ ಕೂಡಿಕೊಳ್ಳೋಣ ಅಕ್ಕರೆಯಿಂದಲಿ /೨೩೨
ಕರಕೆ ಕರಕರೆ ಘನವಯ್ಯೋ /೧೦೯
ಕಲ್ಲು ಸಕ್ಕರೆ ಕೊಳ್ಳಿರೋ ನೀವೆಲ್ಲರೂ /೧೧೫
ಕಾಕನಾಗಿ ಹಕ್ಕಿಯ ಹೊಡೆಯಣ್ಣ /೨೧
ಕಾಯಕಾಂತರವ ಹೊಕ್ಕು ಬೇಟೆಯನಾಡಿ /೧೪೫

ಕಾಣಿಸುತಿದೆ ನೋಡು /೪೦
ಕಾಮಿಸಲೇನಿದು ಕೆಂವಸ್ಯೆಯಾ /೨೩೫
ಕುಂಬಾರಕಿ ಈಕಿ ಕುಂಬಾರಕಿ /೧೬೨
ಕುರುಬರೋ ನಾವು ಕುರುಬರೋ /೨೯೬
ಕುಲ ಕುಲ ಕುಲವೆಂದು ಹೊಡೆದಾಡದಿರಿ /೧೨೧
ಕುರುಬ ದೊಣ್ಣೆಯ ಪಿಡಿದ ಕುರುಹ ಪೇಳುವೆ ನಾನು /೨೧೭
ಕೂಗುತಾಲಿದೆ ಪಕ್ಷಿ ಕೂಗುತಾಲಿದೆ /೨೮೪
ಕೆಟ್ಟ ದೊರೆಯೆನಿಸ ಬೇಡ ಅದರಿಂದ /೧೮೧
ಕೇಳೋ ಕೇಳೋ ಕೇಳಿರಣ್ಣ /೨೬೨
ಕೋಗಿಲೆ ಚೆಲ್ವ ಕೋಗಿಲೆ ಮುದ್ದು /೧೨೪
ಕೋತಿ ಮನವ ನಂಬಬಹುದೆ ಇಂಥ /೧೮೫
ಕೋಲು ಕೋಲೆನ್ನಿರೋ ಸದ್ಗುರುವಿನ /೩೯
ಕೋಲು ಕೋಲೆನ್ನಿರೆ /೧೪೭
ಕೋಲು ಕೋಲೆನ್ನ ಕೋಲೆ /೨೬೯
ಕೋಳಿ ಕೂಗಿತು ಮಗಳೆ ಬೆಳಗಾಯಿತೇಳಮ್ಮ /೬೧

ಗಂಡನು ದೊರಕಿದ ಯೆನಗಮ್ಮ /೨೬೮
ಗಗನದಗಮ್ಯದ ನಿಲವನು ಒಂದು /೧೦೧
ಗಡಗಿ ತೊಳೆದು ಅಡಗಿ ಮೂಡ್ಯಾಳಪ್ಪ /೨೯೦
ಗಿಣಿಯೆ ಮನದಣಿಯೆ /೧೯೦
ಗಿಳಿಯು ಪಂಜರದೊಳಿಲ್ಲ-ಹರಿಹರಿಯೆ /೧೧೭
ಗುರುತ ತೋರಿದ ಗುರುವಿನ /೩೦೬
ಗುಡುಗೂ ಇಲ್ಲದ ಮಿಂಚೂ ಇಲ್ಲದ /೧೨
ಗುಡುಗುಡಿಯನು ಸೇದಿನೋಡೋ /೧೧೯
ಗುರು ಮುಟ್ಟಿದ ಗೂಳಿ ಬರದಿಂದ ಬರುತಾದೆ /೩೦೨
ಗುರುವಿನ ಮಗನಾದರ ಗುರುತು ತಿಳೀಬೇಕು /೨೨೬
ಗುರುವಿನ ಮನೆಯಲಿ ಅರಮನೆ ಇರುವುದು /೨೧೧
ಗುರುವಿನ ಮಹಿಮೆ ಗುರುಭಕ್ತರೆ ಬಲ್ಲರು /೧
ಗುರುವಿನ ಕರುಣದಿಂದ /೧೮
ಗುರುವಿನ ಮೂಲ ತಿಳಿಯಲಾಗದು /೨೦
ಗುರುವೆ ನಿನ್ನಾಟ ಬಲ್ಲವರ್‍ಯಾರುಂಟು ? /೫೮

ಗುರುರಾಯನೊಲಿದಮೇಲಮ್ಮ /೭೨
ಗುರುವಿನಾಜ್ಞೆ ಮೀರದೆ ನಡೆವವಣ /೧೫೭
ಗುರುವಿನ ನೆನೆದರೆ ಮರೆಯದೆ ಮನದೊಳು /೨೫೭
ಗೊಲ್ಲರೊ ನಾವು ಗೊಲ್ಲರೋ ೨೭೯

ಚಂಚಲ ಮನಸಿದು ಮುಂಚ್ಯಾಕ ಎಲ್ಲಿತ್ತು ? /೧೪೮
ಚಂದವಾದ ವೃಂದಾವನದಲಿ ನೋಡು ನೋಡು /೧೯೧
ಚಂದದಿಂದ ಕಂದ ಕಟ್ಟಿ ಬಂದೀನಿ ಮೇಲ /೨೮೦
ಚಿಂದಿ ಭಿಕ್ಷುಕ ಬಂದೆವಮ್ಮಾ ೨೫೪
ಚಿತ್ರ ಎಂಥಾದ್ದು ಕಂಡೆ ರಾತ್ರಿ ಮನಗಂಡೆ /೨೪೦

ಜಂಗಮನಿಲ್ಲ ಜಗದೊಳಗವ್ವ /೨೪೬
ಜಿಟ್ಟಿ ಹುಳುಗಳೆದ್ದವು ಇದು ನೋಡು /೧೭೦
ಜೀವತ್ವವೆಂಬುದದಾವುದೆಂದರಿಯರು ಕೇಳು ಮನವೆ /೧೩೯
ಜೋ ಎನ್ನಿರವ್ವಗಳಿರಾ ನಿವೀಗ ಜೋ ಎನ್ನಕ್ಕಗಳಿರಾ /೨೩೬
ಜ್ಯೋತಿಯೊಳಗೊಂದು ಜ್ಯೋತಿ ಬೆಳಗುತಿದೆ /೭೮
ಜ್ಞಾನದಿಂದ ಶಿವಧ್ಯಾನ ಮಾಡಣ್ಣಾ, ಹೇ ಜಾಣ /೨೯೯

ಡಿಂಬದಲ್ಲಿ ಇರುವ ಜೀವ /೨೫

ತಂಗಿ ಶೃಂಗಾರ ನೋಡಮ್ಮಾ /೧೧
ತನುವಿನೊಳಗೆ ಅನುದಿನವಿದ್ದು /೧೦
ತನುವಿನೊಳಗೆ ಬಹಳದಿನವಿದ್ದೆ /೨೨
ತರವಲ್ಲ ತಂಗಿ ನಿನ್ನ ತಂಬೂರೀ ಸ್ವರ /೧೭೪
ತನ್ನ ತಾ ತಿಳಿದಮೇಲೆ ಇನ್ನೇನಿನ್ನೇನು /೮೮
ತಾ ಬೇರೆಯಾಗ ಬೇಕಣ್ಣ /೩೬
ತಾನೆ ಬೆಳಗುತಿದೆ ಸ್ವಯಂ ಜ್ಯೋತಿ ತಾನೆ ಬೆಳಗುತಿದೆ /೨೨೨
ತಿಳಿ ನೀ ತಂಗ್ಯಮ್ಮ ಇದು ಬರಿ ಮಣ್ಣಿನ ಕೊಡನಮ್ಮ /೨೧೦
ತಿಳಕೋ ತಿಳಕೋ ತಿಳಕೋ ತಿಳಿದರೆ ನೀ ಉಳಕೊ /೨೪೭
ತುರುಕರೊ ನಾವು ತುರುಕುರು /೨೬೭
ತೂಗುತಾದೆ ನೋಡು ಜೋಕಾಲಿ /೯೧೪೪

ತೆರೆದ ಬಾಗಿಲ ಸುಂಕವಿಲ್ಲದ ಪುರವುಂಟು ಬಂದು ನೋಡಿ /೧೯೯
ತೆರಳೂವಾ ಜೀವ ದೇಹವ ತೊರೆದೊ /೨೦೪
ತೇರು ಸಾಗುತಾದಮ್ಮ ತಂಗಿ /೧೪೯
ತೇರು ಸಾಗಿತಮ್ಮ ನೋಡಿರೆ ತೇರಿನ ಬಿಂಬವ /೨೪೨
ತೋರುತಿದೆ ಪರವಸ್ತು ನೀರೆ ನೋಡೆ /೨೬೦

ದಾರಿ ಚೆಲ್ಲಿದೇ ಮುಕ್ತಿಯ ಗುರು /೪೬
ದೇಹದ ಮರ್ಮವ ತಿಳಿಯ ಬೇಕಾದರೆ /೨೪೫
ದೇವರೇ, ಎನ್ನ ದೇವರೇ /೧೦೦
ದೇಹವ ಬಿಟ್ಟು ಬ್ರಹ್ಮವು ಎಂತೆನೆ /೧೨೭
ದೃಷ್ಟಿಯೊಳಗೆ ದೃಷ್ಟಿ ನಿಂತಿತು ನೀ ನೋಡು /೮೯

ನಂಬಿದೆ ಗುರುವೆ ನಂಬಿದೆ, ನಂಬಿದೆ ಸ್ವಾಮಿ /೧೦೫
ನಂಬಬ್ಯಾಡಲೊ ನೀನು ನಂಬದಿರು ದೇಹವನು /೨೪೯
ನಡಿಗೆಳದಿ ತಿಳಿದು ಹಾಜರಾಕ /೨೭೪
ನಮೂಜ ಮಾಡಿದೆನೋ ದಿನದಿನ /೧೯೪
ನಚ್ಚದಿರು ಕಾಯವನು /೪೨
ನತ್ತು ತರಲು ಹೋಗಿ ನಾನು ಮುತ್ತು ಒಂದು ಕಂಡೆ /೨೭೩
ನಮ್ಮ ಮನೆ ಕೇಳಕ್ಕ /೧೩೬
ನಾಗಲಿಂಗಯೋಗಿ ಹುಟ್ಟಿ ಬರತೀನಂದವ /೫೬
ನಾನುಟ್ಟ ಬಟ್ಟೆಯು /೭೩
ನಾರಿ ಹೋಗೂನು ರಾಯಚೂರಿಗೀಗ /೨೭೧
ನಾನೆನ್ನಬಹುದೇ ಈ ದೇಹವ /೮
ನಾಶವಾದರು ಬೇಗ ನೆಂಟರಿಷ್ಟರು /೨೧೯
ನಾಳೆಯೆಂಬನ ಮನೆಹಾಳು /೧೮೩
ನಿದ್ರೆ ಬಾರದು ಕಣ್ಣಿಗೆ /೩೧
ನಿಬ್ಬಣವೇನಾ ತ್ರಿಜಗದೊಳಗೆ /೧೦೨
ನಿಬ್ಬಣಕ್ಕೆ ಹೋಗುತ್ತೈದೇನೆ, ನೋಡಕ್ಕಯ್ಯ /೧೦೪
ನಿಶ್ಚಿಂತನಾಗ ಬೇಕಂತೀ /೧೬೯
ನೀ ಮಾಯೆಯೊಳಗೋ ನಿನ್ನೊಳು ಮಾಯೆಯೊ /೧೨೦
ನೀನೆಲ್ಲಿ ? ನಿನ್ನ ದೇಶೆಲ್ಲಿ ? ಕೇಳಲೆ ರಾಜ /೧೭೮

ನುಡಿಯ ಗಡಣದ ಬೆಳಗು /೯೯
ನುಡಿ ನುಡಿ ನುಡಿಯಣ್ಣಾ /೨೩೭
ನೆಲ್ಲು ಕುಟ್ಟುಣ ಬಾರಮ್ಮ ಇಬ್ಬರು ಕೂಡಿ /೩೦೮
ನೋಡು ನೋಡು, ನೋಡು ನೋಡು /೧೧೪
ನೋಡು ನೋಡಲೊ ಕಾಣುತಾದೊ /೨೬೬
ನೋಡಿ ನೋಡಿರೋ ಶ್ರೀ ಗುರುರಾಯನ/೨೯೩

ಪಂಡಿತ ಪಂಡಿತರೆಂದು ಹೇಳಿಕೊಂಬರು ಜಗದಿ /೧೫೯
ಪಕ್ಷಿ ಆಡುತಾದೆ /೩೩
ಪತ್ರವ ಬರೆದಿದ್ದನು ಸದ್ಗುರುರಾಯ /೨೩೯
ಪುಸಿಯನಾಡುವುದಿಲ್ಲವಣ್ಣ ನೀವು /೨೨೩

ಬಂಗಾಲಿ ಸಂತಿ ಭಾಳ ಗಡಿಬಿಡಿ /೨೨೭
ಬಗಿಬಗಿ ಬಣ್ಣದ ಗಗನ ಮಾಲಿನೊಳು /೨೫೬
ಬಟ್ಟ ಕುಚದ ಭಾವೆ ನಿನ್ನಿಂದ /೨೧೬
ಬಡತನದ ಬಡಿವ್ಯಾರ ನಮ್ಮೂರ /೨೧೨
ಬಟ್ಟ ಬಯಲು ತೋಟದಲ್ಲಿ /೩೦
ಬಹು ದೊಡ್ಡದೀ ಜನ್ಮ ಜಂಬೂ ದ್ವೀಪಾಂತರದಿ /೩೦೦
ಬರಲಿಲ್ಲ್ಯಾಕೊಂದಿರುಳಿನ ರಾತ್ರಿ /೬೯
ಬಾ ಬಾ ಬಾ ಎನ್ನ ಮನಸ /೮೫
ಬಾಯಿಲೊಂದು ಆಡ್ತೀರಿ ಮನಸಿನೊಳಗೊಂದ ಮಾಡ್ತೀರಿ /೧೫೫
ಬಾಗಿಲು ತೆರದಿದೆ ನೋಡಣ್ಣಾ /೧೯೭
ಬಿಡು ಬಾಹ್ಯದೊಳು ಡಂಭವ ಮಾನಸದೊಳ /೧೪೧
ಭಿನ್ನ ಭೇದವ ಮಾಡಬ್ಯಾಡಿರೋ /೯೫
ಬೆಡಗಿನ ಮಾಯ ಜಗದೊಳಗೊಂದು /೨೯೬
ಬೆಳಕು ಕಂಡೆ ಕೇಳು ಮಾನಿನಿ /೧೯೨
ಬೇಡಿಕೊಂಬೆನು ಸದ್ಗುರುವೆ /೪೭
ಬ್ರಹ್ಮ ಕುಂಬಾರ ನೀನಾದೆ /೭೦
ಬ್ರಹ್ಮ ಮಾಯ ಜಗವೆಲ್ಲ /೨೯೫
ಬ್ರಹ್ಮಾನಂದ ಸುಖವು /೪೫
ಬ್ರಹ್ಮಾನಂದದ ಸುಖವೇನು ನಿನಗೆ /೯೦

ಬ್ರಹ್ಮಾಂಡದೊಳಗೊಂದು ಹಮ್ಮೀನ ಮರವುಟ್ಟಿ /೧೪
ಭಜನೆ ಬ್ರಹ್ಮಾನಂದ ರಸವು /೪೩

ಮಂಗಳವಾಗಿಹುದು ಸದ್ಗುರುವಿಗೆ /೧೮೨
ಮಂಗಳವಾಗಿಹುದೆ ಜಯ ಜಯ /೬೭
ಮಗಹುಟ್ಟಿತವ್ವ ಎನಗೊಬ್ಬ ಮಗಹುಟ್ಟಿತವ್ವ /೧೮೮
ಮಗುವು ಜನಿಸ್ಯೆತೆ ಒಡಲೊಳು /೧೬
ಮಡಿಯ ಮಾಡುವರಮ್ಮ /೬೮
ಮಡಿಯಾಗಿ ತಂಗಿ ಮಹಾಲಿಂಗ ಪೂಜೆ ಮಾಡೇ /೧೨೫
ಮನವೆಂಬ ಕೋಣವಿದು ಮನೆಹೊಂದಿ ನಿಲ್ಲದು /೨೫೫
ಮನವೆಂಬ ಮರ್ಕಟನ ತಡೆಯಲಾರೆನು ದೇವಾ /೧೪೦
ಮನಶಿನ ಹರಿದಾಟವನು ನಿಲ್ಲಿಸುವದೊ /೧೭೧
ಮನೆಮನೆ ಯಲ್ಲೈತು ಮನೆ /೫೭
ಮರೆಯಬಾರದು ಶಿವನ ಮರೆಯಬಾರದು /೨೮
ಮಾಡಿದೆ ಹೊಲ ಮಾಡಿದೆ /೨೫೨
ಮಾತನಾಡೊ ಮಹಾದೇವ /೨೬೧
ಮುಡಚಟ್ಟಿನೊಳು ಬಂದು ಮುಟ್ಟಿ ತಟ್ಟಿ ಅಂತೀರಿ /೧೫೨
ಮುತ್ತು ಕಂಡೆನಮ್ಮ ತಂಗಿ /೨೪
ಮುತ್ತು ಬಂದಿದೆ ಕೊಳ್ಳಿರಣ್ಣಾ ಅದಕೆ /೧೨೬
ಮುಚ್ಚೋ ಬಾಯಿ ತುಟಿಬಿಚ್ಚ ಬೇಡ ಒಳಗಿನ ಧ್ವನಿ ಕೇಳೊ /೨೦೭
ಮುಂದೆ ನೋಡುತ ಹಾದಿ ನಡೆಯಮ್ಮ /೨೦೯
ಮೂಕನಾಗಬೇಕೋ ಈ ಜಗದೊಳು ಜ್ವಾಕ್ಯಾಗಿರಬೇಕು/೧೫೪
ಮೊದಲು ಪಾಡುವೆ ನಾ ಸದಮಳ ಗುರುವಿನ /೨
ಮೇಲು ಮಂಟಪದಲ್ಲಿ ನೋಡಣ್ಣಾ /೪

ಯಾಕೆ ಸಂಸಾರ ಬಿಡಬೇಕೋ ? /೨೪೧
ಯಾರು ಅರಿಯರು ನಮ್ಮೂರು /೫೪
ಯಾವ ದೇಶದ ಹೂವಿದ್ದಾವ ಇವು ? /೧೭
ಯೇ ನಾರಿಮಣಿಯೆ ನೋಡನು ಬಾರೆ /೨೫೯
ಯೋಗಿ ಬಂದಾನೋ ಶಿವಯೋಗಿ ಬಂದಾನೋ /೬೫

ರತ್ನ ಬಂದಿದೆ ನೋಡಿರೋ ಉನ್ನತ ಜೀವಾ /೧೮೭
ರವಿಚಂದ್ರ ಪುರದಲ್ಲಿ ಶಾವಂತ್ಗೂವಿನ ಗಿಡ ಇರುವುದಣ್ಣಾ /೧೯೫

ಲಿಂಗಪೂಜೆ ಆಗುತದಣ್ಣಾ ಯಾವಾಗ ನೋಡಲು /೮೩
ಲಿಂಗಪೂಜೆಯ ಮಾಡಬೇಕಣ್ಣ /೨೮೭

ವನಗಿಳಿಯು ಬಂದೆನ್ನ ಮನಗಿಳಿಯ ಬುದ್ಧಿಯನು /೧೮೦
ವರಗುರು ತಾತನ ಪಾದವ ನೆನೆದರೆ /೨೭
ವೇದ ಬೇಡ ನಿನಗೆ ಶಾಸ್ತ್ರ ಬೇಡ /೧೩೧

ಶರಣಾರ್ತಿ ಹಾಕುವೆನು ಸಾಧು ಜನಕೆ /೨೬
ಶರೀರವೆಂದೆಂಬುವ ಹೊಲನ ಹಸನ ಮಾಡಿ /೧೪೨
ಶರೀರ ಎಂದೆಂಬುವ ಈ ಹೊಲ ಗುರುತೀರ್ಥ ಸಲಿಲ /೨೮೨
ಶಿವಶಿವ ಎನ್ನುತ ನುಡಿಯಮ್ಮ /೬

ಸದ್ಗುರು ಸಾಕಿದ ಮದ್ದಾನಿ ಬರುತಲಿದೆ /೨೩೮
ಸದಾ ಬೆಳಗುತಿದೆ ಜ್ಯೋತಿ /೮೬
ಸಬ್ ಕಹತೆ ಈಶ್ವರ ಅಲ್ಲಾ /೨೩೪
ಸಂಸಾರ ಸಾಗರವನ್ನುತ್ತರಿಸುವೊಡೆ /೧೨೩
ಸಾಕಾಯಿತು ಈ ಊರವ್ವ /೭೧
ಸಾಕಪ್ಪ ಸಾಕೋ ಸಂಸಾರ /೨೯೧
ಸಾಕು ಮಾಡಯ್ಯ ಜಲುಮ /೫೧
ಸಾಧುಗಳಿರಾ ಸಾರಿ ಹೇಳುವೆ ಕೇಳಿರಿ /೨೦೨
ಸಾರಿ ಚೆಲ್ಲಿದೆ ಮುಕುತಿ ಗುರು /೭೯
ಸಾಲಿಯ ನೋಡಿದಿಯಾ ಸರಕಾರದ /೭೯
ಸ್ಥಿರವಾಗಿರುವುದನ್ನ ಎಂದಿಗೂ /೩೦೧
ಸುಮ್ಮನಿರು ನಾಲಿಗೆ, ಸುಮ್ಮನಿರು ನಾಲಿಗೆ /೬೬
ಸುವ್ವಿ ಸುವ್ವಕ್ಕ ನಾರಿ /೧೫೦
ಸುಳ್ಳಲ್ಲ ಈ ಮಾತು ಶೂಲಧರನಾಣೆ /೨೫೦
ಸೂಜಿಯೆ ನೀನು ಸೂಜಿಯೇ /೧೬೭
ಸೆಟೆಯನಾಡುವನೆ ಸುಜ್ಞಾನಿ ! /೨೨೫


ಸೇದಣ್ಣ ಭಂಗಿ ಸೇದಣ್ಣ /೨೦೬
ಸ್ನೇಹ ಮಾಡಬೇಕಿಂಥವಳ ಒಳ್ಳೆ /೧೭೨
ಸೋಬಾನವೆನ್ನಿರೆ ಸೋಬಾನವೆನ್ನಿರೆ /೫೦
ಸೋರುತಿಹುದು ಮನೆಯ ಮಾಳಿಗೆ ಅಜ್ಞಾನದಿಂದ /೧೬೪
ಸೈ ಶಬಾಸ ಗಬರು ದರೋಡೆ ಬರುತದೆ /೧೩೦
ಸೈ ಸೈ ಸೈ ಕುಂತಿದನೆ ಕುಂತ ಜಾಗದಾಗೆಲ್ಲರನೆ /೧೮೯

ಹಂಸನಾಗಲೋ ಪರಮಹಂಸನಾಗಲೋ /೧೮೬
ಹೆಂಗೆ ನೀ ಹೋಗ್ತೀತಿ ಹೆಡ್ಡ /೨೯೪
ಹಕ್ಕಿ ಹೊಡೆಯೊ ತೆಕ್ಕಿ ಸೋಮಣ್ಣ /೨೧೪
ಹಣ್ಣು ತಂದೇನಮ್ಮಾ ಮನಿಗೊಂದ್ಹಣ್ಣ ತಂದೇನೆ /೯
ಹತ್ತಿ ನೋಡಿ ಬೆಟ್ಟ ಹತ್ತಿ ನೋಡಿ /೫೩
ಹರಗಿ ಬಿತ್ತಲಿಲ್ಲ /೩೨
ಹರಹರ ಶಿವಶಿವ ಹಾವೂ ಎನಗ ಹರಿತ /೨೭೬
ಹಾದಿ ಹಸನ ಮಾಡೋ /೨೭೫
ಹಾದಿ ನೋಡಿಕೊಳ್ಳಿರೋ ಓ ಅಮ್ಮಗಳಿರಾ /೨೯೨
ಹಾರು ಕಂಡ್ಯಾ ಹಂಸ ಹಾರು ಕಂಡ್ಯಾ - ನೀನು /೧೩೮
ಹಾವು ಕಚ್ಚಿತಮ್ಮಾ ದಾರಿಗೆ ತಿಳಿಯದಿದರ ಮಹಿಮಾ /೨೭೭
ಹ್ಯಾಂಗ ಮರೆಯಲಿ ಗುರುವಿನ /೧೩೨
ಹೀನ ಜನರಿಗೆ ತಿಳಿಯದೀ ಮಾತು /೨೭೦
ಹೀನ ಮಾನವನಾದೆನೊ ಈ ಜಗದೊಳು /೨೭೨
ಹುಚ್ಚುನಾಯಿ ಕಚ್ಚಲು ಬರುತೈತೆ /೩೪
ಹುಬ್ಬಳ್ಳಿ ಕೆರೆಬಾವಿ ಜಂಗಮ /೫೨
ಹುಸಿಯೊ ಹುಸಿಯೊ ಹುಸಿಮನವೆ /೩೦೫
ಹುಸೇನಿ ಸಾಹೇಬರ ಬದಿಯಲಿ ಹೋಗಿ /೮೪
ಹೂವಿಲ್ಲದ ಕಂಪು, ಹೊನ್ನಿಲ್ಲದ ಬಣ್ಣ /೧೧೩
ಹೊಂದಿಕಿಲಿಂದ ಹೊಲವನು ಮಾಡಣ್ಣ /೨೪೩
ಹೊಲ ಒಂದು ಮಾಡಿನಿ ಸರಿಬಟ್ಟೆ ಪಾಲೀಲಿ /೨೪೮
ಹೋಗೋಣ ನಡೆಯಮ್ಮ ಈಗ /೨೦೮
ಹೋದೆನೂರಿಗೆ ಇದ್ದೆ ನಾನಿಲ್ಲಿ /೧೦೮
ಹೌದಪ್ಪ ಹೌದಪ್ಪ ಹೌದು ದೇವರ /೮೦

# ನೆರವು


| | |
|---|---|
| ಕೈವಲ್ಯ ಕಲ್ಪವಲ್ಲರಿ | ಸಂ : ಶಿ.ಶಿ. ಬಸವನಾಳ<br>ಶ್ರೀ ಸರ್ಪಭೂಷಣ ಶಿವಯೋಗೀಶ್ವರ ಮಠ<br>ಬೆಂಗಳೂರು. (೧೯೪೯) |
| ಕೈವಲ್ಯ ದರ್ಪಣ | ಸಂ : ಶಿ.ಶಿ. ಬಸವನಾಳ<br>ಶ್ರೀ ಮುರಘಾ ಮಠ<br>ಹಾವೇರಿ ಪೇಟೆ. ಧಾರವಾಡ (೧೯೫೨) |
| ಕೈವಲ್ಯ ಪದ್ಧತಿ | ಸಂ : ಪಂಡಿತ ನಾಗಭೂಷಣ ಶಾಸ್ತ್ರಿಗಳು ಶಾಸ್ತ್ರೀಮಠ<br>ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ<br>ಬೆಂಗಳೂರು (೧೯೮೫) |
| ಕಡಕೋಳ ಮಡಿವಾಳೇಶ್ವರ ವಿರಚಿತ ಸ್ವರವಚನಗಳು | ಸಂ : ಮಲ್ಲಿಕಾರ್ಜುನ ಶಿವಪ್ಪ ಲಠ್ಠೆ<br>ಶ್ರೀ ಜಗದ್ಗುರು ತೋಂಟದಾರ್ಯ ಸಂಸ್ಥಾನ ಮಠ<br>ಗದಗ (೧೯೮೨) |
| ಮೈಲಾರ ಬಸವಲಿಂಗ ಶರಣರ ಸಮಗ್ರ ಸಾಹಿತ್ಯ | ಸಂ : ಎಸ್.ವಿ. ಅಯ್ಯನಗೌಡರ<br>ಶ್ರೀ ಜಗದ್ಗುರು ತೋಂಟದಾರ್ಯ ಸಂಸ್ಥಾನ ಮಠ<br>ಗದಗ (೧೯೮೪) |
| ರಾಮಪುರ ಬಕ್ಕಪ್ಪಯ್ಯನ ಸ್ವರವಚನ - ತ್ರಿವಿಧಿ | ಸಂ : ವಿ.ಜಿ. ಪೂಜಾರ<br>ಶ್ರೀ ಜಗದ್ಗುರು ತೋಂಟದಾರ್ಯ ಸಂಸ್ಥಾನ ಮಠ<br>ಗದಗ (೧೯೯೬) |
| ಕನ್ನಡ ಪರಮಾರ್ಥ ಸೋಪಾನ | ಸಂ : ಎಂ.ಎಸ್. ದೇಶಪಾಂಡೆ<br>ಕರ್ನಾಟಕ ವಿಶ್ವವಿದ್ಯಾಲಯ. ಧಾರವಾಡ (೧೯೬೨) |
| ಕನ್ನಡ ಸಂತರ ಪರಮಾರ್ಥ ಪಥ | ಡಾ. ಆರ್. ಡಿ. ರಾನಡೆ<br>ಅನು : ಎಂ.ಎಸ್. ದೇಶಪಾಂಡೆ<br>ಕರ್ನಾಟಕ ವಿಶ್ವವಿದ್ಯಾಲಯ. ಧಾರವಾಡ (೧೯೭೬) |
| ಶಿಶುನಾಳ ತತ್ತ್ವಪದಗಳು | ಎ.ಆರ್. ಶಿವನಾಗಪ್ಪ & ಸನ್ಸ್ (೧೯೫೫) |
| ಕನ್ನಡದಲ್ಲಿ ಕೈವಲ್ಯ ಸಾಹಿತ್ಯ | ಡಾ.ಎಚ್. ತಿಪ್ಪೇರುದ್ರಸ್ವಾಮಿ (೧೯೮೩) |


| | |
|---|---|
| **ಪಾರಮಾರ್ಥ ಶರಧೀ ಷಟ್ಪದೀ** | ಶ್ರೀ ಶಿಲಿವೇರಿ ಶಿವಪ್ಪನವರು ಗ್ರಂಥವು<br>ಶ್ರೀ ಬೂದ್ಯಾಳು ಶಿವಪ್ರಸಾದು ಆದಿ ಸದ್ಗುರು ನಿಲಯ<br>ಬಳ್ಳಾರಿ (೧೯೮೮) |
| **ಶಿವಾನುಭವ ಶಬ್ದಕೋಶ** | ಸಂ :ಫ.ಗು. ಹಳಕಟ್ಟಿ<br>ಸಮಾಜ ಪುಸ್ತಕಾಲಯ, ಧಾರವಾಡ (೧೯೪೩) |
| **ಘನಾನುಭವಸಾರ** | ಶ್ರೀ ಸತ್ ಉಪಾಸಿ ಮಲ್ಲಣ್ಣನವರು<br>ಕನ್ನೇಶ ಭಜನಾ ಮಂಡಳಿ. ದೊಡ್ಡೇರಿ ಚಳ್ಳಕೆರೆ (೧೯೯೧) |
| **ಚಂದುಳ್ಳಿ ಪದವ ಕಲಿಸವ್ವ** | ಸಂ : ಬಾನಂದೂರು ಕೆಂಪಯ್ಯ<br>ದಲಿತ ಪ್ರಕಾಶನ. ಬಾನಂದೂರು (೧೯೭೮) |
| **ಕಲಬುರ್ಗಿ ಜಿಲ್ಲೆಯ<br>ತತ್ತ್ವಪದಕಾರರು** | ಡಾ. ವಿ.ಜಿ. ಪೂಜಾರ<br>ಪ್ರಸಾರಾಂಗ. ಗುಲಬರ್ಗಾ ವಿಶ್ವವಿದ್ಯಾಲಯ (೧೯೯೧) |
| **ತತ್ತ್ವಪದಕಾರರು** | (ಆಯ್ಕೆ) : ಜಿ.ವಿ. ಆನಂದಮೂರ್ತಿ<br>ಕರ್ನಾಟಕ ಸಾಹಿತ್ಯ ಅಕಾಡೆಮಿ (೧೯೯೬) |
| **ಮುಪ್ಪಿನ ಷಡಕ್ಷರಿಗಳ<br>ಕೈವಲ್ಯ ಪದಗಳು** | ಸಂ : ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿ<br>ಜಗದ್ಗುರು ಶಿವರಾತ್ರೀಶ್ವರ ಗ್ರಂಥಮಾಲೆ<br>ಮೈಸೂರು (೧೯೮೭) |
| **ಮುಸ್ಲಿಂ ತತ್ತ್ವಪದಕಾರರು** | ಕರ್ನಾಟಕ ಸಾಹಿತ್ಯ ಅಕಾಡೆಮಿ (೧೯೯೮) |
| **ಗುರುಶಿಷ್ಯರ ತತ್ತ್ವಪದಗಳು** | ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ (೧೯೯೭) |
| **ಹಾವು ತುಳಿದೇನೆ** | ಸಂ : ಎಚ್.ಎಲ್. ನಾಗೇಗೌಡ<br>ಕರ್ನಾಟಕ ಜಾನಪದ ಟ್ರಸ್ಟ್. ಬೆಂಗಳೂರು (೧೯೮೯) |
| **ತೇರ ನೋಡೋಣ ಬನ್ನಿರೊ** | ಸಂ : ಭದ್ರಯ್ಯ ತಿಮ್ಮಸಂದ್ರ<br>ಹರ್ಷ ಪ್ರಕಾಶನ. ಮೈಸೂರು (೧೯೮೫) |
| **ಸಂತ ಶರೀಫರ ಜನಪ್ರಿಯ<br>ಪದಗಳು** | ಸಂ : ಡಿ.ಎಸ್. ಕರ್ಕಿ, ತಲ್ಲೂರ ರಾಯನಗೌಡರು<br>ಎಸ್.ಬಿ. ಅಂಗಡಿ. ವಿಶ್ವಸಮಿತಿ, ಶಿಶುವಿನಾಳ (೧೯೯೧) |
| **ಅನುಭಾವ ಪದಗಳು** | ಆಧ್ಯಾತ್ಮ ಭಾಂಡಾರ ಮಠ, ಇಂಚಗೇರಿ |



| | |
|---|---|
| **ಪರಮಾರ್ಥ ಪದಕೋಶ** | ಸಂ : ಅ.ರಾ.ಸೇ.<br>ಕಾಮಧೇನು ಪ್ರಕಾಶನ ಬೆಂಗಳೂರು (೧೯೯೯) |
| **ಸಿದ್ಧ ಸಾಹಿತ್ಯ** | ಮ.ಸು. ಕೃಷ್ಣಮೂರ್ತಿ<br>ನಿರ್ದೇಶಕರು, ಪ್ರಸಾರಾಂಗ ಮಾನಸಗಂಗೋತ್ರಿ<br>ಮೈಸೂರು (೧೯೮೨) |
| **ಅಲ್ಲಮ ಪ್ರಭು ಮತ್ತು ಶೈವ ಪ್ರತಿಭೆ** | ಡಿ.ಆರ್. ನಾಗರಾಜ್<br>ಅಕ್ಷರ ಪ್ರಕಾಶನ. ಹೆಗ್ಗೋಡು. ಸಾಗರ (೧೯೯೯) |

❍

## ಸಂಪಾದಕರು



# ಪ್ರೊ. ಕಾಳೇಗೌಡ ನಾಗವಾರ

**ಕಾ**ಳೇಗೌಡ ನಾಗವಾರ ಕನ್ನಡ ಸಾಂಸ್ಕೃತಿಕ ಲೋಕದ ಮಾನವೀಯ ಕತೆಗಾರ, ಅಪಾರ ಅಂತಃಕರಣದ ಕವಿ ಹಾಗೂ ದೇಶೀಸಂಸ್ಕೃತಿಗಳ ಬಗ್ಗೆ ತುಂಬು ಹೆಂಗರುಳುಳ್ಳ ಜಾನಪದ ತಜ್ಞ. ಕರ್ನಾಟಕದ ಉದ್ದಗಲಕ್ಕೂ ಅವಿರತವಾಗಿ ಸಂಚರಿಸುತ್ತಾ ಅಪಾರವಾದ ಲೋಕಾನುಭವವನ್ನು ಪಡೆದಿರುವ ಇವರು, ತಮ್ಮೊಳಗೆ ಜನಪರ ಆಲೋಚನೆಯ ಸೂಕ್ಷ್ಮ ಸೃಜನಶೀಲ ಮನಸ್ಸನ್ನು ಎಚ್ಚರದಿಂದ ಕಾಯ್ದುಕೊಂಡು ಬಂದಿರುವ ಪ್ರತಿಭಾವಂತ ಲೇಖಕ. ಅಚ್ಚಕನ್ನಡದ ಗ್ರಾಮೀಣ ಸತ್ವದಿಂದ ರೂಪುಗೊಂಡ ನಾಗವಾರ ಅವರು ಎಪ್ಪತ್ತರ ದಶಕದಿಂದೀಚಿನ ಕನ್ನಡ ಸೃಜನಶೀಲ ಪ್ರಜ್ಞೆಯ ಅವಿಭಾಜ್ಯ ಅಂಗವಾಗಿದ್ದಾರೆ.

ಕ್ರಿಯಾಶೀಲ ಸಂಘಟಕರಾದ ಕಾಳೇಗೌಡ ನಾಗವಾರ (೧೯೪೭) ಬೆಂಗಳೂರು ಗ್ರಾಮಾಂತರ ಜಿಲ್ಲೆ, ಚನ್ನಪಟ್ಟಣ ತಾಲ್ಲೂಕಿನ ನಾಗವಾರ ಗ್ರಾಮದವರು. ಕನ್ನಡದ ಪ್ರಗತಿಪರ ಚಳವಳಿಗಳೊಂದಿಗೆ ಬೆಳೆದುಬಂದ ಕಾಳೇಗೌಡ ನಾಗವಾರರ ಎಲ್ಲ ಬರವಣಿಗೆಗಳೂ ಸಮಾಜವಾದಿ ಆಶಯಗಳ ನೆಲೆಗಟ್ಟಿನ ಮೇಲೆ ನಿಂತಿವೆ. ಈಗ ಮೈಸೂರು ವಿಶ್ವವಿದ್ಯಾಲಯದ ಕುವೆಂಪು ಕನ್ನಡ ಅಧ್ಯಯನ ಸಂಸ್ಥೆಯಲ್ಲಿ ಪ್ರಾಧ್ಯಾಪಕರಾಗಿದ್ದಾರೆ.

ರಾಮಮನೋಹರ ಲೋಹಿಯಾ ಅವರ ಚಿಂತನೆಯಿಂದ ಪ್ರಭಾವಿತರಾಗಿರುವ ಇವರು ಕರ್ನಾಟಕದ ಎಲ್ಲ ಪ್ರಗತಿಪರ ಚಳವಳಿಗಳೊಂದಿಗೆಬೆಳೆದು ಬಂದವರು. ಕನ್ನಡದ ಸಾಂಸ್ಕೃತಿಕ ಇತಿಹಾಸದಲ್ಲಿ ಪ್ರಮುಖ ಘಟ್ಟವಾದ ಬಂಡಾಯ ಸಾಹಿತ್ಯ

ಚಳವಳಿಯ ಸ್ಥಾಪಕ ಸಂಚಾಲಕರಲ್ಲೊಬ್ಬರು. ಭಾರತೀಯ ಭಾಷೆಗಳಲ್ಲೇ ಮೊದಲ ಬಾರಿಗೆ ಲೋಹಿಯಾ ಅವರ ಸಮಾಜವಾದಿ ವಿಚಾರಗಳನ್ನು ಸಮಗ್ರವಾಗಿ ಕನ್ನಡಕ್ಕೆ ತರುವ ಮಹತ್ವದ ಯೋಜನೆಯ ಸಾಂಸ್ಕೃತಿಕ ಹೊಣೆಗಾರಿಕೆಯನ್ನು ಕಾಳೇಗೌಡ ನಾಗವಾರ ಅವರು ಯಶಸ್ವಿಯಾಗಿ ನಿರ್ವಹಿಸುತ್ತಿದ್ದಾರೆ.

ವಸಾಹತುಶಾಹಿ ಮತ್ತು ನಮ್ಮ ಜಾನಪದ ವಯ್ಯಾಕರಣಿಗಳ ಸಿದ್ಧ ಮಾರ್ಗವನ್ನು ನಿರಾಕರಿಸಿ, ಜಾನಪದ ಸಂಗ್ರಹ ಹಾಗೂ ವಿಮರ್ಶೆಗಳಿಗೆ ಸೃಜನಶೀಲತೆಯ ಪ್ರಾಣಶಕ್ತಿಯನ್ನು ತುಂಬಿದವರು. ನಿರ್ಲಕ್ಷಿತ ಒಳಸಂಸ್ಕೃತಿಗಳ ಜ್ಞಾನಪರಂಪರೆಯ ಮಹಾಪ್ರಭೆಯನ್ನು ಶೋಧಿಸುತ್ತಾ, ಸಾಮಾಜಿಕ ಮತ್ತು ಸಾಂಸ್ಕೃತಿಕ ವಿಮರ್ಶಾ ನೆಲೆಯಿಂದ ಹೊರಡುವ ಕಾಳೇಗೌಡ ನಾಗವಾರರ ಜಾನಪದ ವಿಮರ್ಶೆಯ ಮಾದರಿಯು ಕನ್ನಡಕ್ಕೆ ಇಂದು ಹೆಚ್ಚು ಪ್ರಸ್ತುತವಾಗಿದೆ. ವಿವಿಧ ಬಗೆಯ ಜಾನಪದ ಅಭಿವ್ಯಕ್ತಿಗಳು ಮತ್ತು ದೇಶೀಸಂಸ್ಕೃತಿಯ ಸೂಕ್ಷ್ಮಗಳ ಹರಿಕಾರರಾದ ಜನಪದ ಕಲಾವಿದರ ಬಗ್ಗೆ ಸದಾ ಕಟ್ಟೆಕ್ಕರೆಯಿಂದಿರುವ ನಾಗವಾರರು ಪ್ರಸ್ತುತ ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿಯ ಕ್ರಿಯಾಶೀಲ ಅಧ್ಯಕ್ಷರಾಗಿ, ಜಿಲ್ಲಾ ಕಲಾವಿದರ ಸಮಾವೇಶ, ಕರಾವಳಿ ತೀರದ ಒಂದುನೂರು ಜನ ಶ್ರೇಷ್ಠ ಯಕ್ಷಗಾನ ಕಲಾವಿದರಿಗೆ ಗೌರವ-ಸನ್ಮಾನ, ದೇಶೀ ಚಿಂತನೆಯ ಕಾರ್ಯಕ್ರಮಗಳು, ಜನಪದ ಕಲಾವಿದರ ಆತ್ಮಕತೆಗಳನ್ನು ನಿರೂಪಿಸಿ ಪ್ರಕಟಿಸುವ ಸಾಂಸ್ಕೃತಿಕ ಮಹತ್ವದ ಅರ್ಥಪೂರ್ಣ ಕಾರ್ಯದ ಮೂಲಕ ಜನಪದ ಕಲಾವಿದರಲ್ಲಿ ಆತ್ಮಸ್ಥೈರ್ಯವನ್ನು ಮೂಡಿಸುವ ತುಂಬು ಚಟುವಟಿಕೆಗಳನ್ನು ಕೈಗೊಳ್ಳುವುದರ ಮುಖೇನ ಜಾನಪದ ಅಕಾಡೆಮಿಯ ಕಾರ್ಯಶೈಲಿಗಳನ್ನು ವಿಸ್ತರಿಸಿದ್ದಾರೆ.

❍

---

ಪ್ರಾಧ್ಯಾಪಕರು, ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಮಾನಸ ಗಂಗೋತ್ರಿ
ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು-೫೭೦ ೦೦೬



## ಸಂಪಾದಕರು

### ಜಿ ವಿ ಆನಂದಮೂರ್ತಿ

ತುಮಕೂರು ಜಿಲ್ಲೆಯ ತಿಗಳರ ಗೊಲ್ಲಹಳ್ಳಿಯವರಾದ ಜಿ ವಿ ಆನಂದಮೂರ್ತಿ ಅವರ ವಿದ್ಯಾಭ್ಯಾಸ ತುಮಕೂರು ಮತ್ತು ಬೆಂಗಳೂರಿನಲ್ಲಿ. ಬೆಂಗಳೂರು ವಿಶ್ವವಿದ್ಯಾಲಯದಿಂದ ಚಿನ್ನದ ಪದಕದೊಂದಿಗೆ ಕನ್ನಡ ಎಂ.ಎ. ಪದವಿ. ರಾಜ್ಯಾದ್ಯಂತ ಕ್ಷೇತ್ರಕಾರ್ಯ ಮಾಡಿ ಮೌಖಿಕ ಪರಂಪರೆಯಲ್ಲಿದ್ದ ಅನೇಕ ಅನುಭಾವಿ ಕವಿಗಳ ತತ್ತ್ವಪದಗಳನ್ನು ಸಂಗ್ರಹಿಸಿದ್ದಾರೆ. ತುಮಕೂರಿನ ಎಲ್ಲ ಬಗೆಯ ಪ್ರಗತಿಪರ ಸಾಂಸ್ಕೃತಿಕ ಸಂಘಟನೆಗಳೊಂದಿಗೆ ಕ್ರಿಯಾಶೀಲರಾಗಿ ಬೆಳೆದು ಬಂದ ಆನಂದಮೂರ್ತಿ ಪ್ರಸ್ತುತ ತುಮಕೂರು ಜಿಲ್ಲೆಯ ಕೊರಟಗೆರೆ ಸರ್ಕಾರಿ ಕಾಲೇಜಿನಲ್ಲಿ ಕನ್ನಡ ಅಧ್ಯಾಪಕರಾಗಿದ್ದಾರೆ.

ಸೃಜನಶೀಲ ಸಾಹಿತ್ಯ ಮತ್ತು ಜಾನಪದ ಕ್ಷೇತ್ರಕಾರ್ಯದೊಂದಿಗೆ ಪರಿಸರ ಕುರಿತಾದ ಅಧ್ಯಯನಕ್ಕೂ ತಮ್ಮ ಆಸಕ್ತಿಯನ್ನು ವಿಸ್ತರಿಸಿಕೊಂಡಿದ್ದಾರೆ. ಇವರು ರೂಪಾಂತರಿಸಿದ ದೇವನೂರ ಮಹಾದೇವರ **ದ್ಯಾವನೂರು, ದೇವರುಗಳ ರಾಜ್ಯದಲ್ಲಿ** ಮತ್ತು ಕರ್ನಾಟಕ ಇತಿಹಾಸ ಮತ್ತು ಸಾಹಿತ್ಯಿಕ ಪರಂಪರೆಯನ್ನು ಕುರಿತಾದ **ಸಂಪದ** ರಂಗ ರೂಪವನ್ನು

ರಂಗಭೂಮಿಯ ಖ್ಯಾತ ರಂಗನಿರ್ದೇಶಕರುಗಳು ಪ್ರಯೋಗಿಸಿದ್ದಾರೆ. ಕರ್ನಾಟಕ ಸಾಹಿತ್ಯ ಅಕಾಡೆಮಿಯ **ಮುತ್ತಿನಹಾರ ಪುಸ್ತಕ ಮಾಲೆಯ** ಸಂಚಾಲಕರಾಗಿ ಕಾರ್ಯ ನಿರ್ವಹಿಸಿರುವ ಆನಂದಮೂರ್ತಿ ಪ್ರಸ್ತುತ ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿಯ ಪ್ರಕಟಣೆಯಾದ **ಜಾನಪದ ಸಮಾಚಾರ** ಪತ್ರಿಕೆಯ ಸಂಪಾದಕರಾಗಿದ್ದಾರೆ.

ಪ್ರಕಟಿತ ಕೃತಿಗಳು: **ಬುದ್ಧ ತೋರಿದ ದಾರಿ, ತತ್ತ್ವಪದಕಾರರು** (ಆಯ್ಕೆ), ಸಂಪಾದಿತ ಕೃತಿಗಳು: **ಶಾಂತವೇರಿ ಗೋಪಾಲಗೌಡ ನೆನಪಿನ ಸಂಪುಟ, ಮೂರು ದಲಿತ ಕಮ್ಮಟಗಳು, ಮಹಾಯಾನ.** ಸಂಪಾದಿತ ಜಾನಪದ ಕೃತಿಗಳು : **ಗಂಧರ್ವಲೋಕದ ಗೆಣೆಕಾರರು, ಕರಾವಳಿ ಯಕ್ಷಗಾನ, ಜಾನಪದದ ತುಂಬು ಹೊಳೆ, ಸಾಲುಸಂಪಿಗೆ ನೆರಳು, ಒಗಟಿನ ಗಂಟು, ಆಡಿ ಬಾ ನನಕಂದ, ಜನಪದ ಕಥೆಗಳು, ಕಲಾವಿದರೊಂದಿಗೆ ಒಡನಾಟ** ಹಾಗೂ ನವಸಾಕ್ಷರರಿಗಾಗಿ ಬರೆದಿರುವ ಹಲವಾರು ಪುಸ್ತಕಗಳನ್ನು ರಾಜ್ಯ ಸಂಪನ್ಮೂಲ ಕೇಂದ್ರ, ಮೈಸೂರು ಇವರು ಪ್ರಕಟಿಸಿದ್ದಾರೆ. ಗ್ರಾಮೀಣ ಭಾಗದ ಅಜ್ಞಾತ ಜನಪದ ಕಲಾವಿದರನ್ನು ಕುರಿತು ಇವರು ಬರೆದಿರುವ ಲೇಖನಗಳು ನಾಡಿನ ಪತ್ರಿಕೆ ಹಾಗೂ ನಿಯತಕಾಲಿಕೆಗಳಲ್ಲಿ ಪ್ರಕಟಗೊಂಡಿವೆ. ೧೯೯೮ರಿಂದ ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿಯ ಸದಸ್ಯರಾಗಿ ಕಾರ್ಯನಿರ್ವಹಿಸುತ್ತಿದ್ದಾರೆ.


❍

ಅಧ್ಯಾಪಕ, ವಾಟರ್‌ಟ್ಯಾಂಕ್ ಹಿಂಭಾಗ, ವಿದ್ಯಾನಗರ , ತುಮಕೂರು - ೫೭೨ ೧೦೩

## ಬೆಳುದಿಂಗಳ ಹಾದಿಯಲ್ಲಿ : ಅನುಭಾವಿಗಳೊಡನೆ

ಹುಣ್ಣಿಮೆಯ ಅಂಗಳದಲ್ಲಿ ನಡೆಯುವ ಅನುಭಾವದ ಸತ್ಸಂಗದಲ್ಲಿ ತತ್ತ್ವಪದಕಾರರೊಡನೆ ಒಡಬೆರೆತು, ಬೆಳುದಿಂಗಳ ಕೆನೆ ಬೆಳಕಲ್ಲಿ ಏಕತಾರಿ ಲಯದೊಂದಿಗೆ ಹಗುರವಾಗಿ ತೇಲಿಬಂದು ಮನಕ್ಕಿಳಿಯುವ ತತ್ತ್ವಪದಗಳ ದನಿಗೆ ಕಿವಿಗೊಡುವ ಪ್ರಿಯಹುಚ್ಚನ್ನು ನನಗೆ ಅಂಟಿಸಿದವರು ಎಚ್.ಎಸ್. ಶಿವಪ್ರಕಾಶರು.


ಶಿವಪ್ರಕಾಶರು ತುಮಕೂರಿಗೆ ಇಂಗ್ಲಿಶ್ ಅಧ್ಯಾಪಕರಾಗಿ ಬಂದ ಆ ದಿನಗಳ ನೆನಪು ನನಗಿನ್ನೂ ಇದೆ. ಸೋಮಾರಿ ಅಧ್ಯಾಪಕರ ಕ್ಲೀಷೆಯ ಶಬ್ದಗಳಿಂದ ನಮ್ಮ ತರಗತಿಗಳೆಲ್ಲ ನಾರುತ್ತಿದ್ದವು. ಅದರಲ್ಲೂ ಇಂಗ್ಲಿಶ್ ತರಗತಿಗಳೆಂದರೆ ನಮಗೆ ಅದೊಂದು ರೌರವ ನರಕದ ಉಪಶಾಖೆಯಂತೆ ಕಾಣುತ್ತಿದ್ದವು. ಆದರೆ ಶಿವಪ್ರಕಾಶರು ನಮಗೆ ಇಂಗ್ಲಿಶ್ ಪಾಠವನ್ನು ಶುರುಮಾಡಿದ ಮೇಲೆ, ಮಾಯಾಂಗನೆಯಂತಹ ಇಂಗ್ಲಿಶ್ ಸರಳ ಎನಿಸಿತು. ಇಂಗ್ಲಿಶ್‌ಗಿಂತ ಹೆಚ್ಚಾಗಿ ಅವರು ನಮಗೆ ಕನ್ನಡಕಾವ್ಯದ ಪಾಠ ಮಾಡಿದ್ದೇ ಹೆಚ್ಚು. ಈ ಬಗೆಯ ಕಾರಣದಿಂದಾಗಿಯೇ ನಮ್ಮಂಥ ಇಂಗ್ಲಿಶ್ ದ್ವೇಷಿ ವಿದ್ಯಾರ್ಥಿಗಳೆಲ್ಲ ಶಿವಪ್ರಕಾಶರ ಪ್ರಿಯ ಶಿಷ್ಯರಾದೆವು. ತುಮಕೂರಿನಲ್ಲಿ ಶಿವಪ್ರಕಾಶರ ಸಂಜೆಯ ಗೊತ್ತುಗುರಿಯಿಲ್ಲದ ಅಲೆದಾಟಕ್ಕೆ ಅನುಗುಣವಾಗಿ ನಾನು ಯಾವಾಗಲೂ ಅವರ ನೀಳ ನೆರಳಿನಂತೆ ಹಿಂಬಾಲಿಸುತ್ತಿದ್ದೆ.



ಒಮ್ಮೆ ಅವರು ನನ್ನನ್ನು ತುಮಕೂರಿನ ಕೆಮ್ಮಣ್ಣುಗುದ್ದಿನ ಎದುರಿನ ಪುರಾತನ ಗೋಣಿಮರದ ನೆರಳಿನಲ್ಲಿದ್ದ ಸರಪಳಿ ಸ್ವಾಮಿಗಳ ಗದ್ದುಗೆಗೆ ಕರೆದುಕೊಂಡು ಹೋದರು. ಅಲ್ಲಿನ ಮೌನದ ವಾತಾವರಣದಿಂದಲೇ ನನ್ನ ಮನಸ್ಸು ತಂಪಾಯಿತು. ಗದ್ದುಗೆಯ ಬಳಿಯೇ ಇದ್ದ ಸಂತರೊಂದಿಗೆ ಶಿವಪ್ರಕಾಶರು ಬೆಡಗಿನ ನುಡಿಯಲ್ಲಿ ಮಾತನಾಡುತ್ತಾ, ಕಾಲದ ಪರಿವೇ ಇಲ್ಲದೆ ಕುಳಿತುಬಿಟ್ಟಿದ್ದರು. ನಡುನಡುವೆ ಶಿವಪ್ರಕಾಶರು ಸಂತರಿಂದ ಪದಗಳನ್ನು ಕೇಳುತ್ತಾ, ತಮಗೆ ತಿಳಿಯದ ಪ್ರತಿಮೆಯ ಅನುಭಾವೀ ಅರ್ಥ, ಭಾಷೆ-ಸಾಧನೆಗಳ ಬಗ್ಗೆ ಹಸುಮಗುವಿನ ಮುಗ್ಧತೆಯಿಂದ ಕೇಳಿ ತಿಳಿದುಕೊಳ್ಳುತ್ತಿದ್ದರು. ಹೀಗೆ ಶಿವಪ್ರಕಾಶರಿಂದಾಗಿ ನಾನು

ಅರಿವಿಲ್ಲದೆ ಅನುಭಾವಿಗಳ ಪ್ರಭಾವಲಯಕ್ಕೆ ಒಳಗಾದೆ. ಶಿಶುನಾಳ ಷರೀಫ, ನಾಗಲಿಂಗ, ಕಡಕೋಳ ಮಡಿವಾಳಪ್ಪ, ಬಾಲಲೀಲಾಮಹಾಂತ ಶಿವಯೋಗಿ, ಶಂಕರಾನಂದರು, ಕಬೀರ, ತುಕರಾಮ ಮುಂತಾದ ಅನುಭಾವಿಗಳ ರಚನೆಗಳನ್ನು ಓದಿ ನನ್ನ ಕಿವಿದೆರೆಗೆ ತಾಗಿಸಿದವರು ಶಿವಪ್ರಕಾಶರು.


ಆ ದಿನದ ಘಟನೆ ನನ್ನಲ್ಲಿ ಇಂದಿಗೂ ಹಾಗೆಯೇ ಇದೆ : ಆಗ ಪರೀಕ್ಷಾ ಸಮಯ. ಮಾರನೆ ದಿನ ಯಾವುದೋ ಗೊಡ್ಡು ವಿಷಯದ ಪರೀಕ್ಷೆ ಇತ್ತು. ಇಡೀ ದಿನ ಕುಳಿತು ಪರೀಕ್ಷೆಗಾಗಿ ಓದಿದ್ದೆ. ಆದರೆ ಸಂಜೆಯಾಗುತ್ತಿದ್ದ ಹಾಗೆ, ಏಕೋ ಇನ್ನಿಲ್ಲದ ದುಗುಡ ಆವರಿಸಿಕೊಂಡು ಮನಸ್ಸು ಪ್ರಕ್ಷುಬ್ಧವಾಯಿತು. ಪರೀಕ್ಷೆಗೆ ಹೋಗಬಾರದೆಂದು ನಿರ್ಧರಿಸಿದೆ. ನಡುರಾತ್ರಿಯಲ್ಲಿ ಮನಸ್ಸಿನ ಭಾರ ತಾಳಲಾರದೆ ಶಿವಪ್ರಕಾಶರ ಮನೆಗೆ ಧಾವಿಸಿ ಅವರನ್ನು ಕೂಗಿ ಕರೆದೆ. ಒಳಗಡೆ ಓದುತ್ತಾ ಕುಳಿತಿದ್ದ ಶಿವಪ್ರಕಾಶರು ನನ್ನ ದನಿ ಗುರುತಿಸಿ ಬಾಗಿಲು ತೆರೆದು ನನ್ನನ್ನು ನೋಡಿದರು; ನೋಡುತ್ತಿದ್ದ ಹಾಗೆಯೇ ಅವರಿಗೆ ಎಲ್ಲವೂ ಅರ್ಥವಾಗಿರಬೇಕು. ಕೂಡಲೇ ಒಳಗೆ ಹೋಗಿ ಕಪಾಟಿನಲ್ಲಿದ್ದ ಶರೀಫರ ಪದಗಳ ಕಿರು ಪುಸ್ತಕವನ್ನು ಕೈಯಲ್ಲಿ ಹಿಡಿದುಕೊಂಡು ಬಂದು ಅಲ್ಲಿಯೇ ಬೀದಿಬದಿಯ ಲೈಟುಕಂಬದ ಕೆಳಗೆ ಕುಳಿತು ಶರೀಫರ ಪದಗಳನ್ನು ಸೂರ್ಯ ಕಣ್ಣುತೆರೆಯುವವರೆಗೂ ಓದಿದರು. ಅದರಲ್ಲೂ **ಹಾವ ತುಳಿದೇನೆ ಮಾನಿನಿ, ಹಾವ ತುಳಿದೇನೆ...** ಕವಿತೆಯನ್ನು ಹತ್ತಾರು ಸಲ ಓದಿ ಹೇಳಿದರು. ಶರೀಫರ ಕವಿತೆಗಳನ್ನು ಕೇಳಿದ್ದರಿಂದ ಹಾಗೂ ಶಿವಪ್ರಕಾಶರ ತಾಯ್ತನದ ಅಕ್ಕರೆಯಿಂದ ಮನಸ್ಸು ಹಗುರವಾಯಿತು. ಮತ್ತೆ ನಾನು ಪರೀಕ್ಷೆಗೆ ಹೋಗುವಂತೆ ಶಿವಪ್ರಕಾಶರು ಮೈದಡವಿ ಹೇಳಿಕಳಿಸಿದರು. ಆ ದಿನ ನಡುರಾತ್ರಿಯಲ್ಲಿ ನಾನು ಕೇಳಿದ ಶರೀಫರ ಕವಿತೆಗಳು ಈಗಲೂ ನನ್ನೊಳಗೆ ಮಡುಗಟ್ಟಿ ನಿಂತಿವೆ.




ಆನಂತರದಲ್ಲಿ ಮರುಳುಶಂಕರದೇವನ ಮರಿದೊತ್ತಾದ ಕಾವ್ಯಯೋಗಿ ಕಿ.ರಂ. ನಾಗರಾಜರು ನೀಲಾಕಾಶದಂತೆ ವಿಸ್ತಾರವಾದ ಅನುಭಾವದ ಒಳಲೋಕಗಳನ್ನು ತೆರೆದು, ತತ್ತ್ವಪದಗಳ ಸಾಂಸ್ಕೃತಿಕ ಮಹತ್ವವನ್ನು ಅರಿವುಮಾಡಿಕೊಟ್ಟರು. ತರಗತಿಯ ಒಳಗೆ ಮತ್ತು ಹೊರಗೆ ನಾನು ಅವರಿಂದ ಕಲಿತಿದ್ದು ಅಪಾರವಾಗಿದೆ. ಬೆಂಗಳೂರಿನ ಗಿಜಿಗುಡುವ ವಾಹನಗಳ

ಓಡಾಟದ ನಡುವೆಯೂ, ಕಿ.ರಂ. ಅವರು ಓದಿ ಹೇಳುತ್ತಿದ್ದ ಅನುಭಾವಿಗಳ ಕವಿತೆಗಳು ತಿಳಿಯಾಗಿ ಮನಸ್ಸಿಗೆ ಇಳಿಯುತ್ತಿದ್ದವು. ಮುಂದೆ ಶಿವಪ್ರಕಾಶರ ಮೂಲಕವೇ ಪರಿಚಯವಾದವರು ನಮ್ಮ ಪೂರ್ವಿಕ ಮಲೆಮಾದೇಶ್ವರನ ಕಾಲದ ಕೆ.ಎಂ. ಶಂಕರಪ್ಪನವರು. ಅವರು, ನಮ್ಮ ಭಾಗದಲ್ಲಿ ತತ್ತ್ವಪದಕಾರರ ತಾಣವೆಂದೇ ಹೆಸರಾದ ಸಿದ್ಧರಬೆಟ್ಟದ ವಶಕ್ಕೆ ನನ್ನನ್ನೊಪ್ಪಿಸಿದರು.

ನಾನು ಬೆಂಗಳೂರಿನ ಜ್ಞಾನಭಾರತಿ ಆವರಣಕ್ಕೆ ಕನ್ನಡ ಎಂ.ಎ ತರಗತಿಗೆ ಸೇರಿದೆ. ಅಲ್ಲಿನ ಅಪರಿಚಿತ ಆವರಣದಲ್ಲಿ ಬೆರೆಯಲಾಗದೆ ಏಕಾಂಗಿಯಾಗಿ ಭಯ ಮತ್ತು ಸಂಕೋಚಗಳಲ್ಲಿ ಕುಗ್ಗಿಹೋದೆ. ನಮ್ಮ ಕನ್ನಡ ವಿಭಾಗದಲ್ಲಿ ಎಲ್ಲರ ಪ್ರೀತಿಯ ಅಧ್ಯಾಪಕರಾಗಿದ್ದ ಕಾಳೇಗೌಡ ನಾಗವಾರರು ನನ್ನೊಂದಿಗೆ ತೋರಿದ ಅಕ್ಕರೆ ಮತ್ತು ತುಂಬು ವಿಶ್ವಾಸದಿಂದಾಗಿ, ಭಯ-ಸಂಕೋಚದ ಕಟ್ಟುಗಳಿಂದ ಬಿಡುಗಡೆ ಪಡೆದೆ. ತಬ್ಬಲಿ ಜಾತಿಗಳ ಬಗೆಗೆ ನಾಗವಾರ ಅವರಿಗಿರುವ ಗಾಢಪ್ರೀತಿಯನ್ನು ಸ್ವತಃ ನಾನೇ ಅನುಭವಿಸಿದ್ದೇನೆ. ಓದು-ಬರೆಯುವುದರಷ್ಟೇ ತೀವ್ರವಾಗಿ ಲೋಕಾನುಭವದ ಪ್ರವಾಸ ಮಾಡುವುದನ್ನೂ ಪ್ರಿಯ ಕಾಯಕವನ್ನಾಗಿ ಮಾಡಿಕೊಂಡಿರುವ ಕಾಳೇಗೌಡ ನಾಗವಾರರಿಗೆ ಕರಾವಳಿ ತೀರ ಮತ್ತು ಕೊಡಗನ್ನೂ ಒಳಗೊಂಡ ಇಡೀ ಪಶ್ಚಿಮ ಘಟ್ಟ ಪ್ರದೇಶವು ಮೆಚ್ಚಿನ ಪ್ರವಾಸಿ ತಾಣಗಳು. ತುಂಗಭದ್ರಾ ನದಿಯ ಆಚೆಗಿನ ಕಲ್ಯಾಣನಾಡಿನ ಶರಣರ ವಿಶಾಲ ಬಯಲಿಗೆ ಯಾವಾಗಲೂ ಎಡತಾಕುವ ನಾಗವಾರರು, ಇಡೀ ಕರ್ನಾಟಕವನ್ನು ಒಟ್ಟಾಗಿ ಪ್ರೀತಿಸುವ, ಜನತೆಯ ಮನಸ್ಸನ್ನು ಒಂದಾಗುವಂತೆ ಬೆಸೆಯುವ ಕಾರ್ಯದಲ್ಲಿ ಇವರೇ ಮೊದಲಿಗರು. ಬುದ್ಧದೇವ, ಕುಮಾರವ್ಯಾಸ, ಕುವೆಂಪು, ಜಾನಪದ ಮತ್ತು ಲೋಹಿಯಾ ನಾಗವಾರರ ಮೆಚ್ಚಿನ ಪಠ್ಯಗಳು. ವಿಸ್ತಾರವಾದ ಕಡಲು, ಹರಿಯುವ ತುಂಬುಹೊಳೆ, ದಟ್ಟಅರಣ್ಯ, ಬೆಳುದಿಂಗಳು ಇವೆಲ್ಲವನ್ನೂ ನೋಡುತ್ತಾ ಧ್ಯಾನಿಸುತ್ತಿದ್ದರೆ ಮನಸ್ಸಿನ ಕುಬ್ಜತೆ ಮಾಯವಾಗಿ, ಹೃದಯ ವಿಶಾಲವಾಗುತ್ತದೆ ಎಂದು ಮತ್ತೆ ಮತ್ತೆ ಹೇಳುತ್ತಿದ್ದ ಚೇತೋಹಾರಿಯಾದ ಅವರ ತರಗತಿಗಳು ನನ್ನ ಸ್ಮೃತಿಪಟಲದಲ್ಲಿ ಇಂದಿಗೂ ಅಚ್ಚಳಿಯದೆ ಉಳಿದಿವೆ. ಜಾನಪದ ಕ್ಷೇತ್ರಕಾರ್ಯದ ಬಗೆಗೆ ನನ್ನಲ್ಲಿ ಗೀಳುಹತ್ತಿಸಿದ ನಾಗವಾರರು, ನಮ್ಮ ಕನ್ನಡ ವಿಭಾಗದಿಂದ ರಾಜ್ಯಮಟ್ಟದ ಜಾನಪದ ಕ್ಷೇತ್ರಕಾರ್ಯ ಶಿಬಿರಕ್ಕೆ



ನನ್ನನ್ನು ಅಜ್ಜಂಪುರಂಕ್ಕೆ ಕಳಿಸಿಕೊಟ್ಟರು. ಅಜ್ಜಂಪುರದ ಆಸುಪಾಸಿನಲ್ಲಿರುವ ಆಸಂದಿ, ಶಿವನಿ ಗ್ರಾಮಗಳಲ್ಲಿ ನಾನು ಕ್ಷೇತ್ರಕಾರ್ಯ ಮಾಡುತ್ತಿದ್ದಾಗ ನನ್ನೊಡನಿದ್ದು, ಆ ಗ್ರಾಮಗಳಲ್ಲಿದ್ದ ಕೆಲವು ತತ್ತ್ವಪದ ಗಾಯಕರಿಗೆ ನನ್ನನ್ನು ಗಂಟುಹಾಕಿದರು. ಆ ಹಿರಿಯ ಗಾಯಕರಿಂದ ಅಂದು ನಾನು ಕೇಳಿದ ತತ್ತ್ವಪದಗಳು ಇಂದಿಗೂ ನನ್ನ ನೆನಪಿನ ಬುತ್ತಿಯಲ್ಲಿ ಹಚ್ಚಹಸುರಾಗಿವೆ. ಹೀಗೆ ನನ್ನೊಳಗೆ ಬೀಜರೂಪಿಯಾಗಿದ್ದ ಆಸಕ್ತಿಯನ್ನು ಮೊಳೆಯುವಂತೆ ಮಾಡಿದವರು ಡಾ. ನಾಗವಾರರು. ಅವರಲ್ಲಿ ಮತ್ತು ನನ್ನಲ್ಲಿದ್ದ ಸಮಾನ ಆಸಕ್ತಿಯು ಕಾರಣದಿಂದಾಗಿಯೇ ಈಗ್ಗೆ ಕೆಲವಾರು ವರ್ಷಗಳಿಂದ ಕಾಳೇಗೌಡ ನಾಗವಾರರು ಮತ್ತು ನಾನು ನಾಡಿನಾದ್ಯಂತ ಇರುವ ತತ್ತ್ವಪದಕಾರರ ವಿಳಾಸ, ಗೊತ್ತು-ಗುರಿಗಳನ್ನು ಪತ್ತೆಮಾಡಿ, ಅವರಿದ್ದೆಡೆಗೆ ಹೋಗಿ ಸೂರ್ಯೋದಯ-ಚಂದ್ರೋದಯದ ಸಮಯಗಳನ್ನೆಲ್ಲಾ ಬದಿಗೆ ಸರಿಸಿ, ತತ್ತ್ವಪದಗಳನ್ನು ಸಂಗ್ರಹಿಸಿದ್ದೇವೆ. ರಾಯಚೂರು, ಗುಲಬರ್ಗಾ, ಬಳ್ಳಾರಿ, ಹಿರಿಯೂರು, ಸಿದ್ಧರಬೆಟ್ಟ, ಕೊರಟಗೆರೆ, ಅಪ್ಪಗೆರೆ, ಕನಸವಾಡಿ, ಯಲಬುರ್ಗ, ಕೈವಾರ, ಮೈಸೂರು, ನಂಜನಗೂಡು, ಬೀದರ್, ಅರಳಗುಪ್ಪೆ, ಹೊಸೂರು, ಥಳಿ, ಬಸರಾಳು, ಶಿವನಿ, ಬಾನಂದೂರು, ನಾಗವಾರ, ಹಾಸನ, ಅರಸೀಕೆರೆ, ಹಸಿಗಾಳ - ಹೀಗೆ ಕರ್ನಾಟಕದ ನಾನಾ ಭಾಗಗಳಲ್ಲಿ ಡಾ. ನಾಗವಾರರು ಮತ್ತು ನಾನು ಬೆಳುದಿಂಗಳ ನೂರಾರು ಸಂಜೆಗಳು ಹಾಗೂ ರಾತ್ರಿಗಳಲ್ಲಿ ತತ್ತ್ವಪದಕಾರರ ಜಾಡುಹಿಡಿದು ಅನುಭಾವಿ ಪದಗಳನ್ನು ಕಲೆಹಾಕಿದೆವು.




ಓಣಂ ಹಬ್ಬದ ಹುಣ್ಣಿಮೆಯ ಹಿಂದಿನ ದಿನ ಅಪ್ಪಗೆರೆ ಗ್ರಾಮಠಾಣದ ಹೊರಭಾಗದಲ್ಲಿದ್ದ ಮಠದಲ್ಲಿ ತಂಬೂರಿ ರಾಜಮ್ಮ ದಂಪತಿಗಳು ಏಕತಾರಿ ಮೀಟುತ್ತಾ ಹಾಡಿದ ತತ್ತ್ವಪದಗಳನ್ನು ನಾಗವಾರರು ಮತ್ತು ನಾನು ಕಣ್ಣುರೆಪ್ಪೆಯನ್ನು ಮುಚ್ಚದೆ, ಸುರಿಯುವ ಮಳೆಯ ರಭಸಕ್ಕೆ ತೆಳುವಾಗಿ ನಡುಗುತ್ತಾ ಇಡೀ ರಾತ್ರಿ ಕೇಳಿದೆವು.

ಮಡಿಕೇರಿಯ ಕೊರೆಯುವ ಚಳಿಯ ನಡುವೆ ಬಸರಾಳು ತಂಬೂರಿ ಜವರಯ್ಯ-ಬೋರಮ್ಮನವರಿಂದ ಬೆಳಕು ಹರಿಯುವವರೆಗೂ ಪದಗಳನ್ನು ಕೇಳಿ ನಮ್ಮೆದೆ ಜೋಳಿಗೆಗೆ ತುಂಬಿಕೊಂಡು, ಮಂಜು ಸುರಿಯುವ ಆ ರಾತ್ರಿಯ ಅನುಭವದ ಬಿಸಿ ನೆನಪನ್ನು ಇಂದಿಗೂ

ಜತನವಾಗಿಟ್ಟುಕೊಂಡಿದ್ದೇನೆ.

ಕೊರಟಗೆರೆಯ ಸಂತ ಗೋವಿಂದಪ್ಪನವರನ್ನು ಪತ್ತೆಹಚ್ಚಬೇಕಾದರೆ ನಮಗೆ ಒಂದು ದಿನವೇ ಬೇಕಾಯಿತು. ಗಾಳಿಯ ಸಂಗಾತಿಯಂತೆ ನಿಂತಲ್ಲಿ ನಿಲ್ಲದೆ ಅಲೆದಾಡುವ ಗೋವಿಂದಪ್ಪ, ಲೌಕಿಕದ ಎಲ್ಲ ಹಂಗುಗಳನ್ನೂ ಕಡಿದುಕೊಂಡು, ಜಲಪ್ರಳಯವಾದಲ್ಲಿ ಉಲಿಯುವ ನೀರಹಕ್ಕಿಯಂತೆ, ನಿಶ್ಚಿಂತನಾಗಿರುವ ಸಂತ. ಅವರ ಅಧ್ಯಾತ್ಮ ಸಾಧನೆಯ ಅನುಭವಗಳನ್ನು ಕೇಳುವುದೇ ಒಂದು ವಿಶೇಷ ಅನುಭವ.

ಆಧುನಿಕತೆಯ ಮೋಹಕ್ಕೆ ನಿಧಾನವಾಗಿ ಒಲಿಯುತ್ತಿರುವ ಮೈಸೂರಿನ ತೆರೆ ಸರಿಸಿದರೆ ಸಾಕು, ಅದರ ಒಡಲಿನಲ್ಲಿ ಸುಮಾರು ನಲವತ್ತಕ್ಕೂ ಮಿಕ್ಕು ಅವಧೂತ ಮತ್ತು ಆರೂಢ ಸಂಪ್ರದಾಯದ ಅನುಭಾವಿ ಮಠಗಳಿರುವುದನ್ನು ನಾನು ಮತ್ತು ನಾಗವಾರ ಅವರು ಒಂದುವಾರ ಅವಿರತವಾಗಿ ಓಡಾಡಿ ಗೊತ್ತುಮಾಡಿಕೊಂಡೆವು. ಜನಸಾಮಾನ್ಯರ ಅನುಭಾವದ ಕೇಂದ್ರಗಳಾದ ಮಠಗಳಲ್ಲಿ ಕುಳಿತು, ಅವರ ಹಾಡುಗಳು, ಸಾಧನೆಯ ವಿವರಗಳನ್ನು ಮನದೆರೆದು ಕೇಳುವುದೇ ಅಪೂರ್ವ ಅನುಭವ.



ಹೊಸಕಾಲದ ಜನಪದ ಗಾಯಕರಾದ ಬಾನಂದೂರು ಕೆಂಪಯ್ಯ, ಬಸವಲಿಂಗಯ್ಯ ಹಿರೇಮಠ, ಜನಾರ್ದನ, ಪಿಚ್ಚಳ್ಳಿ ಶ್ರೀನಿವಾಸ ಇವರು ಹಾಡುವ ತತ್ತ್ವಪದಗಳನ್ನು ಕೇಳಲೆಂದು ಕೆಲವು ಸಂದರ್ಭಗಳನ್ನು ನಾವೇ ಸೃಷ್ಟಿಸಿಕೊಳ್ಳುತ್ತಿದ್ದೆವು. ಆ ಪದಗಳನ್ನು ಅನೇಕ ಸಂಜೆಗಳಲ್ಲಿ ಮತ್ತೆ ಮತ್ತೆ ಕೇಳಿದರೂ, ಅವೆಲ್ಲ ಪ್ರತಿಸಲವೂ ಹೊಸದಾಗಿಯೇ ಕೇಳಿಸುತ್ತಿದ್ದವು. ಹೀಗೆ ನಿತ್ಯತಾರುಣ್ಯದ ಕಳೆಯಿಂದ ತುಳುಕುವ ತತ್ತ್ವಪದಗಳ ಲೋಕದೊಳಗಿನ ನಮ್ಮ ಅನುಭವ ಅನಿರ್ವಚನೀಯವಾದದ್ದು ಎನಿಸಿದೆ. ಏಕೆಂದರೆ ಭಾಷೆ ಹಿರಿದು ; ಆಯುಷ್ಯ ಕಿರಿದು. ಆದ್ದರಿಂದ ಅದೊಂದು ಮಾನಸಿಕ ಸಂತೋಷ. ಕಾಳೇಗೌಡ ನಾಗವಾರರೊಂದಿಗಿನ ಎರಡು ದಶಕಗಳ ಸ್ನೇಹದಲ್ಲಿ ಇಂಥ ನೂರಾರು ಅನುಭವಗಳು ನನ್ನಪಾಲಿಗಿವೆ. ಒಂದೊಂದು ಸಲ ಅವರೊಡನೆ ಪ್ರವಾಸಕ್ಕೆ ಹೋಗಲಾಗದೆ ಸಲ್ಲದ ನೆಪಗಳನ್ನು ಹೇಳಿ ಹಿಂದಕ್ಕೆ ಸರಿಯುತ್ತಿದ್ದೆ. ಆಗ ನಾಗವಾರರು, 'ಅಲ್ಲೊಬ್ಬರು ತತ್ತ್ವಪದ ಹಾಡುವವರಿದ್ದಾರೆ. ಬನ್ನಿ, ಅವರೊಂದಿಗೆ ಕೆಲವು ಗಂಟೆ

ಕಳೆಯೋಣ' ಎಂದು ಆಸೆ ಒಡ್ಡುತ್ತಿದ್ದರು. ಆಗ ನಾನು ಇದ್ದಬದ್ದ ತೊಂದರೆಯನ್ನೆಲ್ಲಾ ಬದಿಗೊತ್ತಿ, ತಾಯಿಯ ಸೆರಗು ಹಿಡಿದು ಓಡುವ ಪುಟ್ಟ ಮಗುವಿನಂತೆ ನಾಗವಾರರೊಂದಿಗೆ ರೈಲು ಹತ್ತಿಬಿಡುತ್ತಿದ್ದೆ.

ಈವೊತ್ತಿಗೂ ಕೂಡ ತತ್ತ್ವಪದಕಾರರ ಧಾರೆ ಕನ್ನಡ ಕಾವ್ಯಸಮಾಜದಲ್ಲಿಒಳಝರಿಯಂತೆ ಹರಿಯುತ್ತಲೇ ಇದೆ. ಆದರೆ ಇವುಗಳತ್ತ ಕಣ್ಣು-ಮನಗಳನ್ನು ತೆರೆದು ನೋಡುವ ತಾಯ್ತನದ ಅಂತಃಕರಣ ನಮ್ಮ ವಿಮರ್ಶಕ ಪಡೆಗಿಲ್ಲ ಎನ್ನುವುದೇ ನೋವಿನ ಸಂಗತಿ. ನಾನು ಇದುವರೆಗೂ ಭೇಟಿ ಮಾಡಿದ ನೂರಾರು ತತ್ತ್ವಪದಕಾರರು ಗುರುತೋರಿದ ದಾರಿಯಲ್ಲಿ ನಡೆಯುತ್ತಿದ್ದಾರೆ. **ಕೇಂದ್ರ**ಗಳೆಂಬ ಪರಿಕಲ್ಪನೆಗಳನ್ನೇ ಧೂಳಿಪಟಮಾಡಿ, ತಾವಿರುವ ಪುಟ್ಟ ತಾಣಗಳಲ್ಲಿ ಜಾತ್ಯತೀತ-ಮಾನವೀಯ ಗುಣಗಳನ್ನೇ ಕೇಂದ್ರಗಳನ್ನಾಗಿ ಮಾಡಿಕೊಂಡು ಸಮಾಜದ ಅಂಚಿನಲ್ಲಿದ್ದುಕೊಂಡು ಕಾಲ-ದೇಶಗಳ ಹಂಗಿಲ್ಲದೆ ಬದುಕುತ್ತಿದ್ದಾರೆ. ಇಂಥ ಶಿವಯೋಗಿಗಳಿಂದ ನಮ್ಮ ಸಮಾಜ ಕಲಿಯಬೇಕಾದದ್ದು ಸಾಗರದಷ್ಟಿದೆ.



ವಿದ್ವಾಂಸರ, ಸಂಗ್ರಹಕಾರರ ನಿರ್ಲಕ್ಷ್ಯಕ್ಕೆ ಒಳಗಾಗಿರುವ ಅಜ್ಞಾತ ತತ್ತ್ವಪದಕಾರರ ಪದಗಳನ್ನು ದೊಡ್ಡಪ್ರಮಾಣದಲ್ಲಿ ಕಲೆಹಾಕಿ ಪ್ರಕಟಿಸಬೇಕೆನ್ನುವುದು ಡಾ. ನಾಗವಾರರ ಬಹುದಿನದ ಹಂಬಲವಾಗಿತ್ತು. ಈಗ ಅವರು ಜಾನಪದ ಅಕಾಡೆಮಿ ಅಧ್ಯಕ್ಷರಾದ ಮೇಲೆ ಈ ಯೋಜನೆ ಕೈಗೂಡುತ್ತಿದೆ. ಜನಪದ ತತ್ತ್ವಪದಗಳ ಪ್ರಾತಿನಿಧಿಕ ಸಂಕಲನ **ಹಲವು ತೋಟದ ಹೂಗಳು** ಕೃತಿ ಪ್ರಕಟವಾಗುತ್ತಿರುವ ಈ ಹೊತ್ತಿನಲ್ಲಿ, ನನ್ನನ್ನು ತತ್ತ್ವಪದಗಳ ಸಂಗ್ರಹ ಮತ್ತು ಅಧ್ಯಯನದ ಪ್ರಿಯಕಾರ್ಯದಲ್ಲಿ ತೊಡಗುವಂತೆ ಮಾಡಲು ಕಾರಣರಾದ ಈ ಎಲ್ಲರನ್ನೂ ಈ ತಣ್ಣನೆಯ ಹೊತ್ತಿನಲ್ಲಿ ಗೌರವದಿಂದ ನೆನೆಯುವುದು ನನಗೆ ಅತ್ಯಂತ ಸಂತೋಷದ ವಿಷಯಗಳಲ್ಲೊಂದಾಗಿದೆ.

**-ಜಿ ವಿ ಆನಂದಮೂರ್ತಿ**

ಹುತ್ತರಿ
೧೧-೧೨-೨೦೦೦



## ಕೃತಜ್ಞತೆಗಳು

ದೊಂಬಿದಾಸರ ಕೃಷ್ಣಪ್ಪ (ಎಡೆಯೂರು), ವೈ ಕೆ ಕೃಷ್ಣಪ್ಪ (ಕುಣಿಗಲ್), ವೀರಕ್ಯಾತಪ್ಪ, ನಾಗಮ್ಮ, ಕರಿಯಮ್ಮ, ಕದಿರಮ್ಮ, ಮಲ್ಲೇಗೌಡ, ಗೋವಿಂದಪ್ಪ ಹನುಮಂತಮ್ಮ (ಕೊರಟಗೆರೆ), ಮುನಿಯಪ್ಪ, ಮಾದಮ್ಮ (ಥಳಿ. ಡೆಂಕಣಿಕೋಟೆ), ತಂಬೂರಿ ಜವರಯ್ಯ ಮತ್ತು ಬೋರಮ್ಮ (ಮಂಡ್ಯ ಜಿಲ್ಲೆ), ಕೆ ಎಂ ರಾಮಪ್ಪ (ದಾವಣಗೆರೆ), ಮರೆಪ್ಪದಾಸರು (ರಾಯಚೂರು), ಕೆಂಪಮ್ಮ, ನರಸಮ್ಮ, ಗಂಗಮ್ಮ (ಕೊರಟಗೆರೆ), ಸಾಧು ಹನುಮಯ್ಯ, ಮರಿಸಿದ್ಧಮ್ಮ (ಮೈಸೂರು), ತಂಬೂರಿ ರಾಜಮ್ಮ (ಅಪ್ಪಗೆರೆ), ಜಿ ಕೃಷ್ಣಪ್ರಸಾದ್, ಮೀರಾಸಾಬಿಹಳ್ಳಿ ಶಿವಣ್ಣ, ಕುರುವ ಬಸವರಾಜ್, ಬಿ ಎಸ್ ಸೋಮಶೇಖರ, ನಾಗಭೂಷಣ, ವಿ ಚಂದ್ರಶೇಖರ ನಂಗಲಿ, ಲಕ್ಷ್ಮೀಪತಿ ಕೋಲಾರ, ಡಾ. ಎಚ್ ಎಸ್ ಶಿವಪ್ರಕಾಶ್, ಕಿ ರಂ ನಾಗರಾಜ್, ಲಿಂಗರಾಜು, ಎಂ ಎಸ್ ಮೂರ್ತಿ, ಕೆ ಕೆ ಮಕಾಳಿ, ತುಂಬಾಡಿ ರಾಮಯ್ಯ, ಶ್ರೀಮತಿ ಲಕ್ಷ್ಮಿ, ಬಿ.ಎಲ್. ಶ್ರೀನಿವಾಸ.

[illegible]

೧. [illegible]

೨. [illegible]

೩. [illegible]

೪. [illegible]
(ಪ್ರಾತಿನಿಧಿಕ ಗಿರಿಜನ ಕಾವ್ಯ)

೫. [illegible]
(ಕರ್ನಾಟಕ ಗಿರಿಜನ ಸಂಸ್ಕೃತಿಯ ಬಗೆಗಿನ ಪ್ರಾತಿನಿಧಿಕ ಲೇಖನಗಳು)

೬. [illegible]
(ಪ್ರಾತಿನಿಧಿಕ ಜನಪದ ತತ್ತ್ವಪದಗಳು)

೭. [illegible]
(ಪ್ರಾತಿನಿಧಿಕ ಜನಪದ ಕಾವ್ಯ)

೮. [illegible]
(ವಿವಿಧ ಜಾನಪದ ತಜ್ಞರ ಅಧ್ಯಯನ ಟಿಪ್ಪಣಿಗಳು)

೯. [illegible]

೧೦. [illegible]

೧೧. [illegible]